

ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ | ಜನವರಿ 4 ಭಾನುವಾರ 2026

ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್.ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ ಜಾಹೀರಾತಿಗಾಗಿ–ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871

46

ಸಂಪುಟ: 46 | ಸಂಚಿಕೆ: 257 | ಪುಟಗಳು: 12
ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com, website: www.mysurumithra.com

₹4



ಮೋದಿ ನೇತೃತ್ವದ ಎನ್‌ಡಿಎ ಸರ್ಕಾರದಿಂದ

ಉದ್ಯೋಗ ಹಕ್ಕಿಗೆ ಕತ್ತರಿ

- ಮುಖ್ಯಮಂತ್ರಿ ಸಿದ್ದರಾಮಯ್ಯ ಗಂಭೀರ ಆಪಾದನೆ
- ನರೇಗಾ ಯೋಜನೆ ಹೆಸರು ಬದಲಾವಣೆಗೆ ಆಕ್ಷೇಪ
- ರಾಜ್ಯಗಳ ಮೇಲೆ ಅನಗತ್ಯ ಆರ್ಥಿಕ ಹೊರೆ ಆರೋಪ

ಬೆಂಗಳೂರು,ಜ.3(ಕೆಎಂಶಿ)– ಪ್ರಧಾನಿ ನರೇಂದ್ರ ಮೋದಿ ನೇತೃತ್ವದ ಕೇಂದ್ರದ ಎನ್‌ಡಿಎ ಸರ್ಕಾರ ಹಳ್ಳಿಯ ಅಧಿಕಾರ ಕಸಿದುಕೊಂಡು, ಗ್ರಾಮೀಣ ಆರ್ಥಿಕತೆ ನಾಶಪಡಿಸಲು ಮುಂದಾಗಿದೆ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಆರೋಪಿಸಿದ್ದಾರೆ.

ಗೃಹ ಕಚೇರಿ ಕೃಷ್ಣಾದಲ್ಲಿ ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತ್ರಿ ಯೋಜನೆ ಹೆಸರು ಬದಲಿಸಿದ ಕುರಿತು ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಕೇಂದ್ರ ಸರ್ಕಾರ ಮಹಾತ್ಮ ಗಾಂಧಿ ರಾಷ್ಟ್ರೀಯ ಉದ್ಯೋಗ ಖಾತ್ರಿ ಯೋಜನೆಯನ್ನು ಹೊಸ ಕಾಯ್ದೆ ಮೂಲಕ ವಿಬಿ–ಜಿ–ರಾಮ್–ಜಿ ಹೆಸರಿನಲ್ಲಿ ಜಾರಿಗೆ ತರುವ ಮುನ್ನ ರಾಜ್ಯ ಸರ್ಕಾರಗಳ ಅಭಿಪ್ರಾಯ ಕೇಳಿಲ್ಲ ಎಂದರು.

ಹಳ್ಳಿ ಅಧಿಕಾರಕ್ಕೆ ಕತ್ತರಿ: ದೇಶದ ಜನರ ಅಭಿಪ್ರಾಯ ಪಡೆಯದೆ ಹೊಸ ಕಾಯ್ದೆ ಜಾರಿಗೊಳಿಸುವ ಮೂಲಕ ಸರ್ವಾಧಿಕಾರಿ ಧೋರಣೆ ಪ್ರದರ್ಶಿಸಿದೆ. ಡಾ.ಮನಮೋಹನ್ ಸಿಂಗ್ ನೇತೃತ್ವದ ಯುಪಿಎ ಸರ್ಕಾರ ಉದ್ಯೋಗದ ಹಕ್ಕು, ಮಾಹಿತಿ ಹಕ್ಕು, ಶೈಕ್ಷಣಿಕ ಹಕ್ಕು ಸೇರಿದಂತೆ ಹಲವು ಕ್ರಾಂತಿಕಾರಿ ಯೋಜನೆ ಜಾರಿಗೊಳಿಸಿ ಜನರಿಗೆ ಹೆಚ್ಚಿನ ಅಧಿಕಾರ ನೀಡಿತ್ತು ಆದರೆ, ಪ್ರಧಾನಿ ಮೋದಿ ಸರ್ಕಾರ ಡಿ. 17ರಂದು ಸಂಸತ್ತಿನಲ್ಲಿ ಹೊಸ ಕಾಯ್ದೆ ಮಂಡಿಸಿ 18ರಂದು ಅಂಗೀಕಾರ ಪಡೆದಿದೆ. ಸುಮಾರು




> “ಯೋಜನೆಗಳ ಹೆಸರು ಬದಲಾಯಿಸಿರುವುದೇ ಕಳೆದ 11 ವರ್ಷಗಳ ಕೇಂದ್ರ ಸರ್ಕಾರದ ಸಾಧನೆ, ಈ ಹಿಂದೆ ಜಾರಿಯಲ್ಲಿದ್ದ ಸುಮಾರು 30 ಯೋಜನೆಗಳ ಹೆಸರು ಬದಲಾವಣೆ ಅಥವಾ ಕಾಯ್ದೆಗಳನ್ನು ಹಿಂಪಡೆಯುವ ಕಾರ್ಯ ಮಾಡಿದೆ. ಪ್ರಸ್ತುತ ಕಾಯ್ದೆಯಡಿ ಕನಿಷ್ಠ 100 ದಿನ ಕೆಲಸ ನೀಡಬೇಕಿತ್ತು. ಕೂಲಿ ಕಾರ್ಮಿಕರು ವಾಸಿಸುವ ಪ್ರದೇಶದಲ್ಲೇ ಕೆಲಸ ನೀಡಬೇಕಿತ್ತು. ಹೊಸ ಕಾಯ್ದೆ ಸೆಕ್ಷನ್ 5(1)ರ ಪ್ರಕಾರ ಸರ್ಕಾರ ಅಧಿಸೂಚಿತ ಪ್ರದೇಶದಲ್ಲಿ ಮಾತ್ರ ಉದ್ಯೋಗ ನೀಡಲಾಗುತ್ತದೆ. ಕೆಲಸದ ಬಗ್ಗೆ ಗ್ರಾಮ ಪಂಚಾಯತ್‌ಗಳಿಗೂ ಯಾವುದೇ ಖಾತ್ರಿ ಇರುವುದಿಲ್ಲ.
> –ಸಿದ್ದರಾಮಯ್ಯ, ಮುಖ್ಯಮಂತ್ರಿ

12.16 ಕೋಟಿ ನರೇಗಾ ಕಾರ್ಮಿಕರು ದೇಶದಲ್ಲಿದ್ದು, ಈ ಪೈಕಿ 6.21 ಕೋಟಿ ಮಹಿಳೆಯರು, ಪರಿಶಿಷ್ಟ ಜಾತಿ ಶೇ.17, ಪರಿಶಿಷ್ಟ ವರ್ಗ ಶೇ.11ರಷ್ಟು ಇದ್ದಾರೆ. ಕರ್ನಾಟಕದಲ್ಲಿ 71.18 ಲಕ್ಷ ನರೇಗಾ ಕಾರ್ಮಿಕರಿದ್ದು, ಇದರಲ್ಲಿ ಶೇ.51.6ರಷ್ಟು ಅಂದರೆ, 36.75 ಲಕ್ಷ ಮಹಿಳೆಯರಿದ್ದಾರೆ.

▶ 6ನೇ ಪುಟಕ್ಕೆ

ಸರ್ಕಾರ ಕೂಲಿಕಾರರ ಹಾದಿ ತಪ್ಪಿಸುತ್ತಿದೆ

- ಮಾಜಿ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ತಿರುಗೇಟು
- ಕೃಷಿಗೆ ಅನುಕೂಲವಾಗುವ ದೃಷ್ಟಿಯಿಂದ ರಜೆ ಘೋಷಣೆ
- 100 ಇದ್ದ ಕೆಲಸದ ದಿನ ಈಗ 125 ದಿನಕ್ಕೆ ಹೆಚ್ಚಳವಾಗಿದೆ


ಬಸವರಾಜ ಬೊಮ್ಮಾಯಿ

ಬೆಂಗಳೂರು, ಜ.3(ಕೆಎಂಶಿ)– ವಿಬಿ–ಜಿ–ರಾಮ್–ಜಿ ಗ್ರಾಮೀಣ ಉದ್ಯೋಗ ಖಾತ್ರಿ ಯೋಜನೆ ಬಗ್ಗೆ ರಾಜ್ಯ ಸರ್ಕಾರ ಸುಳ್ಳು ಹೇಳುವ ಮೂಲಕ ಬಡ ಕೂಲಿಕಾರರ ದಾರಿ ತಪ್ಪಿಸುತ್ತಿದೆ ಎಂದು ಮಾಜಿ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಟೀಕಿಸಿದ್ದಾರೆ. ಈ ಹಿಂದಿನ ನರೇಗಾ ಯೋಜನೆಯಲ್ಲಿ ವರ್ಷಕ್ಕೆ ಕನಿಷ್ಠ 100 ದಿನಗಳ ಉದ್ಯೋಗ ಖಾತ್ರಿ ಇತ್ತು, ಇದನ್ನು 125 ದಿನಗಳಿಗೆ ಹೆಚ್ಚಿಸಲಾಗಿದೆ. ಈ ದಿನಗಳನ್ನು ಗ್ರಾಮ ಪಂಚಾಯತ್‌ಗಳೇ ನಿರ್ಧರಿಸಬಹುದಾಗಿದ್ದು, ಕೇಂದ್ರ ಸರ್ಕಾರ ತೀರ್ಮಾನಿಸುತ್ತದೆ ಎಂಬ ಭೀತಿಯನ್ನು ಕಾರ್ಮಿಕರಲ್ಲಿ ಹುಟ್ಟಿಸಲಾಗುತ್ತಿದೆ ಎಂದು ಟ್ವೀಟ್ ಮಾಡಿರುವ ಅವರು, ಗ್ರಾಮೀಣ ಪ್ರದೇಶದಲ್ಲಿ ಕೃಷಿ ಚಟುವಟಿಕೆ ಮತ್ತು ರೈತರಿಗೆ ಅನುಕೂಲವಾಗಲು 60 ದಿನ ವರ್ಷದಲ್ಲಿ ಕೃಷಿಗೋಸ್ಕರ ಎರಡು ಬಾರಿ ಉದ್ಯೋಗ ಖಾತ್ರಿಗೆ ರಜೆ ನೀಡಲಾಗಿದೆ ಎಂದು ಸ್ಪಷ್ಟ ಪಡಿಸಿದ್ದಾರೆ.

ಎಂಜಿ ನರೇಗಾ ಬಚಾವೋ ಸಂಗ್ರಾಮ್


ನವದೆಹಲಿ: ವಿಬಿ ಜಿ–ರಾಂ–ಜಿ ಕಾಯ್ದೆ ಹಿಂಪಡೆಯುವಂತೆ ಮತ್ತು ಎಂಜಿ ನರೇಗಾ ಅನ್ನು ಹಕ್ಕು ಆಧಾರಿತ ಕಾನೂನಾಗಿ, ಕೆಲಸ ಮಾಡುವ ಹಕ್ಕನ್ನು ಮತ್ತು ಪಂಚಾಯತ್‌ಗಳ ಅಧಿಕಾರವನ್ನು ಪುನಃಸ್ಥಾಪಿಸುವಂತೆ ಒತ್ತಾಯಿಸಿ ಕಾಂಗ್ರೆಸ್ ಜ.10ರಿಂದ ಫೆ.25ರವರೆಗೆ ರಾಷ್ಟ್ರವ್ಯಾಪಿ 'ಎಂಜಿ ನರೇಗಾ ಬಚಾವೋ ಸಂಗ್ರಾಮ್' ಆರಂಭಿಸುವುದಾಗಿ ಶನಿವಾರ ಘೋಷಿಸಿದೆ.


ಜೈರಾಮ್ ರಮೇಶ್ ಕೆ.ಸಿ.ವೇಣುಗೋಪಾಲ್


ಇಂದು ಜಂಟಿ ಪತ್ರಿಕಾಗೋಷ್ಠಿಯನ್ನುದ್ದೇಶಿಸಿ ಮಾತನಾಡಿದ ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿಗಳಾದ ಕೆಸಿ.ವೇಣುಗೋಪಾಲ್ ಮತ್ತು ಜೈರಾಮ್ ರಮೇಶ್, ಈ ಹೊಸ ವಿಬಿ ಜಿ–ರಾಂ–ಜಿ ಕಾಯ್ದೆಯ ಮೂಲಕ ಕೇಂದ್ರ ಸಂಪೂರ್ಣ ಕೇಂದ್ರೀಕರಣವನ್ನು ಖಚಿತಪಡಿಸಿದೆ. ಏಕೆಂದರೆ ಉದ್ಯೋಗವು ಇನ್ನು ಮುಂದೆ ಹೊಸ ಕಾಯ್ದೆಯಡಿಯಲ್ಲಿ ನಮ್ಮ ಹಕ್ಕಾಗುವುದಿಲ್ಲ. ಅಲ್ಲದೆ ಇದನ್ನು ನ್ಯಾಯಾಲಯದಲ್ಲಿ ಪ್ರಶ್ನಿಸಲಾಗುವುದು ಎಂದು ತಿಳಿಸಿದರು.

ನಾಳೆ ಮೈಸೂರು ವಿವಿ 106ನೇ ಘಟಿಕೋತ್ಸವ

- ಪಿಹೆಚ್.ಡಿ, ಸ್ನಾತಕ ಪದವಿ, ಸ್ನಾತಕೋತ್ತರ ಪದವಿ ಸೇರಿದಂತೆ 30,966 ಅಭ್ಯರ್ಥಿಗಳಿಗೆ ಪದವಿ ಪ್ರದಾನ
- ಚಲನಚಿತ್ರ ನಿರ್ದೇಶಕ ಎಸ್.ವಿ.ರಾಜೇಂದ್ರಸಿಂಗ್ ಬಾಬು, ರಾಜ್ಯ ಮಾನವ ಹಕ್ಕುಗಳ ಆಯೋಗದ ಅಧ್ಯಕ್ಷ ಡಾ.ಟಿ.ಶಾಮ್‌ಭಟ್, ಗ್ಲೋಬಲ್ ಎಜುಕೇಷನ್ ಟ್ರಸ್ಟ್ ಅಧ್ಯಕ್ಷ ಪಿ.ಜಯಚಂದ್ರರಾಜು ಅವರಿಗೆ ಗೌರವ ಡಾಕ್ಟರೇಟ್


ಎಸ್‌ವಿ.ರಾಜೇಂದ್ರಸಿಂಗ್‌ಬಾಬು


ಟಿ.ಶಾಮ್‌ಭಟ್


ಪಿ.ಜಯಚಂದ್ರರಾಜು

ಮೈಸೂರು,ಜ.3(ಪಿಎಂ)– ಮೈಸೂರು ವಿಶ್ವವಿದ್ಯಾನಿಲಯದ 106ನೇ ವಾರ್ಷಿಕ ಘಟಿಕೋತ್ಸವ ಜ.5ರಂದು ಬೆಳಗ್ಗೆ 11.30ಕ್ಕೆ ವಿಶ್ವವಿದ್ಯಾನಿಲಯದ ಕ್ರಾಫರ್ಡ್ ಭವನದಲ್ಲಿ ನಡೆಯಲಿದೆ. ಈ ಬಾರಿ ಕನ್ನಡ ಚಲನ ಚಿತ್ರರಂಗದ ಖ್ಯಾತ ನಿರ್ದೇಶಕ ಹಾಗೂ ನಿರ್ಮಾಪಕ ಎಸ್.ವಿ. ರಾಜೇಂದ್ರ ಸಿಂಗ್ ಬಾಬು, ಕರ್ನಾಟಕ ರಾಜ್ಯ ಮಾನವ ಹಕ್ಕುಗಳ ಆಯೋಗದ ಅಧ್ಯಕ್ಷ ಡಾ.ಟಿ. ಶಾಮ್‌ಭಟ್ ಹಾಗೂ ಗ್ಲೋಬಲ್ ಎಜುಕೇಷನ್ ಟ್ರಸ್ಟ್ ಅಧ್ಯಕ್ಷ ಪಿ.ಜಯ ಚಂದ್ರರಾಜು ಅವರಿಗೆ ಗೌರವ ಡಾಕ್ಟರೇಟ್ (ಡಿ.ಲಿಟ್) ನೀಡಲಾಗುತ್ತಿದೆ.

ಅಲ್ಲದೆ, ಪಿಹೆಚ್.ಡಿ, ಸ್ನಾತಕ ಪದವಿ, ಸ್ನಾತಕೋತ್ತರ ಪದವಿ ಸೇರಿದಂತೆ 30,966 ಅಭ್ಯರ್ಥಿಗಳಿಗೆ ಪದವಿಗಳನ್ನು ಪ್ರದಾನ ಮಾಡಲಾಗುತ್ತದೆ.

ಮೈಸೂರು ವಿವಿ ಕ್ರಾಫರ್ಡ್ ಭವನದ ಶಿಕ್ಷಣ ಮಂಡಳಿ ಸಭಾಂಗಣದಲ್ಲಿ ಶನಿವಾರ ಪತ್ರಿಕಾಗೋಷ್ಠಿಯಲ್ಲಿ ವಿವಿ ಕುಲಪತಿ ಪ್ರೊ.ಎನ್.ಕೆ.ಲೋಕನಾಥ್ ಈ ವಿಷಯ ತಿಳಿಸಿದರು.

ರಾಜ್ಯಪಾಲರೂ ಆದ ವಿವಿ ಕುಲಾಧಿಪತಿ ಥಾವರ್‌ಚಂದ್ ಗೆಹ್ಲೋಟ್ ಘಟಿಕೋತ್ಸವದ ಅಧ್ಯಕ್ಷತೆ ವಹಿಸಲಿದ್ದಾರೆ. ಭಾರ ತೀಯ ಬಾಹ್ಯಾ ಕಾಶ ಸಂಶೋ ಧನಾ ಸಂಸ್ಥೆ ಮಾಜಿ ಅಧ್ಯಕ್ಷ ಡಾ.ಎಸ್. ಸೋಮನಾಥ್ ಘಟಿಕೋತ್ಸವ ಭಾಷಣ ಮಾಡಲಿದ್ದಾರೆ. ಉನ್ನತ ಶಿಕ್ಷಣ ಸಚಿವರೂ ಆದ ವಿವಿ ಸಮಕುಲಾಧಿಪತಿ ಡಾ.ಎಂ.ಸಿ. ಸುಧಾಕರ್ ಉಪಸ್ಥಿತರಿರುವರು ಎಂದರು.


ಪ್ರೊ.ಲೋಕನಾಥ್

ಪದವಿ ಪಡೆಯುತ್ತಿರುವ ಒಟ್ಟು 30,966 ಅಭ್ಯರ್ಥಿಗಳ ಪೈಕಿ 18,612 (ಶೇ.60.10) ಮಹಿಳಾ ಹಾಗೂ 12,354 (ಶೇ.39.89)

▶ 6ನೇ ಪುಟಕ್ಕೆ

ಬಳ್ಳಾರಿ ಬ್ಯಾನರ್ ಬಡಿದಾಟ ಪ್ರಕರಣ

ಅಮಾನತಾದ ಎಸ್ಪಿ ಪವನ್ ನೆಜ್ಜೂರ್ ಆತ್ಮಹತ್ಯೆ ಯತ್ನ!

- ನಿದ್ರೆ ಮಾತ್ರೆ ಸೇವಿಸಿ ಅಸ್ವಸ್ಥ; ತುಮಕೂರು ಆಸ್ಪತ್ರೆಗೆ ದಾಖಲು
- ನೆಜ್ಜೂರ್ ಆತ್ಮಹತ್ಯೆಗೆ ಯತ್ನಿಸಿಲ್ಲ; ಪೊಲೀಸ್ ಇಲಾಖೆ ಸ್ಪಷ್ಟನೆ

ಬೆಂಗಳೂರು, ಜ.3(ಕೆಎಂಶಿ)– ಶಾಸಕ ಜನಾರ್ದನ ರೆಡ್ಡಿ ನಿವಾಸದ ಬಳಿ ನಡೆದ ಹಿಂಸಾಚಾರ ಬೆನ್ನಲ್ಲೇ ಅಮಾನತುಗೊಂಡಿದ್ದ ಬಳ್ಳಾರಿ ಪೊಲೀಸ್ ವರಿಷ್ಠಾಧಿಕಾರಿ ಪವನ್ ನೆಜ್ಜೂರ್ ಆತ್ಮಹತ್ಯೆಗೆ ಯತ್ನಿಸಿದ್ದಾರೆ.


ಪವನ್ ನೆಜ್ಜೂರ್

ಅಮಾನತು ನಂತರ ಮಾನಸಿಕ ಖಿನ್ನತೆಗೆ ಒಳಗಾಗಿದ್ದ ಪವನ್, ತುಮಕೂರಿನ ಹಿರಿಯೂರು ಸಮೀಪದ ಬರಗೂರಿನಲ್ಲಿನ ತಮ್ಮ ಸ್ನೇಹಿತನ ತೋಟದ ಮನೆಯಲ್ಲಿ ನಿದ್ರೆ ಮಾತ್ರೆ ಸೇವಿಸಿ ಆತ್ಮಹತ್ಯೆಗೆ ಯತ್ನಿಸಿದ್ದಾರೆ. ಅವರ ಆರೋಗ್ಯದಲ್ಲಿ ಏರುಪೇರು ಕಂಡ ತಕ್ಷಣ ಸ್ನೇಹಿತರು ಮತ್ತು ಕುಟುಂಬಸ್ಥರು, ತುಮಕೂರು ಆಸ್ಪತ್ರೆಗೆ ದಾಖಲು ಮಾಡಿದ್ದು, ಪ್ರಾಣಾಪಾಯದಿಂದ ಪಾರಾಗಿದ್ದಾರೆ.

ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿರುವ ಎಸ್‌ಪಿ ಅವರನ್ನು ಹಿರಿಯ ಪೊಲೀಸ್ ಅಧಿಕಾರಿಗಳ ತಂಡ ಭೇಟಿ ಮಾಡಿ ಆರೋಗ್ಯ ವಿಚಾರಿಸಿತು. ಹನ್ನೊಂದು ವರ್ಷಗಳ ನಂತರ ಕಾರ್ಯನಿರ್ವಾಹಕ ಹುದ್ದೆಗೆ ಮರಳಿದ್ದ ಅವರು, ಕರ್ತವ್ಯದ ಮೊದಲ ದಿನವೇ ಬಳ್ಳಾರಿ ನಗರದಲ್ಲಿ ರಾಜಕೀಯ ಗಲಭೆಯಿಂದ ಒಬ್ಬ ವ್ಯಕ್ತಿ ಮೃತಪಟ್ಟು ಹಲವರಿಗೆ ಗಾಯಗಳಾದ ಘಟನೆ ನಡೆದಿತ್ತು.

ಗಲಭೆ ವೇಳೆ ಎಸ್‌ಪಿ ಸ್ಥಳದಲ್ಲಿ ಕರ್ತವ್ಯದ ಮೇಲಿರಲಿಲ್ಲ ಹಾಗೂ ಹಿರಿಯ ಪೊಲೀಸ್ ಅಧಿಕಾರಿಗಳ ಕರೆಯನ್ನೂ ಸ್ವೀಕರಿಸದೆ ಔತಣಕೂಟವೊಂದರಲ್ಲಿ ಪಾಲ್ಗೊಂಡಿದ್ದರೆಂಬ ವರದಿ ಆಧಾರದ ಮೇಲೆ

▶ 6ನೇ ಪುಟಕ್ಕೆ

ಶಾಸಕ ಭರತ್‌ರೆಡ್ಡಿ ಸೇರಿದಂತೆ ಹಲವರ ವಿರುದ್ಧ ಎಫ್‌ಐಆರ್

ಬಳ್ಳಾರಿ,ಜ.3–ಬಳ್ಳಾರಿಯಲ್ಲಿ ಬ್ಯಾನರ್ ಕಟ್ಟುವ ವಿಚಾರದಲ್ಲಿ ಆರಂಭವಾದ ಗಲಾಟೆ ಗಾಳಿಯಲ್ಲಿ ಗುಂಡು ಹಾರಿಸಿ ಅದು ತಗುಲಿ ಕಾಂಗ್ರೆಸ್ ಕಾರ್ಯಕರ್ತ ರಾಜಶೇಖರ್ ಎಂಬುವವರು ಸಾವಿಗೀಡಾದ ಘಟನೆಗೆ ಸಂಬಂಧಿಸಿದಂತೆ ನಿನ್ನೆ ಪೊಲೀಸರು ಶಾಸಕ ಜನಾರ್ದನರೆಡ್ಡಿ, ಶ್ರೀರಾಮುಲು ಸೇರಿ 11 ಮಂದಿ ವಿರುದ್ಧ ಎಫ್‌ಐಆರ್ ದಾಖಲಾಗಿತ್ತು.

ಇದೀಗ ಶಾಸಕ ಭರತ್ ರೆಡ್ಡಿ ಸೇರಿ ಹಲವರ ವಿರುದ್ಧ ಎಫ್‌ಐಆರ್ ದಾಖಲು ಮಾಡಲಾಗಿದೆ. ಬಳ್ಳಾರಿಯ ಬ್ರೂಸ್‌ಪೇಟೆ ಪೊಲೀಸ್ ಠಾಣೆಯಲ್ಲಿ ಎಫ್‌ಐಆರ್ ದಾಖಲಾಗಿದ್ದು, ಪ್ರಕರಣಕ್ಕೆ ಸಂಬಂಧಿಸಿದಂತೆ ಈಗಾಗಲೇ ತನಿಖೆ ನಡೆಯುತ್ತಿದೆ. ಬಳ್ಳಾರಿ ನಗರ ಶಾಸಕ ನಾರಾ ಭರತ್‌ರೆಡ್ಡಿ ಆಪ್ತ ಸತೀಶ್ ರೆಡ್ಡಿ, ಚಾನಾಳ್ ಶೇಖರ್, ನಾರಾ ಪ್ರತಾಪ್ ರೆಡ್ಡಿ, ನಾರಾ ಸೂರ್ಯನಾರಾಯಣ ರೆಡ್ಡಿ ಸೇರಿ ಹಲವರ ಹೆಸರನ್ನು ಎಫ್‌ಐಆರ್‌ನಲ್ಲಿ ಉಲ್ಲೇಖಿಸಲಾಗಿದೆ.

▶ 6ನೇ ಪುಟಕ್ಕೆ

ಚಾ.ಬೆಟ್ಟದಲ್ಲಿ ಪ್ರಸಾದ್ ಅಭಿವೃದ್ಧಿ ಆರಂಭ



ಮೊದಲ ಹಂತದಲ್ಲಿ ಸ್ವಾಗತ ಕಮಾನು, ಸಾಲುಮಂಟಪ, ವಾಹನ ನಿಲುಗಡೆ, ಶೌಚಾಲಯ, ಸಿಸಿ ಕ್ಯಾಮರಾ ಸೇರಿದಂತೆ 6 ಕೋಟಿ ವೆಚ್ಚದಲ್ಲಿ ಮೂಲಸೌಕರ್ಯ ಅಭಿವೃದ್ಧಿ

ಮೈಸೂರು, ಜ. 3(ಆರ್‌ಕೆ)–ಕೇಂದ್ರ ಸರ್ಕಾರದ ತೀರ್ಥಯಾತ್ರೆ, ಪುನರುಜ್ಜೀವನ ಮತ್ತು ಆಧ್ಯಾತ್ಮಿಕ ಪರಂಪರೆ ಅಭಿವೃದ್ಧಿ (ಪ್ರಸಾದ್) ಅಭಿಯಾನದಡಿ ಚಾಮುಂಡಿ ಬೆಟ್ಟದಲ್ಲಿ ಅಭಿವೃದ್ಧಿ ಯೋಜನೆ ತೀವ್ರ ಆಕ್ಷೇಪಗಳ ನಡುವೆಯೂ ಪ್ರಾರಂಭವಾಗಿದೆ.

ಕರ್ನಾಟಕ ಪ್ರವಾಸೋದ್ಯಮ ಮೂಲ ಸೌಕರ್ಯ ನಿಯಮಿತವು (ಕೆಟಿಐಎಲ್) ಈ ಯೋಜನೆಯನ್ನು ಅನುಷ್ಠಾನಗೊಳಿಸುತ್ತಿದ್ದು, ಕೇಂದ್ರ ಸರ್ಕಾರದ 30 ಕೋಟಿ ಹಾಗೂ ರಾಜ್ಯ ಸರ್ಕಾರದ 16 ಕೋಟಿ, ಒಟ್ಟು 46 ಕೋಟಿ ರೂ.ಗಳಲ್ಲಿ ಚಾಮುಂಡಿಬೆಟ್ಟ ಅಭಿವೃದ್ಧಿ ಕಾಮಗಾರಿಯನ್ನು ಕೈಗೊಳ್ಳಲಾಗುತ್ತಿದೆ. ಬೆಂಗಳೂರು ಮೂಲದ ಎಸ್‌ಎಎಸ್ ಕಾರ್ಕಳ ಎಂಟರ್ ಪ್ರೈಸಸ್ ಸಂಸ್ಥೆಗೆ ಮೊದಲ ಹಂತದ 6 ಕೋಟಿಯ ಚಾಮುಂಡಿ ಬೆಟ್ಟದ ಅಭಿವೃದ್ಧಿ ಕಾಮಗಾರಿಯನ್ನು ಟೆಂಡರ್ ಮೂಲಕ ವಹಿಸಲಾಗಿದೆ. ಸದರಿ ಸಂಸ್ಥೆಯು ಈಗಾಗಲೇ ಚಾಮುಂಡಿ ಬೆಟ್ಟದಲ್ಲಿ ಸಿದ್ಧತೆಗಳನ್ನು ಮಾಡಿಕೊಳ್ಳುತ್ತಿದ್ದು, ಜನವರಿ 5ರಂದು ಕಾಮಗಾರಿಗೆ ಪ್ರಾಯೋಗಿಕವಾಗಿ ಚಾಲನೆ ದೊರೆಯಲಿದೆ.

> ▶ ಇಂದು (ಜ.4) ಬೆಳಿಗ್ಗೆ 7.30 ಗಂಟೆಗೆ ಮೈಸೂರಿನ ಪರಿಸರವಾದಿಗಳು, ಪರಿಸರ ಪರವಾದ ಕೆಲ ಸಂಘ ಸಂಸ್ಥೆಗಳು, ನಾಗರಿಕರು ಚಾಮುಂಡಿ ಬೆಟ್ಟವನ್ನು ನೈಸರ್ಗಿಕದತ್ತ ಬಳುವಳಿಯಾಗಿ ಬಂದಿರುವ ಪರಿಸರವನ್ನೇ ಉಳಿಸಿಕೊಳ್ಳಬೇಕೆಂದು ಒತ್ತಾಯಿಸಿ ಚಾಮುಂಡಿಬೆಟ್ಟಕ್ಕೆ ಕಾಲು ನಡಿಗೆ ಅಭಿಯಾನ ಹಮ್ಮಿಕೊಂಡಿದ್ದಾರೆ.

ಸ್ವಾಗತ ಕಮಾನು, ಸಾಲು ಮಂಟಪ: ಮೊದಲ ಹಂತದಲ್ಲಿ ಚಾಮುಂಡಿ ಬೆಟ್ಟದ ಪಾರ್ಕಿಂಗ್ ಬಳಿ ಭವ್ಯ ಸ್ವಾಗತ ಕಮಾನು, ದೇವಸ್ಥಾನದ ಬಳಿ ಸಾಲು ಮಂಟಪ, ಮಹಿಷಾಸುರ ಪ್ರತಿಮೆ ಬಳಿ ಬಹೋಪಯೋಗಿ ಮಾಹಿತಿ ಕೇಂದ್ರ, ವಾಹನ ನಿಲುಗಡೆ ಸ್ಥಳ, ಶೂ–ಚಪ್ಪಲಿ ಸ್ಟ್ಯಾಂಡ್, ಮಹಿಳೆಯರು ಮತ್ತು ಪುರುಷರಿಗೆ

▶ 6ನೇ ಪುಟಕ್ಕೆ

ಮೈಸೂರು ಮಿತ್ರ ಭಾನುವಾರ 4 ಜನವರಿ 2026

ಇಂದು ಮೈಸೂರಲ್ಲಿ ವಿಶೇಷಚೇತನರ ಲೂಯಿಸ್ ಬ್ರೈಲ್ ಕಪ್ ಕ್ರಿಕೆಟ್ ಪಂದ್ಯಾವಳಿ



ಮೈಸೂರು, ಜ.3 (ಎಂಟಿವೈ) – ಲೂಯಿಸ್ ಬ್ರೈಲ್ ಅವರ 217ನೇ ಜನ್ಮ ದಿನಾಚರಣೆ ಅಂಗವಾಗಿ ಮೈಸೂರಿನ ಎಸ್‌ಜೆಸಿಇ ಮೈದಾನದಲ್ಲಿ ಭಾನುವಾರ (ಜ.4) ಬೆಳಗ್ಗೆ 8.30ಕ್ಕೆ ವಿಶೇಷ ಚೇತನರ ಲೂಯಿಸ್ ಕಪ್ ಕ್ರಿಕೆಟ್ ಪಂದ್ಯಾವಳಿ ಆಯೋಜಿಸಲಾಗಿದ್ದು, ರಾಷ್ಟ್ರೀಯ ಕ್ರಿಕೆಟ್ ಪಟು ಸೇರಿದಂತೆ 3 ತಂಡಗಳಲ್ಲಿ 70ಕ್ಕೂ ಹೆಚ್ಚು ಅಂಧ ಕ್ರಿಕೆಟ್ ಪಟುಗಳು ಪಂದ್ಯಾವಳಿಯಲ್ಲಿ ಪಾಲ್ಗೊಳ್ಳಲಿದ್ದಾರೆ ಎಂದು ದೃಷ್ಟಿ ಚಾರಿಟಬಲ್ ಟ್ರಸ್ಟ್ ಅಧ್ಯಕ್ಷ ಬಿ.ಆರ್.ದಿವಾಕರ್ ತಿಳಿಸಿದ್ದಾರೆ.

ಮೈಸೂರು ಜಿಲ್ಲಾ ಪ್ರರ್ತಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ದೃಷ್ಟಿ ಚಾರಿಟಬಲ್ ಟ್ರಸ್ಟ್ ವಿಶೇಷ ಚೇತನರಿಗಾಗಿ ಕಳೆದ ಹಲವು ವರ್ಷಗಳಿಂದ ವಿವಿಧ ಕಾರ್ಯಕ್ರಮ ರೂಪಿಸುತ್ತಾ ಬಂದಿದೆ. ಅದರಲ್ಲೂ ದೃಷ್ಟಿ ಹೀನರ ಏಳಿಗೆಗಾಗಿ ಶ್ರಮಿಸುತ್ತಿದೆ. ಈ ಹಿನ್ನೆಲೆಯಲ್ಲಿ ದೃಷ್ಟಿ ಹೀನರಿಗೆ ಬ್ರೈಲ್ ಲಿಪಿಯನ್ನು ಕೊಡುಗೆಯಾಗಿ ಕೊಟ್ಟು ಅಂಧರ ಬಾಳಲ್ಲಿ ಬೆಳಕು ತುಂಬುವಂತೆ ಮಾಡಿದ ಲೂಯಿಸ್ ಬ್ರೈಲ್ ಅವರ ಜನ್ಮ ದಿನದ ಹಿನ್ನೆಲೆಯಲ್ಲಿ ವಿಶೇಷ ಚೇತನರ ಲೂಯಿಸ್ ಕಪ್ ಕ್ರಿಕೆಟ್ ಪಂದ್ಯಾವಳಿ ಆಯೋಜಿಸಲಾಗಿದ್ದು, ಈ ಪಂದ್ಯಾವಳಿಯಲ್ಲಿ ಮೂರು ತಂಡಗಳು ಪಾಲ್ಗೊಳ್ಳುತ್ತಿವೆ. ದೃಷ್ಟಿಹೀನರಿಗಾಗಿ ಸಿದ್ಧಪಡಿಸಿರುವ ಗೆಜ್ಜೆ ಶಬ್ದ ಬರುವ ಚೆಂಡಿನೊಂದಿಗೆ ತಲಾ 10 ಓವರ್ ಪಂದ್ಯ ಜರುಗಲಿದೆ ಎಂದರು.

ಈ ಕ್ರಿಕೆಟ್ ಪಂದ್ಯಾವಳಿಗೆ ಹಲವು ಮಂದಿ ನೆರವು ನೀಡಿ, ಪ್ರೋತ್ಸಾಹಿಸಿದ್ದಾರೆ. ನಾಳೆ (ಜ.4) ಬೆಳಗ್ಗೆ 8.30ಕ್ಕೆ ಬೆಂಗಳೂರಿನ ಆರ್ಯನ್ ಫೌಂಡೇಶನ್ ಸ್ಥಾಪಕ ಆರ್ಯನ್ ಸೂರ್ಯ ಎಸ್.ಎ. ಹಾಗೂ ಆರ್ಯನ್ ಫೌಂಡೇಶನ್ ಟ್ರಸ್ಟಿ ಅಮಿತಾ ಸುನೀಲ್ ಎಂ.ಆರ್. ಅವರು ಕ್ರಿಕೆಟ್ ಪಂದ್ಯಾವಳಿಯನ್ನು ಉದ್ಘಾಟಿಸಲಿದ್ದಾರೆ. ಅಂದು ಸಂಜೆ 4 ಗಂಟೆಗೆ ಸಮಾರೋಪ ಸಮಾರಂಭ ಜರುಗಲಿದ್ದು, ರಂಗರಾವ್ ಮೆಮೋರಿಯಲ್ ಸ್ಕೂಲ್ ಫಾರ್ ಅಡಿಫರೆಂಟ್ಲಿ ಏಬಲ್ಡ್ ಸಂಸ್ಥೆಯ ಕಾರ್ಯನಿರ್ವಾಹಕ ಕಾರ್ಯದರ್ಶಿ ಆರ್.ಹರೀಶ್, ರೋಟರಿ ಕ್ಲಬ್ ಆಫ್ ಮೈಸೂರು ವೆಸ್ಟ್ ಅಧ್ಯಕ್ಷ ರೊ.ದೇವರಾಜ್, ಕಾರ್ಯದರ್ಶಿ ಬಿ.ಎಂ.ರುದ್ರೇಶ್ ಮುಖ್ಯ ಅತಿಥಿಗಳಾಗಿ ಪಾಲ್ಗೊಳ್ಳಲಿದ್ದಾರೆ. ಕಾರ್ಯಕ್ರಮದ ಅಧ್ಯಕ್ಷತೆಯನ್ನು ದೃಷ್ಟಿ ಚಾರಿಟಬಲ್ ಟ್ರಸ್ಟ್ ಅಧ್ಯಕ್ಷ ಬಿ.ಆರ್.ದಿವಾಕರ್ ವಹಿಸಲಿದ್ದಾರೆ. ಇದೇ ವೇಳೆ ನಿರಾಮಯ ಫೌಂಡೇಶನ್ ಸಂಸ್ಥಾಪಕರಾದ ಆರ್.ರಕ್ಷಿತಾ ಅವರನ್ನು ಸನ್ಮಾನಿಸುವುದಾಗಿ ತಿಳಿಸಿದರು.

ಗೋಷ್ಠಿಯಲ್ಲಿ ದೃಷ್ಟಿ ಚಾರಿಟಬಲ್ ಟ್ರಸ್ಟ್ ಪದಾಧಿಕಾರಿಗಳಾದ ಕೆ.ಬಿ.ದರ್ಶನ್, ಸುನೀಲ್, ನೂತನ್‌ಕುಮಾರ್ ಇದ್ದರು.

ಕನ್ನಡ ಕ್ರೈಸ್ತರ ರಕ್ಷಣಾ ವೇದಿಕೆ ಕ್ಯಾಲೆಂಡರ್ ಬಿಡುಗಡೆ




ಕನ್ನಡ ಕ್ರೈಸ್ತರ ರಕ್ಷಣಾ ವೇದಿಕೆ ಪ್ರಕಟಿಸಿರುವ ನೂತನ ವರ್ಷದ ಕ್ಯಾಲೆಂಡರ್ ಅನ್ನು ಕರ್ನಾಟಕ ಪ್ರಜಾ ಪಾರ್ಟಿ ರಾಜ್ಯಾಧ್ಯಕ್ಷ ಡಾ.ಶಿವಣ್ಣ ಬಿಡುಗಡೆ ಮಾಡಿದರು.

ಮೈಸೂರು,ಜ.3(ಎಂಟಿವೈ)– ಕನ್ನಡ ಕ್ರೈಸ್ತರ ರಕ್ಷಣಾ ವೇದಿಕೆ ಪ್ರಕಟಿಸಿರುವ ನೂತನ ವರ್ಷದ ದಿನಚರಿ (ಕ್ಯಾಲೆಂಡರ್) ಯನ್ನು ಕರ್ನಾಟಕ ಪ್ರಜಾ ಪಾರ್ಟಿ(ರೈತಪರ್ವ) ರಾಜ್ಯಾಧ್ಯಕ್ಷ ಡಾ.ಶಿವಣ್ಣ ಬಿಡುಗಡೆ ಮಾಡಿದರು.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ನಡೆದ ಕಾರ್ಯಕ್ರಮದಲ್ಲಿ ಕ್ಯಾಲೆಂಡರ್ ಬಿಡುಗಡೆ ಮಾಡಿ ಮಾತನಾಡಿದ ಅವರು, ಕ್ಯಾಲೆಂಡರ್ ಪ್ರತಿಯೊಬ್ಬರ ಜೀವನದಲ್ಲಿ ಹಾಸುಹೊಕ್ಕಾಗಿದೆ. ಜನರು, ಜನನದಿಂದ ಮರಣದವರೆಗೂ ಕ್ಯಾಲೆಂಡರ್ ಅವಲಂಬಿಸುವಂತಾಗಿದೆ. ಪ್ರತಿದಿನವೂ ಕ್ಯಾಲೆಂಡರ್‌ನಲ್ಲಿ ನಮೂದಿಸಿರುವ ಹಬ್ಬ-ಹರಿದಿನ, ನಕ್ಷತ್ರ, ತಿಥಿ, ರಜೆ ದಿನ ಸೇರಿದಂತೆ ಇನ್ನಿತರ ಮಾಹಿತಿಯನ್ನು ಗಮನಿಸುವ ಪರಿಪಾಠವನ್ನು ಜನ ಅನುಸರಿಸುತ್ತಿದ್ದಾರೆ. ಈ ವೇಳೆ ಕನ್ನಡ ಕ್ರೈಸ್ತರ ರಕ್ಷಣಾ ವೇದಿಕೆ ಪ್ರಕಟಿಸಿರುವ ಕ್ಯಾಲೆಂಡರ್ ಹಲವು ವಿಶೇಷತೆಯನ್ನು ಹೊಂದಿದೆ. ಮುಂದಿನ ದಿನಗಳಲ್ಲಿ ಇನ್ನಷ್ಟು ಸಮಾಜಮುಖಿ ಕಾರ್ಯವನ್ನು ದೊಡ್ಡಮಟ್ಟದಲ್ಲಿ ಮಾಡುವ ಶಕ್ತಿ ಕನ್ನಡ ಕ್ರೈಸ್ತರ ರಕ್ಷಣಾ ವೇದಿಕೆಗೆ ದೊರೆಯಲೆಂದು ಆಶಿಸಿದರು.

ಕನ್ನಡ ಕ್ರೈಸ್ತರ ರಕ್ಷಣಾ ವೇದಿಕೆ ಅಧ್ಯಕ್ಷ ಸ್ಟೀಫನ್ ಜೋಸೆಫ್ ಮಾತನಾಡಿ, ವೇದಿಕೆ ವತಿಯಿಂದ ಮುದ್ರಿಸಿರುವ ಕ್ಯಾಲೆಂಡರ್‌ನಲ್ಲಿ ಪ್ರತಿದಿನವೂ ಎಲ್ಲರಿಗೂ ಒಳಿತಾಗಲೆಂದು ಪ್ರಾರ್ಥಿಸಲಾಗಿದೆ ಎಂದರು. ಈ ಸಂದರ್ಭದಲ್ಲಿ ವೇದಿಕೆಯ ಜಾನ್, ಬಾಬು, ರಾಜು, ಸುಜೀತ್‌ಕುಮಾರ್ ಸೇರಿದಂತೆ ಇನ್ನಿತರರು ಉಪಸ್ಥಿತರಿದ್ದರು.

ಶುಭಾಶಯ



ಹುಟ್ಟುಹಬ್ಬ ಆಚರಿಸಿಕೊಂಡ ಕರ್ನಾಟಕ ಪ್ರದೇಶ ಕುರುಬರ ಸಂಘದ ನಿರ್ದೇಶಕ ಅಭಿಲಾಷ್ ಯು. ಅವರನ್ನು ದಂಪತಿ ಸಮೇತ ಅಭಿನಂದಿಸಿ, ಕಾಂಗ್ರೆಸ್ ಮುಖಂಡರಾದ ಮೆಲ್ಲಹಳ್ಳಿ ರವಿ ಎನ್.ಗೌಡ, ಉದ್ಯಮಿ ಹಿಮಾನ್‌ಕುಮಾರ್ ಶುಭಾಶಯ ಕೋರಿದರು.

ಕುಂಬಾರರ ಸಂಘದ ನೂತನ ಪದಾಧಿಕಾರಿಗಳು



ಎಸ್.ಡಿ.ಶ್ರೀಧರ್

ಮೈಸೂರು, ಜ. 3– ಇತ್ತೀಚೆಗೆ ಮಹದೇಶ್ವರ ದೇವಸ್ಥಾನದಲ್ಲಿ ನಡೆದ ಕುಲಾಲ ಗುಂಡ ಬ್ರಹ್ಮಾರ್ಯ ಕುಂಬಾರರ ಸಂಘದ ವಾರ್ಷಿಕ ಮಹಾಸಭೆಯಲ್ಲಿ ನೂತನ ಪದಾಧಿಕಾರಿಗಳನ್ನು ಆಯ್ಕೆ ಮಾಡಲಾಯಿತು. ಅಧ್ಯಕ್ಷರಾಗಿ ಹೆಬ್ಬಾಳು 2ನೇ ಹಂತದ ನಿವಾಸಿ ಎಸ್.ಡಿ.ಶ್ರೀಧರ್, ಉಪಾಧ್ಯಕ್ಷರಾಗಿ ಮೇಟಗಳ್ಳಿಯ ಜವರಶೆಟ್ಟಿ, ಕಾರ್ಯದರ್ಶಿಯಾಗಿ ಕ್ಯಾತನಹಳ್ಳಿ ಚಿಕ್ಕಸ್ವಾಮಿ, ಸಹ ಕಾರ್ಯದರ್ಶಿಯಾಗಿ ಕೆ.ಆರ್.ನಗರ ಮೀನಾಕ್ಷಿಪುರಂ ಬ್ಲಾಕ್ ನಿವಾಸಿ ಧನಲಕ್ಷ್ಮಿ, ಖಜಾಂಚಿಯಾಗಿ ಸರಸ್ವತಿಪುರಂನ ಎಂ.ನಾಗರಾಜು, ಕಾರ್ಯಾಧ್ಯಕ್ಷರಾಗಿ ಪಡುವಾರಹಳ್ಳಿಯ ಎಂ. ರಮೇಶ್, ಗೌರವ ಉಪಾಧ್ಯಕ್ಷರಾಗಿ ಪಡುವಾರಹಳ್ಳಿ ಸತೀಶ್, ಸದಸ್ಯರಾಗಿ ಪಡುವಾರಹಳ್ಳಿ ಉಮೇಶ್, ವಿಶ್ವೇಶ್ವರನಗರದ ಮಲ್ಲಿಕಾರ್ಜುನ, ಹೆಬ್ಬಾಳು ಎರಡನೇ ಹಂತದ ಸೋಮಶೇಖರ, ಹಿನಕಲ್‌ನ ರಂಗಶೆಟ್ಟಿ, ಲಿಂಗದೇವರಕೊಪ್ಪಲಿನ ಆರ್.ವನಿತಾ, ದಟ್ಟಗಳ್ಳಿಯ ಚಂದ್ರಶೆಟ್ಟಿ, ಪಡುವಾರಹಳ್ಳಿಯ ಆರ್.ರಾಜು, ಆರ್.ಮಧು ಆಯ್ಕೆಯಾಗಿದ್ದಾರೆ.


ನಿಧನ

ಆರ್.ರಾಜೇಶ್ವರಿ



ಮೈಸೂರು,ಜ.3–ಮೈಸೂರಿನ ಯಾದವಗಿರಿ ನಿವಾಸಿ ದಿವಂಗತ ಬಿ.ಸಿ.ರಮೇಶ್ ಅವರ ಪತ್ನಿ ಆರ್.ರಾಜೇಶ್ವರಿ (72) ಶನಿವಾರ ಬೆಳಗ್ಗೆ ನಿಧನರಾದರು. ಮೃತರು ಇಬ್ಬರು ಪುತ್ರಿಯರಾದ ಮಾಲಾ ರಮೇಶ್, ಮೋದಿನಿ ಅಖಿಲೇಶ್, ಪುತ್ರ ವಿನಯ್ ರಮೇಶ್ ಸೇರಿದಂತೆ ಅಪಾರ ಬಂಧು ವರ್ಗ ಅಗಲಿದ್ದಾರೆ. ಮೃತರ ಅಂತ್ಯಕ್ರಿಯೆ ವಿದ್ಯಾರಣ್ಯಪುರಂನ ವೀರಶೈವ ಲಿಂಗಾಯಿತ ರುದ್ರಭೂಮಿಯಲ್ಲಿ ಭಾನುವಾರ ಸಂಜೆ 5 ಗಂಟೆಗೆ ನೆರವೇರಲಿದೆ ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಫೆಲಿಕ್ಸ್ ಫ್ರಾನ್ಸಿಸ್



ಮೈಸೂರಿನ ಗಾಂಧಿನಗರದ ನಿವಾಸಿ ಫೆಲಿಕ್ಸ್ ಫ್ರಾನ್ಸಿಸ್ (ಫಿಲೀಪ್–34) ಶುಕ್ರವಾರ ನಿಧನರಾದರು. ಮೃತರು ಪತ್ನಿ, ಓರ್ವ ಪುತ್ರಿ ಸೇರಿದಂತೆ ಅಪಾರ ಬಂಧು–ಬಳಗವನ್ನು ಅಗಲಿದ್ದಾರೆ. ಅಂತ್ಯಕ್ರಿಯೆ ಉದಯಗಿರಿಯ ಮುಖ್ಯ ರಸ್ತೆಯಲ್ಲಿರುವ ಕ್ರೈಸ್ತ ಸಮುದಾಯದ ರುದ್ರಭೂಮಿಯಲ್ಲಿ ಶನಿವಾರ ಸಂಜೆ ನೆರವೇರಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಸಂವಿಧಾನ ಓದಿ, ಸಮಾಜದ ಮುಖ್ಯ ಅಂಶಗಳ ಅರ್ಥ ಮಾಡಿಕೊಳ್ಳಿ

'ಭಾರತದ ಸಂವಿಧಾನ–ಸಾಮಾಜಿಕ ನ್ಯಾಯ' ವಿಚಾರ ಸಂಕಿರಣದಲ್ಲಿ ದೇವರತ್ನ ಫೌಂಡೇಷನ್ ಸಂಸ್ಥಾಪಕ ಶಿವಪ್ರಸಾದ್ ಅಭಿಮತ



ಮಾನಸಗಂಗೋತ್ರಿಯ ಡಾ.ಬಾಬೂ ಜಗಜೀವನರಾಮ್ ಅಧ್ಯಯನ, ಸಂಶೋಧನ ಮತ್ತು ವಿಸ್ತರಣಾ ಕೇಂದ್ರದಿಂದ ಸಂಸ್ಥೆಯ ಸಭಾಂಗಣದಲ್ಲಿ ಏರ್ಪಡಿಸಿದ್ದ 'ಭಾರತದ ಸಂವಿಧಾನ ಮತ್ತು ಸಾಮಾಜಿಕ ನ್ಯಾಯ' ಕುರಿತ ವಿಚಾರ ಸಂಕಿರಣವನ್ನು ದೇವರತ್ನ ಫೌಂಡೇಷನ್ ಸಂಸ್ಥಾಪಕ ಎಂ.ಶಿವಪ್ರಸಾದ್ ಉದ್ಘಾಟಿಸಿದರು.

ಮೈಸೂರು, ಜ.3(ಜಿಎ)– ಮೊದಲು ಯಾವ ಪುಸ್ತಕಗಳನ್ನು ಓದುತ್ತೇವೋ ಗೊತ್ತಿಲ್ಲ. ಆದರೆ ಸಂವಿಧಾನವನ್ನು ಕಡ್ಡಾಯವಾಗಿ ಓದಬೇಕು. ಸಂವಿಧಾನವನ್ನು ಓದಲಿಲ್ಲ ಎಂದರೆ ಸಮಾಜದ ಬಹುಮುಖ್ಯ ಅಂಶಗಳನ್ನು ಅರ್ಥ ಮಾಡಿಕೊಳ್ಳುವುದರಲ್ಲಿ ವಿಫಲರಾಗುತ್ತೇವೆ ಎಂದು ದೇವರತ್ನ ಫೌಂಡೇಷನ್ ಸಂಸ್ಥಾಪಕ ಹಾಗೂ ವಕೀಲರೂ ಆದ ಎಂ.ಶಿವಪ್ರಸಾದ್ ಇಂದಿಲ್ಲಿ ಅಭಿಪ್ರಾಯಪಟ್ಟರು.

ಮೈಸೂರಿನ ಮಾನಸಗಂಗೋತ್ರಿಯ ಡಾ.ಬಾಬೂ ಜಗಜೀವನರಾಮ್ ಅಧ್ಯಯನ, ಸಂಶೋಧನ ಮತ್ತು ವಿಸ್ತರಣ ಕೇಂದ್ರದ ವತಿಯಿಂದ ಸಂಸ್ಥೆಯ ಸಭಾಂಗಣದಲ್ಲಿ ಏರ್ಪಡಿಸಿದ್ದ 'ಭಾರತದ ಸಂವಿಧಾನ ಮತ್ತು ಸಾಮಾಜಿಕ ನ್ಯಾಯ' ವಿಷಯ ಕುರಿತ ವಿಚಾರ ಸಂಕಿರಣ ಉದ್ಘಾಟಿಸಿ ಅವರು ಮಾತನಾಡಿದರು.

ನಾವು ಸಂವಿಧಾನವನ್ನು ಓದಿಕೊಳ್ಳಲಿಲ್ಲವೆಂದರೆ ಸಾಮಾಜಿಕ ನ್ಯಾಯದ ಬಗ್ಗೆ ಮಾತನಾಡಲು ಅರ್ಹತೆ ಮತ್ತು ಯೋಗ್ಯತೆ ಇರುವುದಿಲ್ಲ. ಭಾರತ ದೇಶದ ಸಂವಿಧಾನ ಮತ್ತು ಸಾಮಾಜಿಕ ನ್ಯಾಯದ ಪಿತಾಮಹ ಡಾ.ಅಂಬೇಡ್ಕರ್ ನಾವು ಯಾವ ರೀತಿ ನಡೆದುಕೊಳ್ಳಬೇಕು, ಹೇಗೆ ಮಾತನಾಡಬೇಕು, ಸಾರ್ವಜನಿಕ ಜೀವನದಲ್ಲಿ ನಮ್ಮ ಬದುಕು ಯಾವ ರೀತಿ ಇರಬೇಕು ಎಂಬುದನ್ನು ಸಂವಿಧಾನದಲ್ಲಿ ಸ್ಪಷ್ಟವಾಗಿ ತಿಳಿಸಿದ್ದಾರೆ. ಸಂವಿಧಾನದ 14ರಿಂದ 18ನೇ ವಿಧಿಗಳು ಸಾಮಾಜಿಕ ನ್ಯಾಯದ ಸ್ಪಷ್ಟತೆಯನ್ನು ನೀಡಿದೆ ಎಂದರು.

ಪ್ರಸ್ತುತ ದಿನದಲ್ಲಿ ಸಂವಿಧಾನ ಮತ್ತು ಸಾಮಾಜಿಕ ನ್ಯಾಯದ ಅರಿವು ಮೂಡಿಸಲು ಇಂತಹ ಅನೇಕ ಕಾರ್ಯಕ್ರಮಗಳನ್ನು ರಾಜ್ಯಾದ್ಯಂತ ಮಾಡಬೇಕು. ಆಗ ಮಾತ್ರ ಸಮಾಜದಲ್ಲಿ ಶ್ರೇಯೋಭಿವೃದ್ಧಿಯನ್ನು ಮತ್ತು ಸಾಮಾಜಿಕ ನ್ಯಾಯವನ್ನು ಕಾಣಲು ಸಾಧ್ಯವಾಗುತ್ತದೆ ಎಂದು ತಿಳಿಸಿದರು.

ಸಾಮಾಜಿಕ ನ್ಯಾಯ ಎಂದರೆ ಹೊರಗಿನ ಪ್ರಪಂಚದ ವಿಷಯವಲ್ಲ. ನಮ್ಮ ಅಂತರ್ಯದಲ್ಲಿರುವ ಸಮಾನತೆಯ ಮನಸ್ಥಿತಿ. ಈ ಮನಸ್ಥಿತಿಯನ್ನು ಅರ್ಥ ಮಾಡಿಕೊಳ್ಳದೆ ಹೋದರೆ ಹಾಗೂ ಈ ಮನಸ್ಥಿತಿಯನ್ನು ಸಮಾಜದಲ್ಲಿ ಜಾರಿ ಮಾಡದೇ ಹೋದರೆ ಸಾಮಾಜಿಕ ನ್ಯಾಯದ ಅನುಷ್ಠಾನದ ತೊಡಕಿನಲ್ಲಿ ನಾವು ನೇರವಾಗಿ ಹೊಣೆಗಾರರಾಗುತ್ತೇವೆ ಎಂದು ತಿಳಿಸಿದರು.

12ನೇ ಶತಮಾನದಲ್ಲಿ ಅನುಭವ ಮಂಟಪದಲ್ಲಿ ಸಮಾಜಿಕ ನ್ಯಾಯವನ್ನು ನೀಡುತ್ತಿದ್ದರು. ತಮ್ಮ ಅನುಭವ ಮಂಟಪದಲ್ಲಿ ತಳ ಸಮುದಾಯದವರಿಗೆಲ್ಲಾ ಅವಕಾಶ ನೀಡುತ್ತಿದ್ದರು. ಸಾಮಾಜಿಕ ನ್ಯಾಯದ ಅನುಭವ ಮಂಟಪದಲ್ಲಿ ಹುಟ್ಟಿದ ಈ ನಾಡಿನಲ್ಲಿಂದು ಜಾತಿ ಹೆಸರಿನಲ್ಲಿ ಕೊಲೆ, ಹಲ್ಲೆ, ನಡೆಯುತ್ತಿದೆ ಎಂದು ವಿಷಾದ ವ್ಯಕ್ತಪಡಿಸಿದರು. ಕಾರ್ಯಕ್ರಮದಲ್ಲಿ ಅಲಹಬಾದ್ ವಿಶ್ವವಿದ್ಯಾಲಯದ ಜಿ.ಬಿ.ಪಂತ್ ಸಮಾಜ ವಿಜ್ಞಾನ ಸಂಸ್ಥೆಯ ಡಾ.ಚಂದ್ರಯ್ಯ ಗೋಪಾನಿ, ಬಾಬೂ ಜಗಜೀವನರಾಮ್ ಅಧ್ಯಯನ ಕೇಂದ್ರದ ನಿರ್ದೇಶಕ ಪ್ರೊ.ಕೆ.ಸದಾಶಿವ, ಸ್ಕೂಲ್ ಆಫ್ ಲಾ ಉಪನ್ಯಾಸಕಿ ಎ.ಅನನ್ಯ, ಜೆ.ಎಸ್‌ಎಸ್ ಕಾನೂನು ಕಾಲೇಜಿನ ಸಹಾಯಕ ಪ್ರಾಧ್ಯಾಪಕರಾದ ಡಾ.ಎ.ಟಿ.ಜಗದೀಶ್, ಎಸ್.ನರೇಂದ್ರ, ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ ರಾಜ್ಯಶಾಸ್ತ್ರ ಅಧ್ಯಯನ ವಿಭಾಗದ ಎಸ್.ಎಸ್.ಜಾಹ್ನವಿ ಇನ್ನಿತರರು ಉಪಸ್ಥಿತರಿದ್ದರು.

> ಪ್ರಜ್ಞಾವಂತರು ತಮ್ಮ ಪ್ರಜ್ಞಾವಂತಿಕೆಯನ್ನು ಸಮಾಜದಲ್ಲಿ ಬಿತ್ತದೆ ಇರುವುದರಿಂದ ಸಮಾಜದಲ್ಲಿ ಜಾತಿ ನಿಂದನೆ, ಮರ್ಯಾದೆ ಹತ್ಯೆಯಂತಹ ಅನಿಷ್ಟ ಪದ್ಧತಿಗಳು ಮುಂದುವರೆದುಕೊಂಡು ಬಂದಿವೆ. ವಿದ್ಯಾವಂತರೇ ಜಾತಿ ವ್ಯವಸ್ಥೆಯಲ್ಲಿ ನೇರವಾಗಿ ತೊಡಗಿಸಿಕೊಳ್ಳುವುದರಿಂದಲೂ ಇಂತಹ ತಲೆ ತಗ್ಗಿಸುವ ಘಟನೆಗಳು ನಡೆಯಲು ಕಾರಣ. ಪ್ರಬುದ್ಧ ಚಿಂತಕರು, ಬರಹಗಾರರು, ಹೋರಾಟಗಾರರು ಇಂತಹ ಘಟನೆಗಳ ಮತ್ತು ಪದ್ಧತಿಗಳ ವಿರುದ್ಧ ಗಮನ ಹರಿಸದೇ ಇರುವುದು ಇದಕ್ಕೆ ಬಹುಮುಖ್ಯ ಕಾರಣ.
> –ಎಂ.ಶಿವಪ್ರಸಾದ್

ಮೈಸೂರು ಹಾಗೂ ಸುತ್ತಮುತ್ತ ಇಂದು...



ಇಂದಿನ ಪಂಚಾಂಗ

04.1.2026 ಭಾನುವಾರ, ಮಳೆ ನಕ್ಷತ್ರ: ಮೂಲ, 29.12.2025 ರಿಂದ 10.01.2026
ವಿಶ್ವಾವಸು ನಾಮ ಸಂವತ್ಸರ, ದಕ್ಷಿಣಾಯನ, ಹೇಮಂತ ಋತು, ಪುಷ್ಯ ಮಾಸ, ಕೃಷ್ಣ ಪಕ್ಷ,
ತಿಥಿ: ಪಾಡ್ಯ, ನಕ್ಷತ್ರ: ಪುನರ್ವಸು, ರಾಹುಕಾಲ: ಸಂಜೆ 4.30 ರಿಂದ 6 ರವರೆಗೆ

- **ಪರಿಸರಕ್ಕಾಗಿ ನಾವು ಪರಿಸರ ಕಾರ್ಯಕರ್ತರ ರಾಜ್ಯ ಸಂಘಟನೆ :** ಚಾಮುಂಡಿಬೆಟ್ಟದ ಸಂರಕ್ಷಣೆಗಾಗಿ ನಡಿಗೆ, ಕಪ್ಪತ್ತಗುಡ್ಡ ಸ್ವಾಮೀಜಿ, ಬೆಳಗಾವಿ ಜಿಲ್ಲೆಯ ನಿಡಸೋಸಿ ಮಠದ ಸ್ವಾಮೀಜಿ, ಎ.ಟಿ. ರಾಮಸ್ವಾಮಿ, ಕೃಪಾಕರ–ಸೇನಾನಿ, ಚಂದ್ರಕಾಂತ ವಡ್ಡು, ಸ್ಥಳ: ಚಾಮುಂಡಿಬೆಟ್ಟ, ಬೆಳಗ್ಗೆ 7.30ಕ್ಕೆ.
- **ಹಿಮಾಲಯ ಪ್ರತಿಷ್ಠಾನ :** ಯೋಗ ಸಂಹಿತಾ, ಯೋಗದ ಪ್ರಾಚೀನ ಗ್ರಂಥಗಳ ಕುರಿತು ವಿಚಾರ ಸಂಕಿರಣ, ಪ್ರಾಸ್ತಾವಿಕ ನುಡಿ : ಯೋಗ ಸಂಹಿತಾ ಸಮಿತಿ ಕಾರ್ಯಾಧ್ಯಕ್ಷ ಡಾ. ಎಸ್.ಪಿ. ಯೋಗಣ್ಣ, ಉದ್ಘಾಟನೆ : ಮಾಜಿ ಸಚಿವ ಪ್ರಮೋದ್ ಮಧ್ವರಾಜ್, ಶ್ರೀ ಪತಂಜಲಿ ಮಹರ್ಷಿಗಳಿಗೆ ಪುಷ್ಪಾರ್ಚನೆ : ಡಾ. ಹೆಚ್.ಆರ್. ನಾಗೇಂದ್ರ, ಅಧ್ಯಕ್ಷತೆ : ಪ್ರೊ. ರಾಮಚಂದ್ರ ಜಿ. ಭಟ್ ಕೋಟೆಮನೆ, ಉಪಸ್ಥಿತರು : ಶಾಸಕ ಟಿ.ಎಸ್. ಶ್ರೀವತ್ಸ, ಹಿರಿಯ ಸಮಾಜ ಸೇವಕ ಡಾ. ಕೆ. ರಘುರಾಂ ವಾಜಪೇಯಿ, ಸ್ಥಳ: ಶ್ರೀ ರಾಮಕೃಷ್ಣ ವಿದ್ಯಾಕೇಂದ್ರ, ಶಾರದಾ ಸಭಾಂಗಣ, ರಾಮಕೃಷ್ಣನಗರ, ಬೆಳಗ್ಗೆ 9 ರಿಂದ.
- **ಲಯನ್ಸ್ ಇಂಟರ್ ನ್ಯಾಷನಲ್ ಜಿಲ್ಲೆ 317:** ಪ್ರಾಂತೀಯ ಸಮ್ಮೇಳನ, ರಂಗಾಯಣದ ಮಾಜಿ ನಿರ್ದೇಶಕ ಡಾ.ಹೆಚ್.ಜನಾರ್ಧನ್ (ಜನ್ನಿ) 'ಮಾನವೀಯತೆ ಮೊದಲ ಆದ್ಯತೆ' ವಿಷಯ ಕುರಿತು ಉಪನ್ಯಾಸ, ಅತಿಥಿಗಳು : ಮಲ್ಟಿಪಲ್ ಕೌನ್ಸಿಲ್ ಛೇರ್ಮನ್ ಡಾ.ಎನ್.ಕೃಷ್ಣಗೌಡ, ಅಧ್ಯಕ್ಷತೆ : ಪ್ರಾಂತೀಯ ಅಧ್ಯಕ್ಷ ಲಯನ್ ಪಿ.ಹೊನ್ನರಾಜು, ಎಂ. ಪಂಚಲಿಂಗೇಗೌಡ, ವೀಣಾ ಅಶೋಕ್, ಎಚ್. ಋಷಿ, ಕೆ.ಪಿ. ಶಿವಪ್ರಸಾದ್ ಹಾಗೂ ಲಯನ್ ಜೈಪ್ರಕಾಶ್ ಜೀವಮಾನ ಸಾಧನೆ ಪ್ರಶಸ್ತಿ ಪ್ರದಾನ, ಸ್ಥಳ: ಬಿಲ್ಡರ್ಸ್ ಅಸೋಸಿಯೇಷನ್ ಆಫ್ ಇಂಡಿಯಾ ಸಭಾಂಗಣ, ವಿದ್ಯಾರಣ್ಯಪುರಂ, ಬೆಳಗ್ಗೆ 8.30ಕ್ಕೆ.
- **ಪಾಳ್ಯಂ ಶ್ರೀ ಶಾಸ್ತಾ ಪೀಠಂ, ಅಭಯದಾಯಕ ಶ್ರೀ ಅಯ್ಯಪ್ಪಸ್ವಾಮಿ ದೇವಸ್ಥಾನಂ :** ಧನುರ್ಮಾಸದ ವಿಶೇಷ ಪೂಜಾ, ಲಕ್ಷಾರ್ಚನಾ, ವಾರ್ಷಿಕ ಕುಂಭಾಭಿಷೇಕ ಪೂಜಾ ಮಹೋತ್ಸವ, ಮಹತೋಭಾರ ಶ್ರೀ ಧರ್ಮಶಾಸ್ತಾ ಸ್ವಾಮಿಯವರಿಗೆ, ಮಹಾಭಿಷೇಕ, ಅಲಂಕಾರ ಸೇವೆ, ನಾಮಾರ್ಚನೆ, ಮಹಾನಿವೇದನೆ, ಮಂಗಳಾರತಿ, ತೀರ್ಥಪ್ರಸಾದ ವಿನಿಯೋಗ, ಸ್ಥಳ: ಶ್ರೀ ಅಯ್ಯಪ್ಪಸ್ವಾಮಿ ದೇವಸ್ಥಾನ, ರಾಘವೇಂದ್ರನಗರ.
- **ಕೋ–ಆಪ್ಟೆಕ್ಸ್ :** ಸಂಕ್ರಾಂತಿ ಹಬ್ಬದ ಪ್ರಯುಕ್ತ ವಿಶೇಷ ಪ್ರದರ್ಶನ ಮಾರಾಟ ಮೇಳ, ಸ್ಥಳ: ದಿ ಇನ್‌ಸ್ಟಿಟ್ಯೂಷನ್ ಆಫ್ ಎಂಜಿನಿಯರ್ಸ್, ಜೆಎಲ್‌ಬಿ ರಸ್ತೆ, ಬೆಳಗ್ಗೆ 10 ರಿಂದ.
- **ರೋಟರಿ ಜಯಪ್ರಕಾಶ್ ನಗರ, ಶ್ರೀ ಧನ್ವಂತರಿ ಆಯುರ್ವೇದಾಲಯ :** ಉಚಿತ ಆಯುರ್ವೇದ ಆರೋಗ್ಯ ತಪಾಸಣೆ ಮತ್ತು ಔಷಧಿ ವಿತರಣಾ ಶಿಬಿರ, ಸ್ಥಳ: ಕನಕದಾಸ ಮಂಟಪ, ಪುಟ್ಟರಾಜ ಗವಾಯಿ ಮೈದಾನ, ಜೆ.ಪಿ. ನಗರ, ಬೆಳಗ್ಗೆ 10 ರಿಂದ.
- **ಕನ್ನಡ ಸಾಹಿತ್ಯ ಸಂಸ್ಕೃತಿ ಮತ್ತು ಅಭಿವೃದ್ಧಿ ಟ್ರಸ್ಟ್, ಕುಕನೂರು :** ತಿರುಳ್ಗನ್ನಡ ನಾಡಿನಿಂದ ಸಾಂಸ್ಕೃತಿಕ ನಗರಿ ಮೈಸೂರು ಕಡೆಗೆ ಸಾಂಸ್ಕೃತಿಕ ಪಯಣ, 13ನೇ ಅಖಿಲ ಭಾರತ ಕನ್ನಡ ನುಡಿಸಿರಿ ಸಮ್ಮೇಳನ, ಸಾನ್ನಿಧ್ಯ : ಡಾ. ಶ್ರೀ ಅಘೋರಿ ತೋತಾಪುರಿ ಸೋಮಶೇಖರ ಗುರೂಜಿ, ಸಮ್ಮೇಳನಾಧ್ಯಕ್ಷೆ : ಚುಟುಕು ಸಿರಿ ಶ್ರೀಮತಿ ರತ್ನ ಹಾಲಪ್ಪಗೌಡ, ಉದ್ಘಾಟನೆ: ಡಾ. ಎಂ.ಎಸ್. ಶಶಿಕಲಾಗೌಡ, ಅಧ್ಯಕ್ಷತೆ : ಜಿಲ್ಲಾ ಕಸಾಪ ಅಧ್ಯಕ್ಷ ಮಡ್ಡೀಕೆರೆ ಗೋಪಾಲ್, ಸ್ಥಳ:ನಾಲ್ವಡಿ ಕೃಷ್ಣರಾಜ ಒಡೆಯರ್ ಸಭಾಂಗಣ, ಕನ್ನಡ ಭವನ, ಕುವೆಂಪು ಟ್ರಸ್ಟ್, ಬೆಳಗ್ಗೆ 10 ರಿಂದ.
- **ರಂಗಾಂತರಂಗ ಮೈಸೂರು ಮಕ್ಕಳ ರಂಗ ಭೂಮಿ :** ವೆಂಕಟೇಶ್ ಈಡಿಗರ ನೀನಾಸಂ ಅವರಿಂದ ಮಕ್ಕಳ ರಂಗಭೂಮಿ ಕಾರ್ಯಾಗಾರ, ವಿಷಯ : ರಂಗಪಠ್ಯ ಪರಿಪಾಠದಿಂದ ಮಕ್ಕಳ ಮನೋವಿಕಾಸ, ಸ್ಥಳ: ಶ್ರೀ ಕಾವೇರಿ ಶಿಕ್ಷಣ ಸಂಸ್ಥೆ, ಕುವೆಂಪುನಗರ, ಬೆಳಗ್ಗೆ 10 ರಿಂದ.
- **ರಾಷ್ಟ್ರೀಯ ಕೈಮಗ್ಗ ಅಭಿವೃದ್ಧಿ ನಿಗಮ :** ರೇಷ್ಮೆ ಸೀರೆಗಳು ಮತ್ತು ಕೈಮಗ್ಗ ವಸ್ತುಗಳ ಪ್ರದರ್ಶನ ಮತ್ತು ಮಾರಾಟ ಮೇಳ, ಸ್ಥಳ: ಜೆಎಸ್‌ಎಸ್ ಮೈಸೂರು ಅರ್ಬನ್ ಹಾತ್, ಬೆಳಗ್ಗೆ 10 ರಿಂದ.
- **ಬಸವ ಸಮಿತಿ :** ಶರಣ ಸಂಗಮ, ಸಾನ್ನಿಧ್ಯ : ಬಸವ ಯೋಗಾಶ್ರಮದ ವೀರೇಶ್ ಗುರೂಜಿ ಅವರಿಂದ ವಚನಗಳಲ್ಲಿ ಆರೋಗ್ಯ ದರ್ಶನ ಕುರಿತು ಉಪನ್ಯಾಸ, ಅಧ್ಯಕ್ಷತೆ : ಬಸವ ಸಮಿತಿ ಅಧ್ಯಕ್ಷ ಹೆಚ್.ವಿ. ಬಸವರಾಜು, ಸ್ಥಳ: ಬಸವ ಭವನ, ವಿಜಯನಗರ 1ನೇ ಹಂತ, ಬೆಳಗ್ಗೆ 10.30ಕ್ಕೆ.
- **ನವಕರ್ನಾಟಕ ಪ್ರಕಾಶನ :** ವಿಸ್ತೃತ ಮಳಿಗೆಯ ಶುಭಾರಂಭ ಮತ್ತು ಎರಡು ಕೃತಿಗಳ ಲೋಕಾರ್ಪಣೆ, ಪುಸ್ತಕಗಳ ಬಿಡುಗಡೆ : ನಿವೃತ್ತ ಪ್ರಿನ್ಸಿಪಾಲ್ ಡಾ. ಎಸ್.ಎನ್. ಪ್ರಸಾದ್, ಕೃತಿಗಳ ಪರಿಚಯ : ಲೇಖಕ ಶಶಿಧರ ಡೋಂಗ್ರೆ, ಉಪಸ್ಥಿತರು : ಕೊಳ್ಳೇಗಾಲ ಶರ್ಮ, ಜೆ.ಎಲ್. ಅನಿಲ್‌ಕುಮಾರ್, ಅಧ್ಯಕ್ಷತೆ : ನವಕರ್ನಾಟಕ ಪ್ರಕಾಶನ ವ್ಯವಸ್ಥಾಪಕ ನಿರ್ದೇಶಕ ಡಾ. ಸಿದ್ದನಗೌಡ ಪಾಟೀಲ, ಸ್ಥಳ: ನವಕರ್ನಾಟಕ ಪುಸ್ತಕ ಮಳಿಗೆ, ರಾಮಸ್ವಾಮಿ ವೃತ್ತ, ಬೆಳಗ್ಗೆ 10.30ಕ್ಕೆ.
- **ನಾಮಧಾರಿಗೌಡ ಸಂಘ, ಮೈಸೂರು ನಗರ ವಲಯ :** ಪ್ರತಿಭಾ ಪುರಸ್ಕಾರ ಹಾಗೂ ಸಂತೋಷ ಕೂಟ ಸಮಾರಂಭ, ಉದ್ಘಾಟನೆ: ಸಂಸದ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್, ಮುಖ್ಯ ಅತಿಥಿಗಳು : ಶಾಸಕ ಕೆ. ಹರೀಶ್‌ಗೌಡ, ಅಧ್ಯಕ್ಷತೆ : ಸಂಘದ ಅಧ್ಯಕ್ಷ ಎಂ.ಎನ್. ಸೋಮಶೇಖರ್, ಕ್ಯಾಲೆಂಡರ್ ಬಿಡುಗಡೆ : ಸಂಘದ ಅಧ್ಯಕ್ಷ ಕೆ.ಟಿ. ಗೋವಿಂದರಾಜು, ಸ್ಥಳ: ಬಾಲಕರ ವಿದ್ಯಾರ್ಥಿ ನಿಲಯ, ಗಂಗೋತ್ರಿ ಬಡಾವಣೆ, ಸರಸ್ವತಿಪುರಂ, ಬೆಳಗ್ಗೆ 10.30ಕ್ಕೆ.
- **ಮೈಸೂರು ಜಿಲ್ಲಾ ಗಾಣಿಗರ ಸಂಘ :** ಕನ್ನಡ ರಾಜ್ಯೋತ್ಸವ ಪ್ರಶಸ್ತಿ ಪುರಸ್ಕೃತರಿಗೆ ಸನ್ಮಾನ, ನೂತನ ಕ್ಯಾಲೆಂಡರ್ ಬಿಡುಗಡೆ ಸಮಾರಂಭ, ಉದ್ಘಾಟನೆ : ಸಂಸದ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್, ರಾಜ್ಯ ಗಾಣಿಗರ ಅಭಿವೃದ್ಧಿ ನಿಗಮದ ಅಧ್ಯಕ್ಷ ವಿಶ್ವಾಸ್ ಕುಮಾರ್‌ದಾಸ್, ಉಪಸ್ಥಿತರು : ಶಾಸಕರಾದ ಜಿ.ಟಿ. ದೇವೇಗೌಡ, ಜಿ.ಡಿ. ಹರೀಶ್‌ಗೌಡ, ಟಿ.ಎಸ್. ಶ್ರೀವತ್ಸ, ವಿವೇಕಾನಂದ, ಕೆ. ಹರೀಶ್‌ಗೌಡ, ಡಾ. ಯತೀಂದ್ರ ಸಿದ್ದರಾಮಯ್ಯ, ಮಾಜಿ ಶಾಸಕ ಸಾ.ರಾ. ಮಹೇಶ್, ಸ್ಥಳ: ಡಾ. ಶ್ರೀ ಶಿವರಾತ್ರಿ ರಾಜೇಂದ್ರ ಭವನ, ಬೆಳಗ್ಗೆ 10.30ಕ್ಕೆ.
- **ಅರಸು ಜಾಗೃತಿ ಅಕಾಡೆಮಿ ಚಾರಿಟಬಲ್ ಟ್ರಸ್ಟ್ :** ಬಿಇಎಂಎಲ್ ವಿಶ್ರಾಂತ ಜನರಲ್ ಮ್ಯಾನೇಜರ್ ಮಲ್ಲರಾಜ ಅರಸ್ ವಿರಚಿತ ಚುಟುಕು ತಾರೆಗಳು ಕೃತಿ ಲೋಕಾರ್ಪಣೆ ಸಮಾರಂಭ, ಉದ್ಘಾಟನೆ : ವಿಧಾನ ಪರಿಷತ್ ಸದಸ್ಯ ಡಾ. ಡಿ. ತಿಮ್ಮಯ್ಯ, ಚಾಮುಂಡೇಶ್ವರಿ ಭಾವಚಿತ್ರಕ್ಕೆ ಪುಷ್ಪಾರ್ಚನೆ : ಮಾಜಿ ಸಚಿವ ಎಂ. ಶಿವಣ್ಣ, ಕೃತಿ ಲೋಕಾರ್ಪಣೆ : ನಾಡೋಜ ಎಸ್. ಷಡಕ್ಷರಿ, ಅಧ್ಯಕ್ಷತೆ : ಶ್ರೀರಾಮ ಸೇವಾ ಅರಸು ಮಂಡಳಿ ಅಧ್ಯಕ್ಷ ಡಾ. ಸುಂದರರಾಜೇ ಅರಸ್, ಉಪಸ್ಥಿತರು : ಸಾಹಿತಿ ನಾ. ದಿವಾಕರ, ಸಾಹಿತಿ ಚುಟುಕು ಜಾಹ್ನವಿ ವಿ. ಸೀತಾಲಕ್ಷ್ಮಿ ವರ್ಮ, ಕೆ.ಆರ್. ಲಕ್ಷ್ಮೀಕಾಂತ, ಹೆಚ್.ಎನ್. ರಾಮಕೃಷ್ಣ, ಲೇಖಕ ಮಲ್ಲರಾಜ ಅರಸ್, ಟ್ರಸ್ಟ್ ಗೌರವ ಕಾರ್ಯದರ್ಶಿ ಡಾ. ಎಂ.ಜಿ.ಆರ್. ಅರಸ್, ಸ್ಥಳ: ಶ್ರೀರಾಮ ಸೇವಾ ಅರಸು ಮಂಡಳಿ, ಕೆ.ಆರ್. ವನಂ, ಬೆಳಗ್ಗೆ 10.45ಕ್ಕೆ.

ಮೈಸೂರು ಆಕಾಶವಾಣಿ



ಬೆಳಗ್ಗೆ: 6.10 ಚಿಂತನ– ಡಾ.ಶಾಂತ ನಾಗರಾಜ್, 6.15 ಗೀತಾರಾಧನ, 6.35 ಮತ್ತು ಸಂಜೆ 6.10 ಸಿನಿಮಾ ಯಾನ ಜನ ಮೆಚ್ಚಿದ ಕನ್ನಡ ಚಿತ್ರಗಳ ನೆನಪಿನ ಮಾಲೆ, ಪ್ರಸ್ತುತಿ : ಶ್ರೀನಿವಾಸ್ ಪ್ರಸಾದ್, 6.40 ಅರಿವಿನ ಶಿಖರ–ಸರ್ವಜ್ಞನ ತ್ರಿಪದಿಗಳನ್ನಾಧರಿಸಿದ ಬಾನುಲಿ ಸರಣಿ, ಗಾಯನ : ಡಾ. ಎಂ.ಎ.ಜ್ಯೋತಿ, ವ್ಯಾಖ್ಯಾನ : ಡಾ.ಕಬ್ಬಿನಾಲೆ ವಸಂತಭಾರದ್ವಾಜ, 6.50 ರೈತರಿಗೆ ಸಲಹೆ, 7.15 ಕಾದಂಬರಿ ವಿಹಾರ, ಡಾ.ಎಸ್.ಎಲ್.ಭೈರಪ್ಪ ಅವರ ದೂರ ಸರಿದರು ಕಾದಂಬರಿಯ ಬಾನುಲಿ ಓದು, ಪ್ರಸ್ತುತಿ–ಉಮೇಶ್ ಎಸ್.ಎಸ್., 8.30 ಚಿತ್ರಗೀತೆಗಳು, 9.40 ನಮ್ಮ ಆರೋಗ್ಯ–ಡಯಾಬಿಟಿಕ್ ರೆಟಿನೋಪತಿ ಲಕ್ಷಣಗಳು ಮತ್ತು ಚಿಕಿತ್ಸೆ ಈ ಕುರಿತು ಚನ್ನಪಟ್ಟಣದ ಚಾಮುಂಡೇಶ್ವರಿ ವೈದ್ಯಕೀಯ ಮಹಾವಿದ್ಯಾಲಯದಲ್ಲಿ ನೇತ್ರತಜ್ಞರಾಗಿರುವ ಡಾ.ಅನನ್ಯ ಅವರೊಂದಿಗೆ ಮಾತುಕತೆ.ಇವರೊಂದಿಗೆ ಭಾಗವಹಿಸುತ್ತಾರೆ–ತೇಜಸ್ವಿನಿ ಗಿರೀಶ್, 10.00 ಕೇಳಿಗಿಳಿಗಳೇ–ಕಥೆ ಹೇಳ್ತಿಯೋ ಹಾಡು ಹೇಳ್ತಿಯೋ–ನೇರ ಫೋನ್ ಇನ್ ಕಾರ್ಯಕ್ರಮ, 10.30 ಮಕ್ಕಳ ಮಂಟಪ ಪರೀಕ್ಷೆಗೆ ಸಿದ್ಧರಾಗೋಣ ಬನ್ನಿ–ಎಸ್.ಎಸ್.ಎಲ್.ಸಿ ಪರೀಕ್ಷಾ ಸಿದ್ಧತೆ ಕುರಿತು ಬಾನುಲಿ ಸರಣಿ ಕಾರ್ಯಕ್ರಮ, ವಿಷಯ–ಪ್ರಥಮ ಭಾಷೆ ಕನ್ನಡ ಭಾಗವಹಿಸುವವರು–ಭಾರತೀಯ ವಿದ್ಯಾಭವನ ಶಾಲೆಯ ಅಧ್ಯಾಪಕರಾದ ಕೃಷ್ಣಪ್ಪ, ಇವರೊಂದಿಗೆ ಭಾಗವಹಿಸುತ್ತಾರೆ–ದಿಗ್ವಿಜಯ್.ಬಿ., 11.00 2025 The year of reforms ವಿಶೇಷ ಬಾನುಲಿ ಸರಣಿ, 11.15 ಮಿಶ್ರಮಾಧುರ್ಯ

ಮಧ್ಯಾಹ್ನ: 12.05 ವನಿತಾ ವಿಹಾರಹೊಸ ವರುಷ ತರಲಿ ಹರುಷ ಕ್ರಿಸ್ಮಸ್ ಮತ್ತು ಹೊಸ ವರ್ಷದ ಸಂಧರ್ಭದಲ್ಲಿ ಕಾರ್ಯಕ್ರಮ ವೈವಿಧ್ಯ, ಪ್ರಸ್ತುತಿ: ಬೆಂಗಳೂರಿನ ಹೋಲಿ ಟ್ರಿನಿಟಿ ಚರ್ಚ್‌ನ ಸದಸ್ಯರು, 12.35 ಭಕ್ತಿಗೀತೆಗಳು : ಕೆ.ಎಂ.ಕುಸುಮಾ, 12.45 ಜನಪದ ಸಂಗೀತ : ಲಕ್ಷ್ಮಿಪುರದ ಮಹಾಲಿಂಗ ಅವರಿಂದ, 1.00 ಪ್ರಗತಿ ಪಥ – ಕೇಂದ್ರ ಸರ್ಕಾರದ ವಿವಿಧ ಅಭಿವೃದ್ಧಿ ಯೋಜನೆಗಳ ಸರಣಿ – ಪಿ ಎಂ ವಿಕಸಿತ್ ಭಾರತ್ ಜಿ ರಾಮ್ ಜಿ ಮಿಷನ್‌ಈ ಕುರಿತು ಮಾಹಿತಿ ನೀಡುತ್ತಾರೆ ಪತ್ರಕರ್ತೆ ಚಂದನಾ ಲೋಕೇಶ್, 1.20 ಭಾವಗೀತೆಗಳು– ಆರ್.ವಿ.ಅನುಪಮಾ, 1.30 ಸಂದೇಶ ಆಧಾರಿತ ಶ್ರೋತೃಗಳ ಮೆಚ್ಚಿನ ಚಿತ್ರಗೀತೆಗಳ ಕಾರ್ಯಕ್ರಮ, 2.40 ಕನ್ನಡ ಚಲನಚಿತ್ರ ಧ್ವನಿವಾಹಿನಿ–ಅಮೃತವರ್ಷಿಣಿ, 3.40 ಸಿರಿಗನ್ನಡಂ ಗೆಲ್ಗೆ, ಪ್ರಸ್ತುತಿ: ಜಿ.ಕೆ.ರವೀಂದ್ರಕುಮಾರ್, 3.45 ಯಕ್ಷಗಾನ, ತಾಳಮದ್ದಲೆ. ಪ್ರಸಂಗ–ವಿದ್ಯುನ್ಮತಿ ಕಲ್ಯಾಣ, ಪ್ರಸ್ತುತಿ–ಹೇರಂಜೆಯ ನೀಲಾವರ ಲಕ್ಷ್ಮೀ ನಾರಾಯಣರಾವ್ ಮತ್ತು ಸಂಗಡಿಗರು, 6.51 ಕೃಷಿರಂಗ: ತೋರಣ ಹೂರಣ–ಸಾಪ್ತಾಹಿಕ ಸರಣಿ ಕಾರ್ಯಕ್ರಮ, ಪ್ರಸ್ತುತಿ: ಎನ್. ಕೇಶವಮೂರ್ತಿ, ಆರ್.ಲೋಕೇಶ್ವರಿ, ಡಾ.ಮೈಸೂರು ಉಮೇಶ್, ಕೃಷಿಲೋಕ, ಕೃಷಿ ದರ್ಪಣ, ವಾರದ ಕೃಷಿರಂಗ, ಕಿಸಾನ್‌ವಾಣಿ ಕಾರ್ಯಕ್ರಮಗಳ ಮುನ್ನೋಟ, ಪ್ರಸ್ತುತಿ: ಆರ್. ಲೋಕೇಶ್ವರಿ, 7.45 ಕನ್ನಡದಲ್ಲಿ ಭಾಷಣ–ಕರ್ನಾಟಕ ಮಹಿಳಾ ಲೇಖಕಿಯರ ಸಂಘದ ನೂತನ ಅಧ್ಯಕ್ಷೆ ಆರ್. ಸುನಂದಮ್ಮ ಅವರೊಂದಿಗೆ ಸಂದರ್ಶನ, 8.00 ಫಸ್ಟ್ ಫಿಲ್ಮ್, ಪ್ರಸ್ತುತಿ–ಶ್ರೀಮಾನ್.ಎಸ್., 8.30 ಹಿಂದಿ ಚಿತ್ರಗೀತೆಗಳು, 9.15 ರಂಗಗೀತೆಗಳು– ಬಿ.ಎಸ್.ಸ್ವಾಮಿಗೌಡ, 9.30 ಸವಿನೆನಪು, 10.00 ಆಕಾಶವಾಣಿ ಸಂಗೀತ ಸಮ್ಮೇಳನ–2025 ಶ್ರೀ ದೇಬ್ ಶಂಕರ್ ರಾಯ್ ಹಾಗೂ ಜ್ಯೋತಿ ಶಂಕರ್ ರಾಯ್ ಅವರ ಪಾಶ್ಚಾತ್ಯ ಶಾಸ್ತ್ರೀಯ ಸಂಗೀತದಲ್ಲಿ ಯುಗಳ ವೈಯೋಲಿನ್ ವಾದನ

- **ಮೈಸೂರು ಆಕಾಶವಾಣಿ ಮತ್ತು ಸಮುದ್ಯತಾ ಶೋತೃ ಸಂಘ :** ಎಫ್.ಎಂ. 100.6 ರೇಡಿಯೋ ಉದ್ಘಾಟನಾ ಸಮಾರಂಭ, ಉದ್ಘಾಟನೆ : ಶಾಸಕ ಟಿ.ಎಸ್. ಶ್ರೀವತ್ಸ, ಮುಖ್ಯ ಅತಿಥಿಗಳು : ಪಾಲಿಕೆ ಆಯುಕ್ತ ಶೇಕ್ ತನ್ವೀರ್ ಆಸೀಫ್, ಮೈಸೂರು ಆಕಾಶವಾಣಿ ಕಾರ್ಯಕ್ರಮ ನಿರ್ವಾಹಕ ಎನ್. ಕೇಶವಮೂರ್ತಿ, ತಾಂತ್ರಿಕ ವಿಭಾಗದ ಸಿ. ರಂಜಿತ್, ಚೇತನ್, ಸ್ಥಳ: ಹೋರಿ ಸುಬ್ಬೇಗೌಡ ಬೂಕನಕೆರೆ ಸ್ಮಾರಕ ಬಸ್ ನಿಲ್ದಾಣ, ಎನ್ ಬ್ಲಾಕ್, ಕುವೆಂಪುನಗರ, ಬೆಳಗ್ಗೆ 11ಕ್ಕೆ.
- **ಕರುನಾಡು ಟೈಲರ್ಸ್ ನೆರವು ನಿಧಿ ಸಮಿತಿ :** ವಾರ್ಷಿಕೋತ್ಸವ, ಕ್ಯಾಲೆಂಡರ್ ಬಿಡುಗಡೆ, ಐಡಿ ಕಾರ್ಡ್ ಬಿಡುಗಡೆ, ಸಾರ್ವಜನಿಕ ಆರೋಗ್ಯ ತಪಾಸಣಾ ಹಾಗೂ ರಕ್ತದಾನ ಶಿಬಿರ, ಅಧ್ಯಕ್ಷತೆ : ಸಮಿತಿ ರಾಜ್ಯಾಧ್ಯಕ್ಷ ಚನ್ನನಾಯಕ ಆಗತ್ತೂರು, ಉದ್ಘಾಟನೆ : ಶಾಸಕ ಜಿ.ಟಿ.ದೇವೇಗೌಡ, ಕ್ಯಾಲೆಂಡರ್ ಬಿಡುಗಡೆ : ಜಿಲ್ಲಾ ಉಸ್ತುವಾರಿ ಸಚಿವ ಡಾ. ಹೆಚ್.ಸಿ. ಮಹದೇವಪ್ಪ, ಐಡಿ ಕಾರ್ಡ್ ಬಿಡುಗಡೆ : ಎಂಎಲ್‌ಸಿ ಡಾ. ಯತೀಂದ್ರ ಸಿದ್ದರಾಮಯ್ಯ, ಸ್ಥಳ: ಬಯಲು ರಂಗಮಂದಿರ, ಶ್ರೀ ಗಣಪತಿ ದೇವಸ್ಥಾನದ ಹಿಂಭಾಗ, ಬೋಗಾದಿ, ಬೆಳಗ್ಗೆ 11 ರಿಂದ.
- **ಪರಿವರ್ತನ ಅಕಾಡೆಮಿ ಮೇಟಗಳ್ಳಿ :** ಕುವೆಂಪು ಜನ್ಮ ದಿನಾಚರಣೆ ಅಂಗವಾಗಿ ವಿಜೇತರಿಗೆ ಬಹುಮಾನ ವಿತರಣಾ ಸಮಾರಂಭ, ಉದ್ಘಾಟನೆ : ಪರಿವರ್ತನ ಬಿಸಿನೆಸ್ ಸ್ಕೂಲ್ ವ್ಯವಸ್ಥಾಪಕ ನಿರ್ದೇಶಕ ಮಂಜುರಾಮ್ ಪುಟ್ಟೇಗೌಡ, ಅಧ್ಯಕ್ಷತೆ : ಪರಿವರ್ತನ ಅಕಾಡೆಮಿ ಅಧ್ಯಕ್ಷ ಡಾ. ಎಂ. ಪುಟ್ಟೇಗೌಡ, ಉಪಸ್ಥಿತರು : ಡಾ. ಅಪ್ಪಗೆರೆ ತಿಮ್ಮರಾಜು, ಎನ್.ಎಂ. ತಿಮ್ಮೇಗೌಡ, ಶಿವಣ್ಣ, ಎಸ್. ಗುರುಸ್ವಾಮಿ, ಬಿ. ಕುಮಾರ್, ಡಾ. ಧನಂಜಯ, ಸ್ಥಳ: ಪರಿವರ್ತನ ಬಿಸಿನೆಸ್ ಸ್ಕೂಲ್, ಕೆ.ಆರ್.ಎಸ್. ರಸ್ತೆ, ಮಧ್ಯಾಹ್ನ 12ಕ್ಕೆ.
- **ಬಡಗನಾಡು ಬಳಗ :** ಸಂಕ್ರಾಂತಿ ಮೇಳ, ಸಿರಿಧಾನ್ಯಗಳು, ಬಟ್ಟೆಗಳು, ಆಭರಣ, ಚಿತ್ರಕಲೆ, ಗಿರ್‌ಮಿಟ್, ಆಟೋಟ ಸ್ಪರ್ಧೆ, ಉಚಿತ ಆರೋಗ್ಯ ತಪಾಸಣಾ ಶಿಬಿರ, ಸ್ಥಳ: ಬಡಗನಾಡು ಭವನ, ರಾಮಕೃಷ್ಣನಗರ, ಮಧ್ಯಾಹ್ನ 2 ರಿಂದ.
- **ನಟನಾ ರಂಗಶಾಲೆ :** ವಾರಾಂತ್ಯ ರಂಗ ಪ್ರದರ್ಶನ, ನಟನ ರಂಗಶಾಲೆಯ ನಿಶಾ ಚೆನ್ನೈ ಅವರಿಂದ ನೋಕರ್ಸ್ ಇಂಗ್ಲಿಷ್ ನಾಟಕ ಪ್ರದರ್ಶನ, ನಿರ್ದೇಶನ : ವಿ. ಬಾಲಕೃಷ್ಣನ್, ಸ್ಥಳ: ನಟನಾ ರಂಗ ಶಾಲೆ, ರಾಮಕೃಷ್ಣನಗರ, ಮಧ್ಯಾಹ್ನ 3ಕ್ಕೆ ಮತ್ತು ಸಂಜೆ 6.30ಕ್ಕೆ.
- **ಸಾಧನ ಮಂದಿರ, ಮೈಸೂರು :** ವಿಶೇಷ ತರಬೇತಿ ಶಿಬಿರ ಹಾಗೂ ಸರಸ್ವತಿ ಪೂಜೆ, ಸಾನ್ನಿಧ್ಯ: ಪೂಜ್ಯ ಸ್ವಾಮಿ ಹಂಸಾನಂದ, ಸಂಜೆ 4 ರಿಂದ ಶ್ರೀ ವೆಂಕಟೇಶ್ವರ ದೇವಸ್ಥಾನ, ಸಿದ್ಧಾರ್ಥನಗರ; ಸಂಜೆ 5.15 ರಿಂದ ಬಲಮುರಿ ವಿನಾಯಕ ದೇವಸ್ಥಾನ, ಸಿದ್ಧಾರ್ಥ ಬಡಾವಣೆ, ಸಂಜೆ 6.30 ರಿಂದ ಗೀತಾ ಶಿಶು ಶಿಕ್ಷಣ ಸಂಘ, ಸಿದ್ಧಾರ್ಥ ಬಡಾವಣೆ.
- **ಶ್ರೀ ರಾಮಕೃಷ್ಣ ಆಶ್ರಮ :** ಸ್ವಾಮಿ ಯುಕ್ತೇಶಾನಂದ ಅವರಿಂದ ಶ್ರೀಮಾತೆ ಶಾರದಾದೇವಿ ಕುರಿತು ಪ್ರವಚನ, ಸ್ಥಳ: ಸ್ವಾಮಿ ಶಾಂಭವಾನಂದಜೀ ಸ್ಮಾರಕ ಸಭಾಂಗಣ, ಯಾದವಗಿರಿ, ಸಂಜೆ 6ಕ್ಕೆ.
- **ಶ್ರೀ ನಾದಬ್ರಹ್ಮ ಸಂಗೀತ ಸಭಾ :** ಶ್ರೀಮತಿ ರುಕ್ಮಿಣಿ ಅಮ್ಮಾಳ್ ಮತ್ತು ಶ್ರೀ ರಾಮಸ್ವಾಮಿ ಅಯ್ಯಂಗಾರ್ ಸಂಸ್ಮರಣಾ ಕಾರ್ಯಕ್ರಮ, ವಿದ್ವಾನ್ ದತ್ತಪ್ರಸಾದ್ ಅವಧೂತ್ ಅವರಿಂದ ಕರ್ನಾಟಕ ಶಾಸ್ತ್ರೀಯ ಗಾಯನ, ವಿದ್ವಾನ್ ರೂಪಣಗುಡಿ ರತ್ನ ತೇಜ–ಪಿಟೀಲು, ವಿದ್ವಾನ್ ಸ್ಕಂದ ಭಾರದ್ವಾಜ್–ಮೃದಂಗ, ಸ್ಥಳ: ಸಂಗೀತ ಕಲಾನಿಧಿ ಕೆ. ವಾಸುದೇವಾಚಾರ್ಯ ಭವನ, ಜೆಎಲ್‌ಬಿ ರಸ್ತೆ, ಸಂಜೆ 6ಕ್ಕೆ.
- **ಜೆಎಸ್‌ಎಸ್ ಸಂಗೀತ ಸಭಾ ಟ್ರಸ್ಟ್ :** ಡಾ. ಪಂ. ಪ್ರವೀಣ್ ಗೋಡ್ಖಿಂಡಿ ಮತ್ತು ಷಡಜ್ ಗೋಡ್ಖಿಂಡಿ ಅವರಿಂದ ಯುಗಳ ಬಾನ್ಸುರಿ ವಾದನ, ಕಿರಣ್ ಗೋಡ್ಖಿಂಡಿ–ತಬಲ, ಸ್ಥಳ: ಸರಸ್ವತಿಪುರಂ ಜೆಎಸ್‌ಎಸ್ ಮಹಿಳಾ ಕಾಲೇಜಿನ ನವಜ್ಯೋತಿ ಸಭಾಂಗಣ, ಸಂಜೆ 6ಕ್ಕೆ.
- **ಶ್ರೀ ಮಹಾಜನ ಸಭಾ ಟ್ರಸ್ಟ್ :** ತಿರುಪ್ಪಾವೈ ಪಾರಾಯಣ, ಡಾ. ಎನ್.ಕೆ. ರಾಮಶೇಷನ್ ಅವರಿಂದ ಶ್ರೀ ಗೋದಾದೇವಿ ವಿರಚಿತ ತಿರುಪ್ಪಾವೈ ಪ್ರವಚನ, ಸ್ಥಳ: ಶ್ರೀ ಮಹಾಜನ ಸಭಾ ಟ್ರಸ್ಟ್ ಆವರಣ, ಶ್ರೀ ರಾಮಮಂದಿರ, ಕಾಂತರಾಜ ರಸ್ತೆ, ಕೃಷ್ಣಮೂರ್ತಿಪುರಂ, ಸಂಜೆ 6.30 ರಿಂದ.

ಮುದ್ದನಹಳ್ಳಿಯಲ್ಲಿಂದು, ಹೆಚ್.ಡಿ. ಕೋಟೆ ತಾ.

- **ಶಾರದಾಮೃತಂ :** ಶ್ರೀಮಾತೆ ಶಾರದಾದೇವಿಯವರ 173ನೇ ಜಯಂತಿ ಮತ್ತು ಶ್ರೀ ವೆಂಕಟಾಚಲ ಅವಧೂತ ಗುರುನಾಥರ 86ನೇ ಜಯಂತಿ, ಸ್ಥಳ: ಶಾರದಾಮೃತಂ, ಹೆಚ್.ಟಿ. ಕೋಟೆ, ಬೆಳಗ್ಗೆ 8 ರಿಂದ.

ಸುತ್ತೂರಿನಲ್ಲಿಂದು, ನಂಜನಗೂಡು ತಾಲೂಕು

- **ಜಗದ್ಗುರು ಶ್ರೀ ವೀರಸಿಂಹಾಸನ ಮಹಾ ಸಂಸ್ಥಾನ ಮಠ:** ಧನುರ್ಮಾಸದ ವಿಶೇಷ ಪೂಜೆ, ಸ್ಥಳ: ಆದಿ ಜಗದ್ಗುರು ಶ್ರೀ ಶಿವರಾತ್ರೀಶ್ವರ ಶಿವಯೋಗಿಗಳವರ ಕರ್ತೃ ಗದ್ದುಗೆ, ಶ್ರೀ ಮಹೇಶ್ವರ ಸನ್ನಿಧಿ, ಶ್ರೀ ವೀರಭದ್ರೇಶ್ವರ, ಶ್ರೀ ಸೋಮೇಶ್ವರ, ಶ್ರೀ ನಾರಾಯಣಸ್ವಾಮಿ ದೇವಸ್ಥಾನ, ಸುತ್ತೂರು ಶ್ರೀಕ್ಷೇತ್ರ, ಬೆಳಗ್ಗೆಯಿಂದ.

ಅಧಿಕಾರಿಗಳು ನಮ್ಮನ್ನ ಅಲೆಸುತ್ತಾರೆ...! ಹಣ ಕೊಟ್ಟರೆ ಮಾತ್ರವೇ ಕೆಲಸ ಆಗುವುದು...!! ರಿಯಲ್ ಎಸ್ಟೇಟ್ ಉದ್ಯಮಿಗಳ ಕೆಲಸ ಮಾತ್ರ ಬೇಗ ಆಗುತ್ತೆ...!!!

● ಡಿಸಿ ಲಕ್ಷ್ಮಿಕಾಂತರೆಡ್ಡಿ ಅವರಿಗೆ ವಸ್ತುಸ್ಥಿತಿ ಮನದಟ್ಟು ಮಾಡಿಕೊಟ್ಟ ಅನ್ನದಾತರು ● ಕೆಪಿಸಿಸಿ ವಕ್ತಾರ ಎಂ.ಲಕ್ಷ್ಮಣ್ ನೇತೃತ್ವದಲ್ಲಿ ರೈತ ಪ್ರತಿನಿಧಿಗಳ ಸಭೆ ಆಯೋಜನೆ

ಮೈಸೂರು, ಜ.3(ಐಎಲ್‌ಯು)– ತಹಶೀಲ್ದಾರ್ ಕಚೇರಿಯಲ್ಲಿ ಕೆಲಸ ಮಾಡಿಕೊಡದೆ ತಮ್ಮನ್ನು ಅಲೆಸುತ್ತಿರುವ ಬಗ್ಗೆ ಜಿಲ್ಲಾಧಿಕಾರಿ ಜಿ.ಲಕ್ಷ್ಮಿಕಾಂತ ರೆಡ್ಡಿ ಅವರ ಬಳಿ ರೈತರು ಇಂದು ಅಳಲು ತೋಡಿಕೊಂಡರು. ಜಮೀನು ದುರಸ್ತಿ, ಪೋಡಿ ಸೇರಿದಂತೆ ಇತರೆ ಕೆಲಸಕ್ಕೆ ಅಧಿಕಾರಿಗಳು ಲಂಚಕ್ಕಾಗಿ ಪೀಡಿಸುತ್ತಿರುವ ಸಂಗತಿಯನ್ನು ಎಳೆ ಎಳೆಯಾಗಿ ಬಿಡಿಸಿಟ್ಟರು. ಅಲ್ಲದೆ ಕಾಡು ಪ್ರಾಣಿಗಳ ಉಪಟಳ ತಡೆಯಲು ಅರಣ್ಯ ಇಲಾಖೆಯವರು ನಿರ್ಲಕ್ಷ್ಯ ತೋರುತ್ತಿದ್ದಾರೆ ಎಂಬ ವಿಚಾರವನ್ನು ಅವರ ಗಮನಕ್ಕೆ ತಂದರು.

ರೈತರ ಸಮಸ್ಯೆಯನ್ನು ಜಿಲ್ಲಾಧಿಕಾರಿಗಳಿಗೆ ಮನದಟ್ಟು ಮಾಡುವ ಸಂಬಂಧ ಕೆಪಿಸಿಸಿ ವಕ್ತಾರ ಎಂ.ಲಕ್ಷ್ಮಣ್ ಅವರು ಮೈಸೂರಿನ ಜಿಲ್ಲಾ ಪಂಚಾಯತ್ ಸಭಾಂಗಣದಲ್ಲಿ ಇಂದು ರೈತ ಪ್ರತಿನಿಧಿಗಳ ಸಭೆ ಆಯೋಜಿಸಿದ್ದರು.

ಮೈಸೂರು ಜಿಲ್ಲೆಯ ವಿವಿಧ ತಾಲೂಕುಗಳ ರೈತ ಸಂಘದ ಪ್ರತಿನಿಧಿಗಳು ಪಾಲ್ಗೊಂಡಿದ್ದ ಸಭೆಯಲ್ಲಿ ರೈತರ ಬಗ್ಗೆ ಅಧಿಕಾರಿಗಳ ನಿರ್ಲಕ್ಷ್ಯ ಧೋರಣೆಯನ್ನು ವಿವರಿಸಿದರು. ಸುಮಾರು ಒಂದೂವರೆ ಗಂಟೆಗಳ ಕಾಲ ನಡೆದ ಸಭೆಯಲ್ಲಿ ರೈತರ ಸಮಸ್ಯೆಗಳನ್ನು ಜಿಲ್ಲಾಧಿಕಾರಿಗಳು ಬಹಳ ತಾಳ್ಮೆಯಿಂದ ಆಲಿಸಿದರು.

ಕಾಲು ದಾರಿಗಳಿಲ್ಲ: ಈ ವೇಳೆ ಮಾತನಾಡಿದ ಹೆಚ್.ಡಿ.ಕೋಟೆಯ ರೈತ ಮಹದೇವ ಅವರು, ಕಬಿನಿ ಜಲಾಶಯದ ಹಿನ್ನೀರಿನ ಪ್ರದೇಶದಲ್ಲಿ ರಿಯಲ್ ಎಸ್ಟೇಟ್ ವ್ಯವಹಾರ ಬಲು ಜೋರಾಗಿದೆ. ಅಕ್ರಮ ರೆಸಾರ್ಟ್ ಹಾಗೂ ಹೋಂ ಸ್ಟೇಗಳು ನಾಯಿಕೊಡೆಗಳಂತೆ ತಲೆ ಎತ್ತಿವೆ. ತಹಶೀಲ್ದಾರ್ ಕಚೇರಿ ಸಿಬ್ಬಂದಿ, ಬಡ ರೈತರ ಸಮಸ್ಯೆ ಪರಿಹಾರ ಮಾಡಿಕೊಡಲು ಹತ್ತಾರು ಕಾನೂನಿನ ಸಬೂಬು ಹೇಳುತ್ತಾರೆ. ಆದರೆ ರಿಯಲ್ ಎಸ್ಟೇಟ್ ಉದ್ಯಮಿಗಳ ಅಕ್ರಮ ವ್ಯವಹಾರವನ್ನು ಹೂವು ಎತ್ತಿದಷ್ಟೆ ಸುಲಭವಾಗಿ ಮಾಡಿಕೊಡುತ್ತಾರೆ ಎಂದು ದೂರಿದರು.



ಮೈಸೂರಿನ ಜಿಲ್ಲಾ ಪಂಚಾಯತ್ ಸಭಾಂಗಣದಲ್ಲಿ ಶನಿವಾರ ತಮ್ಮ ಸಮಸ್ಯೆ ಪರಿಹಾರ ಮಾಡುವಂತೆ ಜಿಲ್ಲಾಧಿಕಾರಿ ಜಿ.ಲಕ್ಷ್ಮಿಕಾಂತ ರೆಡ್ಡಿ ಅವರಿಗೆ ರೈತರು ಮನವಿ ಸಲ್ಲಿಸಿದರು.

ಒಂದು ಜಮೀನಿನಿಂದ ಮತ್ತೊಂದು ಜಮೀನಿಗೆ ಹೋಗಲು ಕಾಲು ದಾರಿಗಳಿಲ್ಲ. ಇದ್ದ ದಾರಿಯನ್ನು ಅಕ್ರಮವಾಗಿ ಒತ್ತುವರಿ ಮಾಡಿ ಕೊಂಡಿರುವ ಪ್ರಕರಣ ನ್ಯಾಯಾಲಯದಲ್ಲಿದ್ದು, ಅದು ಇನ್ನೂ ಬಗೆಹರಿದಿಲ್ಲ ಎಂದು ನೋವು ತೋಡಿಕೊಂಡರು.

ಲಂಚವಿಲ್ಲದೆ ಕೆಲಸ ಆಗಲ್ಲ: ಹುಣಸೂರಿನ ರೈತ ಗಂಗಾಧರ್ ಮಾತನಾಡಿ, ಹುಣಸೂರು ತಹಶೀಲ್ದಾರ್ ಬಡ ರೈತರ ಸಮಸ್ಯೆ ಪರಿಹಾರ ಮಾಡುತ್ತಿಲ್ಲ. ಲಂಚ ಕೊಡದೆ ದುರಸ್ತಿ ಕೆಲಸ ಆಗುತ್ತಿಲ್ಲ 3 ಕೊಟ್ಟರೆ ಸೊಸೆ ಪರ, 10 ಕೊಟ್ಟರೆ ಅಳಿಯನ ಪರ ಎಂಬಂತೆ ಹೆಚ್ಚು ಹಣ ಕೊಟ್ಟವರ ಪರ ತ್ವರಿತವಾಗಿ ಕೆಲಸ ಮಾಡುತ್ತಿದ್ದಾರೆ ಎಂದು ಆಪಾದಿಸಿದರು.

ಪ್ರಶ್ನೆ ಮಾಡಿದರೆ ಕೋರ್ಟ್‌ಗೆ ಹೋಗಿ ಎಂದು ಬಿಟ್ಟಿ ಸಲಹೆ ನೀಡುತ್ತಾರೆ. ನಾವು ದಾಖಲಿಸಿರುವ ಪ್ರಕರಣದ ಬಗ್ಗೆ ಕೋರ್ಟ್‌ನಲ್ಲಿ ಕಳೆದ 33 ವರ್ಷದಿಂದ ವಿಚಾರಣೆ ನಡೆಯುತ್ತಿದೆ ಎಂದು ತಹಶೀಲ್ದಾರ್ ಕಚೇರಿಯ ಲಂಚಾವತಾರವನ್ನು ಎಳೆ ಎಳೆಯಾಗಿ ಬಿಡಿಸಿಟ್ಟರು.

ಆನೆ ಉಪಟಳ ತಪ್ಪಿಲ್ಲ: ಪಿರಿಯಾಪಟ್ಟಣದ ರೈತ ರಘಿವುಲ್ಲಾ ಮಾತನಾಡಿ, ಕಾಡಂಚಿನ ಗ್ರಾಮಗಳ ಜನರು ಭಯದಲ್ಲಿ ಓಡಾಡುವ ಪರಿಸ್ಥಿತಿ ನಿರ್ಮಾಣವಾಗಿದೆ. ಆನೆಗಳ ಉಪಟಳ ತಡೆಯಲು ರೈಲ್ವೆ ಕಂಬಿಯ ತಡೆಗೋಡೆ ಅಳವಡಿಸಲು ಟೆಂಡರ್ ಕರೆದಿದ್ದೇವೆ ಎಂದು ಆರು ತಿಂಗಳಿಂದ ಸಬೂಬು ಹೇಳುತ್ತಿದ್ದಾರೆಯೇ ಹೊರತು ನಮ್ಮ ಬೇಡಿಕೆ ಈಡೇರಿಸಿಲ್ಲ ಎಂದು ದೂರಿದರು.

ತಹಶೀಲ್ದಾರ್ ಕಚೇರಿಗೆ ಅಲೆದು ರೈತರು ಸುಸ್ತಾಗಿದ್ದಾರೆ. ಡಿಸಿ ಕೋರ್ಟ್, ಎಸಿ ಕೋರ್ಟ್, ಸಿವಿಲ್ ಕೋರ್ಟ್ ಆದೇಶ ತೋರಿಸಿದರೆ ಇದು ನಮ್ಮ ವ್ಯಾಪ್ತಿಗೆ ಬರುವುದಿಲ್ಲ ಎಂದು ಹೇಳಿ ಕೈ ತೊಳೆದುಕೊಳ್ಳುತ್ತಾರೆ. ತಹಶೀಲ್ದಾರ್ ಅವರನ್ನು ದೇವರ ಸಮಾನ ಎನ್ನುವ ಮಾತು ನಿಜವಾಗಿಯೂ ಸುಳ್ಳು ಎಂದು ಹೇಳಿದರು.

ರೈತರ ಸಮಸ್ಯೆಗಳ ಶೀಘ್ರ ಪರಿಹಾರಕ್ಕೆ...

ಇದೇ ವೇಳೆ ಕೆಪಿಸಿಸಿ ವಕ್ತಾರ ಎಂ.ಲಕ್ಷ್ಮಣ ಅವರು ರೈತರ ಸಮಸ್ಯೆ ಶೀಘ್ರ ಪರಿಹಾರ ಮಾಡುವಂತೆ ಜಿಲ್ಲಾಧಿಕಾರಿ ಲಕ್ಷ್ಮಿಕಾಂತರೆಡ್ಡಿ ಅವರಿಗೆ ಹಲವು ಅಂಶಗಳಿರುವ ಮನವಿ ಪತ್ರ ಸಲ್ಲಿಸಿದರು.

ಕಾಡು ಪ್ರಾಣಿಗಳ ದಾಳಿಗೊಳಗಾದ ರೈತರಿಗೆ ಶೀಘ್ರ ಪರಿಹಾರ ನೀಡಬೇಕು, ತಂಬಾಕು ಮಾರುಕಟ್ಟೆಯಲ್ಲಿ ಅಧಿಕಾರಿಗಳು ಕಾರ್ಖಾನೆ ಮಾಲೀಕರ ಜೊತೆ ಒಪ್ಪಂದ ಮಾಡಿಕೊಂಡು ರೈತರಿಗೆ ಮಾಡುತ್ತಿರುವ ಮೋಸ ತಪ್ಪಿಸಬೇಕು, ಸಮರ್ಪಕ ರಸಗೊಬ್ಬರ ಪೂರೈಸಬೇಕು, ತಹಶೀಲ್ದಾರ್‌ಗಳು ರೈತರನ್ನು ಅಲೆಸಬಾರದು, ರೈತರ ಸಹಾಯವಾಣಿ ಸ್ಥಾಪಿಸಬೇಕು, ದಲ್ಲಾಳಿ ಹಾವಳಿ ತಪ್ಪಿಸಬೇಕು ಎಂದು ಕೋರಿದರು.

ಮೈಕ್ರೊ ಫೈನಾನ್ಸ್‌ಗಳಿಂದ ರೈತರಿಗೆ ಆಗುತ್ತಿರುವ ಕಿರುಕುಳ ತಪ್ಪಿಸಬೇಕು, ರೈತರಿಗೆ ವಿಮಾ ಕಂಪನಿಗಳಿಂದ ಆಗುತ್ತಿರುವ ಮೋಸ ತಪ್ಪಿಸಬೇಕು ಹೀಗೆ ಹಲವು ಸಮಸ್ಯೆ ಪರಿಹರಿಸುವಂತೆ ಲಕ್ಷ್ಮಣ್, ಜಿಲ್ಲಾಧಿಕಾರಿ ಲಕ್ಷ್ಮಿಕಾಂತರೆಡ್ಡಿ ಅವರನ್ನು ಒತ್ತಾಯಿಸಿದರು.

ಚಪ್ಪಲಿ ಸವೆಯುತ್ತಿವೆ: ಕೋರ್ಟ್‌ಗೆ ತಿರುಗಿ ತಿರುಗಿ ನಮ್ಮ ಚಪ್ಪಲಿಗಳು ಸವೆಯುತ್ತಿವೆ. ವಕೀಲರ ಶುಲ್ಕ ಸೇರಿದಂತೆ ಇತರ ಖರ್ಚಿಗಾಗಿ ಮಾಡಿದ ಸಾಲ ಮತ್ತು ಬಡ್ಡಿ ಹನುಮಂತನ ಬಾಲದಂತೆ ಬೆಳೆಯುತ್ತಿದೆ. ಈಗ ನಮ್ಮ ಜಮೀನು ಮಾರಾಟ ಮಾಡಿದರೂ ಸಾಲ ತೀರಿಸದ ಪರಿಸ್ಥಿತಿ ಎದುರಾಗಿದೆ ಎಂದು ತಿಳಿಸಿದರು.

ಪಿರಿಯಾಪಟ್ಟಣ ತಾಲೂಕು ಆಯರಹಳ್ಳಿ ಹೋಬಳಿಯ ಚನ್ನಕಲ್ ಕಾವಲ್‌ನಲ್ಲಿ 3,500 ಎಕರೆ ಭೂಮಿ ಇದೆ. ಆದರೆ 7,500 ಜನರ ಹೆಸರಿನಲ್ಲಿ ಆರ್‌ಟಿಸಿ ಓಡುತ್ತಿದೆ. ಇಂತಹ ಸಮಸ್ಯೆ ಪರಿಹಾರ ಮಾಡಲು ತಹಶೀಲ್ದಾರ್ ಅವರು ಕಿಂಚಿತ್ತೂ ಕಾಳಜಿ ತೋರುತ್ತಿಲ್ಲ ಎಂದು ರೈತ ರಫಿವುಲ್ಲ ಅವರು ಜಿಲ್ಲಾಧಿಕಾರಿ ಲಕ್ಷ್ಮಿಕಾಂತ ರೆಡ್ಡಿ ಅವರಲ್ಲಿ ತಮ್ಮ ಯಾತನೆಯನ್ನು ವಿವರಿಸಿದರು.

ರೈತರನ್ನು ಅಲೆಸದಂತೆ ಅಧಿಕಾರಿಗಳಿಗೆ ತಾಕೀತು

ಹುಣಸೂರು, ಹೆಚ್.ಡಿ.ಕೋಟೆ ಸೇರಿದಂತೆ ಮೈಸೂರು ಜಿಲ್ಲೆಯ ತಹಶೀಲ್ದಾರ್‌ಗಳ ಸಭೆ ನಡೆಸಿ, ಬಾಕಿ ಇರುವ ಪ್ರಕರಣಗಳನ್ನು ಶೀಘ್ರ ಬಗೆಹರಿಸುವಂತೆ ಆದೇಶ ನೀಡುತ್ತೇನೆ ಎಂದು ಜಿಲ್ಲಾಧಿಕಾರಿ ಲಕ್ಷ್ಮಿಕಾಂತರೆಡ್ಡಿ ಭರವಸೆ ನೀಡಿದರು. ಯಾವುದೇ ಕಾರಣಕ್ಕೂ ರೈತರನ್ನು ಅಲೆಸದೆ ಅವರ ಕೆಲಸ ಬೇಗ ಮಾಡಿಕೊಡುವಂತೆ ತಾಕೀತು ಮಾಡುತ್ತೇನೆ ಎಂದು ಆಶ್ವಾಸನೆ ನೀಡಿದರು.

ಸುಮಾರು ಒಂದು ಗಂಟೆ ಕಾಲ ನಡೆದ ಸಭೆಯಲ್ಲಿ ರೈತರು ಸಲ್ಲಿಸಿದ ಅಹವಾಲು ಆಲಿಸಿದ ಅವರು ಹಲವು ವಿಚಾರ ಸಂಬಂಧ ಸ್ಪಷ್ಟನೆ ನೀಡಿದರು. ಜಮೀನು ದುರಸ್ತಿ ಸಂಬಂಧ ಇಡೀ ಕರ್ನಾಟಕದಲ್ಲಿ ನಡೆದ ಆಂದೋಲನದಲ್ಲಿ ಮೈಸೂರು ಅಗ್ರ ಸ್ಥಾನದಲ್ಲಿದೆ. ಸಾವಿರಾರು ಜನರಿಗೆ ಮೂರು ತಿಂಗಳ ಒಳಗೆ ದುರಸ್ತಿ ಹಾಗೂ ಪೋಡಿ ಮಾಡಿ, ಆರ್‌ಟಿಸಿ ಕೂಡ ನೀಡಿದ್ದೇವೆ. ಸುಲಭವಾಗಿ ಆಗುವ ಕೆಲಸಕ್ಕೆ ಮೊದಲ ಆದ್ಯತೆ ನೀಡುತ್ತಿದ್ದೇವೆ ಎಂದರು.

1960ರಿಂದ 1970ರಲ್ಲಿ ಸಾಗುವಳಿ ಆಗಿರುವವರ ಹೆಸರು ಆರ್‌ಟಿಸಿಯಲ್ಲಿದೆ. ಇಂತಹ ದಾಖಲೆಗಳನ್ನು ಪರಿಶೀಲನೆ ಮಾಡಿ ಎಸಿ ಅವರಿಂದ ಆದೇಶವಾಗಿ ಅವರಿಗೆ ಆ ಭೂಮಿಯ ಸ್ವಾಧೀನ ನೀಡಲಾಗಿದೆ ಎಂದು ಹೇಳಿದರು.

ಆದರೆ ಕೆಲವು ಪ್ರಕರಣಗಳಲ್ಲಿ ಸಮಸ್ಯೆಗಳು ಕಗ್ಗಂಟಾಗಿದೆ. 100 ಎಕರೆ ಭೂಮಿ ಇದ್ದರೆ, 120 ಜನರ ಹೆಸರಿನಲ್ಲಿ ಆರ್ ಟಿಸಿ ಓಡುತ್ತಿದೆ. ಒಬ್ಬರ ಹೆಸರಿನಲ್ಲಿ ಗ್ರ್ಯಾಂಟ್ ಆಗಿದ್ದರೆ, ಮತ್ತೊಬ್ಬರ ಹೆಸರಿನಲ್ಲಿ ಆ ಭೂಮಿ ಸ್ವಾಧೀನದಲ್ಲಿದೆ. ಈ ಬಗ್ಗೆ ಪರಿಶೀಲನೆ ಮಾಡಿ ಸ್ವಾಧೀನಾನುಭವದಲ್ಲಿ ಇರುವ ಅರ್ಹರಿಗೆ ಆರ್‌ಟಿಸಿ ಮಾಡಿ ಕೊಡುತ್ತಿದ್ದೇವೆ ಎಂದು ಲಕ್ಷ್ಮಿಕಾಂತರೆಡ್ಡಿ ತಿಳಿಸಿದರು.

ಜಿಲ್ಲಾಧಿಕಾರಿ ಅಧ್ಯಕ್ಷತೆಯ ಸಮಿತಿಯಲ್ಲಿ ಇಂತಹ ಎಂಟು ಸಾವಿರ ಪ್ರಕರಣಗಳಿವೆ. ಈ ಸಂಬಂಧ ಪ್ರತಿದಿನ 9.30 ಗಂಟೆಯಿಂದ ತಹಶೀಲ್ದಾರ್ ಜೊತೆ ಸಭೆ ನಡೆಸುತ್ತಿದ್ದೇನೆ. ಪ್ರತಿವಾರ 15ರಿಂದ 20 ಪ್ರಕರಣ ಬಗೆಹರಿಸಲಾಗುತ್ತಿದೆ. ಗ್ರ್ಯಾಂಟ್ ಆಗಿಲ್ಲದಿರುವುದು ಕಂಡು ಬಂದರೆ ಹೆಸರು ತೆಗೆಯಲಾಗುವುದು ಎಂದು ಲಕ್ಷ್ಮಿಕಾಂತರೆಡ್ಡಿ ಸ್ಪಷ್ಟಪಡಿಸಿದರು.

ಮೀಸಲು ಅರಣ್ಯ ಪ್ರದೇಶ ಹಾಗೂ ಕೆರೆ ಪ್ರದೇಶವಾಗಿದ್ದರೆ ಯಾವುದೇ ಕಾರಣಕ್ಕೂ ಆ ಭೂಮಿಯನ್ನು ಯಾರಿಗೂ ನೀಡುವುದಿಲ್ಲ. ಉಳಿದ ಭೂಮಿಯ ದಾಖಲಾತಿ ಸರಿಯಾಗಿದ್ದರೆ ಪರಿಶೀಲನೆ ಮಾಡಿ ಸ್ವಾಧೀನಕ್ಕೆ ನೀಡುತ್ತೇವೆ ಎಂದು ತಿಳಿಸಿದರು. ಕಾಲು ದಾರಿ ಅಥವಾ ಬಂಡೆ ದಾರಿಗೆ ಸಂಬಂಧಿಸಿದಂತೆ ಅಧಿಕೃತ ದಾಖಲೆ ಹಾಗೂ ಸಿವಿಲ್ ಕೋರ್ಟ್ ಆದೇಶವಿದ್ದರೆ ಪರಿಶೀಲನೆ ಮಾಡಿ ಜಮೀನಿಗೆ ಹೋಗಲು ಆ ದಾರಿ ಬಿಡಿಸಲಾಗುವುದು ಎಂದು ಲಕ್ಷ್ಮೀಕಾಂತ ರೆಡ್ಡಿ ಭರವಸೆ ನೀಡಿದರು.

ಬಳ್ಳಾರಿಯಲ್ಲಿ ಗುಂಡಿಗೆ ಬಲಿಯಾದ ಕಾಂಗ್ರೆಸ್ ಕಾರ್ಯಕರ್ತನ ಕುಟುಂಬಕ್ಕೆ 25 ಲಕ್ಷ ಪರಿಹಾರ



ಬಳ್ಳಾರಿ, ಜ.3– ಬಳ್ಳಾರಿಯಲ್ಲಿ ಬ್ಯಾನರ್ ಕಟ್ಟುವ ವಿಚಾರವಾಗಿ ನಡೆದ ಗಲಾಟೆ ವೇಳೆ ಗುಂಡು ತಗುಲಿ ಮೃತಪಟ್ಟಿದ್ದ ಕಾಂಗ್ರೆಸ್ ಕಾರ್ಯಕರ್ತ ರಾಜಶೇಖರ್ ಕುಟುಂಬಕ್ಕೆ ಸಚಿವ ಜಮೀರ್ ಅಹ್ಮದ್ ಖಾನ್ 25 ಲಕ್ಷ ರೂಪಾಯಿ ಪರಿಹಾರ ನೀಡಿದ್ದಾರೆ.

ಬಳ್ಳಾರಿಯ ಹುಸೇನ್‌ನಗರದಲ್ಲಿರುವ ರಾಜಶೇಖರ್ ನಿವಾಸಕ್ಕೆ ಭೇಟಿ ನೀಡಿದ ಜಿಲ್ಲಾ ಉಸ್ತುವಾರಿ ಸಚಿವರೂ ಆಗಿರುವ ಜಮೀರ್ ಅಹ್ಮದ್, ಕುಟುಂಬಸ್ಥರಿಗೆ ಸಾಂತ್ವನ ಹೇಳಿ ಧೈರ್ಯ ತುಂಬಿದರು. ಇದೇ ವೇಳೆ ಮೃತರ ಕುಟುಂಬಕ್ಕೆ 25 ಲಕ್ಷ ರೂಪಾಯಿ ಪರಿಹಾರ ನೀಡಿದರು. ಕುಟುಂಬದ ಜೊತೆ ಕಾಂಗ್ರೆಸ್ ಸರ್ಕಾರ ಸದಾ ಇರಲಿದೆ ಎಂದು ಭರವಸೆ ನೀಡಿದರು. ರಾಜಶೇಖರ್ ಕುಟುಂಬಕ್ಕೆ ಮನೆ ಕಟ್ಟಿ ಕೊಡಲಾಗುವುದು. ಪಕ್ಷದ ವತಿಯಿಂದಲೂ ನೆರವು ನೀಡಲಾಗುವುದು ಎಂದು ಹೇಳಿದರು.

ಬಳ್ಳಾರಿ ಗಲಾಟೆ: ಆರು ಸದಸ್ಯರ ಸತ್ಯಶೋಧನಾ ಸಮಿತಿ ರಚನೆ

ಬೆಂಗಳೂರು, ಜ.3– ಬಳ್ಳಾರಿ ಬ್ಯಾನರ್ ಗಲಭೆ ಕುರಿತು ಸ್ಥಳೀಯ ಪರಿಸ್ಥಿತಿಯನ್ನು ಅವಲೋಕಿಸಲು ಕಾಂಗ್ರೆಸ್ ಸತ್ಯಶೋಧನಾ ಸಮಿತಿ ರಚಿಸಿದೆ. ಗ್ಯಾರಂಟಿ ಅನುಷ್ಠಾನ ಸಮಿತಿ ಅಧ್ಯಕ್ಷ ಹೆಚ್ ಎಂ.ರೇವಣ್ಣ ಅಧ್ಯಕ್ಷತೆಯಲ್ಲಿ ಸಮಿತಿ ರಚಿಸಿ ಡಿಸಿಎಂ, ಕೆಪಿಸಿಸಿ ಅಧ್ಯಕ್ಷ ಡಿ.ಕೆ.ಶಿವಕುಮಾರ್ ಆದೇಶ ಹೊರಡಿಸಿದ್ದಾರೆ.

ಮಾಜಿ ಸಂಸದ ಜಯಪ್ರಕಾಶ್ ಹೆಗ್ಡೆ ಶಾಸಕ ಟಿ ರಘುಮೂರ್ತಿ, ಸಂಸದ ಕುಮಾರ್ ನಾಯಕ್, ವಿಧಾನ ಪರಿಷತ್ ಸದಸ್ಯ ಜಕ್ಕಪ್ಪನವರ್ ಮತ್ತು ಬಸನಗೌಡ ಬಾದರ್ಲಿ ಸಮಿತಿಯಲ್ಲಿರುತ್ತಾರೆ.

ದಲಿತ ಸಿಎಂ ವಿಚಾರವಾಗಿ ಇಂದು ಪೂರ್ವಭಾವಿ ಸಭೆ

ಮೈಸೂರು, ಜ.3(ಎಸ್‌ಪಿಎನ್)– ಮೈಸೂರಿನ ಜಲದರ್ಶಿನಿಯಲ್ಲಿ ಸಂವಿಧಾನ ಸಂರಕ್ಷಣಾ ಹೋರಾಟ ಸಮಿತಿ ವತಿಯಿಂದ ಭಾನುವಾರ ಬೆಳಗ್ಗೆ 11 ಗಂಟೆಗೆ ಉರಿಲಿಂಗ ಪೆದ್ದಿಮಠದ ಶ್ರೀ ಜ್ಞಾನ ಪ್ರಕಾಶ್ ಸ್ವಾಮೀಜಿ ಅವರ ನೇತೃತ್ವದಲ್ಲಿ ದಲಿತ ಸಿಎಂ ವಿಚಾರವಾಗಿ ಚರ್ಚಿಸಲು ಪೂರ್ವಭಾವಿ ಸಭೆ ಏರ್ಪಡಿಸಲಾಗಿದೆ. ಈ ಸಭೆಯು ಸಂವಿಧಾನ ಸಂರಕ್ಷಣಾ ಹೋರಾಟ ಸಮಿತಿ ರಾಜ್ಯಾಧ್ಯಕ್ಷ ಎನ್.ಭಾಸ್ಕರ್ ಅವರ ಅಧ್ಯಕ್ಷತೆಯಲ್ಲಿ ನಡೆಯಲಿದೆ. ಈ ಸಭೆಗೆ ಸಾಹಿತಿಗಳು, ಬರಹಗಾರರು, ಸರ್ಕಾರಿ ನೌಕರರು, ನಿವೃತ್ತ ನೌಕರರು, ವಕೀಲರು, ವಿದ್ಯಾರ್ಥಿ ಮುಖಂಡರು, ವಿವಿಧ ಸಂಘ–ಸಂಸ್ಥೆ ಮುಖಂಡರು ಆಗಮಿಸುವಂತೆ ಕೋರಲಾಗಿದೆ.

ಬಳ್ಳಾರಿಯಲ್ಲಿ ಕಾಂಗ್ರೆಸ್ ಕಾರ್ಯಕರ್ತನ ಬಲಿ ಪಡೆದ ಗುಂಡು ಪೊಲೀಸರದ್ದಲ್ಲ; ಖಾಸಗಿ ರಿವಾಲ್ವರ್‌ನಿಂದ ಬಂದಿರಬಹುದು

● ಗೃಹ ಸಚಿವ ಜಿ.ಪರಮೇಶ್ವರ್ ಸ್ಪಷ್ಟನೆ ● ಎಸ್ಪಿ ಅಮಾನತು ಸಮರ್ಥಿಸಿಕೊಂಡ ಸಚಿವರು

ತುಮಕೂರು, ಜ.3– ಬಳ್ಳಾರಿಯಲ್ಲಿ ನಡೆದ ಘರ್ಷಣೆಯಲ್ಲಿ ಕಾಂಗ್ರೆಸ್ ಕಾರ್ಯಕರ್ತನ ಸಾವಿಗೆ ಕಾರಣವಾದ ಗುಂಡು ಪೊಲೀಸ್ ಶಸ್ತ್ರಾಸ್ತ್ರಗಳಿಂದ ಹಾರಿಲ್ಲ ಮತ್ತು ಖಾಸಗಿ ರಿವಾಲ್ವರ್‌ನಿಂದ ಬಂದಿರಬಹುದು ಎಂದು ಗೃಹ ಸಚಿವ ಜಿ ಪರಮೇಶ್ವರ ಶನಿವಾರ ಹೇಳಿದ್ದಾರೆ.

ಬಳ್ಳಾರಿ ಫೈರಿಂಗ್, ಘರ್ಷಣೆ ಪ್ರಕರಣಕ್ಕೆ ಸಂಬಂಧಿಸಿದಂತೆ ಪ್ರಾಥಮಿಕ ವರದಿಗಳ ಪ್ರಕಾರ ಘಟನೆಯ ಸಮಯದಲ್ಲಿ ಸ್ಥಳದಲ್ಲಿದ್ದವರಿಂದ ವಶಪಡಿಸಿಕೊಂಡ ಎಲ್ಲಾ ಬಂದೂಕುಗಳನ್ನು ಬ್ಯಾಲಿಸ್ಟಿಕ್ ತಜ್ಞರು ಪರಿಶೀಲಿಸುತ್ತಾರೆ ಎಂದು ಹೇಳಿದರು.

ತುಮಕೂರಿನಲ್ಲಿ ಮಾಧ್ಯಮಗಳೊಂದಿಗೆ ಮಾತನಾಡಿದ ಪರಮೇಶ್ವರ್, ನಾನು ಎಡಿಜಿಪಿ (ಕಾನೂನು ಮತ್ತು ಸುವ್ಯವಸ್ಥೆ) ಅವರನ್ನು ಕಳುಹಿಸಿದ್ದೆ. ಅವರು ಇನ್ನೂ ಸ್ಥಳದಲ್ಲೇ ಇದ್ದಾರೆ. ಪ್ರಾಥಮಿಕ ವರದಿಗಳ ಪ್ರಕಾರ, ವ್ಯಕ್ತಿಯನ್ನು ಕೊಂದ ಗುಂಡು ಪೊಲೀಸರು ಹಾರಿಸಿಲ್ಲ ಮತ್ತು ಪೊಲೀಸರ ಗುಂಡುಗಳಿಗೆ ಹೊಂದಿಕೆಯಾಗುತ್ತಿಲ್ಲ. ಖಾಸಗಿ ಆಯುಧದಿಂದ ಹಾರಿಸಿರುವಂತೆ ತೋರುತ್ತಿದೆ.

ಗುಂಡನ್ನು ವಿಧಿವಿಜ್ಞಾನ ಪ್ರಯೋಗಾಲಯಕ್ಕೆ ಕಳುಹಿಸಲಾಗಿದೆ. ಘಟನಾ ಸ್ಥಳದಲ್ಲಿದ್ದ ಎಲ್ಲರಿಂದ ವಶಪಡಿಸಿಕೊಂಡ ಬಂದೂಕುಗಳನ್ನು ಬ್ಯಾಲಿಸ್ಟಿಕ್ ಪರೀಕ್ಷೆಗೆ ಕಳುಹಿಸಲಾಗುವುದು ಎಂದು ಹೇಳಿದರು.

ಹಲವಾರು ಜನರ ವಿರುದ್ಧ ದೂರುಗಳು ಮತ್ತು ಪ್ರತಿದೂರುಗಳ ಆಧಾರದ ಮೇಲೆ ಎಫ್‌ಐಆರ್ ದಾಖಲಿಸಲಾಗಿದೆ. ಇವುಗಳನ್ನು ಪರಿಶೀಲಿಸಲಾಗುವುದು. ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಉನ್ನತ ಮಟ್ಟದ ತನಿಖೆಗೆ ಆದೇಶಿಸಿದ್ದಾರೆ. ನಾನು ಇಲಾಖೆಗೆ ಅಗತ್ಯ ಸೂಚನೆಗಳನ್ನು ನೀಡಿದ್ದೇನೆ. ತನಿಖೆಯ ಭಾಗವಾಗಿ ಸ್ಥಳದಲ್ಲಿದ್ದವರಿಂದ ಮತ್ತು ಪೊಲೀಸ್ ಕ್ಯಾಮೆರಾಗಳ ಮೂಲಕ ಗುರುತಿಸಲ್ಪಟ್ಟ ವ್ಯಕ್ತಿಗಳಿಂದ ಹೇಳಿಕೆಗಳನ್ನು ದಾಖಲಿಸಲಾಗುತ್ತಿದೆ ಎಂದು ಹೇಳಿದರು.

ಕರ್ತವ್ಯ ಎಂದರೆ ಕರ್ತವ್ಯ: ಪ್ರಸ್ತುತ ಪರಿಸ್ಥಿತಿಯಿಂದಾಗಿ ವಾಲ್ಮೀಕಿ ಪ್ರತಿಮೆ ಅನಾವರಣ ಕಾರ್ಯಕ್ರಮದ ಆಯೋಜಕರಿಗೆ ಕಾರ್ಯಕ್ರಮವನ್ನು ಮುಂದೂಡಲು ಸೂಚಿಸಲಾಗಿತ್ತು. ಅವರು ಅದನ್ನು ಪಾಲಿಸಿದ್ದಾರೆ. ಘಟನೆಯ ನಂತರ ಕೆಲವೇ ಗಂಟೆಗಳ ಮೊದಲು ಅಧಿಕಾರ ವಹಿಸಿಕೊಂಡಿದ್ದ ಬಳ್ಳಾರಿ ಪೊಲೀಸ್ ವರಿಷ್ಠಾಧಿಕಾರಿ ಪವನ್ ನೆಜ್ಜೂರ್ ಅವರನ್ನು ಅಮಾನತುಗೊಳಿಸಿದ ಬಗ್ಗೆ ಕೇಳಿದ



ಪ್ರಶ್ನೆಗೆ ಉತ್ತರಿಸಿದ ಪರಮೇಶ್ವರ್, 'ಕರ್ತವ್ಯ ಎಂದರೆ ಕರ್ತವ್ಯ'. ಎಸ್ಪಿ ಸ್ಥಳದಲ್ಲಿ ಹಾಜರಿದ್ದು, ಸೂಚನೆಗಳನ್ನು ನೀಡಿ ಪರಿಸ್ಥಿತಿಯನ್ನು ನಿಯಂತ್ರಣಕ್ಕೆ ತರಬೇಕಾಗಿತ್ತು. ಅದು ಆಗದ ಕಾರಣ, ಅವರನ್ನು ಅಮಾನತುಗೊಳಿಸಲಾಗಿದೆ ಎಂದು ಅವರು ಹೇಳಿದರು.

ಮೇಲಾಗಿ 'ಅವರು ಪೊಲೀಸ್ ಇಲಾಖೆಗೆ ಹೊಸಬರೇ, ಎಸ್‌ಪಿ ಮಟ್ಟದ ಅಧಿಕಾರಿಯೊಬ್ಬರು ತಕ್ಷಣ ಈ ಸವಾಲನ್ನು ಸ್ವೀಕರಿಸಿ ಪರಿಸ್ಥಿತಿಯನ್ನು ನಿಯಂತ್ರಣಕ್ಕೆ ತರಬೇಕಿತ್ತು. ಐಪಿಎಸ್ ಅಧಿಕಾರಿಗಳಿಗೆ ಯಾವುದೇ ಸಮಯದಲ್ಲಿ ಅಂತಹ ಸಂದರ್ಭಗಳನ್ನು ನಿಭಾಯಿಸಲು ತರಬೇತಿ ನೀಡಲಾಗುತ್ತದೆ. ಅವರು ತಕ್ಷಣ ಕ್ರಮ ಕೈಗೊಂಡಿದ್ದರೆ, ಪರಿಸ್ಥಿತಿ ಉಲ್ಬಣಗೊಳ್ಳುವುದನ್ನು ತಡೆಯಬಹುದಿತ್ತು. ಬಳ್ಳಾರಿಯಲ್ಲಿ ಈ ಹಿಂದೆ ಸೇವೆ ಸಲ್ಲಿಸಿದ್ದ ಚಿತ್ರದುರ್ಗ ಎಸ್‌ಪಿಗೆ ಜಿಲ್ಲೆಯ ಹೆಚ್ಚುವರಿ ಜವಾಬ್ದಾರಿ ನೀಡಲಾಗಿದೆ ಎಂದು ಪರಮೇಶ್ವರ್ ಹೇಳಿದರು.

ಬಳ್ಳಾರಿಗೆ ಶೀಘ್ರ ನೂತನ ಎಸ್‌ಪಿ ನೇಮಕ: ನಾವು ಶೀಘ್ರದಲ್ಲೇ ಬಳ್ಳಾರಿ ಜಿಲ್ಲೆಗೆ ಅನುಭವಿ ಎಸ್‌ಪಿಯನ್ನು ನೇಮಿಸುತ್ತೇವೆ. ನೆಜ್ಜೂರ್ ನಿದ್ರೆ ಮಾತ್ರೆಗಳನ್ನು ಸೇವಿಸಿದ್ದಾರೆ ಎಂಬ ವರದಿಗಳ ಬಗ್ಗೆ ಮಾಧ್ಯಮಗಳಿಂದ ಮಾತ್ರ ತಿಳಿದುಕೊಂಡಿದ್ದೇನೆ. ನಾನು ಅದನ್ನು ಪರಿಶೀಲಿಸುತ್ತೇನೆ. ಬಳ್ಳಾರಿಯಿಂದ ಬೆಂಗಳೂರಿಗೆ ಹೋಗುತ್ತಿದ್ದೇನೆ ಎಂದು ಅವರು ತಮ್ಮ ಸ್ನೇಹಿತರಿಗೆ ತಿಳಿಸಿದ್ದರು. ಅವರು ಚೆನ್ನಾಗಿದ್ದಾರೆ ಎಂದು ಅಧಿಕಾರಿಗಳು ಹೇಳಿದ್ದಾರೆ. ಆದರೆ ತಕ್ಷಣದ ಅಮಾನತು ಮತ್ತು ನೇಮಕಾತಿಯ ನಂತರ ಸ್ವಾಭಾವಿಕವಾಗಿ ಸ್ವಲ್ಪ ಖಿನ್ನತೆಗೆ ಒಳಗಾಗಿದ್ದಾರೆ. ಪ್ರಸ್ತುತ ಅವರು ಆರೋಗ್ಯವಾಗಿದ್ದಾರೆ ಎಂದು ಪರಮೇಶ್ವರ್ ಹೇಳಿದರು.

ಯಶಸ್ವಿನಿ ಸದಸ್ಯತ್ವ ನೋಂದಣಿಗೆ ಸರ್ಕಾರದ ಆದೇಶ

ಮೈಸೂರು, ಜ.3(ಎಸ್‌ಪಿಎನ್)– 2025–26ನೇ ಸಾಲಿನ ಯಶಸ್ವಿನಿ ಯೋಜನೆಯನ್ನು ಮುಂದುವರೆಸಲು ಹಾಗೂ ಈ ಯೋಜನೆಯಡಿ ಹೊಸ ಸದಸ್ಯತ್ವ ನೋಂದಣಿ ಪ್ರಾರಂಭಿಸಲು ಕೆಲ ಮಾರ್ಗಸೂಚಿಗಳೊಂದಿಗೆ ರಾಜ್ಯ ಸರ್ಕಾರ ಆದೇಶ ಹೊರಡಿಸಿದೆ.


2025–26ನೇ ಸಾಲಿನಲ್ಲಿ 50 ಲಕ್ಷ ಸದಸ್ಯರನ್ನು ನೋಂದಾಯಿಸುವ ಗುರಿ ಹೊಂದಲಾಗಿದೆ. ಈ ಹಿಂದಿನ (2024–25) ಸಾಲಿನ ನೋಂದಾಯಿಸಿದ ಎಲ್ಲಾ ಸದಸ್ಯರನ್ನು 2025–26ನೇ ಸಾಲಿಗೆ ನವೀಕರಿಸಲು ಕ್ರಮವಹಿಸಬೇಕು.

ಗ್ರಾಮೀಣ ಸಹಕಾರ ಸಂಘಗಳ/ಸ್ವ–ಸಹಾಯ ಗುಂಪುಗಳ ಗರಿಷ್ಠ ನಾಲ್ಕು ಸದಸ್ಯರ ಕುಟುಂಬವೊಂದಕ್ಕೆ ವಾರ್ಷಿಕ 500 ರೂ., ನಾಲ್ಕಕ್ಕಿಂತ ಹೆಚ್ಚಿನ ಸದಸ್ಯರಿದ್ದಲ್ಲಿ ಕುಟುಂಬದ ಪ್ರತಿಯೊಬ್ಬ ಸದಸ್ಯರಿಗೆ 100 ರೂ., ಪಾವತಿಸಬೇಕು. ನಗರ ಸಹಕಾರ ಸಂಘಗಳ ಗರಿಷ್ಠ ನಾಲ್ಕು ಸದಸ್ಯರ ಕುಟುಂಬಕ್ಕೆ ವಾರ್ಷಿಕ ಸಾವಿರ ರೂ., ಮತ್ತು ನಾಲ್ಕಕ್ಕಿಂತ ಹೆಚ್ಚಿನ ಸದಸ್ಯರ ಕುಟುಂಬದ ಪ್ರತಿ ಸದಸ್ಯರಿಗೂ ಹೆಚ್ಚುವರಿಯಾಗಿ 200 ರೂ.ಗಳನ್ನು ಪಾವತಿಸುವಂತೆ ಸೂಚಿಸಿದ್ದಾರೆ.

2025–26ನೇ ಸಾಲಿಗೆ ನೋಂದಣಿ 3.1.2026ರಿಂದ ಪ್ರಾರಂಭವಾಗಲಿದ್ದು, 31.3.2027ರವರೆಗೆ ಮುಂದುವರೆಯಲಿದೆ. ಈ ಸಾಲಿನಲ್ಲಿ ನೋಂದಣಿಯಾದ ಪ್ರತಿ ಸದಸ್ಯರಿಗೆ ಚಿಕಿತ್ಸಾ ಅವಧಿಯನ್ನು 2026ರ ಏ.1 ರಿಂದ 2027ರ ಮಾ.31ರವರೆಗೆ ನಿಗಧಿಗೊಳಿಸಿದೆ. ಜಿಲ್ಲೆಯ ಸಹಕಾರ ಸಂಘಗಳ ಅಧ್ಯಕ್ಷರು, ಸಿಇಓಗಳು ಮತ್ತು ಸಂಬಂಧಿಸಿದ ಇಲಾಖಾಧಿಕಾರಿಗಳ ಸಭೆ ಕರೆದು ಕಾರ್ಯಾಗಾರ ಏರ್ಪಡಿಸಿ ಯೋಜನೆಯ ಮಾರ್ಗಸೂಚಿ, ನಿಯಮಗಳು, ಇತಿಮಿತಿಗಳು ಮತ್ತು ಯೋಜನೆಯಡಿ ಸೌಲಭ್ಯದ ವಿವರಗಳ ಮಾಹಿತಿ ಪಡೆದು ಸರ್ಕಾರಕ್ಕೆ ವರದಿ ಸಲ್ಲಿಸುವಂತೆ ಸಹಕಾರ ಇಲಾಖೆಯ ಅಧೀನ ಕಾರ್ಯದರ್ಶಿ(3) ಜಿ.ರಂಗನಾಥ್ ಆದೇಶಿಸಿದ್ದಾರೆ.

ಸಹಕಾರಿ ಸಂಘಗಳ ಯಶಸ್ಸಿಗೆ ಪದಾಧಿಕಾರಿಗಳು ಶುದ್ಧಹಸ್ತರಾಗಿರಬೇಕು

ಹಿರಿಯ ಸಹಕಾರಿ ಧುರೀಣರೂ ಆದ ಶಾಸಕ ಜಿ.ಟಿ.ದೇವೇಗೌಡರ ಕಿವಿಮಾತು



ಸೌಹಾರ್ದ ಸಹಕಾರಿ ದಿನಾಚರಣೆಯಲ್ಲಿ ಸಂಘದ ನೂತನ ವರ್ಷದ ಕ್ಯಾಲೆಂಡರ್ ಅನ್ನು ಗಣ್ಯರು ಬಿಡುಗಡೆ ಮಾಡಿದರು.

ಮೈಸೂರು, ಜ.3– ಸಹಕಾರ ಸಂಘಗಳಲ್ಲಿ ಭ್ರಷ್ಟಾಚಾರ ರಹಿತ ಪಾರದರ್ಶಕ ಆಡಳಿತ ಮೂಲಕ ಠೇವಣಿದಾರರ ವಿಶ್ವಾಸ ಉಳಿಸಿಕೊಳ್ಳಬೇಕು ಎಂದು ರಾಜ್ಯ ಸಹಕಾರ ಮಹಾಮಂಡಳದ ಅಧ್ಯಕ್ಷರೂ ಆದ ಚಾಮುಂಡೇಶ್ವರಿ ಕ್ಷೇತ್ರದ ಶಾಸಕ ಜಿ.ಟಿ.ದೇವೇಗೌಡ ಕಿವಿಮಾತು ಹೇಳಿದರು.

ಮೈಸೂರು ಜಿಲ್ಲಾ ಛಾಯಾ ಸ್ನೇಹ ಸೌಹಾರ್ದ ಸಹಕಾರಿ ಸಂಘ ನಿಯಮಿತದ ವತಿಯಿಂದ ಕುವೆಂಪುನಗರದ ಚಿಕ್ಕಮ್ಮಾನಿಕೇತನ ಕಲ್ಯಾಣ ಮಂಟಪದಲ್ಲಿ ಆಯೋಜಿಸಿದ್ದ ಸೌಹಾರ್ದ ಸಹಕಾರಿ ದಿನಾಚರಣೆ, ಕ್ಯಾಲೆಂಡರ್ ಬಿಡುಗಡೆ ಮತ್ತು ಸಾಂಸ್ಕೃತಿಕ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದ ಅವರು, ಸಹಕಾರ ಸಂಘವನ್ನು ಕಟ್ಟಿ, ಉತ್ತಮ ಹಂತಕ್ಕೆ ಕೊಂಡೊಯ್ಯುವಲ್ಲಿ ಆಡಳಿತ ಮಂಡಳಿಯ ಪಾತ್ರ ಮಹತ್ವಪೂರ್ಣವಾಗಿರುತ್ತದೆ. ಸಂಘದ ಅಧ್ಯಕ್ಷರು ಸೇರಿದಂತೆ ಎಲ್ಲಾ ಪದಾಧಿಕಾರಿಗಳು ಅತ್ಯಂತ ಪಾರದರ್ಶಕ ಮತ್ತು ಶುದ್ಧಹಸ್ತರಾಗಿರಬೇಕು. ಆಗ ಸಂಘದ ಮೇಲೆ ಠೇವಣಿದಾರರಿಗೆ ನಂಬಿಕೆ ಹೆಚ್ಚುತ್ತದೆ ಎಂದರು.

ಸಹಕಾರ ಸಂಘದ ಮೂಲಕ ಸರ್ವರ ಅಭಿವೃದ್ಧಿ ಆಗಬೇಕೆಂಬ ಆಶಯದೊಂದಿಗೆ 1905ರಲ್ಲಿ ಸಿದ್ದನಗೌಡ ರಾಮನ ಗೌಡ ಪಾಟೀಲ್ ಅವರು ಸಹಕಾರ ಸಂಘ ಸ್ಥಾಪನೆ ಮಾಡಿದರು. ಧರ್ಮಸಿಂಗ್ ಅವರು ಮುಖ್ಯಮಂತ್ರಿಯಾಗಿದ್ದಾಗ ನಾನು ಮತ್ತು ಸಿದ್ದರಾಮಯ್ಯನವರು(ಇಂದಿನ ಸಿಎಂ) ಸೇರಿ ಸಿದ್ದನಗೌಡರ ಗ್ರಾಮದಲ್ಲೇ ಶತಮಾನೋತ್ಸವ ಉದ್ಘಾಟನೆ ಹಾಗೂ ಮೈಸೂರಿನಲ್ಲಿ ಸಮಾರೋಪ ಸಮಾರಂಭ ಆಯೋಜಿಸಿದ್ದೆವು. ಸದ್ಯ ಸಹಸ್ರಾರು ಜನ ಸಹಕಾರ ಸಂಘದಿಂದ ಜೀವನ ಕಟ್ಟಿಕೊಂಡಿದ್ದಾರೆ. ಉತ್ತರ ಕರ್ನಾಟಕ ಭಾಗದಲ್ಲಿ ಸಾವಿರಾರು ಕೋಟಿ ವ್ಯವಹಾರ ಮಾಡಿದ್ದಾರೆ. ಪ್ರತಿಯೊಂದು ಸಾಲ ಸೌಲಭ್ಯ ಸಹಕಾರ ಸಂಘಗಳಲ್ಲಿದೆ ಎಂದು ತಿಳಿಸಿದರು.

ಛಾಯಾಗ್ರಾಹಕರು ಸೌಹಾರ್ದ ಸಹಕಾರ ಸಂಘ ಪ್ರಾರಂಭಿಸಿರುವುದು ಅತ್ಯಂತ ಸಂತಸದ ಸಂಗತಿ. ಸುಮಾರು 945 ಸದಸ್ಯರಿದ್ದಾರೆ ಎಂದು ತಿಳಿದಿದ್ದೇನೆ. ಸಹಕಾರ ಸಂಘ ಒಂದು ಕಲ್ಪವೃಕ್ಷ–ಕಾಮಧೇನು ಇದ್ದಂತೆ. ಸಹಕಾರ ಕ್ಷೇತ್ರ ಎಲ್ಲಾ ಸಾಲ ಸೌಲಭ್ಯಗಳನ್ನು ನೀಡುತ್ತಿದೆ. ಮಧ್ಯಮ ಕೈಗಾರಿಕೆ, ಗುಡಿ ಕೈಗಾರಿಕೆ, ಮೀನುಗಾರಿಕೆ, ಹಸು ಸಾಕಾಣಿಕೆ, ಕುರಿ ಮೇಕೆ ಸಾಕಾಣಿಕೆಗೂ ಸಾಲ ದೊರಕುತ್ತದೆ. ಪ್ರತಿಯೊಂದು ಸಹಕಾರ ಸಂಘಗಳ ಅಭಿವೃದ್ಧಿಯಿಂದ ದೇಶದ ಆರ್ಥಿಕತೆಗೆ ನೆರವಾಗುತ್ತದೆ ಎಂದು ಹೇಳಿದರು.

ಕ್ಯಾಲೆಂಡರ್ ಬಿಡುಗಡೆ ಮಾಡಿದ ಮಾಜಿ ಶಾಸಕ ಎಂ.ಕೆ.ಸೋಮಶೇಖರ್ ಮಾತನಾಡಿ, ಒಬ್ಬರಿಗಾಗಿ ಎಲ್ಲರೂ ಎಲ್ಲರಿಗಾಗಿ ಒಬ್ಬರು ಎಂಬ ಸಹಕಾರಿ ಸೂತ್ರದಂತೆ ಸಹಕಾರಿ ಸಂಸ್ಥೆಗಳು ನಡೆಯುತ್ತಿವೆ. ನಂಬಿಕಾರ್ಹ ಆಡಳಿತ ನೀಡಿದರೆ ಹೆಚ್ಚು ಸದಸ್ಯರು ಸಂಘಕ್ಕೆ ನೋಂದಣಿಯಾಗುತ್ತಾರೆ. ಸಹಕಾರ ಸಂಘದಲ್ಲಿ ಠೇವಣಿ ಹಣ ಮುಂದೊಂದು ದಿನ ದೊಡ್ಡ ಮೊತ್ತವಾಗಿ ಬೆಳೆಯುತ್ತದೆ. ಪ್ರತಿ ಠೇವಣಿದಾರರು ಸಾಲ ಪಡೆದು ಸಮರ್ಪಕವಾಗಿ ಮರು ಪಾವತಿ ಮಾಡಿದರೆ ಸಂಘದ ಸೇವಾ ಸೌಲಭ್ಯ ವಿಸ್ತರಿಸಿಕೊಳ್ಳಬಹುದು. ಛಾಯಾಗ್ರಾಹಕರು ತಮ್ಮ ಮಕ್ಕಳ ವಿದ್ಯಾಭ್ಯಾಸಕ್ಕೆ ಆದ್ಯತೆ ನೀಡಬೇಕು. ಈ ನಿಟ್ಟಿನಲ್ಲೂ ಸಹಕಾರ ಸಂಘವು ನೆರವಾಗುತ್ತದೆ ಎಂದು ತಿಳಿಸಿದರು.

ಕಾರ್ಯಕ್ರಮದಲ್ಲಿ ಸಂಘದ ಅಧ್ಯಕ್ಷ ಎಂ.ಎಸ್.ರಾಜೇಂದ್ರ ಕುಮಾರ್, ಕಾನೂನು ಸಲಹೆಗಾರ ಎಸ್.ಟಿ.ಗುರುಪ್ರಸಾದ್, ಕಾರ್ಯದರ್ಶಿ ಎಂ.ಎಸ್.ಶ್ರೀನಿಧಿ, ಮುಖ್ಯ ಕಾರ್ಯನಿರ್ವಹಣಾಧಿಕಾರಿ ಕುಮಾರಿ ಎಂ.ಎಸ್.ಸ್ನೇಹ, ಉಪಾಧ್ಯಕ್ಷ ಅಭಿನಂದನ್, ನಿರ್ದೇಶಕರಾದ ಎಂ.ಆರ್.ಉಮೇಶ್, ಎನ್.ಮೋಹನ್, ಟಿ.ಸುರೇಶ್ ಕುಮಾರ್, ಚಂದ್ರರಾವ್, ಎಸ್.ಎಸ್.ಬಾಬು, ಹೆಚ್.ಎನ್.ಶ್ರೀನಿವಾಸ್, ಎಂ.ವಿಜಯ್ ಕುಮಾರ್, ಎಂ.ಮಹೇಶ್, ಪರಶಿವ, ಹೇಮಾವತಿ, ಹೆಚ್.ಜಿ.ಮಾನಸ, ಪ್ರಸನ್ನ ಕುಮಾರ್ ಮತ್ತಿತರರು ಉಪಸ್ಥಿತರಿದ್ದರು.

ನಕ್ಕರೆ ಅದೇ ಸ್ವರ್ಗ

(ಪೊಲೀಸರು ಕಳ್ಳನನ್ನು ಕುರಿತು) : ನೀನು ಯಾವಾಗಲೂ ಅವರ ಮನೆಯಲ್ಲೇ ಕಳ್ಳತನ ಮಾಡ್ತಿಯಲ್ಲ ಏಕೆ?
ಕಳ್ಳ : ಎಲ್ಲರಿಗೂ ಫ್ಯಾಮಿಲಿ ಡಾಕ್ಟರ್, ಫ್ಯಾಮಿಲಿ ಲಾಯರ್ ಇರೋ ಹಾಗೆ ನಾನು ಅವರಿಗೆ ಫ್ಯಾಮಿಲಿ ಕಳ್ಳ ಸಾರ್!

ಮೈಸೂರು ಮಿತ್ರ
ಭಾನುವಾರ, ಜನವರಿ 4, 2026
ಸತ್ಯೇನೋತ್ತಭಿತಾ ಭೂಮಿಃ ನ ಹಿ ಸತ್ಯಾತ್ಪರೋ ಧರ್ಮಃ
(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)
ಸಂಪಾದಕ: ಎಂ.ಗೋವಿಂದೇಗೌಡ *M.A.*

ಅಮೃತ ವಾಹಿನಿ..........

ನಿಮ್ಮ ಸುತ್ತಲೂ ಇರುವ ಎಲ್ಲವೂ ಬರೀ ಕತ್ತಲೆಯಂತೆಯೇ ಕಾಣಿಸುತ್ತಿದ್ದರೆ ಮತ್ತೊಮ್ಮೆ ನೋಡಿ, ಅಲ್ಲಿ ನೀವೇ ಬೆಳಕಾಗಿರಬಹುದು.

ವೇದ ಸುಳ್ಳಾದರೂ { ಕೃತಿ ಇಲ್ಲದ ಮಾತು
ಗಾದೆ ಸುಳ್ಳಾಗದು { ಕಸ ಬೆಳೆದ ತೋಟವಿದ್ದಂತೆ.

ನಿಮ್ಮ ಪತ್ರಗಳು

ಸಂತೋಷವೋ, ಸಂಕಟವೋ ನೀವೇ ಹೇಳಿ

ಮಾನ್ಯರೆ,

ಹೊಸ ವರ್ಷದಂದು ಹಲವರು ಬಂಧು ಬಳಗ, ಸ್ನೇಹಿತರು ಒಂದೆಡೆ ಸೇರಿ ಸಂಭ್ರಮಿಸಿದರು. ಆದರೆ ಸಾಂಸ್ಕೃತಿಕ ನಗರ ಮೈಸೂರಿನಲ್ಲಿ ದಾಖಲೆ ಮದ್ಯ ಮಾರಾಟವಾಗಿದೆ ಎಂದರೆ ಸುಖವೋ ಅಥವಾ ಸಂಕಟವೋ ತಿಳಿಯದಾಗಿದೆ. ಒಂದೆಡೆ ಕುಡಿತದ ಚಟ, ಡ್ರಗ್ಸ್, ಸಿಗರೇಟು ಹೀಗೆ ಹಲವಾರು ದುಶ್ಚಟಗಳನ್ನು ದೂರ ಮಾಡಲು ಹೋರಾಡುತ್ತಿರುವಾಗ ದಾಖಲೆ ಮಟ್ಟದಲ್ಲಿ ಮದ್ಯ ಮಾರಾಟವಾಗಿದೆ ಎಂದರೆ ಜನರ ಮನಸ್ಥಿತಿ ಎತ್ತ ಸಾಗಿದೆ. ಈ ವಿಷಯದಲ್ಲಿ ಎಲ್ಲರೂ ತಲೆತಗ್ಗಿಸುವಂತಿದೆ. ಸರ್ಕಾರ ಈ ಸಂದರ್ಭದಲ್ಲಿ ಯಾರ ಮನೆ ಹಾಳಾದರೂ ಪರವಾಗಿಲ್ಲ. ಹೆಂಡತಿ–ಮಕ್ಕಳು ಉಪವಾಸವಿದ್ದರೂ ಚಿಂತೆ ಇಲ್ಲ ಎನ್ನುವಂತಿದೆ. ಸರ್ಕಾರಕ್ಕೆ ಬೊಕ್ಕಸ ತುಂಬಿದರೆ ಸಾಕು ಎನ್ನುವಂತಿದೆ. ಇನ್ನಾದರೂ ಯುವಜನತೆ ಎಚ್ಚೆತ್ತುಕೊಳ್ಳಬೇಕಾಗಿದೆ. ಸಾಂಸ್ಕೃತಿಕ ನಗರ ಎಂದು ಹೆಸರಾಗಿರುವ ಮೈಸೂರಿನಲ್ಲಿ ನಿಮ್ಮ ಕೌಶಲ್ಯಗಳನ್ನು ತೋರಿಸಿ ದಾಖಲೆ ಮಾಡಿ. ಇದರಿಂದ ಎಲ್ಲರಿಗೂ ಹೆಮ್ಮೆ ಎನಿಸುತ್ತದೆ. ಗುಂಡಿನ ಗಮ್ಮತ್ತಿನಿಂದ ದಾಖಲೆ ಮಾಡುವುದು ಬೇಡ. ಸರ್ಕಾರ ತನ್ನ ಸ್ವಾರ್ಥಕ್ಕಾಗಿ ಮದ್ಯ ಮಾರಾಟಕ್ಕಾಗಿ ಅಂಗಡಿಗಳಿಗೆ ಪರ್ಮಿಷನ್ ಕೊಡಬೇಡಿ. ಕೊಟ್ಟರೆ ಎಲ್ಲೆಡೆ ಕುಡುಕರ ಸಾಮ್ರಾಜ್ಯವಾಗುತ್ತದೆ. ಇದನ್ನು ನಿಯಂತ್ರಿಸಲು ಪ್ರತಿಯೊಬ್ಬರೂ ಪಣತೊಡಬೇಕು. ಎಲ್ಲರೂ ಮೆಚ್ಚುವ ಹಾಗೆ ಸರಿದಾರಿಯತ್ತ ಸಾಗಬೇಕು.

–ಎಂ. ಎಸ್. ಉಷಾ ಪ್ರಕಾಶ್, ಲೇಖಕಿ ಹಾಗೂ ಕವಯಿತ್ರಿ, ಮೈಸೂರು.

ಮೈಸೂರಲ್ಲಿ ಸುಗಮ ಸಂಚಾರ ಸಂಪೂರ್ಣ ವಿಫಲ

ಮಾನ್ಯರೆ,

ಮೈಸೂರು ನಗರದಲ್ಲಿ ಸುಗಮ ಸಂಚಾರ ಸಂಪೂರ್ಣ ವಿಫಲವಾಗಿರುವುದು ಕಂಡು ಬಂದಿದೆ. ನಗರದ ಕೆಲ ವೃತ್ತ ಹಾಗೂ ರಸ್ತೆಗಳನ್ನು ಗಮನಿಸಿದರೆ ಸಾಕು ಸುಗಮ ಸಂಚಾರ ಸಂಪೂರ್ಣ ವಿಫಲವಾಗಿರುವುದು ಕಾಣಬರುತ್ತದೆ. ನಗರದ ಆರ್‌ಎಂಸಿ ವೃತ್ತದ ಬಳಿ ಅಳವಡಿಸಿರುವ ಸಂಚಾರ ದೀಪಗಳು ಸಂಪೂರ್ಣ ಗೊಂದಲಮಯವಾಗಿದೆ.

ತಿಲಕ್‌ನಗರದಿಂದ ಮತ್ತು ಬಂಬೂಬಜಾರ್ ಕಡೆಯಿಂದ ಬರುವ ವಾಹನ ಸವಾರರು ಸಿಗ್ನಲ್ ಲೈಟ್‌ಗಳಿಂದ ಹಸಿರು ನಿಶಾನೆ ಕಂಡ ತಕ್ಷಣ ಎರಡು ಕಡೆಯ ವಾಹನಗಳು ಮುಂದೆ ಸಾಗುತ್ತದೆ. ಆದರೆ ತಿಲಕ್‌ನಗರದಿಂದ ಶೇಷಾದ್ರಿ ಐಯ್ಯರ್ ರಸ್ತೆಗೆ ಬಂಬೂಬಜಾರ್ ಕಡೆಯಿಂದ ಸಯ್ಯಾಜಿರಾವ್ ರಸ್ತೆ ಕಡೆಗೆ ಹೋಗಬೇಕಾದರೆ ಎರಡು ಕಡೆಯ ವಾಹನ ಸವಾರರು ಒಂದೇ ರಸ್ತೆಯಲ್ಲಿ ವಾಹನ ಚಾಲನೆ ಮಾಡ ಬೇಕಿರುವುದರಿಂದ ಅಪಘಾತಗಳಾಗುವ ಸಾಧ್ಯತೆ ಮತ್ತು ಗೊಂದಲ ಹಚ್ಚಾಗಿರುತ್ತದೆ.

ಹಾಗೇ ಮುಂದೇ ಸಾಗಿದರೆ ಇರ್ವಿನ್ ರಸ್ತೆಯ ವಿಶ್ವೇಶ್ವರಯ್ಯ ವೃತ್ತದಲ್ಲಿ (ಈಗಿನವರಲ್ಲಿ ಆರ್ಯವೇದಿಕ್ ಸರ್ಕಲ್) ಪಾದಚಾರಿಗಳು ರಸ್ತೆ ದಾಟ ಬೇಕಾದರೆ ಕನಿಷ್ಠ 15 ರಿಂದ 20 ನಿಮಿಷಗಳವರೆಗೆ ಕಾಯ ಬೇಕಾಗುತ್ತದೆ. ಕಾರಣ ರೈಲ್ವೆ ನಿಲ್ದಾಣದ ಕಡೆಯಿಂದ ಬರುವ ವಾಹನಗಳು ಮತ್ತು ಸಬರ್ಬ್ ಬಸ್ ಸ್ಟಾಂಡ್ ಕಡೆಯಿಂದ ಬರುವ ವಾಹನಗಳು ಸರ್ಕಲ್‌ನಲ್ಲಿ ವೇಗವಾಗಿ ಚಾಲನೆ ಮಾಡುತ್ತಾರೆ. ಅದರಲ್ಲೂ ಆಟೋಚಾಲಕರು, ಪಾದಚಾರಿಗಳು ರಸ್ತೆ ದಾಟಲು ಅವಕಾಶವನ್ನೇ ಕೊಡುವುದಿಲ್ಲ. ಕಾರಣ ಇವರು ಆಟೋ ಚಾಲಕರಿಗೆ ಹೆದರಿ ಪಾದಚಾರಿಗಳೇ ಹಿಂದೆ ಸರಿಯಬೇಕು. ಇವರಿಗೆ ಜಾಗ ಬಿಡುವುದು ಪಾದಚಾರಿಗಳ ಕರ್ತವ್ಯ. ಈ ಸ್ಥಳದಲ್ಲಿ ಸಾಮಾನ್ಯವಾಗಿ ಸಂಚಾರಿ ಪೊಲೀಸರು ಕಂಡು ಬಂದರೂ ಪ್ರಯೋಜನವಿಲ್ಲದಂತಾಗಿದೆ. ಕಾರಣ ಆರ್ಯವೇದಿಕ್ ಅಸ್ಪತ್ರೆ ಮುಂಭಾಗದಲ್ಲಿ ಆರಾಮವಾಗಿ ಕುಳಿತಿರುತ್ತಾರೆ ಅಥವಾ ಹೆಲ್ಮೆಟ್ ಮತ್ತು ಕಾರ್ ಸೀಟ್ ಬೆಲ್ಟ್ ತಪಾಸಣೆಯಲ್ಲಿ ಮಗ್ನರಾಗಿರುತ್ತಾರೆ. ಪಾದಚಾರಿಗಳು ರಸ್ತೆ ದಾಟಬೇಕಾದರೆ ಕನಿಷ್ಠ 15 ರಿಂದ 20 ನಿಮಿಷಗಳವರೆಗೆ ಕಾಯುತ್ತಿದ್ದರು ಸಂಚಾರಿ ಪೋಲೀಸರು ಲೆಕ್ಕಿಸುವುದಿಲ್ಲ. ಸಾಮಾನ್ಯವಾಗಿ ಸಂಚಾರಿ ಪೊಲೀಸರು ಸಂಚಾರ ನಿಯಂತ್ರಣ ಮಾಡದೆ ಇರುವುದರಿಂದ ಈ ಸ್ಥಳಗಳಲ್ಲಿ ವಾಹನ ಸಂಚಾರದ ಒತ್ತಡ ಅಧಿಕವಾಗಿದೆ.

–ಎಂ.ಎನ್.ಧರಣಿವೆಂಕಟೇಶ, ಸಾಮಾಜಿಕ ಕಾರ್ಯಕರ್ತ, ಮೈಸೂರು

ರೈತರ ಆರ್ಥಿಕ ಸಬಲೀಕರಣಕ್ಕೆ ಮೌಲ್ಯವರ್ಧನೆಯೇ ದಾರಿ

ಮಾನ್ಯರೆ,

ಪ್ರಸ್ತುತ ಕೃಷಿ ಕ್ಷೇತ್ರವು ಎದುರಿಸುತ್ತಿರುವ ಅತಿದೊಡ್ಡ ಸವಾಲೆಂದರೆ ಉತ್ಪಾದನೆಯ ಕೊರತೆಯಲ್ಲ. ಬದಲಿಗೆ ಬೆಳೆದ ಬೆಳೆಗೆ ಯೋಗ್ಯವಾದ ಮಾರುಕಟ್ಟೆ ಮತ್ತು ಮೌಲ್ಯವರ್ಧನೆಯ ವ್ಯವಸ್ಥೆ ಇಲ್ಲದಿರುವುದು. ರೈತ ಬೆಳೆದ ಕೃಷಿ ಉತ್ಪನ್ನಗಳು ಮಾರುಕಟ್ಟೆಗೆ ಒಮ್ಮಿಂದೊಮ್ಮೆಗೆ ಹರಿದು ಬಂದಾಗ ಬೆಲೆ ಕುಸಿಯುವುದು ಒಂದು ಕರಾಳ ಸತ್ಯ. ಈ ಚಕ್ರವ್ಯೂಹದಿಂದ ರೈತ ಹೊರಬರಬೇಕಾದರೆ ಹಳ್ಳಿಗಳಲ್ಲಿ ವೈಜ್ಞಾನಿಕ ಶೀತಲೀಕೃತ ಸಂಗ್ರಹಾಗಾರಗಳು ಮತ್ತು ಮೌಲ್ಯವರ್ಧನಾ ಘಟಕಗಳ ಸ್ಥಾಪನೆ ಅನಿವಾರ್ಯವಾಗಿದೆ. ಬೆಲೆ ಕುಸಿದಾಗ ಉತ್ಪನ್ನಗಳನ್ನು ಸಂರಕ್ಷಿಸಿಡುವ ತಂತ್ರಜ್ಞಾನ ರೈತನ ಕೈಗೆಟುಕುವಂತಿರಬೇಕು. ಕೃಷಿಯು ಲಾಭದಾಯಕ ಉದ್ಯಮವಾಗಬೇಕಾದರೆ, ವ್ಯರ್ಥವಾಗುವ ಸಂಪನ್ಮೂಲಗಳ ಮೇಲೆ ಗಮನಹರಿಸಬೇಕು. ಉದಾಹರಣೆಗೆ, ಗೇರು ಮತ್ತು ಹಲಸಿನ ಹಣ್ಣುಗಳು ಇಂದು ಟನ್‌ಗಟ್ಟಲೆ ವ್ಯರ್ಥವಾಗುತ್ತಿವೆ. ಇವುಗಳನ್ನು ಸಂಸ್ಕರಿಸಿ ಪಾನೀಯ, ಆಹಾರ ಪದಾರ್ಥ ಅಥವಾ ಉಪ–ಉತ್ಪನ್ನಗಳಾಗಿ ಪರಿವರ್ತಿಸಿದರೆ ಗ್ರಾಮೀಣ ಭಾಗದಲ್ಲಿ ದೊಡ್ಡ ಮಟ್ಟದ ಉದ್ಯೋಗ ಸೃಷ್ಟಿಯಾಗುವುದರ ಜೊತೆಗೆ ರೈತನ ಆದಾಯವೂ ಇಮ್ಮಡಿಯಾಗುತ್ತದೆ. 'ಒಂದು ಜಿಲ್ಲೆ ಒಂದು ಉತ್ಪನ್ನ'ದಂತಹ ಯೋಜನೆಗಳು ಕೇವಲ ನಗರಗಳಿಗೆ ಸೀಮಿತವಾಗದೆ ಹಳ್ಳಿಗಳ ಮಟ್ಟದಲ್ಲಿ ವಿಕೇಂದ್ರೀಕರಣಗೊಳ್ಳಬೇಕು. ಕೃಷಿ ವಿಜ್ಞಾನಿಗಳು ಪ್ರಯೋಗಾಲಯದಲ್ಲಿ ಕಂಡುಕೊಂಡ ಸತ್ಯಗಳು ರೈತನ ಹೊಲದಲ್ಲಿ ಅನುಷ್ಠಾನಗೊಂಡಾಗ ಮಾತ್ರ ಸಮಗ್ರ ಕೃಷಿ ಪದ್ಧತಿ ಯಶಸ್ವಿಯಾಗಲು ಸಾಧ್ಯ.

–ಡಾ. ಎಚ್.ಕೆ. ವಿಜಯಕುಮಾರ, ಮೈಸೂರು.

ಗೃಹ ಸಚಿವರ ಗಮನಕ್ಕೆ!

ಮಾನ್ಯರೆ,

ಹೊಸ ವರ್ಷಾಚರಣೆಯ ಸಂಭ್ರಮದ ವೇಳೆ ಮದ್ಯ ಸೇವನೆ ಮಾಡಿ, ಮನೆಗೆ ಹೋಗಲಾರದಷ್ಟು ನಿತ್ರಾಣ ಸ್ಥಿತಿಯಲ್ಲಿದ್ದವರನ್ನು ಸ್ವತಃ ಪೊಲೀಸರೇ ವಾಹನದಲ್ಲಿ ಕರೆದೊಯ್ದು ಮನೆಗೆ ತಲುಪಿಸಲಿದ್ದಾರೆ ಎಂದಿದ್ದರು ಮಾನ್ಯ ಗೃಹ ಸಚಿವ ಪರಮೇಶ್ವರ್!

ಕುಡುಕರು ತೂರಾಡುತ್ತಾ ರಸ್ತೆಯ ಬದಿ ಬೀಳುವವರೆಗೆ ಕಾಯುವ ಬದಲಾಗಿ ಕುಡುಕರ ಮನೆ ಮನೆಗೇ ಮದ್ಯ ಸರಬರಾಜು ಮಾಡುವುದು ಒಳಿತು.

ಈ ವಿಚಾರವಾಗಿ ಗೃಹಸಚಿವರು ಚಿಂತಿಸಲಿ!

–ಪಿ.ಜೆ.ರಾಘವೇಂದ್ರ ಮೈಸೂರು



ಡಾ.ರಮಾ ವಿ. ಬೆಣ್ಣೂರ್
ಸಂಗೀತ ವಿಮರ್ಶಕರು
ಮೊ: 99452 82346

ನಾದಲಹರಿ

ಹೊಸ ವರುಷದ ಹೊಸ ಆಲೋಚನೆಗಳು

ಎಲ್ಲ ಆತ್ಮೀಯ ಓದುಗರಿಗೂ ಹೊಸ ವರುಷದ ಹಾರ್ದಿಕ ಶುಭಾಶಯಗಳು. ಕ್ಯಾಲೆಂಡರ್ ಪ್ರಕಾರದ ಈ ಹೊಸ ವರುಷವನ್ನೂ ಸ್ವಾಗತಿಸುವುದರಲ್ಲಿ ತಪ್ಪೇನಿಲ್ಲವಲ್ಲ. ನಮ್ಮ ಯುಗಾದಿಯ ಸಂಭ್ರಮಾಚರಣೆಯ ಮಹತ್ವವನ್ನಂತೂ ನಾವು ಮರೆಯುವುದಿಲ್ಲ. ಅಂದ ಮೇಲೆ ಇತರರ ಸಂತೋಷದಲ್ಲಿಯೂ ಭಾಗಿಯಾಗಬಹುದೆಂಬುದು ನನ್ನ ಅಭಿಪ್ರಾಯ. ಹೊಸ ವರುಷದ ಆರಂಭದಲ್ಲಿ ಹತ್ತು ಹಲವು ಮಂದಿಗೆ ಒಂದು ಹೊಸ ಹುರುಪು. ಏನೋ ಸಾಧಿಸಿಬಿಡಬೇಕೆಂಬ ಹುಮ್ಮಸ್ಸು. ಇನ್ನು ಮುಂದಾದರೂ ಕೆಲವು ಒಳ್ಳೆಯ ಅಭ್ಯಾಸಗಳನ್ನು ಅಳ ವಡಿಸಿಕೊಳ್ಳಬೇಕೆಂಬ ತವಕ. ಕೆಲವು ದುರಭ್ಯಾಸಗಳನ್ನು ಇನ್ನಾದರೂ ತ್ಯಜಿಸಬೇಕೆಂಬ ಇಚ್ಛೆ. ಒಟ್ಟಾರೆ ಬದುಕನ್ನು ಹಸನು ಮಾಡಿಕೊಳ್ಳಲು ಏನಾದರೂ ಒಂದು ನೆವ ಬೇಕಲ್ಲ, ಅದಕ್ಕಾಗಿ ಎಲ್ಲರೂ ಆತುಕೊಳ್ಳಲು ಒಂದು ಕಾರಣ–ನೆಪ–ಸಂದರ್ಭ ಇತ್ಯಾದಿಗಳಿಗಾಗಿ ಕಾಯುತ್ತಿರುತ್ತಾರೆ ಅಥವಾ ಅದರ ಹುಡುಕಾಟದಲ್ಲಿ ಇರುತ್ತಾರೆ. ಒಂದು ರೀತಿಯಲ್ಲಿ ಇದೂ ಒಳ್ಳೆಯದೇ. ನಮ್ಮ ತಪ್ಪುಗಳನ್ನು ತಿದ್ದಿಕೊಳ್ಳುವುದಾಗಲೀ, ಸರಿಯಾದ ಅಥವಾ ಒಳ್ಳೆಯ ಅಭ್ಯಾಸಗಳನ್ನು ರೂಢಿಸಿಕೊಳ್ಳುವುದಾಗಲೀ ಹಸನಾದ ಬದುಕಿಗೆ ಅವಶ್ಯಕವಾದವುಗಳೇ. ಹೊಸ ವರುಷದ ಸಂಭ್ರಮದ ಆಚರಣೆಯ ವಿಧಿ ವಿಧಾನಗಳ ಬಗ್ಗೆ ನನ್ನದು ಕೆಲವು ಖಚಿತ ವಾದ ಅಭಿಪ್ರಾಯಗಳಿವೆ. ಆ ನೆವದಲ್ಲಿ ಮಾದಕ ಪೇಯಗಳಿಗೆ ಶರಣಾಗಿ, ಔಚಿತ್ಯ ಮೀರಿದ ನಡವಳಿಕೆಯನ್ನು, ಮರ್ಯಾದೆಯನ್ನು ಮೀರುವ ಅನುಚಿತ ಸಂಗತಿಗಳನ್ನು, ಕೊನೆಗೆ ಅಪಘಾತಗಳಿಂದ ಪ್ರಾಣಹಾನಿ ಆಗುವುದನ್ನು ಯಾರು ತಾನೇ ಒಪ್ಪುತ್ತಾರೆ.

ಈಗ ಮತ್ತೆ ವಿಷಯಕ್ಕೆ ಬರೋಣ. ನಮ್ಮ ವ್ಯಕ್ತಿತ್ವದಲ್ಲೇ ಮನೆ ಮಾಡಿಕೊಂಡಿರುವ ಕೆಲವು ಅಷ್ಟೇನೂ ಹಿತವಲ್ಲದ ಗುಣಗಳ ಬಗ್ಗೆ ನಮ್ಮ ಸುಪ್ತ ಮನಸ್ಸಿಗೆ ಖಂಡಿತಾ ಗೊತ್ತಿರುತ್ತದೆ. ಅದನ್ನು ಕಡಿಮೆ ಮಾಡಿಕೊಳ್ಳಬೇಕು, ತ್ಯಜಿಸಲು ಪ್ರಯತ್ನಿಸ ಬೇಕೆಂಬ ಆಸೆಯ ಮೊಳಕೆಯೂ ನಮ್ಮೊಳಗೆ ಇರುತ್ತದೆ. ಆದರೆ ಅದನ್ನು ನಾವು ಮುಂದೂಡುವ ಉಪಾಯದಿಂದ ರಕ್ಷಿಸುತ್ತಲೇ ಇರುತ್ತೇವೆ, ಸೋಮಾರಿತನದ ಶ್ರೀರಕ್ಷೆಯಲ್ಲಿ ಕಾಪಿಡುತ್ತೇವೆ. ಈ ಹೊಸ ವರ್ಷಾರಂಭವು ಅಂತಹ ಅಹಿತ ಅಭ್ಯಾಸಗಳನ್ನು ಕಡಿಮೆ ಮಾಡಿಕೊಳ್ಳಲು ಕಾರಣವಾಗುವುದಾದರೆ, ಏಕಾಗಬಾರದು? ಒಳ್ಳೆಯ ನಡತೆ, ಆಲೋಚನೆ, ಕ್ರಿಯೆಗಳೆಲ್ಲವೂ ಸೇರಿಯೇ ಸಂಸ್ಕೃತಿ ಎಂದು ಅನ್ನಿಸಿಕೊಳ್ಳುತ್ತದೆ ಅಲ್ಲವೇ? ಹೊಸ ವರ್ಷದ ನಿರ್ಧಾರಗಳು ಕೇವಲ ಕೆಲವು ದಿನಗಳ ಆಯಸ್ಸು ಉಳ್ಳದ್ದು ಎಂಬುದೂ ಸಹ ಜನಜನಿತವಾದ ಮಾತೇ. ಇರಲಿ. ಆರಂಭವನ್ನು ಮಾಡಲಾದರೂ ಇದು ಪ್ರೇರಣೆ ನೀಡುತ್ತದಲ್ಲ! ಈ ಬದುಕೆಂಬ ಚಿಕ್ಕ ಸಮಯಾವಧಿಯಲ್ಲಿ ಸಾಧ್ಯವಾದಷ್ಟೂ ನಮ್ಮ ಕೆಟ್ಟ ಗುಣಗಳನ್ನು ತ್ಯಜಿಸಿ, ಒಳ್ಳೆಯ ಗುಣಗಳನ್ನು, ಕರುಣೆ, ಸ್ನೇಹ, ಪ್ರೀತಿ, ಸತ್ಯ, ಸಹಿಷ್ಣುತೆ, ಅಂತಃಕರಣ ಇಂತಹ ಮೌಲ್ಯಗಳನ್ನು ಅಳವಡಿಸಿಕೊಳ್ಳುವ ದಿಸೆಯಲ್ಲಿ ಪ್ರಯತ್ನವನ್ನಾದರೂ ಮಾಡುವುದು ಬಲು ಮುಖ್ಯ ಎಂದು ನಿಮಗೆ ಅನಿಸುವುದಿಲ್ಲವೇ?

ಸಾಮಾನ್ಯವಾಗಿ ನಮ್ಮಲ್ಲಿ ಸಾವಿನ ಬಗ್ಗೆ ಮಾತನಾಡುವುದನ್ನು ಅಪಶಕುನ ಎಂದು ಭಾವಿಸಲಾಗುತ್ತದೆ. ನಮ್ಮ ಸಾವಿನ ಬಗ್ಗೆ ಅಕಸ್ಮಾತ್




> “ ಹೊಸ ವರ್ಷದ ನಿರ್ಧಾರಗಳು ಕೇವಲ ಕೆಲವು ದಿನಗಳ ಆಯಸ್ಸು ಉಳ್ಳದ್ದು ಎಂಬುದೂ ಸಹ ಜನಜನಿತವಾದ ಮಾತೇ. ಇರಲಿ. ಆರಂಭವನ್ನು ಮಾಡಲಾದರೂ ಇದು ಪ್ರೇರಣೆ ನೀಡುತ್ತದಲ್ಲ! ಈ ಬದುಕೆಂಬ ಚಿಕ್ಕ ಸಮಯಾವಧಿಯಲ್ಲಿ ಸಾಧ್ಯವಾದಷ್ಟೂ ನಮ್ಮ ಕೆಟ್ಟ ಗುಣಗಳನ್ನು ತ್ಯಜಿಸಿ, ಒಳ್ಳೆಯ ಗುಣಗಳನ್ನು, ಕರುಣೆ, ಸ್ನೇಹ, ಪ್ರೀತಿ, ಸತ್ಯ, ಸಹಿಷ್ಣುತೆ, ಅಂತಃಕರಣ ಇಂತಹ ಮೌಲ್ಯಗಳನ್ನು ಅಳವಡಿಸಿಕೊಳ್ಳುವ ದಿಸೆಯಲ್ಲಿ ಪ್ರಯತ್ನವನ್ನಾದರೂ ಮಾಡುವುದು ಬಲು ಮುಖ್ಯ ಎಂದು ನಿಮಗೆ ಅನಿಸುವುದಿಲ್ಲವೇ?

ಏನಾದರೂ ಹೇಳಿದಲ್ಲಿ, ಹಿರಿಯರು ಥೂ, ಬಿಡ್ತು ಅನ್ನು ಎಂದು ಹೇಳುವುದನ್ನು ನಾವು ಕೇಳಿಯೇ ಇರುತ್ತೇವೆ. ಅದನ್ನು ಊಹಿಸುವುದಾಗಲೀ, ಅದರ ಬಗ್ಗೆ ಕೇಳುವುದಾಗಲೀ ಎರಡೂ ನಿಷಿದ್ಧ ಆ ಮನಸುಗಳಿಗೆ ! ಹಿರಿಯ ಜೀವಗಳಿಗೆ ತಮ್ಮ ಮುಂದಿನ ಎಳೆ ಜೀವಗಳು ಸದಾ ಸಂತೋಷದಿಂದ ಕೂಡಿರುವ ತುಂಬು ಬಾಳನ್ನು ಸಾಗಿಸಲಿ ಎಂಬುದು ಅತ್ಯಂತ ಸಹಜವಾದ ಬಯಕೆಯೇ ಸರಿ. ತಮ್ಮ ಮಕ್ಕಳನ್ನಾಗಲೀ ಅಥವಾ ತಮಗಿಂತ ಕಿರಿಯರನ್ನಾಗಲೀ ಕಣ್ಣೆದುರಿಗೆ ಕಳೆದುಕೊಳ್ಳುವ ದುಃಖಕ್ಕೆ ಸಮನಾದುದು ಯಾವುದೂ ಇಲ್ಲ ಸರಿ. ಆದರೆ ಒಮ್ಮೆ ಯೋಚಿಸಿ. ಈ ಬದುಕಿನ ಅನಿವಾರ್ಯ ಸತ್ಯ ಎಂದರೆ ಸಾವೊಂದೇ ಅಲ್ಲವೇ? ಹುಟ್ಟಿದ ಪ್ರತಿಯೊಂದು ಜೀವಿಯೂ ಒಂದಲ್ಲಾ ಒಂದು ದಿನ ಸಾಯಲೇಬೇಕು ಎಂಬ ಕಟು ಸತ್ಯ ತಿಳಿದಿದ್ದರೂ ಅದರ ಬಗ್ಗೆ ನಮಗೇಕೇ ಇಂತಹ ಅಸ್ಪೃಶ್ಯ ಭಾವನೆಯು ಬೆಳೆದು ಬಂದಿದೆಯೋ ತಿಳಿಯದು. ಈಗ ನಾನು ಹೇಳಹೊರಟಿರುವುದು ಅದನ್ನು ನೋಡುವ ದೃಷ್ಟಿಯನ್ನು ಬದಲಿಸಿಕೊಳ್ಳಬೇಕಾದ ಬಗೆಗೆ.

ನಾಳೆ ಏಳುವಾಗಲೇ ನಮ್ಮ ಸಾವು ಸಂಭವಿಸಿರುತ್ತದೆ ಎಂದು ಭಾವಿಸೋಣ. ಅಂದರೆ ನಾವು ನಾಳೆ ಏಳುವುದೇ ಇಲ್ಲ ಎಂದು ಗೊತ್ತಾದಾಗ, ನಾವು ಇಂದೇ ಏನೇನನ್ನು ಮಾಡ ಬಹುದು ಯೋಚಿಸಿ. ಮಾಡಬೇಕಾದ ಒಳ್ಳೆಯ ಕೆಲಸಗಳನ್ನು ಮೊದಲು ಮಾಡಿಬಿಡಬೇಕೆಂಬ ತರಾತುರಿ ನಮ್ಮಲ್ಲಿ ಉದ್ಭವಿಸುವುದಿಲ್ಲವೇ? ನಾಳೆ ನಾನು ಇರುವುದಿಲ್ಲ. ಮುಂದೂಡಿದ್ದ ಕೆಲಸಗಳಲ್ಲಿ ಮೊದಲು ಇತರರಿಗೆ ಲೇಸಾಗುವುದನ್ನು ಮೊದಲು ಮಾಡಿಬಿಡೋಣ ಎಂಬ ಭಾವನೆ ನಮ್ಮಲ್ಲಿ ಬರುವುದಿಲ್ಲವೇ? ಇನ್ನು ಉಳಿದಿರುವುದು ಕೆಲವೇ ಗಂಟೆಗಳು. ಅಷ್ಟು ಕ್ಲುಪ್ತ ಸಮಯದಲ್ಲಿ ಯಾರ ಬಗ್ಗೆಯೂ ದ್ವೇಷ, ಸಿಟ್ಟು, ಅಸೂಯೆ, ಸೇಡು ಮುಂತಾದ ಕೆಟ್ಟ ಭಾವನೆಗಳನ್ನು ಉಳಿಸಿಕೊಳ್ಳುವುದು ಬೇಡ. ಎಲ್ಲರನ್ನೂ ಕ್ಷಮಿಸಿಬಿಡೋಣ. ನಾನೇ ಇರುವುದಿಲ್ಲ ಅಂದಮೇಲೆ ಯಾರನ್ನೇಕೆ ದ್ವೇಷಿಸಬೇಕು? ಸಿಟ್ಟನ್ನೇಕೆ ತೋರ ಬೇಕು? ಸಾಧ್ಯವಾದರೆ ಯಾವ ವ್ಯಕ್ತಿಯ ಬಗ್ಗೆ ನಮಗೆ ಸಿಟ್ಟು ಇರುತ್ತದೋ ಅವರಿಗೆ ಫೋನಾಯಿಸಿ, ಹಳೆಯ ಸಿಟ್ಟು ದ್ವೇಷ ಗಳನ್ನೆಲ್ಲ ಮರೆತುಬಿಡು. ಇನ್ನು ಆ ಜಾಗವನ್ನು ಪ್ರೀತಿಯಿಂದ ತುಂಬೋಣ ಎಂದು ಹೇಳಿದಲ್ಲಿ, ಬದುಕು ಅದೆಷ್ಟು ಸೊಗಸು ಯೋಚಿಸಿ! ವಯಸ್ಸಾದ ಅಪ್ಪ, ಅಮ್ಮನೊಡನೆ ಸರಿಯಾಗಿ ಸಮಯವನ್ನೇ ಕಳೆಯಲಾಗಲಿಲ್ಲ. ಇನ್ನು ಇರುವ ಕೆಲವೇ ಗಂಟೆಗಳನ್ನಾದರೂ ಅವರೊಡನೆ ಕಳೆಯೋಣ ಎಂಬ ಭಾವನೆ ಉದಯಿಸಿದಲ್ಲಿ, ಅದಕ್ಕಿಂತ ಹೆಚ್ಚಿನ ಸಂತೋಷ ಆ ವಯಸ್ಸಾದ ತಂದೆ ತಾಯಿಗಳಿಗೆ ನೀವೇನು ಕೊಡಬಲ್ಲಿರಿ? ಸದಾ ನಿಮಗೆ ತಿಳಿಯುವುದಿಲ್ಲ, ನಿಮ್ಮ ಆಲೋಚನೆಗಳೆಲ್ಲ ಹಳೆಯ ಕಾಲದವು. ಸುಮ್ಮನೇ ಕೂತುಬಿಡಿ? ಎಂದು ಜೋರು ಮಾಡುತ್ತಿದ್ದ ಹಿರಿಯರ ಎದುರು ನಿಂತು ತಪ್ಪಾಯಿತು. ನಾನು ಹಾಗೆ ಒರಟಾಗಿ ಮಾತ ನಾಡಬಾರದಿತ್ತು. ಕ್ಷಮಿಸಿ ಎಂದು ಹೇಳಿದಲ್ಲಿ, ಅಲ್ಲಿ ಉಂಟಾಗ ಬಹುದಾದ ಸೌಹಾರ್ದದ ವಾತಾವರಣದ ಬಗ್ಗೆ ಯೋಚಿಸಿ.

ಆಫೀಸಿನಲ್ಲಿ ಇಂದೇ ನನ್ನ ಕೊನೆಯ ದಿನ ಎಂದು ಭಾವಿಸಿ, ನಿಮ್ಮ ಸದಾ ಸಿಡುಕುವ, ತಪ್ಪನ್ನು ಮಾತ್ರ ಎತ್ತಿ ತೋರುವ ಬಾಸ್ ನೊಡನೆ ಶಾಂತವಾಗಿ ನಾಕು ಮಾತುಗಳನ್ನಾಡಿ ನೋಡಿ. ಕಾಲು ಕೆರೆದುಕೊಂಡು ಜಗಳಕ್ಕೆ ಬರುವ ಆ ಪಕ್ಕದ ಮನೆಯವನೊಡನೆಯೂ ಹೀಗೇ ಸೌಜನ್ಯದಿಂದ ವರ್ತಿಸಿ ನೋಡಿ. ಇದ್ದಕ್ಕಿದ್ದಂತೆ ಎಲ್ಲವೂ ಬದಲಾದಂತೆ ಕಾಣುತ್ತದೆ. ನಿಮಗೆ ಯಾರ ಮೇಲೂ ಸಿಟ್ಟಾಗಲೀ ದ್ವೇಷವಾಗಲೀ ಇರುವುದಿಲ್ಲ. ಬದಲಾಗಿ. ಇನ್ನು ಉಳಿದಿರುವ ಕೆಲವೇ ಗಂಟೆಗಳಲ್ಲಿ ಸಾಧ್ಯವಾದಷ್ಟು ಒಳ್ಳೆಯ ಕಾರ್ಯಗಳನ್ನು ಮಾಡಿಬಿಡೋಣ ಎಂಬ ಭಾವನೆಯು ಆ ಜಾಗವನ್ನು ಆಕ್ರಮಿಸಿಕೊಂಡಿರುವುದನ್ನು ನೋಡಿ ನಿಮಗೇ ಆಶ್ಚರ್ಯ ಆಗುವುದರಲ್ಲಿ ಸಂದೇಹವಿಲ್ಲ. ಇದು ಹೇಗಾಯಿತು? ಯೋಚಿಸಿ. ನಿಮ್ಮ ಆಯಸ್ಸು ಇವತ್ತಿಗೇ ಕೊನೆ ಎಂದು ಭಾವಿಸಿದುದರಿಂದ ಉಂಟಾದ ಬದಲಾವಣೆ ಇದು. ಹಾಗಿದ್ದಾಗ, ಪ್ರತಿನಿತ್ಯವೂ ಇದೇ ನಮ್ಮ ಕೊನೆಯ ದಿನ ಎಂದು ಭಾವಿಸಿ, ಒಳ್ಳೆಯ ಆಲೋಚನೆ ಮತ್ತು ಒಳ್ಳೆಯ ಕೆಲಸಗಳನ್ನೇ ಮಾಡುವುದರಿಂದ ಏನಾದರೂ ನಷ್ಟ ಆಗುತ್ತದೆಯೇ? ಒಂದಲ್ಲಾ ಒಂದು ದಿನ ನಮ್ಮ ಸಾವು ನಿಶ್ಚಿತ ಎಂದು ತಿಳಿದಿದ್ದರೂ ಅದು ಬಂದಾಗ ಬರಲಿ, ಇಂದೇ ಏಕೆ ಅದರ ಬಗ್ಗೆ ಯೋಚನೆ ಎಂದು ಭಾವಿಸುವುದಕ್ಕಿಂತ ಈ ರೀತಿ ಯೋಚಿಸುವುದು ಉತ್ತಮ ಎಂದು ನಿಮಗೆ ಅನಿಸಿದಲ್ಲಿ, ನನ್ನ ಶುಭ ಹಾರೈಕೆಗಳು.

ಮೈಸೂರಿನ ವಿಜಯನಗರ ಮೂರನೇ ಹಂತದಲ್ಲಿ
ಆಕರ್ಷಕ ಕ್ಲಾಕ್ ಟವರ್



ಮೈಸೂರಿನ ವಿಜಯನಗರ 3ನೇ ಹಂತದ ಸಂಗಮ ವೃತ್ತದಲ್ಲಿ ನಿರ್ಮಾಣವಾಗಿರುವ ಆಕರ್ಷಕ ಕ್ಲಾಕ್ ಟವರ್ ಕಾಮಗಾರಿ ಅಂತಿಮ ಹಂತದಲ್ಲಿದ್ದು, ಇದಕ್ಕೆ ಅಳವಡಿಸಿರುವ ಪಾರಂಪರಿಕ ಶೈಲಿಯ ಕಂಚಿನ ಗುಂಬಜ್ ಎಲ್ಲರ ಗಮನ ಸೆಳೆಯುತ್ತಿದೆ.

● ಪಾರಂಪರಿಕ ಶೈಲಿಯ ಕಂಚಿನ ಗುಂಬಜ್ ಜನರನ್ನು ಆಕರ್ಷಿಸುತ್ತಿದೆ ● 1 ಕೋಟಿ ವೆಚ್ಚದಲ್ಲಿ ನಿರ್ಮಾಣ
● ಇದು ಶಾಸಕ ಜಿ.ಟಿ.ದೇವೇಗೌಡರ ಕನಸಿನ ಯೋಜನೆ

ಮೈಸೂರು, ಜ.3(ಜಿಎ)–ಮೈಸೂರಿನ ವಿಜಯನಗರ ಮೂರನೇ ಹಂತದ ಸಂಗಮ ವೃತ್ತದಲ್ಲಿ ತಲೆ ಎತ್ತಿರುವ ಆಕರ್ಷಕ ಕ್ಲಾಕ್ ಟವರ್ ನಿರ್ಮಾಣ ಕಾರ್ಯವೂ ಅಂತಿಮ ಹಂತ ತಲುಪಿದ್ದು, ಕ್ಲಾಕ್ ಟವರ್‌ನ ಆಕರ್ಷಣೆ ಹೆಚ್ಚಿಸಲು ಅಳವಡಿಸಿರುವ ಪಾರಂಪರಿಕ ಶೈಲಿಯ ಕಂಚಿನ ಗುಂಬಜ್ ಎಲ್ಲರ ಗಮನ ಸೆಳೆಯುತ್ತಿದೆ.

ಜನರಿಗೆ ಅನುಕೂಲವಾಗುವಂತೆ, ಗುಣಮಟ್ಟದ ಜೊತೆಗೆ ಆಕರ್ಷಕ ಕ್ಲಾಕ್ ಟವರ್ ನಿರ್ಮಾಣ ಮಾಡಬೇಕು ಎಂಬ ಶಾಸಕ ಜಿ.ಟಿ. ದೇವೇಗೌಡರ ವಿಶೇಷ ಕಾಳಜಿಯಂತೆ ಕೋಟಿ ವೆಚ್ಚದಲ್ಲಿ 50 ಅಡಿ ಎತ್ತರದ ಪಾರಂಪರಿಕ ಶೈಲಿಯ ಕ್ಲಾಕ್ ಟವರ್ ನಿರ್ಮಾಣ ವಾಗಿದ್ದು, ಟವರ್ ಮೇಲ್ಭಾಗದಲ್ಲಿ ಅಳವಡಿಸಿರುವ ಪಾರಂಪರಿಕ ಗುಂಬಜ್ ಮೈಸೂರಿನ ಪಾರಂಪರಿಕತೆ ಮುಂದುವರಿಕೆಗೆ ಸಾಕ್ಷಿಯಾದಂತಿದೆ.

ಮೈಸೂರಿನ ಅರಮನೆ ಮುಂಭಾಗವಿರುವ ಹತ್ತನೇ ಚಾಮರಾಜ ಒಡೆಯರ್ ವೃತ್ತದಲ್ಲಿರುವ ಮಹಾರಾಜರ ಪ್ರತಿಮೆ ಮೇಲ್ಭಾಗದಲ್ಲಿ ಅಳವಡಿಸಿರುವ ಗುಂಬಜ್‌ನಂತೆಯೇ ಸಂಗಮ ವೃತ್ತದಲ್ಲಿ ನಿರ್ಮಾಣವಾಗಿರುವ ಕ್ಲಾಕ್ ಟವರ್‌ಗೂ ಗುಂಬಜ್ ಅಳವಡಿಸಲಾಗಿದೆ. ಈಗಾಗಲೇ ಈ ಗುಂಬಜ್ ಎಲ್ಲರ ಗಮನ ಸೆಳೆಯುತ್ತಿದೆ.

ನಾಗಮಂಗಲದ ಶಿಲ್ಪಿ ಕೃಷ್ಣಾಚಾರಿ ಎಂಬುವರು ಗುಂಬಜ್ ಕೆತ್ತನೆ ಕಾರ್ಯ ಮಾಡಿದ್ದು, ಸಂಪೂರ್ಣ ಕಂಚಿನಿಂದ ಕೂಡಿದೆ. ಗುಂಬಜ್ ಸುತ್ತಲೂ ಮೈಸೂರು ಸಂಸ್ಥಾನದ ಲಾಂಛನವಾದ ಗಂಡಭೇರುಂಡವನ್ನು ಕೆತ್ತಿರುವುದು ಮತ್ತೊಂದು ವಿಶೇಷವಾಗಿದೆ. ಪಾರಂಪರಿಕ ಶೈಲಿಯ ಮೆರಗು ನೀಡುವ ನಿಟ್ಟಿನಲ್ಲಿ ವೃತ್ತದ ನಾಲ್ಕು ರಸ್ತೆಗಳ ಬದಿಯಲ್ಲಿ ರಾಜಪಥದ ತಡೆಗೋಡೆಗಳನ್ನು ನಿರ್ಮಿಸಲಾಗಿದೆ. ಜೊತೆಗೆ ಕಿಡಿಗೇಡಿಗಳಿಂದ ಯಾವುದೇ ಹಾನಿ ಆಗದಂತೆ ಮುನ್ನೆಚ್ಚರಿಕೆ ಕ್ರಮವಾಗಿ ಸುತ್ತಲೂ ರೈಲಿಂಗ್ಸ್ ಅಳವಡಿಸಲಾಗಿದೆ.

ದೆಹಲಿ ಮೂಲದ ಗಡಿಯಾರ ಸಂಸ್ಥೆಯಿಂದ ಇಲ್ಲಿ ಗಡಿಯಾರ ಅಳವಡಿಸಿದ್ದು, ಈ ಕ್ಲಾಕ್ ಟವರ್‌ನ ನಾಲ್ಕು ಮುಖದಲ್ಲಿಯೂ 11 ಅಡಿ ಉದ್ದ, 11 ಅಡಿ ಅಗಲದ ಬೃಹತ್ ಗಡಿಯಾರಗಳನ್ನು ಅಳವಡಿಸಲಾಗಿದೆ. ಒಂದು ದಿಕ್ಕಿನಲ್ಲಿ ಕನ್ನಡ ಅಂಕಿ, ಮತ್ತೊಂದು ದಿಕ್ಕಿನಲ್ಲಿ ರೋಮನ್ ಅಂಕಿ, ಉಳಿದ ಎರಡು ದಿಕ್ಕಿನಲ್ಲಿ ಇಂಗ್ಲಿಷ್ ಅಂಕಿಗಳುಳ್ಳ ಗಡಿಯಾರ ಗಮನ ಸೆಳೆಯುತ್ತಿದೆ.

ಈ ಗಡಿಯಾರಗಳು ಸಮಯ ತೋರಿಸುವುದರ ಜೊತೆಗೆ ಗಂಟೆಗೊಮ್ಮೆ ಸುಮಾರು 1.5 ಕಿ.ಮೀ. ದೂರ ಕೇಳಿಸುವಂತೆ ಹಿತಕಾರಿ ನಾದವುಳ್ಳ ಗಂಟೆ ಬಾರಿಸಲಿದೆ. ಅಲ್ಲದೇ ರಾತ್ರಿ ವೇಳೆಯೂ ಕೂಡ ಸಮಯ ನೋಡಲು ಅನುವಾಗುವಂತೆ ಗಡಿಯಾರಕ್ಕೆ ರೇಡಿಯಂ ಲೇಪನ ಮಾಡಲಾಗಿದೆ. ಈ ಕ್ಲಾಕ್ ಟವರ್‌ಗೆ ಮತ್ತಷ್ಟು ಮೆರಗು ನೀಡಲು ಮುಂದಾಗಿರುವ ನಗರಪಾಲಿಕೆ, ಇದರ ಸುತ್ತಲೂ ವಿದ್ಯುತ್ ದೀಪಗಳನ್ನು ಅಳವಡಿಸಿದೆ. ಈ ವಿದ್ಯುದ್ದೀಪಗಳು ಸ್ವಯಂ ಚಾಲಿತ ಆನ್ ಅಂಡ್ ಆಫ್ ಆಗುವುದು ಮತ್ತೊಂದು ವಿಶೇಷವಾಗಿದೆ.

ಬಿಹಾರದಲ್ಲಿ ವೃದ್ಧರಿಗೆ 'ಮನೆ ಬಾಗಿಲಿಗೆ ಆರೋಗ್ಯ ಸೇವೆ'



ಪಾಟ್ನಾ, ಜ.3– ಹಿರಿಯ ನಾಗರಿಕರ ಮನೆ ಬಾಗಿಲಿಗೆ ಆರೋಗ್ಯ ಸೇವೆ ಕಲ್ಪಿಸುವ ಯೋಜನೆಯನ್ನು ಜಾರಿಗೊಳಿಸಲು ಆದೇಶಿಸಿರುವುದಾಗಿ ಬಿಹಾರ ಮುಖ್ಯಮಂತ್ರಿ ನಿತೀಶ್‌ಕುಮಾರ್ ಹೇಳಿದ್ದಾರೆ.

ಈ ಸಂಬಂಧ ತಮ್ಮ ಎಕ್ಸ್‌ನಲ್ಲಿ ಮಾಹಿತಿ ಹಂಚಿಕೊಂಡಿರುವ ನಿತೀಶ್, ಅಗತ್ಯವಿರುವ ಹಿರಿಯ ನಾಗರಿಕರಿಗೆ ಶುಶ್ರೂಷಕರ ನೆರವು, ಮನೆಯಲ್ಲೇ ರಕ್ತದೊತ್ತಡ, ಇಸಿಜಿ ಹಾಗೂ ಇತರ ಪರೀಕ್ಷೆ ಹಾಗೂ ಇತರ ರೀತಿಯ ವೈದ್ಯಕೀಯ ನೆರವು ಸೇರಿದಂತೆ ಅಗತ್ಯ ಆರೋಗ್ಯ ಸೇವೆಗಳು ಅಗತ್ಯವಿರುವ ಸಮಯದಲ್ಲಿ ಅವರ ಮನೆಗಳಲ್ಲೇ ಸಿಗುವಂತೆ ನೋಡಿಕೊಳ್ಳುವುದು ನಮ್ಮ ಪ್ರಯತ್ನವಾಗಿದೆ ಎಂದು ತಿಳಿಸಿದ್ದಾರೆ.

ಸಾತ್ ನಿಶ್ಚಯ್(ಏಳು ನಿರ್ಣಯಗಳು) ಅಡಿಯಲ್ಲಿ ಬರುವ ಹಿರಿಯ ನಾಗರಿಕರ ಆರೋಗ್ಯ ಸೇವೆಯನ್ನು ಆದ್ಯತೆ ಆಧಾರದ ಮೇಲೆ ಜಾರಿ ಮಾಡುವಂತೆ ಆರೋಗ್ಯ ಇಲಾಖೆಗೆ ಸೂಚಿಸಿದ್ದಾರೆ. ಆರೋಗ್ಯ ಸಂಬಂಧಿತ ಸೌಲಭ್ಯಗಳು ರಾಜ್ಯದ ಹಿರಿಯ ನಾಗರಿಕರಿಗೆ ಅವರ ಮನೆಗಳಲ್ಲಿ ಲಭ್ಯವಾಗುವಂತೆ ನೋಡಿಕೊಳ್ಳಲು ತ್ವರಿತವಾಗಿ ಕಾರ್ಯೋನ್ಮುಖವಾಗುವಂತೆ ಆರೋಗ್ಯ ಇಲಾಖೆಗೆ ನಿರ್ದೇಶನ ನೀಡಲಾಗಿದೆ ಎಂದರು.

ಬಿಹಾರವನ್ನು ಅಭಿವೃದ್ಧಿ ಹೊಂದಿದ ರಾಜ್ಯವನ್ನಾಗಿ ಮಾಡಲು ರಾಜ್ಯ ಸರ್ಕಾರ 'ಸಾತ್ ನಿಶ್ಚಯ್–3' ಕಾರ್ಯಕ್ರಮಗಳನ್ನು ಜಾರಿಗೆ ತಂದಿದೆ. ರಾಜ್ಯದಲ್ಲಿ ನಮ್ಮ ಸರ್ಕಾರ ಅಧಿಕಾರಕ್ಕೆ ಬಂದಾಗಿನಿಂದ, ನಾವು ಸಮಾಜದ ಎಲ್ಲಾ ವರ್ಗಗಳ ಜನರ ಉನ್ನತಿಗಾಗಿ ಮತ್ತು ಪ್ರತಿಯೊಂದು ವಲಯದ ಅಭಿವೃದ್ಧಿಗಾಗಿ, ನ್ಯಾಯದೊಂದಿಗೆ ಅಭಿವೃದ್ಧಿಯ ತತ್ವದಿಂದ ನಡೆಯುತ್ತಿದ್ದೇವೆ. ನಾವು ಇಡೀ ಬಿಹಾರವನ್ನು ನಮ್ಮ ಕುಟುಂಬವೆಂದು ಪರಿಗಣಿಸಿದ್ದೇವೆ ಮತ್ತು ಪ್ರತಿಯೊಬ್ಬರ ಗೌರವವನ್ನು ಸಂಪೂರ್ಣವಾಗಿ ನೋಡಿಕೊಂಡಿದ್ದೇವೆ ಎಂದು ಹೇಳಿದ್ದಾರೆ.

ಡಿಸಿಸಿ ಬ್ಯಾಂಕ್ ಲೇಬರ್ ಯೂನಿಯನ್ ಅಧ್ಯಕ್ಷನ ಮೇಲೆ ಮಾರಣಾಂತಿಕ ಹಲ್ಲೆ

ಶಾಸಕ ಸವದಿ ಪುತ್ರನ ವಿರುದ್ಧ ಗಂಭೀರ ಆರೋಪ

ಬೆಳಗಾವಿ, ಜ.3– ಡಿಸಿಸಿ ಬ್ಯಾಂಕ್ ಲೇಬರ್ ಯೂನಿಯನ್ ಅಧ್ಯಕ್ಷನ ಮೇಲೆ ಮಾರಣಾಂತಿಕ ಹಲ್ಲೆ ನಡೆದಿದೆ. ಮಾಜಿ ಡಿಸಿಎಂ, ಅಥಣಿ ಶಾಸಕ ಲಕ್ಷ್ಮಣ ಸವದಿ ಹಾಗೂ ಪುತ್ರ ಚಿದಾನಂದ ಸವದಿ ವಿರುದ್ಧ ಹಲ್ಲೆ ಆರೋಪ ಕೇಳಿಬಂದಿದೆ. ಡಿಸಿಸಿ ಬ್ಯಾಂಕ್ ಲೇಬರ್ ಯೂನಿಯನ್ ಅಧ್ಯಕ್ಷ ನಿಂಗಪ್ಪ ಕರೆಣ್ಣವರ್ ಅವರು, ಚಿದಾನಂದ ಸವದಿ ವಿರುದ್ಧ ಹಲ್ಲೆ ಆರೋಪ ಮಾಡಿದ್ದಾರೆ.


ಮಾತುಕತೆಗಾಗಿ ಮನೆಗೆ ಕರೆದು ನನ್ನ ತಲೆ ಒಡೆಯುವಂತೆ ಹೊಡೆದಿದ್ದಾರೆ ಎಂದು ನಿಂಗಣ್ಣ ಕರೆಣ್ಣವರ್ ಗಂಭೀರ ಆರೋಪ ಮಾಡಿದ್ದಾರೆ. ಸದ್ಯ ಗಂಭೀರವಾಗಿ ಗಾಯಗೊಂಡ ನಿಂಗಪ್ಪ ಅವರನ್ನು ಸ್ಥಳೀಯ ಆಸ್ಪತ್ರೆಗೆ ದಾಖಲಿಸಲಾಗಿದೆ. ಸರ್ಕಾರ ನನಗೆ ರಕ್ಷಣೆ ನೀಡಬೇಕು. ಇಲ್ಲವಾದಲ್ಲಿ ಆತ್ಮಹತ್ಯೆ ಮಾಡಿಕೊಳ್ಳುವುದಾಗಿ ನಿಂಗಪ್ಪ ಕರೆಣ್ಣವರ್ ಅಳಲು ತೋಡಿಕೊಂಡಿದ್ದಾರೆ.

Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy Newspapers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Visveswaraya Building, III Floor, K.R. CIRCLE, MYSORE-570 001, Ph: 2431774 and No. 114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581 / 1980 E-mail address: news@mysurumithra.com For advertisements: ad@mysurumithra.com

ಚಾಮುಂಡೇಶ್ವರಿ ಕ್ಷೇತ್ರದ ಬಡಾವಣೆಗಳ ಕಾಯಕಲ್ಪಕ್ಕೆ ಶಾಸಕ ಜಿ.ಟಿ.ದೇವೇಗೌಡರು ನಿರ್ಧಾರ

● ಮೂಲಭೂತ ಸೌಕರ್ಯ ಕಲ್ಪಿಸುವ ಬಗ್ಗೆ ಸಮಗ್ರ ಯೋಜನೆ ರೂಪಿಸಲು ಅಧಿಕಾರಿಗಳಿಗೆ ತಾಕೀತು ● ಗ್ರೇಟರ್ ಮೈಸೂರು ಬಗ್ಗೆ ಯಾವುದೇ ಸಮಯದಲ್ಲಿ ಸರ್ಕಾರದಿಂದ ಅಧಿಸೂಚನೆ ಸುಳಿವು

- ಮೂಲಭೂತ ಸೌಕರ್ಯ ಕಲ್ಪಿಸಲು ಸಿಎಂ ಅಧ್ಯಕ್ಷತೆಯಲ್ಲಿ ಶೀಘ್ರ ಸಭೆ
- ವಿವಿಧ ಅಭಿವೃದ್ಧಿ ಯೋಜನೆಗೆ ಅಗತ್ಯವಿರುವ ಅನುದಾನದ ವಿವರ ನೀಡಿ
- ಖಾತೆಗೆ ಲಂಚದ ಬೇಡಿಕೆ ತಪ್ಪಿದೆಯಾ; ಕ್ಷಿಪ್ರಗತಿಯಲ್ಲಿ ಸರ್ಕಾರಿ ಆಸ್ತಿ, ಶಾಲೆ, ಬಡಾವಣೆ, ಗ್ರಾಮದ ವರದಿ ತಯಾರಿಸಿ


ಮೈಸೂರು ನಗರ ಪಾಲಿಕೆಯ ವಲಯ ಕಚೇರಿ–3 ರಲ್ಲಿ ಶಾಸಕ ಜಿ.ಟಿ.ದೇವೇಗೌಡರು ಶನಿವಾರ ಅಧಿಕಾರಿಗಳ ಸಭೆ ನಡೆಸಿದರು.

ಮೈಸೂರು, ಜ.3(ಬಿಎಲ್ ಯು)– ಗ್ರೇಟರ್ ಮೈಸೂರು ಸಂಬಂಧ ರಾಜ್ಯ ಸರ್ಕಾರ ಯಾವುದೇ ಸಮಯದಲ್ಲಿ ಅಧಿಸೂಚನೆ ಹೊರಡಿಸುವ ಸಾಧ್ಯತೆ ಹಿನ್ನೆಲೆಯಲ್ಲಿ ನಗರಸಭೆ, ಪಟ್ಟಣ ಪಂಚಾಯಿತಿ ವ್ಯಾಪ್ತಿಯಲ್ಲಿರುವ ಬಡಾವಣೆ ಸೇರಿದಂತೆ ಇತರೆ ಆಸ್ತಿಗಳ ಸಂಪೂರ್ಣ ಮಾಹಿತಿ ತಯಾರಿಸಿಟ್ಟುಕೊಳ್ಳಬೇಕು ಎಂದು ಮೈಸೂರಿನ ಚಾಮುಂಡೇಶ್ವರಿ ಕ್ಷೇತ್ರದ ಶಾಸಕ ಜಿ.ಟಿ.ದೇವೇಗೌಡ ಅವರು ಅಧಿಕಾರಿಗಳಿಗೆ ತಾಕೀತು ಮಾಡಿದ್ದಾರೆ.

ಮೈಸೂರು ನಗರ ಪಾಲಿಕೆಯ ವಲಯ ಕಚೇರಿ 3 ರಲ್ಲಿ ಇಂದು ನಡೆದ ಅಧಿಕಾರಿಗಳ ಸಭೆಯಲ್ಲಿ ಮಾತನಾಡಿದ ಅವರು, ನಾನು ಸೂಚನೆ ನೀಡಿರುವ ಎಲ್ಲಾ ಮಾಹಿತಿಯನ್ನು ಒಂದು ತಿಂಗಳಲ್ಲಿ ಸಿದ್ಧವಾಗಿಟ್ಟುಕೊಳ್ಳಬೇಕು ಎಂದು ಗಡುವು ನೀಡಿದರು.

ನಗರ ಸಭೆ ಹಾಗೂ ಪಟ್ಟಣ ಪಂಚಾಯಿತಿಯನ್ನು ಮೇಲ್ದರ್ಜೆಗೇರಿಸಿದ ಬಳಿಕ ಬಹಳಷ್ಟು ಸುಧಾರಣೆಯಾಗಿದೆ. ಖಾತೆ ಮಾಡಿಕೊಡಲು ಅಲೆದಾಟ, ಲಂಚ ಬೇಡಿಕೆ, ಕಂದಾಯ ದ್ವಿಗುಣದಂತಹ ಹಲವು ಸಮಸ್ಯೆ ಪರಿಹಾರ ಮಾಡಲಾಗಿದೆ ಈ ಸಂಬಂಧ ಸ್ಥಳೀಯ ಆಡಳಿತದಲ್ಲಿ ಸುಧಾರಣೆ ತರಲಾಗಿದೆ ಎಂದು ಜಿ.ಟಿ.ದೇವೇಗೌಡರು ತಿಳಿಸಿದರು.

ನಗರ ಸಭೆ ಹಾಗೂ ಪಟ್ಟಣ ಪಂಚಾಯಿತಿ ವ್ಯಾಪ್ತಿಯಲ್ಲಿ ಇರುವ ಸರ್ಕಾರಿ ಆಸ್ತಿಗಳು, ಖಾಲಿ ನಿವೇಶನಗಳು, ಶಾಲೆಗಳು, ಅಂಗನವಾಡಿ ಕಟ್ಟಡಗಳು, ಗ್ರಾಮಗಳು ಹಾಗೂ ಮನೆಗಳು ಎಷ್ಟಿವೆ ಎಂಬ ಸಮಗ್ರ ಮಾಹಿತಿಯನ್ನು ವರದಿ ಮಾಡಬೇಕು. ಜೊತೆಗೆ ಅಸಮರ್ಪಕ ಕುಡಿಯುವ ನೀರು, ಯುಜಿಡಿ ಸಮಸ್ಯೆ, ಬೀದಿ ದೀಪ ಸೇರಿದಂತೆ ಮೂಲಭೂತ ಸೌಕರ್ಯ ಒದಗಿಸುವ ಬಗ್ಗೆ ಕೂಡ ವರದಿಯನ್ನು ತಯಾರಿಸಿಟ್ಟುಕೊಳ್ಳಬೇಕು ಎಂದು ಸಲಹೆ ನೀಡಿದರು.

ಖಾಸಗಿ ಬಡಾವಣೆಗಳನ್ನು ಆಯಾಯ ಸ್ಥಳೀಯ ಸಂಸ್ಥೆಗಳಿಗೆ ಹಸ್ತಾಂತರ ಮಾಡಿ ಒಂದು ವರ್ಷವಾಗಿದ್ದು, ಈ ಅವಧಿಯಲ್ಲಿ ಏನೇನು ಸುಧಾರಣೆಯಾಗಿದೆ, ಏನೇನು ಕೆಲಸ ಆಗಬೇಕಿದೆ ಎಂಬ ಬಗ್ಗೆ ಅಧಿಕಾರಿಗಳಲ್ಲಿ ಮಾಹಿತಿ ಇರಬೇಕು ಎಂದು ತಾಕೀತು ಮಾಡಿದ ಜಿ.ಟಿ.ದೇವೇಗೌಡರು, ಎಷ್ಟು ಮನೆ ಹಾಗೂ ಖಾಲಿ ನಿವೇಶನ ಖಾತೆಗಳಾಗಿವೆ, ಎಷ್ಟು ಬಾಕಿ ಇವೆ ಎಂಬ ಬಗ್ಗೆ ನಕ್ಷೆ ಸಮೇತ ಸಮಗ್ರವಾಗಿ ವರದಿ ಮಾಡಬೇಕು. ನಾನು ಸೂಚನೆ ನೀಡಿದ ಪ್ರತಿಯೊಂದು ವಿಚಾರದ ಬಗ್ಗೆ ಅಂಕಿ ಅಂಶ ಹಾಗೂ ದಾಖಲಾತಿ ಇದ್ದರೆ ವಲಯ ಕಚೇರಿಗಳು ಸುಲಭವಾಗಿ ಕಾರ್ಯ ನಿರ್ವಹಿಸಬಹುದು ಎಂದು ಅಭಿಪ್ರಾಯಪಟ್ಟರು.

ಗ್ರೇಟರ್ ಮೈಸೂರು ಬಗ್ಗೆ ರಾಜ್ಯ ಸರ್ಕಾರ ಅಧಿಸೂಚನೆ ಹೊರಡಿಸಿದ ನಂತರ ಹಲವು ಸಮಸ್ಯೆಗಳನ್ನು ಎದುರಿಸಬೇಕಾಗುವ ಸಾಧ್ಯತೆ ಇರುತ್ತದೆ. ಈ ಹಿನ್ನೆಲೆಯಲ್ಲಿ ಅದನ್ನು ಸಮರ್ಥವಾಗಿ ಎದುರಿಸಲು ಸನ್ನದ್ಧರಾಗಿರಬೇಕು. ಆಗ ವಲಯ ಕಚೇರಿಗಳನ್ನು ವಿಸ್ತರಣೆ ಮಾಡಿ, ಮೂಲಭೂತ ಸೌಕರ್ಯವನ್ನು ಕಲ್ಪಿಸಲು ಸುಲಭವಾಗುತ್ತದೆ ಎಂದು ಹೇಳಿದರು.

ಸ್ಮಶಾನಗಳ ಅಭಿವೃದ್ಧಿಗೆ ಕೂಡಲೇ ಟೆಂಡರ್ ಕರೆಯಿರಿ ಎಂದು ಇದೇ ವೇಳೆ ಅಧಿಕಾರಿಗಳಿಗೆ ಸೂಚನೆ ನೀಡಿದರು.

ಮುಡಾದಿಂದ ನಿರ್ಮಾಣ ಮಾಡಿರುವ ಹಾಗೂ ಅನುಮೋದನೆ ನೀಡಿರುವ ಖಾಸಗಿ ಬಡಾವಣೆಗಳನ್ನು ಸ್ಥಳೀಯ ಸಂಸ್ಥೆಗಳಿಗೆ ಹಸ್ತಾಂತರ ಮಾಡಲಾಗಿದೆ. ಈ ಬಡಾವಣೆಗಳಿಗೆ ಮೂಲಭೂತ ಸೌಕರ್ಯ ಕಲ್ಪಿಸುವುದಾಗಿ ಮುಖ್ಯಮಂತ್ರಿ ಸಿದ್ದರಾಮಯ್ಯ ಹಾಗೂ ನಗರಾಭಿವೃದ್ಧಿ ಸಚಿವ ಭೈರತಿ ಸುರೇಶ್ ಭರವಸೆ ನೀಡಿದ್ದಾರೆ ಎಂದು ಜಿ.ಟಿ.ದೇವೇಗೌಡರು ತಿಳಿಸಿದರು.

ಅಂದಾಜು ಪಟ್ಟಿ ತಯಾರಿಸಿ: ಈ ಹಿನ್ನೆಲೆಯಲ್ಲಿ ಮುಡಾ ಹಾಗೂ ಖಾಸಗಿ ಬಡಾವಣೆಗಳಲ್ಲಿ ಏನೇನು ಕೆಲಸ ಆಗಬೇಕಿದೆ, ಎಷ್ಟು ಅನುದಾನ ಬೇಕಿದೆ ಎಂಬ ಬಗ್ಗೆ ಪಟ್ಟಿ ತಯಾರಿಸಿ ನನಗೆ ನೀಡಬೇಕು. ಈ ವಿಚಾರವನ್ನು ಸಿದ್ದರಾಮಯ್ಯ ಅಧ್ಯಕ್ಷತೆಯ ಸಭೆಯ ಮುಂದಿಟ್ಟು ಅನುದಾನ ಬಿಡುಗಡೆ ಮಾಡಿಸುತ್ತೇನೆ ಎಂದು ಭರವಸೆ ನೀಡಿದರು.

ಮೈಸೂರು ನಗರ ಪಾಲಿಕೆ ಉಪ ಆಯುಕ್ತ ಜಿ.ಎಸ್.ಸೋಮಶೇಖರ್, ಎಸ್.ಮಂಜು, ಕಾರ್ಯಪಾಲಕ ಅಭಿಯಂತರ ಆರ್.ಶ್ರೀನಿವಾಸ್, ವಲಯ ಕಚೇರಿ 3 ರ ಸಹಾಯಕ ಆಯುಕ್ತ ಸಂದೀಪ್, ಅಭಿವೃದ್ಧಿ ಅಧಿಕಾರಿ ಸತ್ಯಮೂರ್ತಿ, ಪಟ್ಟಣ ಪಂಚಾಯಿತಿ ಮುಖ್ಯಾಧಿಕಾರಿಗಳಾದ ಹೆಚ್.ಎಂ.ಸುರೇಶ್, ಹೆಚ್.ಆರ್.ದೀಪಾ, ರವಿಕೀರ್ತಿ, ಎಸ್.ಎಂ.ಸಂಜಯ್ ಕುಮಾರ್, ಬಿಇಒ ಪ್ರಕಾಶ್, ಸಿಡಿಪಿಒ ಸುಬ್ಬಯ್ಯ ಸೇರಿದಂತೆ ಹಲವು ಅಧಿಕಾರಿಗಳು ಸಭೆಯಲ್ಲಿ ಹಾಜರಿದ್ದರು.

ಕಂದಾಯ ವಸೂಲಿಗೆ ಟಾಸ್ಕ್ ಫೋರ್ಸ್ ರಚಿಸಿ

ನಗರ ಸಭೆ ಹಾಗೂ ಪಟ್ಟಣ ಪಂಚಾಯಿತಿ ವ್ಯಾಪ್ತಿಯಲ್ಲಿ ಕಂದಾಯ ವಸೂಲಿ ಮಾಡುವ ಬಗ್ಗೆ ಟಾಸ್ಕ್ ಫೋರ್ಸ್ ರಚನೆ ಮಾಡಬೇಕೆಂದು ಶಾಸಕ ಜಿ.ಟಿ.ದೇವೇಗೌಡರು ಅಧಿಕಾರಿಗಳಿಗೆ ಸೂಚಿಸಿದರು.

ಎಲ್ಲಾ ಬಡಾವಣೆಗಳು ನಗರ ಪಾಲಿಕೆಗೆ ಸೇರಿಕೊಳ್ಳುತ್ತವೆ. ಈ ಹಿನ್ನೆಲೆ ಈಗಿರುವ ಕಂದಾಯವನ್ನು ಪಾವತಿ ಮಾಡುವಂತೆ ನಾಗರಿಕರಿಗೆ ತಿಳಿಸಬೇಕು ಎಂದು ಸಲಹೆ ನೀಡಿದರು.

ನಗರ ಪಾಲಿಕೆಗೆ ಬಡಾವಣೆಗಳು ಸೇರ್ಪಡೆಗೊಂಡರೆ ಕಂದಾಯ ದ್ವಿಗುಣವಾಗಲಿದೆ ಎಂಬ ವಿಚಾರವನ್ನು ಕೂಡ ಅವರ ಗಮನಕ್ಕೆ ತರಬೇಕು. ಜೊತೆಗೆ ಈ ಬಗ್ಗೆ ಜನರಿಗೆ ಮಾಹಿತಿ ನೀಡಲು ಪರಿಣಾಮಕಾರಿ ಜಾಗೃತಿ ಮೂಡಿಸಬೇಕು ಎಂದು ಸೂಚನೆ ನೀಡಿದರು.

ಈಗ ಕಂದಾಯ ಉಳಿಸಿಕೊಂಡರೆ ಮುಂದೆ ನಗರ ಪಾಲಿಕೆಗೆ ಹಸ್ತಾಂತರ ಮಾಡುವ ಸಂದರ್ಭದಲ್ಲಿ ಸಮಸ್ಯೆಯಾಗಲಿದೆ ಎಂಬ ವಿಚಾರವನ್ನು ಪ್ರಮುಖವಾಗಿ ಜನರಿಗೆ ಮನವರಿಕೆ ಮಾಡಿಕೊಡಬೇಕು ಎಂದು ಜಿ.ಟಿ.ದೇವೇಗೌಡರು ತಾಕೀತು ಮಾಡಿದರು.

ಆರು ತಿಂಗಳಲ್ಲಿ ಹಳೇ ಉಂಡುವಾಡಿ ಯೋಜನೆ ಪೂರ್ಣ

ಹಳೇ ಉಂಡುವಾಡಿ ಕುಡಿಯುವ ನೀರಿನ ಯೋಜನೆಯ ಕಾಮಗಾರಿ ಇನ್ನು ಆರು ತಿಂಗಳಲ್ಲಿ ಪೂರ್ಣಗೊಳ್ಳಲಿದ್ದು, ಅಲ್ಲಿವರೆಗೆ ಕಾವೇರಿ, ಕಬಿನಿ ಜಲ ಮೂಲದಿಂದ ನೀರು ಒದಗಿಸುತ್ತಿರುವ ಪ್ರದೇಶಗಳಲ್ಲಿ ಕುಡಿಯುವ ನೀರಿನ ಸಮಸ್ಯೆ ಎದುರಾಗದಂತೆ ನೋಡಿಕೊಳ್ಳಬೇಕು ಎಂದು ಶಾಸಕ ಜಿ.ಟಿ.ದೇವೇಗೌಡರು ಅಧಿಕಾರಿಗಳಿಗೆ ಸೂಚಿಸಿದರು.

ಹಳೇ ಉಂಡುವಾಡಿ ಯೋಜನೆ ಅನುಷ್ಠಾನಗೊಂಡರೆ ಮೈಸೂರು ನಗರ ಹಾಗೂ ಸುತ್ತಮುತ್ತಲಿನ ಗ್ರಾಮಗಳಿಗೆ ದಿನದ 24 ಗಂಟೆ ಸಮರ್ಪಕ ನೀರು ದೊರೆಯಲಿದೆ ಎಂದರು.

ಈ ವೇಳೆ ಮಾತನಾಡಿದ ಕರ್ನಾಟಕ ನಗರ ನೀರು ಸರಬರಾಜು ಮತ್ತು ಒಳ ಚರಂಡಿ ಮಂಡಳಿಯ ಕಾರ್ಯಪಾಲಕ ಅಭಿಯಂತರ ಆಸೀಫ್ ಇಕ್ಬಾಲ್ ಖಲೀಲ್, 2018ರಲ್ಲಿ ಹಳೇ ಉಂಡುವಾಡಿ ಯೋಜನೆಗೆ ಅನುಮೋದನೆ ಸಿಕ್ಕಿದ್ದು, ಕಾಮಗಾರಿ ಪ್ರಗತಿಯಲ್ಲಿದೆ.


ಈ ಯೋಜನೆ ವ್ಯಾಪ್ತಿಯ 31 ಓವರ್ ಹೆಡ್ ಟ್ಯಾಂಕ್‌ಗಳಲ್ಲಿ 22ರ ಕೆಲಸ ಪೂರ್ಣಗೊಂಡಿದ್ದು, 7 ಟ್ಯಾಂಕ್ ಕಾಮಗಾರಿ ಏಪ್ರಿಲ್ ತಿಂಗಳಲ್ಲಿ ಮುಗಿಯಲಿದೆ, ಮತ್ತೆರಡು ಜೂನ್ ತಿಂಗಳಲ್ಲಿ ಪೂರ್ಣಗೊಳ್ಳಲಿದೆ ಎಂದು ಹೇಳಿದರು.

ಈ ವೇಳೆ ಮಾತನಾಡಿದ ಜಿ.ಟಿ.ದೇವೇಗೌಡರು, ಖಾಸಗಿ ಬಡಾವಣೆಗಳಿಗೂ ಕೂಡ ನೀರು ಪೂರೈಕೆ ಮಾಡಬೇಕು, ಬಡಾವಣೆಗಳಲ್ಲಿ ನಿರ್ಮಾಣ ಮಾಡಿರುವ ಓವರ್ ಹೆಡ್ ಟ್ಯಾಂಕ್‌ಗಳಿಗೆ ಸಂಪರ್ಕ ಕಲ್ಪಿಸಬೇಕು. ಎಲ್ಲೆಲ್ಲಿ ಪೈಪ್ ಲೈನ್ ಅಗತ್ಯವಿದೆ, ಯಾವ ಯಾವ ಕಡೆ ಸಂಪರ್ಕ ಕೊಡಬೇಕು, ಎಲ್ಲಿ ಮಿಸ್ಸಿಂಗ್ ಲಿಂಕ್ ಆಗಿದೆ ಎಂಬ ಬಗ್ಗೆ ಪರಿಶೀಲನೆ ನಡೆಸಬೇಕು ಎಂದು ಸೂಚಿಸಿದರು.

ಈ ಸಂಬಂಧ ನಗರ ಪಾಲಿಕೆ, ಸ್ಥಳೀಯ ಸಂಸ್ಥೆಗಳು ಹಾಗೂ ನೀರು ಸರಬರಾಜು ಮಂಡಳಿ ಅಧಿಕಾರಿಗಳು ಜಂಟಿ ಸರ್ವೆ ನಡೆಸಬೇಕು. ಖಾಸಗಿ ಬಡಾವಣೆಗಳಿಗೆ ನೀರು ಸರಬರಾಜು ಮಾಡಲು ಕ್ರಿಯಾ ಯೋಜನೆ ರೂಪಿಸಿ, ಅನುಮೋದನೆ ಪಡೆದು ಟೆಂಡರ್ ಕರೆಯಬೇಕು. ರಮ್ಮನಹಳ್ಳಿ ಪಟ್ಟಣ ಪಂಚಾಯಿತಿ ವ್ಯಾಪ್ತಿಯಲ್ಲಿ ಜಂಟಿ ಸರ್ವೆ ನಡೆಸಿ, ನಕ್ಷೆ ಕೂಡ ತಯಾರಿಸಬೇಕು ಎಂದು ತಾಕೀತು ಮಾಡಿದರು.

ವಸಂತನಗರ ಹಾಗೂ ಪೊಲೀಸ್ ಬಡಾವಣೆಗಳಿಗೆ ನೀರು ಪೂರೈಸಲು ಎದುರಾಗಿರುವ ಸಮಸ್ಯೆ ಪರಿಹಾರ ಮಾಡುವ ಕೆಲಸ ನಡೆಯುತ್ತಿದೆ. ಇದೇ ಮಾದರಿಯಲ್ಲಿ ಇತರೆಡೆ ಕೂಡ ಕ್ರಮ ಕೈಗೊಳ್ಳಬೇಕು ಎಂದು ಜಿ.ಟಿ.ದೇವೇಗೌಡರು ಅಧಿಕಾರಿಗಳಿಗೆ ತಾಕೀತು ಮಾಡಿದರು.

ಶ್ರೀ ಮಲೆ ಮಹದೇಶ್ವರಸ್ವಾಮಿ ಪಾದಯಾತ್ರಿಗಳಿಂದ ನಾಳೆ ವಿಶೇಷ ಪೂಜಾ ಕೈಂಕರ್ಯ



ಮೈಸೂರು, ಜ.3– ಮೈಸೂರಿನಿಂದ ನಾಗಮಲೆಗೆ 15ನೇ ವರ್ಷದ ಪಾದಯಾತ್ರೆ ಹಮ್ಮಿಕೊಂಡಿರುವ ಬಿ.ಎಂ.ಶ್ರೀನಗರದ ಶ್ರೀ ಮಲೆ ಮಹದೇಶ್ವರ ಸ್ವಾಮಿ ಪಾದಯಾತ್ರಿಗಳು, ಶ್ರೀ ಮಹಾಗಣಪತಿ ದೇವಸ್ಥಾನದಲ್ಲಿ ಎರಡು ದಿನ ವಿಶೇಷ ಪೂಜಾ ಕೈಂಕರ್ಯಗಳನ್ನು ಏರ್ಪಡಿಸಿದ್ದಾರೆ.

ಸೋಮವಾರ(ಜ.5) ಬೆಳಗ್ಗೆ 9ಕ್ಕೆ ಶ್ರೀ ಮಹದೇಶ್ವರ ಸ್ವಾಮಿಯ ಪೂಜೆ ಹಾಗೂ ಹೋಮ, ಮಧ್ಯಾಹ್ನ 12 ಗಂಟೆಗೆ ಪೂರ್ಣಾಹುತಿ ನಂತರ ಮಹಾಮಂಗಳಾರತಿ ಹಾಗೂ ಪ್ರಸಾದ ವಿನಿಯೋಗವಿರುತ್ತದೆ. ಅಂದು ಸಂಜೆ 5ಕ್ಕೆ ಬಡಾವಣೆಯ ಪ್ರಮುಖ ರಸ್ತೆಗಳಲ್ಲಿ ಶ್ರೀ ಮಹದೇಶ್ವರ ಸ್ವಾಮಿಯ ಹುಲಿವಾಹನ ಮೆರವಣಿಗೆ ನಂತರ ಮಹಾಮಂಗಳಾರತಿ ನೆರವೇರಲಿದೆ. ಜ.6 ಮಂಗಳವಾರ ಮಧ್ಯಾಹ್ನ 12 ಗಂಟೆಗೆ ಅನ್ನಸಂತರ್ಪಣೆ ಏರ್ಪಡಿಸಲಾಗಿದೆ ಎಂದು ಶ್ರೀ ಮಲೆ ಮಹದೇಶ್ವರ ಸೇವಾ ಸಮಿತಿಯ ಮಹದೇವ(ಟೆಂಪೋ) ತಿಳಿಸಿದ್ದಾರೆ.

ಹಾವೇರಿಯಲ್ಲಿ ಸುಂಟರಗಾಳಿಗೆ ಕುಸಿದ ಬೃಹತ್ ಪೆಂಡಾಲ್

ಸತೀಶ್ ಜಾರಕಿಹೊಳಿ ಸ್ವಲ್ಪದರಲ್ಲಿ ಪಾರು!



ಹಾವೇರಿ, ಜ.3– ಹಾವೇರಿ ಜಿಲ್ಲೆಯ ರಾಣೆಬೆನ್ನೂರು ನಗರದಲ್ಲಿ ಏಕಾಏಕಿ ಜೋರಾಗಿ ಬೀಸಿದ ಸುಂಟರಗಾಳಿಗೆ ಬೃಹತ್ ಪೆಂಡಾಲ್ ಕುಸಿದು ಬಿದ್ದಿದ್ದು, ಕಾರ್ಯಕ್ರಮ ಮುಗಿಸಿ ತೆರಳುತ್ತಿದ್ದ ಲೋಕೋಪಯೋಗಿ ಸಚಿವ ಸತೀಶ್ ಜಾರಕಿಹೊಳಿ ಅವರು ಕೂದಲೆಳೆ ಅಂತರದಲ್ಲಿ ಪ್ರಾಣಾಪಾಯದಿಂದ ಪಾರಾಗಿರುವ ಘಟನೆ ಶನಿವಾರ ನಡೆದಿದೆ.

ಅಂಬೇಡ್ಕರ್ ಕಂಚಿನ ಪ್ರತಿಮೆ ಅನಾವರಣ ಕಾರ್ಯಕ್ರಮಕ್ಕಾಗಿ ಈ ಬೃಹತ್ ಪೆಂಡಾಲ್ ಹಾಕಲಾಗಿತ್ತು. ಸಚಿವ ಸತೀಶ್ ಜಾರಕಿಹೊಳಿ ಅವರು ಕಾರ್ಯಕ್ರಮ ಮುಗಿಸಿ ಮಾಧ್ಯಮದವರೊಂದಿಗೆ ಮಾತನಾಡುತ್ತಿದ್ದ ವೇಳೆ ಜೋರಾಗಿ ಬೀಸಿದ ಸುಂಟರಗಾಳಿಗೆ ಪೆಂಡಾಲ್ ಹಾರಿ ಹೋಗಿದೆ.

ಕಾರ್ಯಕ್ರಮದಲ್ಲಿ ನೂರಾರು ಜನ ಭಾಗವಹಿಸಿದ್ದರು. ಕಾರ್ಯಕ್ರಮ ಮುಗಿಯುತ್ತಿದ್ದಂತೆ ಜನ ಹೊರ ಬಂದಿದ್ದರಿಂದ ಯಾರಿಗೂ ಯಾವುದೇ ಗಾಯಗಳಾಗಿಲ್ಲ. ಕಾರ್ಯಕ್ರಮ ನಡೆಯುವಾಗಲೇ ಕುಸಿದಿದ್ದರೆ ಹಲವು ಮಂದಿಗೆ ಗಾಯವಾಗುವ ಸಾಧ್ಯತೆ ಇತ್ತು.

ಈ ಘಟನೆಯಿಂದ ಕ್ಷಣ ಕಾಲ ವಿಚಲಿತರಾದ ಸತೀಶ್ ಜಾರಕಿಹೊಳಿ ಅವರು, ಧೂಳು ಮಿಶ್ರಿತ ಸುಂಟರಗಾಳಿಗೆ ಪೆಂಡಾಲ್ ಕುಸಿದು ಬಿದ್ದಿದೆ. ಸುಂಟರಗಾಳಿಯಿಂದ ಏನೋ ಆಗಿಲ್ಲ ಎಂದು ಹೇಳಿ ಮುಂದಿನ ಕಾರ್ಯಕ್ರಮಕ್ಕೆ ತೆರಳಿದರು.

ದೇವರಲ್ಲಿ ಕೇಳುವುದಿದ್ದರೆ ಜ್ಞಾನ, ಆರೋಗ್ಯ, ವೈರಾಗ್ಯ ಕೋರಿ

ರಾಮಕೃಷ್ಣಾಶ್ರಮದ ಸ್ವಾಮಿ ಸರ್ವಜಯಾನಂದ ಜೀ ಮಹಾರಾಜ್ ಸಲಹೆ


'ತಿಂಗಳ ತಿಳಿವು' ಕಾರ್ಯಕ್ರಮದಲ್ಲಿ ಮೈಸೂರು ರಾಮಕೃಷ್ಣಾಶ್ರಮದ ಸ್ವಾಮಿ ಸರ್ವಜಯಾನಂದ ಜೀ ಮಹಾರಾಜ್ ಪಾಲ್ಗೊಂಡು ಮಾತನಾಡಿದರು.

ಮೈಸೂರು, ಜ.3(ಎಸ್‌ಪಿಎನ್)– ಭಗವಂತನಲ್ಲಿ ಭಕ್ತಿಯಿಂದ ಕೋರಿಕೆ ಸಲ್ಲಿಸುವಾಗ, ಅಷ್ಟ –ಐಶ್ವರ್ಯ ಕೇಳುವುದಕ್ಕಿಂತ ಉತ್ತಮ ಜ್ಞಾನ, ಆರೋಗ್ಯ, ವೈರಾಗ್ಯ, ಭಗವಂತನ ಕುರಿತು ಧ್ಯಾನಿಸಲು ಅವಕಾಶ ನೀಡುವಂತೆ ಭಗವಂತನಲ್ಲಿ ಕೋರಿಕೆ ಸಲ್ಲಿಸಬೇಕು ಎಂದು ಮೈಸೂರು ರಾಮಕೃಷ್ಣಾಶ್ರಮದ ಸ್ವಾಮಿ ಸರ್ವಜಯಾನಂದ ಜೀ ಮಹಾರಾಜ್ ಅಭಿಪ್ರಾಯಪಟ್ಟರು.

ಮೈಸೂರು ರಾಮಕೃಷ್ಣನಗರದ ರಾಮಕೃಷ್ಣ ಪರಹಂಸ ವೃತ್ತದಲ್ಲಿ ಶ್ರೀ ರಾಮಕೃಷ್ಣ ಪರಮಹಂಸ ಸೇವಾ ಪ್ರತಿಷ್ಠಾನದ ವತಿಯಿಂದ ಆಯೋಜಿಸಿದ್ದ 'ತಿಂಗಳ ತಿಳಿವು' ಕಾರ್ಯಕ್ರಮದಲ್ಲಿ ಭಾಗವಹಿಸಿ ಮಾತನಾಡಿದರು.

ಖ್ಯಾತ ನಾಟಕಕಾರ ಗಿರಿಚಂದ್ರಬೋಸ್ ಅವರು, ಸಾರ್ವಜನಿಕ ಸಭೆಗಳಲ್ಲಿ ಶ್ರೀರಾಮಕೃಷ್ಣರು ಅವತಾರ ಪುರುಷರು ಎಂದು ಹೇಳುತ್ತಿದ್ದರು. ಈ ಮಾತು ಶ್ರೀರಾಮಕೃಷ್ಣರ ಕಿವಿಗೆ ಬಿದ್ದು, ಗಿರಿಚಂದ್ರಬೋಸ್ ಅವರನ್ನು ಕರೆದು, ಸಾರ್ವಜನಿಕ ಸಭೆಗಳಲ್ಲಿ ನನ್ನನ್ನು ಅತಿಯಾಗಿ ವರ್ಣಿಸುತ್ತಿದ್ದೀಯಾ ಎಂಬ ಸುದ್ದಿ ಬಂದಿದೆ ಎಂದರು.


ಮುಂದುವರೆದು, ಇಲ್ಲಿ ಅಂತಹುದಾ ಏನು ಕಂಡಿದ್ದೆ ಎಂದು (ಶ್ರೀರಾಮಕೃಷ್ಣರು) ಕೇಳುತ್ತಾರೆ. ಇದಕ್ಕೆ ಉತ್ತರಿಸಿದ ಗಿರಿಚಂದ್ರಬೋಸ್, ನಾನು ನಿಜವಾದ ಭಗವಂತನನ್ನು ಕಂಡಿಲ್ಲ. ರಾಮಾಯಣ ಮತ್ತು ಮಹಾಭಾರತ ಬರೆದ ಮಹರ್ಷಿ ವಾಲ್ಮೀಕಿ, ವ್ಯಾಸ ಮಹರ್ಷಿಗಳು ಭಗವಂತನ ಬಗ್ಗೆ ಎಲ್ಲಾ ತಿಳಿದಿದ್ದರೂ ಮಹಾಕಾವ್ಯಗಳಲ್ಲಿ ಅಷ್ಟಾಗಿ ವರ್ಣಿಸಿಲ್ಲ. ಇನ್ನು ನಾನು ಏನು ವರ್ಣಿಸಲಿ ಎಂದಿದ್ದ ಪ್ರಸಂಗವನ್ನು ವಿವರಿಸಿದರು.

ಈ ಮಾತು ಕೇಳಿದ ಶ್ರೀರಾಮಕೃಷ್ಣರು, ಸಭೆಯಲ್ಲಿದ್ದ ಜನರ ನೋಡಿ ಎಲ್ಲರಲ್ಲೂ ಚೈತನ್ಯ ಜಾಗೃತವಾಗಲಿ ಎಂದಿದ್ದರು. ಆಶ್ರಮದಲ್ಲಿದ್ದ ಬಡ ಹುಡುಗ ಉಪೇಂದ್ರನಾಥ್ ಎಂಬಾತನಿಗೆ ನಿನಗೆ ಏನು ಬೇಕು ಕೇಳು ಎಂದು ಶ್ರೀರಾಮಕೃಷ್ಣರು ಆ ಹುಡುಗನನ್ನು ಕೇಳಿದ್ದರು. ಆಗ ತೀರಾ ಬಡತನದಲ್ಲಿ ಬೆಳೆದಿದ್ದ ಅವನಿಗೆ ಐಶ್ವರ್ಯ ಕೊಡಿ ಎಂದು ಬೇಡಿಕೆಯಿಟ್ಟ, ಸ್ವಲ್ಪ ದಿನಗಳಲ್ಲಿ ಆತನ ಕೋರಿಕೆಯಂತೆ ಹಣ ಗಳಿಸಲು ಪ್ರಾರಂಭಿಸಿದ ಪ್ರಸಂಗವನ್ನು ವಿವರಿಸಿದರು.

ಶ್ರೀರಾಮಕೃಷ್ಣರು ತಮ್ಮ ಜೀವಿತಾವಧಿಯಲ್ಲಿ ಮಾತೆ ಶಾರದಾದೇವಿ ಅವರನ್ನು ಸಾಕ್ಷಾತ್ ಮಾತೃ ಸ್ವರೂಪಿಣಿಯಾಗಿ ಕಂಡಿದ್ದರು. ಶಾರದಾ ಮಾತೆ ಅವರನ್ನು ಎಂದಿಗೂ ಏಕವಚನದಲ್ಲಿ ಕರೆದಿಲ್ಲ. ಅವರಿಬ್ಬರು ಭಗವಂತನ ಸೇವೆಯಲ್ಲಿ ತೊಡಗಿಸಿಕೊಂಡು ಸಾಕ್ಷಾತ್ ದೈವ ಸ್ವರೂಪಿಯಾಗಿ ಕಾಣಿಸಿಕೊಂಡರು ಎಂದರು.

ವೇದಿಕೆಯಲ್ಲಿ ಶ್ರೀರಾಮಕೃಷ್ಣ ಪರಮಹಂಸ ಸೇವಾ ಪ್ರತಿಷ್ಠಾನದ ಕಾರ್ಯಾಧ್ಯಕ್ಷ ಡಾ.ಎಸ್.ಪಿ.ಯೋಗಣ್ಣ, ಕಾರ್ಯದರ್ಶಿ ಕೆಂಪಲಿಂಗರಾಜು, ಸಂಚಾಲಕ ಪ್ರೊ.ಜಿ.ಚಂದ್ರಶೇಖರ್, ಖಜಾಂಚಿ ಎಸ್. ಪುರುಷೋತ್ತಮ್ ಇದ್ದರು. ವೇದಿಕೆ ಕಾರ್ಯಕ್ರಮಕ್ಕೂ ಮುನ್ನ ಗಾಯಕ ರಮೇಶ್ ಮತ್ತು ಡಿ.ಬಿ. ಗೋಪಿನಾಥ್ ತಂಡದಿಂದ ಭಜನೆ, ವಚನ ವೇದ ಹಾಡಿದರು. ಗಾಯಕ ಆರ್.ಕೃಷ್ಣಮೂರ್ತಿ, ಗಾಯಕಿ ಅನುಪಮಾ ಹಾಡಿ ಪ್ರೇಕ್ಷಕರನ್ನು ರಂಜಿಸಿದರು.

ಇಂದು ವಿವೇಕಾನಂದ ಜಯಂತಿ ಪ್ರಯುಕ್ತ ಸ್ಪರ್ಧೆ



ಮೈಸೂರು, ಜ.3–ವಿವೇಕಾನಂದ ಕೇಂದ್ರ ಕನ್ಯಾಕುಮಾರಿ, ಮೈಸೂರು ಶಾಖೆಯಲ್ಲಿ ವಿವೇಕಾನಂದ ಜಯಂತಿಯ ಅಂಗವಾಗಿ ಜ.4ರಂದು ಬೆಳಗ್ಗೆ 10 ಗಂಟೆಗೆ ದೇಶಭಕ್ತಿಗೀತೆ, ಚಿತ್ರಕಲೆ, ಸ್ವಾಮಿ ವಿವೇಕಾನಂದರ ನುಡಿಮುತ್ತು, ಸ್ವಾಮಿ ವಿವೇಕಾ ನಂದರ ವೇಷ ಸ್ಪರ್ಧೆ, ಪ್ರಬಂಧ, ಭಗವದ್ಗೀತಾ ಕಂಠಪಾಠ ಸ್ಪರ್ಧೆ ಆಯೋಜಿಸಲಾಗಿದೆ. ಹೆಚ್ಚಿನ ವಿವರಗಳಿಗೆ ಮೊ. 9449488228 ಸಂಪರ್ಕಿಸಬಹುದು.

ಅಂಬಾ ದೇವಿಯ ದರ್ಶನ ಆಗಿದ್ದು ನನ್ನ ಪುಣ್ಯ: ಸಿಎಂ ಸಿದ್ದರಾಮಯ್ಯ


ರಾಯಚೂರು ಜಿಲ್ಲೆಯ ಸಿಂಧನೂರು ತಾಲೂಕಿನ ಅಂಬಾಮಠ ದಲ್ಲಿ ಆಯೋಜಿಸಿದ್ದ ಅಂಬಾ ಮಹೋತ್ಸವ –2026 ಕ್ಕೆ ಸಿಎಂ ಸಿದ್ದರಾಮಯ್ಯ ಅವರು ಚಾಲನೆ ನೀಡಿದರು.

ರಾಯಚೂರು, ಜ.3– ಮೊದಲ ಬಾರಿಗೆ ಅಂಬಾ ಜಾತ್ರಾ ಮಹೋತ್ಸವದಲ್ಲಿ ಭಾಗವಹಿಸುತ್ತಿದ್ದು, ತಾಯಿಯ ದರ್ಶನವಾಗಿದ್ದು ನನ್ನ ಪುಣ್ಯ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಶನಿವಾರ ಹೇಳಿದ್ದಾರೆ.

ಇಂದು ರಾಯಚೂರು ಜಿಲ್ಲೆಯ ಸಿಂಧನೂರು ತಾಲೂಕಿನ ಅಂಬಾಮಠದಲ್ಲಿ ಆಯೋಜಿಸಿದ್ದ ಅಂಬಾ ಮಹೋತ್ಸವ –2026 ಕ್ಕೆ ಸಿಎಂ ಸಿದ್ದರಾಮಯ್ಯ ಅವರು ಚಾಲನೆ ನೀಡಿದರು. ಅಲ್ಲದೆ ಸಿಂಧನೂರು ವಿಧಾನಸಭಾ ಕ್ಷೇತ್ರದ ಸಾಲಗುಂದಾ ಏತ ನೀರಾವರಿ, ಮುಳ್ಳೂರು ಏತ ನೀರಾವರಿ ಮತ್ತು ಒಳಬಳ್ಳಾರಿ ವಿಯರ್ ಕಾಮಗಾರಿಗಳಿಗೆ ಚಾಲನೆ ನೀಡಿದರು.

ನಮ್ಮ ಸರ್ಕಾರದಲ್ಲಿ ಅಭಿವೃದ್ಧಿ ಕಾರ್ಯಗಳಿಗೆ ಹಣವಿಲ್ಲ ಎನ್ನುವುದು ಅಪ್ಪಟ ಸುಳ್ಳು. ಗ್ಯಾರಂಟಿ ಯೋಜನೆಗಳಿಂದ ಅಭಿವೃದ್ಧಿ ಕೆಲಸಗಳಿಗೆ ತಡೆ ಉಂಟಾಗಿಲ್ಲ. ಗ್ಯಾರಂಟಿಗಳಿಗೆ ಒಂದು ಲಕ್ಷದ 12 ಸಾವಿರ ಕೋಟಿ ರೂ. ಗಳನ್ನು ವೆಚ್ಚ ಮಾಡಲಾಗಿದೆ. ಶಕ್ತಿ ಯೋಜನೆಯಡಿ 643 ಕೋಟಿ ಬಾರಿ ಮಹಿಳೆಯರು ಉಚಿತವಾಗಿ ಬಸ್ಸುಗಳಲ್ಲಿ ಪ್ರಯಾಣ ಮಾಡಿದ್ದಾರೆ. ಇದಕ್ಕಾಗಿ ಸುಮಾರು 16 ಸಾವಿರ ಕೋಟಿ ವೆಚ್ಚವಾಗಿದೆ. 52,000 ಕೋಟಿಗಳನ್ನು ಈ ವರ್ಷ ವೆಚ್ಚ ಮಾಡಲಾಗಿದೆ ಎಂದರು.

ಮನ್‌ರೇಗಾ ಯೋಜನೆಗೆ 6,000 ಕೋಟಿಗಳನ್ನು ಪ್ರತಿ ವರ್ಷ ಖರ್ಚು ಮಾಡಲಾಗುತ್ತಿತ್ತು. ಆದರೆ ಕೇಂದ್ರದವರು ಈಗ ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಕಾಯ್ದೆ(ಮ–ನರೇಗಾ) ಯೋಜನೆಯನ್ನು ಬದಲಾಯಿಸಿ ವಿಬಿ ಜಿ ರಾಮ್ ಜಿ ಕಾಯ್ದೆಯನ್ನು ಜಾರಿ ಮಾಡಿದ್ದಾರೆ. ಬಡವರು, ಮಹಿಳೆಯರು, ದಲಿತರು, ಸಣ್ಣ ರೈತರಿಗೆ ತೀವ್ರ ತೊಡಕುಂಟು ಮಾಡುವ ಈ ಹೊಸ ಕಾಯ್ದೆಯನ್ನು ರಾಜ್ಯ ಸರ್ಕಾರ ತೀವ್ರವಾಗಿ ಖಂಡಿಸುತ್ತದೆ.

ವಿಬಿ ಜಿ ರಾಮ್ ಜಿ ಕಾನೂನನ್ನು ರದ್ದು ಮಾಡಿ, ಮನರೇಗಾ ಕಾನೂನು ಪುನರ್ ಸ್ಥಾಪನೆಯಾಗಬೇಕೆಂಬುದೇ ನಮ್ಮ ಉದ್ದೇಶ. ಈ ಕಾನೂನಿನ ಸ್ವರೂಪವನ್ನೇ ಬದಲಾಯಿಸಲಾಗಿದೆ. ಹಿಂದಿನ ಕಾಯ್ದೆ ಪ್ರಕಾರ ಕೇಂದ್ರ ಸರ್ಕಾರ ಪೂರ್ಣ ಅನುದಾನವನ್ನು ಭರಿಸುತ್ತಿತ್ತು. ಆದರೆ ಈಗ ಕೇಂದ್ರವು ಶೇ.60ರಷ್ಟು ಹಾಗೂ ರಾಜ್ಯ ಸರ್ಕಾರ ಶೇ.40ರಷ್ಟು ಅನುದಾನ ಭರಿಸಬೇಕೆಂಬ ಹೊಸ ನಿಯಮ ತಂದಿರುವುದು ಒಕ್ಕೂಟ ನಿಯಮಕ್ಕೆ ವಿರುದ್ಧ. ಮಾಜಿ ಪ್ರಧಾನಿ ಮನಮೋಹನ್ ಸಿಂಗ್ ಅವರು ಜಾರಿಗೊಳಿಸಿದ್ದ, ಜನಪರವಾಗಿದ್ದ ಮನರೇಗಾ ಕಾನೂನನ್ನು 20 ವರ್ಷಗಳ ನಂತರ ಪ್ರಧಾನಿ ಮೋದಿಯವರು ಹೆಸರು ಬದಲಿಸಿ ವಿಬಿ ಜಿ ರಾಮ್ ಜಿ ಎಂದು ನಾಮಕರಣ ಮಾಡಿದ್ದಾರೆ. ಕೇಂದ್ರದ ಈ ಕ್ರಮವನ್ನು ರಾಜ್ಯದ ಜನರೆಲ್ಲರೂ ಒಕ್ಕೊರಲಿನಿಂದ ವಿರೋಧಿಸಬೇಕು ಎಂದು ಕರೆ ನೀಡಿದರು.

ಲಿಂಗತ್ವ ಅಲ್ಪಸಂಖ್ಯಾತರಿಗೆ ಕಾಂಗ್ರೆಸ್‌ನಿಂದ ಉಚಿತ ಜೀವವಿಮೆ ಬಾಂಡ್ ವಿತರಣೆ

ಜಿಲ್ಲಾ ಪ್ರಚಾರ ಸಮಿತಿ ಪದಾಧಿಕಾರಿಗಳ ನೇಮಕ


ಮಾಜಿ ಸಚಿವ ವಿನಯ್ ಕುಮಾರ್ ಸೊರಕೆ ಉಚಿತ ಜೀವ ವಿಮೆ ಬಾಂಡ್ ವಿತರಣೆ ಹಾಗೂ ಜಿಲ್ಲಾ ಪ್ರಚಾರ ಪದಾಧಿಕಾರಿಗಳ ನೇಮಕ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದರು.

ಮೈಸೂರು, ಜ.3(ವಿವಿಹೆಚ್)– ಲಿಂಗತ್ವ ಅಲ್ಪಸಂಖ್ಯಾತರ ಕಷ್ಟಗಳಿಗೆ ಸ್ಪಂದಿಸುವ ನಿಟ್ಟಿನಲ್ಲಿ ಆಯೋಜನೆಯಾಗಿರುವ ಉಚಿತ ಜೀವವಿಮೆ ಬಾಂಡ್ ವಿತರಣೆ ಕಾರ್ಯಕ್ರಮವನ್ನು ಮೈಸೂರು ಮಾತ್ರವಲ್ಲ, ಪ್ರಚಾರ ಸಮಿತಿಯ ಮೂಲಕ ಇಡೀ ಕರ್ನಾಟಕದಲ್ಲಿ ಕಾರ್ಯರೂಪಕ್ಕೆ ತರಲಾಗುವುದು. ಇದಕ್ಕೆ ಮೈಸೂರೇ ನಮಗೆ ದಾರಿದೀಪವಾಗಿದೆ ಎಂದು ಕಾಂಗ್ರೆಸ್ ಪ್ರಚಾರ ಸಮಿತಿ ಅಧ್ಯಕ್ಷರೂ ಆದ ಮಾಜಿ ಸಚಿವ ವಿನಯ್ ಕುಮಾರ್ ಸೊರಕೆ ತಿಳಿಸಿದರು.

ನಗರದ ಜಿಲ್ಲಾ ಕಾಂಗ್ರೆಸ್ ಭವನದಲ್ಲಿ ಮೈಸೂರು ಜಿಲ್ಲಾ ಕಾಂಗ್ರೆಸ್ ಪ್ರಚಾರ ಸಮಿತಿ ವತಿಯಿಂದ ಶನಿವಾರ ಆಯೋಜಿಸಲಾಗಿದ್ದ ಲಿಂಗತ್ವ ಅಲ್ಪಸಂಖ್ಯಾತರಿಗೆ 3ನೇ ಹಂತದ ಉಚಿತ ಜೀವ ವಿಮೆ ಬಾಂಡ್ ವಿತರಣೆ ಹಾಗೂ ಜಿಲ್ಲಾ ಪ್ರಚಾರ ಪದಾಧಿಕಾರಿಗಳ ನೇಮಕ ಕಾರ್ಯಕ್ರಮ ಉದ್ಘಾಟಿಸಿ ಅವರು ಮಾತನಾಡಿದರು.

ಲಿಂಗತ್ವ ಅಲ್ಪಸಂಖ್ಯಾತರನ್ನು ಸಮಾಜದಲ್ಲಿ ಬೇರ್ಪಡಿಸದೇ, ಸಮಾಜದಲ್ಲಿ ನಮ್ಮೊಟ್ಟಿಗೆ ಕೊಂಡೊಯ್ಯಬೇಕಿದೆ. ಈ ಪ್ರಜ್ಞಾವಂತ ಮನಸ್ಥಿತಿ ಹೆಚ್ಚು ಬೆಳೆಸಿಕೊಳ್ಳುವ ಅವಶ್ಯಕತೆಯಿದೆ. ಸಮಾಜದಲ್ಲಿ ಯಾವುದೇ ಲಿಂಗಭೇದವಿಲ್ಲದೇ ಸಮಾನತೆಗಾಗಿ, ಸಮಾಜಮುಖಿಗಾಗಿ ಲಿಂಗತ್ವ ಅಲ್ಪಸಂಖ್ಯಾತರ ಮಹಿಳೆಯರಿಗಾಗಿ ಮೊಟ್ಟ ಮೊದಲ ಬಾರಿಗೆ ಮೈಸೂರಿನಲ್ಲಿ ಸಮಿತಿ ವತಿಯಿಂದ ಜೀವವಿಮೆ ನೀಡುತ್ತಿರುವುದು ಶ್ಲಾಘನೀಯ ಎಂದರು.

ಕಾಂಗ್ರೆಸ್ ಬಾಬಾ ಸಾಹೇಬರು ಮತ್ತು ಅವರು ಕೊಟ್ಟ ಸಂವಿಧಾನದ ಆಶಯಗಳನ್ನು ಈಡೇರಿಸುವ ಕೆಲಸ ಮಾಡುತ್ತಿದೆ. ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಸಮುದಾಯದೊಂದಿಗೆ ವಿಶೇಷ ಸಭೆ ಕರೆದು ಅವರ ಕಷ್ಟಗಳಿಗೆ ಸ್ಪಂದಿಸುವುದಾಗಿಯೂ ಹೇಳಿದ್ದಾರೆ ಇದಕ್ಕೆ ಪೂರಕ ಎಂಬಂತೆ ತೃತೀಯ ಲಿಂಗಿಗಳ ಸಮುದಾಯ ಅಭಿವೃದ್ಧಿ ಮಾಡುವ ಉದ್ದೇಶವನ್ನು ಕಾಂಗ್ರೆಸ್ ಹೊಂದಿದೆ ಎಂದರು.

ಗ್ಯಾರಂಟಿ ವಿರುದ್ಧ ಟೀಕೆಗಳೂ ಇನ್ನೂ ನಿಂತಿಲ್ಲ: ಕಾಂಗ್ರೆಸ್ ಸರ್ಕಾರದ ಪಂಚ ಗ್ಯಾರಂಟಿ ಯೋಜನೆ ಬಡವರ, ಹಿಂದುಳಿದವರ, ಶೋಷಿತರಿಗೆ ತಲುಪಿದೆ. ಅಭಿವೃದ್ಧಿ ಪೂರಕವಾದ ಈ ಯೋಜನೆ ಮೇಲೆ ಪ್ರತಿಪಕ್ಷಗಳು, ಇತರೆ ಜನರಿಂದ ವ್ಯಾಪಕ ಟೀಕೆಗೆ ಒಳಗಾಯಿತು. ಆದರೆ ಅದರ ಪ್ರಯೋಜನಗಳ ಬಗ್ಗೆ ನಿರೀಕ್ಷಿತ ಚರ್ಚೆಗಳಾಗಲೀ, ಬೆಂಬಲವಾಗಲೀ ಸಿಗಲಿಲ್ಲ ಎಂದು ಬೇಸರಿಸಿದರು.

ಕೇಂದ್ರ ಸರ್ಕಾರ ಮನುಸ್ಮೃತಿ ಆಧಾರದಲ್ಲಿ ಆಡಳಿತ ನಡೆಸುತ್ತಿದೆ. ಜಾತಿ, ಧರ್ಮದ ಹೆಸರಿನಲ್ಲಿ ಸಮಾಜದಲ್ಲಿ ಕಂದಕಗಳನ್ನು ಸೃಷ್ಟಿ ಮಾಡಿ, ಸಮಾಜ ಮತ್ತು ಜನರ ಮಧ್ಯೆ ಗೋಡೆ ನಿರ್ಮಿಸುವ ಕೆಲಸ ಮಾಡುತ್ತಿದೆ. ಆದರೆ ಕಾಂಗ್ರೆಸ್ ಪಕ್ಷ ಬಾಬಾ ಸಾಹೇಬ್ ಅಂಬೇಡ್ಕರ್ ಅವರ ಸಂವಿಧಾನದ ಆಶಯದಡಿಯಲ್ಲಿ ಸಮ ಸಮಾಜ ನಿರ್ಮಾಣದ ಜವಾಬ್ದಾರಿಯನ್ನು ನಿಭಾಯಿಸುತ್ತಿದೆ ಎಂದು ವಿವರಿಸಿದರು.

ಮಾಜಿ ಸಚಿವ ಕೋಟೆ ಎಂ.ಶಿವಣ್ಣ ಮಾತನಾಡಿ, ಪಕ್ಷವೊಂದು ರಾಜ್ಯವಾಗಲಿ ಅಥವಾ ಕೇಂದ್ರದಲ್ಲಾಗಲಿ ಅಧಿಕಾರ ಹಿಡಿಯಲು ಪ್ರಚಾರ ಸಮಿತಿ ಪಾತ್ರ ಬಹಳ ಮುಖ್ಯ. ಅವರ ಕಾರ್ಯ ವೈಖರಿ ಪಕ್ಷ ಸಂಘಟನೆ, ಆಡಳಿತಕ್ಕೆ ಸಹಕಾರಿಯಾಗಲಿದೆ. ಈ ಪ್ರಚಾರ ಸಮಿತಿ ವತಿಯಿಂದ ಲಿಂಗತ್ವಅಲ್ಪಸಂಖ್ಯಾತರಿಗೆ ಜೀವ ವಿಮೆ ಬಾಂಡ್ ನೀಡುವ ಕೆಲಸ ಮಾಡುತ್ತಿರುವುದು ಮೆಚ್ಚುಗೆ ಸಂಗತಿ. ಇದು ಜಿಲ್ಲೆ ಮೀರಿ ರಾಜ್ಯಾದ್ಯಂತ ವ್ಯಾಪಿಸಬೇಕು ಎಂದು ಆಶಿಸಿದರು.

ಮೈಸೂರು ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷ ಡಾ.ಬಿ.ಜೆ.ವಿಜಯ್ ಕುಮಾರ್ ಮಾತನಾಡಿ, ಮೈಸೂರು ಜಿಲ್ಲಾ ಕಾಂಗ್ರೆಸ್ ಸಮಿತಿ ಹಾಗೂ ಪ್ರಚಾರ ಸಮಿತಿ ಜತೆಗೂಡಿ, ಈವರೆಗೂ 500 ಲಿಂಗತ್ವ ಅಲ್ಪಸಂಖ್ಯಾತ ಮಹಿಳೆಯರಿಗೆ 3 ಹಂತದಲ್ಲಿ ಜೀವವಿಮೆ ಬಾಂಡ್ ನೀಡಿದ್ದೇವೆ. ಇದರ ಸಂಪೂರ್ಣ ಹಣವನ್ನು ಸಮಿತಿಯೇ ಭರಿಸುತ್ತಿದೆ. ಈ ಬಾಂಡ್ ಮೂಲಕ ಯಾವುದೇ ಆಸ್ಪತ್ರೆಗಳಲ್ಲೂ 2 ಲಕ್ಷದವರೆಗೂ ಚಿಕಿತ್ಸೆ ಪಡೆಯಬಹುದು ಎಂದು ಮಾಹಿತಿ ನೀಡಿದರು.

ಇನ್ನು ಸಿಎಂ ಸಿದ್ದರಾಮಯ್ಯ ಅವರು ಎರಡನೇ ಅವಧಿಗೆ ಮುಖ್ಯಮಂತ್ರಿಯಾಗಿ ಎರಡೂವರೆ ವರ್ಷ ಪೂರೈಸಿದ್ದು, 7 ವರ್ಷ 240 ದಿನ ಪೂರೈಸಿ ಕರ್ನಾಟಕ ಇತಿಹಾಸದಲ್ಲಿ ದೀರ್ಘಾವಧಿ ಸಿಎಂ ಎಂಬ ದಾಖಲೆ ಬರೆಯುತ್ತಿದ್ದಾರೆ. ಆ ಮೂಲಕ ಈ ಹಿಂದೆ ಇದ್ದ ದೇವರಾಜ ಅರಸು ಅವರ ದಾಖಲೆಯನ್ನು ಸರಿಗಟ್ಟಿದ್ದಾರೆ ಎಂದೂ ತಿಳಿಸಿದರು.

ಮೈಸೂರು–ಚಾಮರಾಜನಗರ ಜಿಲ್ಲಾ ಸಹಕಾರ ಕೇಂದ್ರ ಬ್ಯಾಂಕ್ ಅಧ್ಯಕ್ಷ ದೊಡ್ಡಸ್ವಾಮಿಗೌಡ, ಮೈಸೂರು ಗ್ರಾಮಾಂತರ ಜಿಲ್ಲಾ ಕಾಂಗ್ರೆಸ್ ಸಮಿತಿ ಉಪಾಧ್ಯಕ್ಷ ಎಡತಲೆ ಮಂಜುನಾಥ್, ಪ್ರಧಾನ ಕಾರ್ಯದರ್ಶಿ ಶಿವಪ್ರಸಾದ್, ಮೈಸೂರು ನಗರ ಕಾಂಗ್ರೆಸ್ ಎಸ್‌ಸಿ ಘಟಕ ಅಧ್ಯಕ್ಷ ರಮೇಶ್, ಜಿಲ್ಲಾ ಕಾಂಗ್ರೆಸ್ ಸಮಿತಿ ಉಪಾಧ್ಯಕ್ಷ ನಾಗರಾಜು, ಲಿಂಗತ್ವ ಅಲ್ಪಸಂಖ್ಯಾತರ ಸಂಘದ ಜಿಲ್ಲಾಧ್ಯಕ್ಷೆ ಪ್ರಣತಿ ಪ್ರಕಾಶ್ ಉಪಸ್ಥಿತರಿದ್ದರು.

ವಾರ್ಷಿಕ ನಿಧಿ ಸಂಗ್ರಹಣೆ ಕಾರ್ಯಕ್ರಮ



ಮೈಸೂರಿನ ವಿಜಯನಗರದ ಜಗನ್ನಾಥ ಸೆಂಟ್ ಫಾರ್ ಆರ್ಟ್ ಅಂಡ್ ಕಲ್ಚರ್ ಸಭಾಂಗಣದಲ್ಲಿ ಲಯನ್ಸ್ ಕ್ಲಬ್ ಆಫ್ ಮೈಸೂರು ವೆಸ್ಟ್ (LCMW)ನ ಪ್ರಾಜೆಕ್ಟ್ ಕೇರ್ ಸ್ಮರಣಾರ್ಥ ಆಯೋಜಿಸಲಾಗಿದ್ದ ವಾರ್ಷಿಕ ನಿಧಿ ಸಂಗ್ರಹಣೆ ಕಾರ್ಯಕ್ರಮವನ್ನು ಉದ್ಯಮಿ ಡಾ. ಜಗನ್ನಾಥ್ ಶೆಣೈ ಉದ್ಘಾಟಿಸಿದರು. ಈ ವೇಳೆ ಕ್ಲಬ್ ಅಧ್ಯಕ್ಷ ನೀರು ಮೆಹ್ತಾ, ಖಜಾಂಚಿ ಎಲ್.ಎನ್.ರಾಮ ರಾಘವನ್, ಕಾರ್ಯದರ್ಶಿ ಕೀರ್ತಿವನ್ ಕೋಟಿಯ, ಕುಸುಮಾ ಶೆಣೈ ಉಪಸ್ಥಿತರಿದ್ದರು.


ಮೆಡಿಕೊ ಮೆಲೋಡೀಸ್, ಡಾ. ಸೋಮನಾಥ್ ವಾಸುದೇವ ಮತ್ತು ತಂಡದವರಿಂದ (ಡಾ.ನಟಶೇಖರ್, ಡಾ.ಕುಶಾಲಪ್ಪ, ಡಾ.ಅಪೂರ್ವ ನಟಶೇಖರ್, ಡಾ.ಸೀತಾ ಲಕ್ಷ್ಮೀ ಸೋಮನಾಥ್ ಹಾಗೂ ಡಾ.ಅಮೂಲ್ಯ ಉಪಾಧ್ಯಾಯ) ಸಂಗೀತ ಸಂಜೆ ಕಾರ್ಯಕ್ರಮ ನಡೆಯಿತು. ಇದರೊಂದಿಗೆ ಮಕ್ಕಳ ಕ್ಯಾನ್ಸರ್ ಜಾಗೃತಿ ನಡಿಗೆ, ಗೋಕುಲಂನ ಸೇವಾನಿಕೇತನ್ ಶಾಲೆಯಲ್ಲಿ ವೈದ್ಯಕೀಯ ವೃತ್ತಿಪರರಿಂದ ಉಚಿತ ಆರೋಗ್ಯ ತಪಾಸಣೆ ಕಾರ್ಯಕ್ರಮಗಳು ನಡೆದವು.

ಮೈಸೂರು ಮಿತ್ರ ಭಾನುವಾರ 4 ಜನವರಿ 2026

ಚಿನಕುರಳಿಯಲ್ಲಿ ಅಭಯ ಆಂಜನೇಯ ಸ್ವಾಮಿಯ ಅದ್ದೂರಿ ಉತ್ಸವ

ಚಿನಕುರಳಿ: ಚಿನಕುರಳಿ ಗ್ರಾಮದಲ್ಲಿ ಅಭಯ ಆಂಜನೇಯ ಸ್ವಾಮಿಯ 11ನೇ ವರ್ಷದ ಹನುಮ ಉತ್ಸವವನ್ನು ಶುಕ್ರವಾರ ರಾತ್ರಿ ಅದ್ದೂರಿಯಾಗಿ ನಡೆಸಲಾಯಿತು.

ಗ್ರಾಮದ ರಂಗಬಾಯ್ಸ್ ಹಾಗೂ ಗ್ರಾಮಸ್ಥರ ವತಿಯಿಂದ ನಡೆದ ಹನುಮ ಉತ್ಸವದ ಅಂಗವಾಗಿ ಶುಕ್ರವಾರ ರಾತ್ರಿ ಅಭಯ ಆಂಜನೇಯಸ್ವಾಮಿ ದೇವಸ್ಥಾನದಲ್ಲಿ ದೇವರಿಗೆ ಪೂಜೆ ಸಲ್ಲಿಸಿ ಬಳಿಕ ವಿವಿಧ ಕಲಾತಂಡಗಳೊಂದಿಗೆ ಗ್ರಾಮದ ಪ್ರಮುಖ ಬೀದಿಗಳಲ್ಲಿ ಮೆರವಣಿಗೆ ನಡೆಸಲಾಯಿತು. ಮೆರವಣಿಗೆಯಲ್ಲಿ ಎತ್ತುಗಳು, ವಿವಿಧ ಕಲಾತಂಡ, ಈಶ್ವರ ಹಾಗೂ ವೀರಗಾಸೆ ವೇಷಧಾರಿ ಕಲಾವಿದರು ಭಾಗವಹಿಸಿ ಉತ್ಸವಕ್ಕೆ ಮೆರಗು ನೀಡಿದರು.

ಶನಿವಾರ ಬೆಳಿಗ್ಗೆ ಭಕ್ತರು, ಸಾರ್ವಜನಿಕರು ಅಭಯ ಆಂಜನೇಯ ಸ್ವಾಮಿ ದೇವಸ್ಥಾನಕ್ಕೆ ತೆರಳಿ ದೇವರಿಗೆ ವಿಶೇಷ ಪೂಜೆ ಸಲ್ಲಿಸಿದರು. ನಂತರ ದೇವಸ್ಥಾನದ ಬಳಿ 5 ಸಾವಿರಕ್ಕೂ ಅಧಿಕ ಭಕ್ತರಿಗೆ ಅನ್ನ ಸಂತರ್ಪಣೆ ಕಾರ್ಯಕ್ರಮ ನಡೆಸಿದರು. ಮನ್‌ಮುಲ್ ನಿರ್ದೇಶಕ ಸಿ.ಶಿವಕುಮಾರ್, ಜಿಪಂ ಮಾಜಿ ಸದಸ್ಯರಾದ ನಾಗಮ್ಮ ಪುಟ್ಟರಾಜು, ಸಿ.ಅಶೋಕ್ ಸೇರಿದಂತೆ ಅನೇಕ ಗಣ್ಯರು ಭಾಗವಹಿಸಿ ದೇವರಿಗೆ ಪೂಜೆಸಲ್ಲಿದರು. ಇದೇವೇಳೆ ರಂಗಬಾಯ್ಸ್ ಸಮಿತಿ ವತಿಯಿಂದ ಇವರನ್ನು ಅಭಿನಂದಿಸಲಾಯಿತು.



ಅಭಯ ಆಂಜನೇಯಸ್ವಾಮಿಯ ಹನುಮ ಉತ್ಸವದ ಅಂಗವಾಗಿ ಆಂಜನೇಯ ಸ್ವಾಮಿಯನ್ನು ಬಗೆಬಗೆಯ ಹೂವುಗಳಿಂದ ಅಲಂಕರಿಸಿರುವುದು.

ಬಾಲಕಾರ್ಮಿಕ ಪದ್ಧತಿ ನಿರ್ಮೂಲನೆ ಪ್ರತಿಯೊಬ್ಬರ ಕರ್ತವ್ಯ

ಮಂಡ್ಯ, ಜ.3– ಬಾಲಕಾರ್ಮಿಕ ಪದ್ಧತಿಯನ್ನು ಹೋಗಲಾಡಿಸುವುದು ಪ್ರತಿಯೊಬ್ಬ ನಾಗರೀಕರ ಜವಾಬ್ದಾರಿ ಮತ್ತು ಹೊಣೆಗಾರಿಕೆ. ಎನ್ ಫೋರ್ಸ್ ಅಧಿಕಾರಿಗಳು ತಾವು ದಿನನಿತ್ಯ ಓಡಾಡುವ ಜಾಗಗಳಲ್ಲಿ ಸೂಕ್ಷ್ಮವಾಗಿ ಪರಿಶೀಲನೆ ನಡೆಸಿ ಬಾಲಕಾರ್ಮಿಕರನ್ನು ಪತ್ತೆ ಹಚ್ಚಬೇಕು ಎಂದು ಜಿಲ್ಲಾಧಿಕಾರಿ ಡಾ.ಕುಮಾರ ಹೇಳಿದರು.

ನಗರದ ಜಿಲ್ಲಾಧಿಕಾರಿಗಳ ಕಚೇರಿಯಲ್ಲಿ ನಡೆದ ಬಾಲ ಕಾರ್ಮಿಕ ಹಾಗೂ ಕಿಶೋರ ಕಾರ್ಮಿಕ ಕಾಯ್ದೆ 1986, ನಿಯಮಗಳು 2017 (ಕೇಂದ್ರ/ರಾಜ್ಯ)ಗಳ ಕುರಿತು ಬಾಲ ಕಾರ್ಮಿಕ ಹಾಗೂ ಕಿಶೋರ ಕಾರ್ಮಿಕ(ನಿಷೇಧ ಮತ್ತು ನಿಯಂತ್ರಂ) ಕಾಯ್ದೆ, 1986ರ ತರಬೇತಿ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಮಾತನಾಡಿದ ಅವರು, ಬಾಲಕಾರ್ಮಿಕ ಪದ್ಧತಿಯನ್ನು ಕೇವಲ ಅನಿಷ್ಟ ಪದ್ಧತಿ ಎಂದು ಪರಿಗಣಿಸಿದರೆ ಸಾಲದು ಸದರಿ ಪದ್ಧತಿಯನ್ನು ಹೋಗಲಾಡಿಸಲು ಸೂಕ್ತ ಕ್ರಮವನ್ನು ವಹಿಸಬೇಕು. ಬಾಲಕಾರ್ಮಿಕ ಪದ್ಧತಿಯನ್ನು ನಿರ್ಮೂಲನೆ ಮಾಡುವಲ್ಲಿ ಅಧಿಕಾರಿಗಳಷ್ಟೇ ಹೊಣೆಗಾರಿಕೆಯಲ್ಲ ಸಾರ್ವಜನಿಕರುದ್ದು ಆಗಿರುತ್ತದೆ. ಅಧಿಕಾರಿಗಳು ಮತ್ತು ಸಾರ್ವಜನಿಕರು ಬದ್ಧತೆ ಮತ್ತು ಪರಿಪಕ್ವತೆಯಿಂದ ಕಾರ್ಯನಿರ್ವಹಿಸಿದರೆ ಬಾಲ ಕಾರ್ಮಿಕ ಪದ್ಧತಿಯನ್ನು ಹೋಗಲಾಡಿಸಬಹುದು ಎಂದು ಹೇಳಿದರು.



ಜಿಲ್ಲಾಧಿಕಾರಿ ಡಾ.ಕುಮಾರ್ ತಮ್ಮ ಕಚೇರಿಯಲ್ಲಿ ನಡೆದ ಸಭೆಯಲ್ಲಿ ಮಾತನಾಡುತ್ತಿರುವುದು.

ಸದರಿ ವರ್ಷ ಜಿಲ್ಲೆಯಲ್ಲಿ 35ಕ್ಕೂ ಹೆಚ್ಚು ಬಾಲ ಕಾರ್ಮಿಕರನ್ನು ರಕ್ಷಿಸಲಾಗಿದೆ ಹಾಗೂ ಎಂಟು ಪ್ರಕರಣಗಳಲ್ಲಿ ಎಫ್ ಐ ಆರ್ ದಾಖಲಿಸಲಾಗಿದೆ. ಬಾಲಕಾರ್ಮಿಕರ ಪ್ರಕರಣಗಳ ಸಂಖ್ಯೆ ಕಡಿಮೆ ಇದ್ದರೆ ಅಂತಹ ಜಿಲ್ಲೆಗಳಲ್ಲಿ ಬಾಲಕಾರ್ಮಿಕರು ಕಮ್ಮಿ ಇದ್ದಾರೆ ಎಂದು ಅರ್ಥವಲ್ಲ. ಅಧಿಕಾರಿಗಳು ಕೈಗಾರಿಕೆ ಹೋಟೆಲ್ ಹಾಗೂ ಕ್ರಷರ್‌ಗಳಲ್ಲಿ ಬಾಲಕಾರ್ಮಿಕರು ಇರುವುದನ್ನು ಪರಿಶೀಲನೆ ನಡೆಸಬೇಕು ಎಂದು ಸೂಚಿಸಿದರು.

ಸಭೆಯಲ್ಲಿ ಕಾರ್ಮಿಕ ಇಲಾಖೆಯ ಉಪ ನಿರ್ದೇಶಕಿ ಸವಿತಾ, ಪದವಿ ಪೂರ್ವ ಶಿಕ್ಷಣ ಇಲಾಖೆಯ ಉಪ ನಿರ್ದೇಶಕ ಸಿ.ಚಲುವಯ್ಯ, ನಗರಸಭೆ ಪೌರಾಯುಕ್ತೆ ಪಂಪಶ್ರೀ, ಸಮಾಜ ಕಲ್ಯಾಣ ಇಲಾಖೆಯ ನಿರ್ದೇಶಕ ಶ್ರೀನಿವಾಸ್, ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯ ಉಪನಿರ್ದೇಶಕಿ ಮಂಜುಳಾ ಸೇರಿದಂತೆ ಇನ್ನಿತರ ಅಧಿಕಾರಿಗಳು ಉಪಸ್ಥಿತರಿದ್ದರು.

ನೂತನ ಕ್ಯಾಲೆಂಡರ್ ಬಿಡುಗಡೆ



ಕೆ.ಆರ್.ಪೇಟೆಯ ಶ್ರೀಮಲ್ಲಿಕಾರ್ಜುನ ಚಾರಿಟಬಲ್ ಟ್ರಸ್ಟ್‌ನಲ್ಲಿ ನೂತನ ಕ್ಯಾಲೆಂಡರ್ ಅನ್ನು ನಿವೃತ್ತ ಪ್ರಾಂಶುಪಾಲ ಕೆ.ಕಾಳೇಗೌಡ ಸೇರಿದಂತೆ ಗಣ್ಯರು ಬಿಡುಗಡೆಗೊಳಿಸಿದರು.



ಕಿಕ್ಕೇರಿಯ ಹಾಲು ಉತ್ಪಾದಕರ ಸಹಕಾರ ಸಂಘದವರು ನೂತನ ವರ್ಷಕ್ಕೆ ಗ್ರಾಹಕರಿಗೆ ಮನ್ಮುಲ್ ಉತ್ಪನ್ನದ ಪೇಡಾ ವಿತರಿಸಿ ಗುರುವಾರ ದಿನದರ್ಶಿಕೆ ಬಿಡುಗಡೆ ಮಾಡಿದರು.

ದೇಶದಲ್ಲಿ ಮಹಿಳಾ ಸಾಕ್ಷರತೆ ಶೇ.69ರಷ್ಟಿದೆ



ಮಂಡ್ಯ ನಗರದಲ್ಲಿರುವ ಹರ್ಡೀಕರ್ ಭವನದಲ್ಲಿ ರಾಷ್ಟ್ರೀಯ ಭೀಮ ಪಡೆ ರಾಜ್ಯ ಮತ್ತು ಜಿಲ್ಲಾ ಘಟಕ ಆಯೋಜಿಸಿದ್ದ ಭಾರತ ಪ್ರಥಮ ಮಹಿಳಾ ಶಿಕ್ಷಕಿ ಮಾತೆ ಸಾವಿತ್ರಿಬಾಯಿ ಫುಲೆ ಅವರ 194ನೇ ಜನ್ಮದಿನಾಚರಣೆ ಸಮಾರಂಭದಲ್ಲಿ ಗಣ್ಯರು, ಶಿಕ್ಷಕಿಯರು ಮತ್ತು ನಿವೃತ್ತ ಶಿಕ್ಷಕಿಯರಿಗೆ ಅಕ್ಷರದವ್ವ ಪ್ರಶಸ್ತಿ ಪ್ರಧಾನ ಮಾಡಿ ಗೌರವಿಸಿದರು.

ಮಂಡ್ಯ: ಪ್ರಸ್ತುತ ಭಾರತ ದೇಶದಲ್ಲಿ ಮಹಿಳಾ ಸಾಕ್ಷರತೆ ಶೇ.69ರಷ್ಟಿದೆ ಎಂದು ಮಾಜಿ ಸಚಿವ ಎನ್.ಮಹೇಶ್ ಹೇಳಿದರು.

ನಗರದಲ್ಲಿರುವ ಹರ್ಡೀಕರ್ ಭವನದಲ್ಲಿ ರಾಷ್ಟ್ರೀಯ ಭೀಮ ಪಡೆ ರಾಜ್ಯ ಮತ್ತು ಜಿಲ್ಲಾ ಘಟಕ ಆಯೋಜಿಸಿದ್ದ ಭಾರತ ಪ್ರಥಮ ಮಹಿಳಾ ಶಿಕ್ಷಕಿ ಮಾತೆ ಸಾವಿತ್ರಿಬಾಯಿ ಫುಲೆ ಅವರ 194ನೇ ಜನ್ಮ ದಿನಾಚರಣೆ ಅಂಗವಾಗಿ ಅಕ್ಷರದವ್ವ ಪ್ರಶಸ್ತಿ ಪ್ರಧಾನ ಸಮಾರಂಭದ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು.

1901ರಲ್ಲಿ ಸಾಕ್ಷರತೆ ಪ್ರಮಾಣ ಶೇ.06 ರಷ್ಟಿತ್ತು, ಮಹಿಳಾ ಸಾಕ್ಷರತೆ ಪ್ರಮಾಣ ಶೂನ್ಯವಿತ್ತು 1950ರಲ್ಲಿ ಶೇ.19ರಷ್ಟು ಹೆಚ್ಚಾಗಿದೆ, ಮಹಿಳಾ ಸಾಕ್ಷರತೆ ಪ್ರಮಾಣ ಶೇ.01ರಷ್ಟಿತ್ತು, 2025ರಲ್ಲಿ ಶೇ.76ರಷ್ಟಿದೆ, ಮಹಿಳಾ ಸಾಕ್ಷರತೆ ಶೇ.69ರಷ್ಟಿದೆ ಎಂದು ತಿಳಿಸಿದರು.

ಇದಕ್ಕೆ ಕಾರಣ ಶಿಕ್ಷಣ ಕ್ರಾಂತಿಯ ಹರಿಕಾರರಾದ ಜ್ಯೋತಿಭಾಫುಲೆ, ಸಾವಿತ್ರಿಭಾಯಿ ಫುಲೆ ಮತ್ತು ಡಾ.ಬಿ.ಆರ್.ಅಂಬೇಡ್ಕರ್ ಹಾಗೂ ಭಾರತ ಸಂವಿಧಾನದ ಎಲ್ಲಾ ಹಕ್ಕುಗಳಾಗಿದೆ ಎಂದು ನುಡಿದರು.

ನಮ್ಮ ದೇಶದ ಗುರಿ 2047ಕ್ಕೆ ನಮ್ಮ ದೇಶಕ್ಕೆ ಸ್ವಾತಂತ್ರ್ಯ ಬಂದು 100ವರ್ಷ ವಾಗುತ್ತದೆ, ಆಗ ಪುರುಷ ಮತ್ತು ಮಹಿಳಾ ಸಾಕ್ಷರತೆ ಪ್ರಮಾಣ ಶೇ.100ರಷ್ಟು ಸಾಧಿಸುವ ಸಂಕಲ್ಪವಿದೆ ಎಂದು ತಿಳಿಸಿದರು.

ಬಳಿಕ ಮಾತನಾಡಿದ ರಾಷ್ಟ್ರೀಯ ಭೀಮ ಪಡೆ ರಾಜ್ಯಾಧ್ಯಕ್ಷ ಎಚ್.ಎ.ಆತ್ಮಾನಂದ, ಭಾರತದ ಸಾಮಾಜಿಕ ವ್ಯವಸ್ಥೆಯಲ್ಲಿ ಅಸ್ಪ್ರಶ್ಯರಷ್ಟೇ ಶೋಷಣೆಗೆ ಒಳಗಾದ ಇನ್ನೊಂದು ವರ್ಗವೆಂದರೆ ಮಹಿಳೆಯರು. ಮನು ಸಂವಿಧಾನದ ಪ್ರಕಾರ ಮಹಿಳೆ ವಿದ್ಯೆ ಕಲಿಯಲು ಅರ್ಹಳಲ್ಲ. ಮಹಿಳೆಯರ ಸ್ವಾತಂತ್ರ್ಯ ಹರಣದ ಪ್ರಮುಖ ಭಾಗ ವಿದ್ಯೆಯೇ ಆಗಿತ್ತೆನ್ನಬಹುದು ಎಂದು ಹೇಳಿದರು.

ಇದೇ ಸಂದರ್ಭದಲ್ಲಿ ಶೈಕ್ಷಣಿಕ ಕ್ಷೇತ್ರದಲ್ಲಿ ಸಾಧನೆ ಮಾಡಿದ ಶಿಕ್ಷಕಿಯರು ಮತ್ತು ನಿವೃತ್ತ ಶಿಕ್ಷಕಿಯರಿಗೆ ಅಕ್ಷರದವ್ವ ಪ್ರಶಸ್ತಿ ಪ್ರಧಾನ ಮಾಡಿ ಗೌರವಿಸಲಾಯಿತು.

ಕಾರ್ಯಕ್ರಮದಲ್ಲಿ ಮನ್‌ಮುಲ್ ನಿರ್ದೇಶಕ ಬಿ.ಆರ್.ರಾಮಚಂದ್ರು, ಪ್ರಾಧ್ಯಾಪಕಿ ಪ್ರೊ.ಪುಷ್ಪ, ಬಿಜೆಪಿ ವೈದ್ಯಕೀಯ ಪ್ರಕೋಷ್ಟ ರಾಜ್ಯಾಧ್ಯಕ್ಷ ಡಾ.ಸದಾನಂದ, ಬಿಜೆಪಿ ಉಪಾಧ್ಯಕ್ಷ ಕೆಂಪಬೋರಯ್ಯ, ನಗರ ಘಟಕ ಅಧ್ಯಕ್ಷ ವಸಂತಕುಮಾರ್, ರಾಷ್ಟ್ರೀಯ ಭೀಮ ಪಡೆ ರಾಜ್ಯ ಉಪಾಧ್ಯಕ್ಷ ಕೆ.ಆರ್. ನಿತ್ಯಾನಂದ್, ಜಿಲ್ಲಾ ಘಟಕ ಅಧ್ಯಕ್ಷ ನಾರಾಯಣಸ್ವಾಮಿ, ಉಪಾಧ್ಯಕ್ಷ ವೈರಮುಡಿ, ಕಾರ್ಯದರ್ಶಿ ಶಶಿಕುಮಾರ್, ಸುದಾನುಮ, ಮಂಗಳ ಕುಮಾರಿ, ಸರೋಜನಿ ಮತ್ತಿತರರಿದ್ದರು.

ಮದ್ದೂರನ್ನು ಕಸ, ಗುಂಡಿಮುಕ್ತ ನಗರೀಕರಣ ಮಾಡುವುದೇ ನನ್ನ ಗುರಿ

ಮದ್ದೂರು: ಮದ್ದೂರು ನಗರಸಭೆಯನ್ನು ಸಮಗ್ರವಾಗಿ ಅಭಿವೃದ್ಧಿಗೊಳಿಸುವ ಜೊತೆಗೆ ಶಾಶ್ವತ ಯೋಜನೆಗಳನ್ನು ರೂಪಿಸಿ ಕಸ ಮುಕ್ತ ಹಾಗೂ ಗುಂಡಿಮುಕ್ತ ನಗರೀಕರಣವನ್ನಾಗಿಸಲು ಪಣ ತೊಟ್ಟಿರುವುದಾಗಿ ಶಾಸಕ ಕೆ.ಎಂ.ಉದಯ ತಿಳಿಸಿದರು.

ಪಟ್ಟಣದ ವಿಶ್ವೇಶ್ವರಯ್ಯ ನಗರದಲ್ಲಿ ಕರ್ನಾಟಕ ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ ಹಾಗೂ ನಗರಸಭೆ ವತಿಯಿಂದ ಪಟ್ಟಣದ ಒಳಚರಂಡಿ ದುರಸ್ಥಿ, ಕೊಲ್ಲಿ ವೃತ್ತದಲ್ಲಿರುವ ತೇವಬಾವಿ ಅಭಿವೃದ್ಧಿ ಮತ್ತು ತ್ಯಾಜ್ಯನೀರು ಸಂಸ್ಕರಣಾ ಘಟಕ, ತೃತೀಯ ಹಂತದ ಕಾಮಗಾರಿಗೆ ಬಿಡುಗಡೆಯಾಗಿರುವ 16.49 ಕೋಟಿ ರೂ. ವೆಚ್ಚದ ಕಾಮಗಾರಿಗೆ ಗುದ್ದಲಿ ಪೂಜೆ ನೆರವೇರಿಸಿ ಅವರು ಮಾತನಾಡಿದರು.

ಕಳೆದ ಹಲವಾರು ವರ್ಷಗಳಿಂದಲೂ ಪುರಸಭೆ ವ್ಯಾಪ್ತಿಯಲ್ಲಿ ಒಂದಲ್ಲಾ ಒಂದು ಸಮಸ್ಯೆಗಳಿದ್ದು ಈ ವ್ಯಾಪ್ತಿಯ ಜನರು ಸಂಕಷ್ಟದ ನಡುವೆ ದಿನ ದೂಡುತ್ತಿದ್ದು ಮತ್ತು ಚುನಾವಣೆ ಸಂದರ್ಭದಲ್ಲಿ ತಾವು ಕೊಟ್ಟ ಭರವಸೆಯಂತೆ ತಾವು ಯುಜಿ.ಡಿ ಸಂಪರ್ಕ, ರಸ್ತೆ ಅಭಿವೃದ್ಧಿ ಇನ್ನಿತರ ಕಾಮಗಾರಿಗಳನ್ನು ಕೈಗೊಂಡು ಈ ಭಾಗದ ಬಹುದಿನದ ಬೇಡಿಕೆಯನ್ನು ಈಡೇರಿಸಿರುವುದಾಗಿ ತಿಳಿಸಿದರು.

ಪಟ್ಟಣ ವ್ಯಾಪ್ತಿಯ ಸ್ಥಳೀಯ ನಿವಾಸಿಗಳು ಯುಜಿ.ಡಿ ಸಂಪರ್ಕದ ತ್ಯಾಜ್ಯನೀರು ಮತ್ತು ಇನ್ನಿತರ ಪದಾರ್ಥಗಳನ್ನು ನಾಲೆಗಳಿಗೆ ಹರಿಬಿಡುತ್ತಿರುವ ಪರಿಣಾಮವಾಗಿ ನಾಲೆಯ ನೀರು ಕಲುಷಿತಗೊಂಡು ತ್ಯಾಜ್ಯದಿಂದ ಹೂಳು ತುಂಬಿಕೊಂಡು ಕೊನೆಯ ಭಾಗದ ರೈತರಿಗೆ ಸಮರ್ಪಕವಾಗಿ ನೀರು ಹರಿಯದ ಪರಿಣಾಮ ಬೇಸಾಯಕ್ಕೂ ತೊಡಕುಂಟಾಗಿತ್ತು.



ಅಭಿವೃದ್ಧಿ ಕಾಮಗಾರಿಗೆ ಶಾಸಕ ಕೆ.ಎಂ.ಉದಯ್ ಚಾಲನೆ ನೀಡಿದರು.

ಈ ಸಂಬಂಧ ಇಲಾಖೆಯ ಅಧಿಕಾರಿಗಳೊಟ್ಟಿಗೆ ಚರ್ಚಿಸಿ ಪ್ರತ್ಯೇಕವಾಗಿ ಒಳಚರಂಡಿ ಕಾಮಗಾರಿ ಕೈಗೊಂಡು ನಾಲೆಯ ಆಧುನೀಕರಣಕ್ಕೂ ಮುಂದಾಗಿ ಜೊತೆಗೆ ಸಂಸ್ಕರಣ ಘಟಕವನ್ನು ನಿರ್ಮಿಸಲು ಯೋಜನೆ ರೂಪಿಸಿರುವುದಾಗಿ ಹೇಳಿದರು.

ನಗರಸಭೆ ಮಾಜಿ ಅಧ್ಯಕ್ಷೆ ಕೋಕಿಲಾ ಅರುಣ್, ಮಾಜಿ ಉಪಾಧ್ಯಕ್ಷ ಟಿ.ಆರ್.ಪ್ರಸನ್ನ ಕುಮಾರ್, ಮಾಜಿ ಸದಸ್ಯರಾದ ಎಂ.ಬಿ. ಸಚಿನ್, ಸಿದ್ದರಾಜು, ಕಮಲ್‌ನಾಥ್, ಬಸವರಾಜು, ಮಸೀಫ್ ಇತರರಿದ್ದರು.

ಒಂದನೇ ಪುಟದಿಂದ

ಉದ್ಯೋಗ ಹಕ್ಕಿಗೆ ಕತ್ತರಿ

ಡಾ.ಮನ ಮೋಹನ್ ಸಿಂಗ್ ಜಾರಿಗೆ ತಂದಿದ್ದ ಜನ ಪರ ಕಾಯ್ದೆ ಹಿಂಪಡೆದು ಕಾರ್ಪೊರೇಟ್ ಕಂಪೆನಿಗಳಿಗೆ ಲಾಭ ಮಾಡಿಕೊಡುವ ಕೆಲಸವನ್ನು ಮೋದಿ ಸರ್ಕಾರ ಮಾಡುತ್ತಿದೆ ಎಂದರು.

ಯೋಜನೆ ಹೆಸರು ಬದಲಾವಣೆಗೆ ಆಕ್ಷೇಪ: ನರೇಗಾ ಕಾಯ್ದೆ ಪ್ರಕಾರ ಕೃಷಿ ಕೂಲಿ ಕಾರ್ಮಿಕರು ವ್ಯವಸಾಯ ಕಾರ್ಯ ಗಳ ಜೊತೆ ವಾಸವಿರುವ ಸ್ಥಳದಲ್ಲೇ ನರೇಗಾ ಯೋಜನೆಯಡಿ ಕೂಲಿ ಮಾಡಲು ಅವಕಾಶವಿತ್ತು. ಇದರಿಂದ ಹಳ್ಳಿಗಾಡಿನ ಆರ್ಥಿಕತೆ ಅಭಿವೃದ್ಧಿ ಸಾಧ್ಯವಾಗಿತ್ತು. ಅಲ್ಲದೆ, ಸ್ಥಳೀಯ ಆಸ್ತಿಯೂ ಸೃಜನೆ ಆಗುತ್ತಿತ್ತು. ಉದ್ಯೋಗ ಕೇಳಿ ಪಡೆಯುವ ಹಕ್ಕು ಜನರಿಗಿತ್ತು ಈಗ ಇದ್ಯಾವುದೂ ಇಲ್ಲವಾಗಿದೆ ಎಂದರು.

ಉದ್ಯೋಗದ ಹಕ್ಕಿಗೆ ನಿರ್ಬಂಧ: ವರ್ಷದ ಯಾವುದೇ ಅವಧಿಯಲ್ಲಿ ಲಭ್ಯವಾಗುತ್ತಿದ್ದ ಕೂಲಿ ಕೆಲಸ ಈಗ ನಿರ್ಬಂಧಕ್ಕೆ ಒಳ ಪಟ್ಟಿದ್ದು, ಕೃಷಿ ಚಟುವಟಿಕೆ ಅವಧಿಯ 60 ದಿನ ಯೋಜನೆಯಡಿ ಯಾವುದೇ ಉದ್ಯೋಗ ನೀಡಲಾಗುವುದಿಲ್ಲ. ಹಣ ದುಬ್ಬರಕ್ಕೆ ತಕ್ಕಂತೆ ಕೂಲಿ ಹಣ ಸರಿದೂಗಿ ಸುವ ಅವಕಾಶವನ್ನೂ ತೆಗೆದುಹಾಕ ಲಾಗಿದೆ. ಹಿಂದಿನ ಕಾಯ್ದೆ ಪ್ರಕಾರ ಕೇಂದ್ರ ಸರ್ಕಾರ ಪೂರ್ಣ ಅನುದಾನ ಭರಿಸುತ್ತಿತ್ತು ಹೊಸ ಕಾಯ್ದೆಯಡಿ ಶೇ.60ರಷ್ಟು ಕೇಂದ್ರ ಹಾಗೂ ಶೇ.40ರಷ್ಟು ರಾಜ್ಯ ಸರ್ಕಾರ ಭರಿಸಬೇಕಿದೆ. ಇದರಿಂದ ರಾಜ್ಯಗಳ ಮೇಲೆ ಹೆಚ್ಚಿನ ಹಣಕಾಸು ಹೊರೆ ಬೀಳಲಿದ್ದು, ಇದು ಸಂವಿಧಾನದ ಆರ್ಟಿಕಲ್ 258 ಮತ್ತು 280ಗೆ ವಿರುದ್ಧವಾಗಿದೆ ಎಂದರು.

ಗ್ರಾಮ ಪಂಚಾಯತ್‌ಗಳ ಅಧಿಕಾರವನ್ನು ಕೇಂದ್ರ ಸರ್ಕಾರ ಕಿತ್ತುಕೊಂಡಿದ್ದು, ದೇಶದ ಒಕ್ಕೂಟ ವ್ಯವಸ್ಥೆ ಮತ್ತು ಸಂವಿಧಾನಕ್ಕೆ ವಿರುದ್ಧವಾಗಿದೆ. ಹೊಸ ಕಾಯ್ದೆ ಜಾರಿಗೊಳಿಸದಂತೆ ಪ್ರಧಾನಿ ಅವರಿಗೆ ಡಿ.30ರಂದು ಪತ್ರ ಬರೆದಿದ್ದೆ. ಹೊಸ ಕಾಯ್ದೆ ರದ್ದುಪಡಿಸಬೇಕು. ನರೇಗಾ ಕಾಯ್ದೆ ಮತ್ತೆ ಜಾರಿಗೆ ತರಬೇಕು. ಮಹಿಳೆಯರು, ದಲಿತರ ಉದ್ಯೋಗದ ಹಕ್ಕು ಪುನರ್ ಸ್ಥಾಪಿಸಬೇಕು. ಪಂಚಾಯತ್‌ಗಳ ಸ್ವಯಂ ಆಡಳಿತದ ಹಕ್ಕು ಮರು ಸ್ಥಾಪಿಸಬೇಕು ಎಂದು ಒತ್ತಾಯಿಸಿದ್ದೆ ಎಂದರು.

ಹೊಸ ಕಾಯ್ದೆ ಗ್ರಾಮೀಣ ಜನರ ಜೀವನೋಪಾಯ ಕಸಿಯುತ್ತಿದೆ, ಸಂವಿಧಾನ ಬಾಹಿರವಾಗಿ ರಾಜ್ಯಗಳ ಆಯವ್ಯಯದ ಮೇಲೆ ಹೆಚ್ಚಿನ ಹೊರೆ ಹೇರಲಾಗುತ್ತಿದೆ.

ಪ್ರಸಾದ್ ಅಭಿವೃದ್ಧಿ ಆರಂಭ

ಪ್ರತ್ಯೇಕ ಶೌಚಾಲಯ, ಸಿಸಿ ಕ್ಯಾಮರ ಮತ್ತು ಇನ್ನಿತರೆ ಭದ್ರತಾ ವ್ಯವಸ್ಥೆಗಳ ಕಲ್ಪಿಸಲಾಗುತ್ತದೆ. ಈ ಕುರಿತು 'ಮೈಸೂರು ಮಿತ್ರ'ನಿಗೆ ಮಾಹಿತಿ ನೀಡಿರುವ ಪ್ರವಾಸೋದ್ಯಮ ಇಲಾಖೆ ಎಕ್ಸಿಕ್ಯೂಟಿವ್ ಇಂಜಿನಿಯರ್ ಪುರುಷೋತ್ತಮ್, ಚಾಮುಂಡಿಬೆಟ್ಟಕ್ಕೆ ಭೇಟಿ ನೀಡುತ್ತಿರುವ ಭಕ್ತಾದಿಗಳ ಸಂಖ್ಯೆ ಗಣನೀಯವಾಗಿ ಹೆಚ್ಚುತ್ತಿರುವುದರಿಂದ ಅವರ ಅಗತ್ಯಕ್ಕೆ ತಕ್ಕಂತೆ ಅಲ್ಲಿ ಮೂಲಸೌಕರ್ಯಗಳನ್ನು ಒದಗಿಸಬೇಕಾಗಿದೆ. ಕೇಂದ್ರ ಸರ್ಕಾರವು ಹೊಸ ಯೋಜನೆಯಡಿ ಅನುದಾನ ನೀಡುತ್ತಿದ್ದು, ಮೊದಲ ಹಂತದಲ್ಲಿ ಮೈಸೂರಿನ ಚಾಮುಂಡಿ ಬೆಟ್ಟದ ಅಭಿವೃದ್ಧಿ (6 ಕೋಟಿ ರೂ.) ಸ್ವದೇಶಿ ದರ್ಶನ್ ಯೋಜನೆಯಡಿ ಮೃಗಾಲಯದಲ್ಲಿ ಎಕೊಲಾಜಿಕಲ್ ಎಕ್ಸ್‌ಪೀರಿಯನ್ಸ್ ಸೆಂಟರ್ (17 ಕೋಟಿ ರೂ.) ಹಾಗೂ ಮೈಸೂರಿನ ಟಾಂಗಾ ರೈಡ್ ಹೆರಿಟೇಜ್ ಎಕ್ಸ್‌ಪೀರಿಯನ್ಸ್ ಸೌಲಭ್ಯ (1.90 ಕೋಟಿ ರೂ.) ಗಳನ್ನು ಒದಗಿಸಲಾಗುತ್ತಿದೆ ಎಂದರು. ಎಕೊಲಾಜಿಕಲ್ ಎಕ್ಸ್‌ಪೀರಿಯನ್ಸ್ ಸೆಂಟರ್ ಕಾಮಗಾರಿಯನ್ನು ಮೈಸೂರು ಮೂಲದ ಬೀರಾದರ್ ಕನ್‌ಸ್ಟ್ರಕ್ಷನ್ ಕಂಪನಿಗೆ ಹಾಗೂ ಟಾಂಗಾ ರೈಡ್ ಹೆರಿಟೇಜ್ ಎಕ್ಸ್‌ಪೀರಿಯನ್ಸ್ ಯೋಜನೆಯನ್ನು ಹ್ಯಾಕ್‌ವೆಲ್ ಇಂಡಿಯಾ ಪ್ರೈವೇಟ್ ಲಿಮಿಟೆಡ್‌ಗೆ ಟೆಂಡರ್ ಮೂಲಕ ವಹಿಸಲಾಗಿದೆ. ಸೋಮವಾರ ಏಕಕಾಲದಲ್ಲಿ ಗುತ್ತಿಗೆದಾರರು ಕಾಮಗಾರಿ ಆರಂಭಿಸಲಿದ್ದು 11 ತಿಂಗಳೊಳಗೆ ಪೂರ್ಣಗೊಳಿಸಬೇಕೆಂದು ಟೆಂಡರ್‌ನಲ್ಲಿ ತಿಳಿಸಲಾಗಿದೆ.

ಉತ್ತರ ಪ್ರದೇಶದಲ್ಲಿ 6 ವರ್ಷದ ಬಾಲಕಿಯ ಮೇಲೆ ಸಾಮೂಹಿಕ ಅತ್ಯಾಚಾರ

ಲಕ್ನೋ: ಉತ್ತರ ಪ್ರದೇಶದ ಬುಲಂದ್‌ಶಹರ್‌ನಲ್ಲಿ ಆರು ವರ್ಷದ ಬಾಲಕಿಯ ಮೇಲೆ ಸಾಮೂಹಿಕ ಅತ್ಯಾಚಾರ ನಡೆಸಿ ಕೊಲೆ ಮಾಡಲಾಗಿದೆ ಎಂದು ಪೊಲೀಸರು ತಿಳಿಸಿದ್ದಾರೆ. ಹಲ್ಲೆಯ ನಂತರ ಆರೋಪಿಗಳು ಸಾಕ್ಷ್ಯ ನಾಶಕ್ಕೆ ಮಗುವನ್ನು ಮನೆಯ ಮೇಲ್ಛಾವಣಿಯಿಂದ ಎಸೆದಿದ್ದಾರೆ. ಜನವರಿ 2ರ ತಡರಾತ್ರಿ ಈ ಘಟನೆ ನಡೆದಿದೆ. ಅಪ್ರಾಪ್ತ ಬಾಲಕಿಯೊಬ್ಬಳು ಗಂಭೀರ ಗಾಯಗೊಂಡ ಸ್ಥಿತಿಯಲ್ಲಿ ಪತ್ತೆಯಾಗಿದ್ದಾಳೆ ಎಂಬ ಮಾಹಿತಿ ಬಂದಿದ್ದು, ಆಕೆಯನ್ನು ಸಿಕಂದರಾಬಾದ್‌ನ ಸಮುದಾಯ ಆರೋಗ್ಯ ಕೇಂದ್ರಕ್ಕೆ ಕರೆದೊಯ್ಯಲಾಯಿತು. ಅಲ್ಲಿ ವೈದ್ಯರು ಆಕೆ ಮೃತಪಟ್ಟಿದ್ದಾಳೆ ಎಂದು ಘೋಷಿಸಿದರು.

ಬಾಲಕಿಯ ತಂದೆಯ ದೂರಿನ ಮೇರೆಗೆ, ಪೊಲೀಸರು ಭಾರತೀಯ ನ್ಯಾಯ ಸಂಹಿತಾ (ಬಿಎನ್‌ಎಸ್) ಸೆಕ್ಷನ್ 70(2) ಮತ್ತು 103(1) ಮತ್ತು ಲೈಂಗಿಕ ಅಪರಾಧಗಳಿಂದ ಮಕ್ಕಳ ರಕ್ಷಣೆ (ಪೋಕ್ಸೊ) ಕಾಯ್ದೆಯ ಸೆಕ್ಷನ್ 5(ಎಂ) ಮತ್ತು 6ರ ಅಡಿಯಲ್ಲಿ ಪ್ರಕರಣ ದಾಖಲಿಸಿದ್ದಾರೆ.

ಆತ್ಮಹತ್ಯೆ ಯತ್ನ!

ಶುಕ್ರವಾರ ರಾತ್ರಿಯೇ ಅವರನ್ನು ಸೇವೆಯಿಂದ ಅಮಾನತು ಮಾಡಲಾಯಿತು.

ಇದರ ಮಧ್ಯೆ ಪವನ್ ನೆಜ್ಜೂರ್ ಆತ್ಮಹತ್ಯೆಗೆ ಯತ್ನಿಸಿಲ್ಲ. ವಿಶ್ರಾಂತಿಯಲ್ಲಿ ಇದ್ದರು ಎಂದು ಇಲಾಖೆ ಸ್ಪಷ್ಟನೆ ನೀಡಿದೆ. ಅವರಿಗೆ ಆರೋಗ್ಯದಲ್ಲಿ ಏರುಪೇರು ಆದ ಹಿನ್ನೆಲೆಯಲ್ಲಿ ಆಸ್ಪತ್ರೆಗೆ ದಾಖಲು ಮಾಡಲಾಗಿದೆಯೇ ಹೊರತು ಆತ್ಮಹತ್ಯೆ ಯತ್ನ ಪ್ರಕರಣದಿಂದ ಅಲ್ಲ ಎಂದಿದೆ. ಜನವರಿ 1ರಂದು ಬಳ್ಳಾರಿ ಎಸ್‌ಪಿ ಆಗಿ ಶೋಭಾ ರಾಣಿ ಅವರಿಂದ ನೆಜ್ಜೂರ್ ಅಧಿಕಾರ ಸ್ವೀಕರಿಸಿದ್ದರು.

ಈ ಸಂದರ್ಭದಲ್ಲಿ ಶೋಭಾರಾಣಿ ತಮ್ಮ ಸಿಬ್ಬಂದಿಗೆ ಏರ್ಪಡಿಸಿದ್ದ ಔತಣ ಕೂಟದಲ್ಲಿ ಇವರೂ ಭಾಗಿಯಾಗಿದ್ದರು.

ಔತಣಕೂಟ ನಡೆಯುತ್ತಿದ್ದ ವೇಳೆಯಲ್ಲೇ ಬಳ್ಳಾರಿಯಲ್ಲಿ ರಾಜಕೀಯ ವೈಷಮ್ಯ ಗಲಭೆ ಉಂಟಾಗಿ, ಜನಾರ್ದನ ರೆಡ್ಡಿ ನಿವಾಸದ ಮೇಲೆ ಕಲ್ಲು ತೂರಾಟ ನಡೆದಿದ್ದಲ್ಲದೆ, ಸ್ಥಳೀಯ ಕಾಂಗ್ರೆಸ್ ಶಾಸಕ ಭರತ್ ರೆಡ್ಡಿ ಬೆಂಬಲಿಗರು ಹಾಗೂ ಬಿಜೆಪಿ ಕಾರ್ಯಕರ್ತರ ನಡುವೆ ಘರ್ಷಣೆ ನಡೆದಿತ್ತು. ಈ ಸಂದರ್ಭದಲ್ಲಿ ಹಾರಿಸಿದ ಗುಂಡು ತಗುಲಿ ಕಾಂಗ್ರೆಸ್ ಕಾರ್ಯಕರ್ತನೊಬ್ಬ ಮೃತಪಟ್ಟಿದ್ದ. ಘರ್ಷಣೆ ನಿಯಂತ್ರಿಸಲು ಗೃಹ ಸಚಿವರು ಮತ್ತು ಪೊಲೀಸ್ ಮಹಾನಿರ್ದೇಶಕರು ಸೂಚಿಸಿದ್ದರು.

ಆಗತಾನೇ ಅಧಿಕಾರ ವಹಿಸಿಕೊಂಡಿದ್ದ ಎಸ್‌ಪಿ ಹಿರಿಯ ಪೊಲೀಸ್ ಅಧಿಕಾರಿಗಳ ಸಂಪರ್ಕದಲ್ಲಿ ಇರಲಿಲ್ಲ, ಇದರಿಂದ ಅಸಮಾಧಾನಗೊಂಡ ಪೊಲೀಸ್ ಮಹಾನಿರ್ದೇಶಕರು, ಬಳ್ಳಾರಿ ಗಲಭೆ ನಿಯಂತ್ರಣಕ್ಕೆ ಚಿತ್ರದುರ್ಗ ಪೊಲೀಸ್ ವರಿಷ್ಠಾಧಿಕಾರಿ ಅವರನ್ನು ನಿಯೋಜಿಸಿದ್ದರು.

ಎಫ್‌ಐಆರ್

ಶಾಸಕ ಜನಾರ್ದನರೆಡ್ಡಿ, ಬಿಜೆಪಿ ಕಾರ್ಯಕರ್ತ ನಾಗರಾಜ್ ನೀಡಿದ್ದ ದೂರಿನ ಆಧಾರದ ಮೇಲೆ ಎಫ್‌ಐಆರ್ ದಾಖಲು ಮಾಡಲಾಗಿದೆ. ನಿನ್ನೆ ಸಂಜೆ ಶಾಸಕ ಭರತ್ ರೆಡ್ಡಿ ಸೇರಿ ಹಲವರ ವಿರುದ್ಧ ದೂರು ನೀಡಲಾಗಿತ್ತು.

ಶಾಸಕ ಜನಾರ್ದನರೆಡ್ಡಿ ಹಲ್ಲೆ, ಕೊಲೆ ಯತ್ನ ಆರೋಪದಡಿ ದೂರು ನೀಡಿದ್ದರು. ಮತ್ತೊಂದೆಡೆ ಅಕ್ರಮ ಪ್ರವೇಶ, ಜಾತಿ ನಿಂದನೆ, ಕೊಲೆ ಯತ್ನ ಹಾಗೂ ಗಲಾಟೆ ಆರೋಪದಡಿ ಬಿಜೆಪಿ ಕಾರ್ಯಕರ್ತ ನಾಗರಾಜ್ ಕೂಡ ನೀಡಿದ್ದರು. ದೂರು ನೀಡುವಾಗ ಬಿಜೆಪಿ ರಾಜ್ಯಾಧ್ಯಕ್ಷ ವಿಜಯೇಂದ್ರ ಕೂಡ ಇದ್ದರು. ಎಎಸ್‌ಪಿ ರವಿಕುಮಾರ್ ದೂರು ಸ್ವೀಕರಿಸಿದ್ದು, ಎಫ್‌ಐಆರ್ ದಾಖಲು ಮಾಡಿಕೊಂಡಿದ್ದಾರೆ.

106ನೇ ಘಟಿಕೋತ್ಸವ

ಪುರುಷ ಅಭ್ಯರ್ಥಿಗಳಾಗಿದ್ದಾರೆ. ಈ ಘಟಿಕೋತ್ಸವದಲ್ಲಿ ಮಹಿಳಾ ಅಭ್ಯರ್ಥಿಗಳೇ ಹೆಚ್ಚಿನ ಸಂಖ್ಯೆಯಲ್ಲಿರುವುದು ವಿಶೇಷ. ವಿವಿಧ ವಿಷಯಗಳಲ್ಲಿ 449 ಅಭ್ಯರ್ಥಿಗಳಿಗೆ ಪಿಹೆಚ್.ಡಿ ಪದವಿ ಪ್ರದಾನ ಮಾಡಲಾ ಗುವುದು. ಈ ಪೈಕಿ 211 (ಶೇ.46.99) ಮಹಿಳಾ ಅಭ್ಯರ್ಥಿಗಳಾಗಿದ್ದರೆ, 238 (ಶೇ.53.00) ಪುರುಷ ಅಭ್ಯರ್ಥಿಗಳಾಗಿದ್ದಾರೆ. ಹಾಗೆಯೇ 442 ಚಿನ್ನದ ಪದಕ ಮತ್ತು 197 ಬಹುಮಾನಗಳನ್ನು 213 ಅಭ್ಯರ್ಥಿಗಳು (ಯುಜಿ, ಪಿಜಿ ಮತ್ತು ಪಿಹೆಚ್.ಡಿ ಸೇರಿದಂತೆ) ಪಡೆದುಕೊಳ್ಳಲಿದ್ದಾರೆ. ಅವರಲ್ಲಿ 158 ಮಹಿಳಾ ಅಭ್ಯರ್ಥಿಗಳಾ ಗಿದ್ದಾರೆ. ನಮ್ಮಲ್ಲಿ ಹಿಂದೆ ಐದು ನಿಕಾಯಗಳಿದ್ದವು. ಈಗ ಹೊಸದಾಗಿ ಇಂಜಿನಿಯ ರಿಂಗ್ ನಿಕಾಯ ಸೇರ್ಪಡೆಗೊಂಡಿದೆ. ಹೀಗಾಗಿ 6 ನಿಕಾಯಗಳು ಈಗಿದ್ದು, ಈ ಎಲ್ಲದ್ದರಿಂದ 30,966 ಅಭ್ಯರ್ಥಿಗಳು ವಿವಿಧ ಪದವಿ ಪಡೆಯಲಿದ್ದಾರೆ ಎಂದರು.

ಒಟ್ಟಾರೆ 5,796 ಅಭ್ಯರ್ಥಿಗಳಿಗೆ ಸ್ನಾತಕೋತ್ತರ ಪದವಿ (ಪಿಜಿ) ಪ್ರದಾನ ಮಾಡಲಾಗುವುದು. ಈ ಪೈಕಿ 3,551 (ಶೇ.61.26) ಮಹಿಳಾ ಅಭ್ಯರ್ಥಿಗಳಿದ್ದಾರೆ. ಅದೇ ರೀತಿ 24,721 ಅಭ್ಯರ್ಥಿಗಳಿಗೆ ಸ್ನಾತಕ ಪದವಿ (ಯುಜಿ) ಪ್ರದಾನ ಮಾಡಲಾಗುವುದು. ಈ ಪೈಕಿ 14,850 (ಶೇ.60.07) ಮಹಿಳಾ ಅಭ್ಯರ್ಥಿಗಳಾಗಿದ್ದಾರೆ ಎಂದು ತಿಳಿಸಿದರು.

ಪದಕ, ನಗದು ಬಹುಮಾನ ಪಡೆದವರು: ಈ ಬಾರಿ ಯುಜಿ ಕಲಾ ನಿಕಾಯದಲ್ಲಿ ಎಂ.ಸಿ.ತ್ರಿವೇಣಿ ಹೆಚ್ಚು ಅಂಕ ಗಳಿಸಿದ್ದಾರೆ. ಇವರು ಎರಡು ಪದಕ ಹಾಗೂ ಎರಡು ನಗದು ಬಹುಮಾನ ಪಡೆಯಲಿದ್ದಾರೆ. ಅಂತೆಯೇ ಇದೇ ನಿಕಾಯದಲ್ಲಿ ಯುಜಿಯಲ್ಲಿ ಬಿ.ಎಸ್.ವರ್ಣಿಕಾ 5 ಪದಕ ಹಾಗೂ 6 ನಗದು ಬಹುಮಾನ ಪಡೆಯಲಿದ್ದಾರೆ. ಇದೇ ನಿಕಾಯದ ಪಿಜಿಯಲ್ಲಿ ಅಹ್ಮದ್ ಮನ್ಸೂರ್ ಸಾಲಿಹ್ (ಭಾಷಾಶಾಸ್ತ್ರ) 6 ಪದಕ, 2 ನಗದು ಬಹುಮಾನ, ಚಂದ್ರಶೇಖರ (ಕನ್ನಡ ವಿಭಾಗ) 13 ಪದಕ ಹಾಗೂ 2 ನಗದು ಬಹುಮಾನ ಎಂದರು. ವಾಣಿಜ್ಯ ನಿಕಾಯದ ಯುಜಿಯಲ್ಲಿ ಬುಶ್ರಾ ಕೌಸರ್ 3 ಪದಕ ಹಾಗೂ 3 ನಗದು ಬಹುಮಾನ, ಪಿಜಿಯಲ್ಲಿ ಎಂ.ಸುಮಲತಾ 7 ಪದಕ ಹಾಗೂ 2 ನಗದು ಬಹುಮಾನ, ಶಿಕ್ಷಣ ನಿಕಾಯದ ಯುಜಿಯಲ್ಲಿ ಎನ್.ಅವಿನಾಶ್ 5 ಪದಕ ಹಾಗೂ 1 ನಗದು ಬಹುಮಾನ, ಇದೇ ನಿಕಾಯದ ಪಿಜಿಯಲ್ಲಿ ಹೆಚ್.ಪಿ.ದಿವಾಕರ್ 5 ಪದಕ ಹಾಗೂ 3 ನಗದು ಬಹುಮಾನ, ಕಾನೂನು ನಿಕಾಯದ ಯುಜಿಯಲ್ಲಿ ನಯನ್ ಪಾಂಡೆ 1 ಪದಕ, ಇದೇ ನಿಕಾಯದ ಪಿಜಿಯಲ್ಲಿ ಕೆ.ಸ್ಮೃತಿ 4 ಪದಕ ಹಾಗೂ 3 ನಗದು ಬಹುಮಾನ, ವಿಜ್ಞಾನ ತಂತ್ರಜ್ಞಾನ ನಿಕಾಯದ ಯುಜಿಯಲ್ಲಿ ಟಿ.ಹರ್ಮೈನ್ 6 ಪದಕ ಹಾಗೂ 5 ನಗದು ಬಹುಮಾನ, ಮದಿಹಾ ಕುಲ್ಸುಮ್ 3 ಪದಕ, 6 ನಗದು ಬಹುಮಾನ, ಇದೇ ನಿಕಾಯದ ಪಿಜಿಯಲ್ಲಿ ಆರ್.ಪುನೀತ್ 6 ಪದಕ ಹಾಗೂ 2 ನಗದು ಬಹುಮಾನ ಹಾಗೂ ಎನ್.ಅದಿತಿ 24 ಪದಕ ಹಾಗೂ 8 ನಗದು ಬಹುಮಾನ ಪಡೆದಿದ್ದಾರೆ ಎಂದು ವಿವರಿಸಿದರು.

ಗೌರವ ಡಾಕ್ಟರೇಟ್ ಪಡೆದ ಗಣ್ಯರ ಸಂಕ್ಷಿಪ್ತ ಪರಿಚಯ

ಎಸ್.ವಿ.ರಾಜೇಂದ್ರ ಸಿಂಗ್ : ಎಸ್.ವಿ.ರಾಜೇಂದ್ರ ಸಿಂಗ್ ಬಾಬು ಅವರು 'ಬಾಬು' ಎಂದೇ ಕನ್ನಡ ಚಿತ್ರರಂಗದಲ್ಲಿ ಚಿರಪರಿಚಿತರು. 'ನಾಗರಹೊಳೆ' ಚಿತ್ರ ನಿರ್ದೇಶನದ ನಂತರ ಬಾಬು ಅವರು ಹಿಂತಿರುಗಿ ನೋಡಿದ್ದೇ ಇಲ್ಲ. ಕನ್ನಡ, ತೆಲುಗು ಮತ್ತು ಹಿಂದಿ ಸಿನಿಮಾಗಳೂ ಸೇರಿ ಈವರೆಗೆ ಇವರು ಒಟ್ಟಾರೆಯಾಗಿ 365 ಚಲನಚಿತ್ರಗಳ ನಿರ್ದೇಶನ ಹಾಗೂ ನಿರ್ಮಾಣದಲ್ಲಿ ಭಾಗಿಯಾಗಿದ್ದಾರೆ. ತಮ್ಮ ಚಿತ್ರಗಳಲ್ಲಿ ಇವರು ತಂದ ನಾವೀನ್ಯತೆ ಹಾಗೂ ತಾಜಾತನದ ಕಾರಣದಿಂದ ಇವರ ಚಿತ್ರಗಳು ರಾಜ್ಯ ಹಾಗೂ ರಾಷ್ಟ್ರ ಪ್ರಶಸ್ತಿಗಳಿಗೆ ಭಾಜನವಾಗಿವೆ. ಇವರು ತಾವು ಆಯ್ಕೆ ಮಾಡಿಕೊಂಡ ಕ್ಷೇತ್ರಕ್ಕೆ ಅಮೂಲ್ಯ ಕೊಡುಗೆ ನೀಡುವ ಮೂಲಕ ಕರ್ನಾಟಕ ಹಾಗೂ ಮೈಸೂರಿಗೆ ಕೀರ್ತಿ ತಂದಿದ್ದಾರೆ.

ಡಾ.ಟಿ.ಶಾಮ್ ಭಟ್: ಡಾ.ಟಿ.ಶಾಮ್ ಭಟ್ 1992ರ ಬ್ಯಾಚಿನ ಐಎಎಸ್ ಕರ್ನಾಟಕ ಕೇಡರ್‌ನಿಂದ ಆಯ್ಕೆಯಾದವರು. ಇವರು ಬೆಂಗಳೂರಿನ ಗ್ರಾಮಾಂತರ ಜಿಲ್ಲೆಯ ಜಿಪಂ ಸಿಇಓ ಆಗಿ ಸೇವೆ ಆರಂಭಿಸಿದವರು. ಬೀದರ್ ಮತ್ತು ಉಡುಪಿ ಜಿಲ್ಲೆಗಳ ಜಿಲ್ಲಾಧಿಕಾರಿ ಹುದ್ದೆ, ಬಿಡಿಎ ಆಯುಕ್ತರ ಹುದ್ದೆ ಸೇರಿದಂತೆ ಹಲವು ಉನ್ನತ ಹುದ್ದೆಗಳನ್ನು ಸಮರ್ಥವಾಗಿ ನಿರ್ವಹಿಸುವ ಮೂಲಕ ತಮ್ಮ ಛಾಪು ಮೂಡಿಸಿದ್ದಾರೆ. ಪ್ರಸ್ತುತ ಕರ್ನಾಟಕ ರಾಜ್ಯ ಮಾನವ ಹಕ್ಕುಗಳ ಆಯೋಗದ ಅಧ್ಯಕ್ಷರಾಗಿ ಮಾನವ ಹಕ್ಕುಗಳ ರಕ್ಷಣೆಯಲ್ಲಿ ಪ್ರಮುಖ ಪಾತ್ರ ವಹಿಸುತ್ತಿದ್ದಾರೆ.

ಪಿ.ಜಯಚಂದ್ರ ರಾಜು : ಪಿ.ಜಯಚಂದ್ರ ರಾಜು ಅವರು ಗ್ಲೋಬಲ್ ಎಜುಕೇಷನ್ ಟ್ರಸ್ಟ್‌ನ ಅಧ್ಯಕ್ಷರು ಹಾಗೂ ಸ್ಥಾಪಕ ಟ್ರಸ್ಟಿ. ಇವರು ಶಿಕ್ಷಣ ತಜ್ಞರು, ದಾನಿಗಳು ಹಾಗೂ ಪರಿಸರ ಹೋರಾಟಗಾರರು. ಇವರು ಸ್ಥಾಪಿಸಿರುವ ದಕ್ಷ ಕಾಲೇಜು 8 ಎಕರೆ ವಿಸ್ತೀರ್ಣದಲ್ಲಿ ನೆಲೆಗೊಂಡು ಹಸಿರಿನಿಂದ ಕಂಗೊಳಿಸುತ್ತಿದೆ. ಇವರು ವಿಶ್ವಸಂಸ್ಥೆಯ ಶಾಂತಿ ಸಂರಕ್ಷಣಾ ವಿಭಾಗದ ಮೂಲಕ ಭಾರತ ಹಾಗೂ ವಿವಿಧ ದೇಶಗಳಲ್ಲಿ ಸೇವೆ ಸಲ್ಲಿಸಿದ್ದಾರೆ. ಇವರ ಅನುಪಮ ಸೇವೆಗಾಗಿ ಹಲವು ಪ್ರಶಸ್ತಿ–ಪುರಸ್ಕಾರಗಳು ಸಂದಿವೆ.

ಮೈಸೂರು ವಿವಿ ಪಿಂಚಣಿ ಸಮಸ್ಯೆಗೆ ಸರ್ಕಾರದಿಂದ ಪರಿಹಾರ ಸಿಗುವ ನಿರೀಕ್ಷೆ



ಮೈಸೂರು,ಜ.3(ಪಿಎಂ)– ಮೈಸೂರು ವಿವಿಯ ವ್ಯಾಪ್ತಿ ಕಡಿಮೆಯಾದ ಹಿನ್ನೆಲೆಯಲ್ಲಿ ವಿವಿಯಲ್ಲಿ ಆರ್ಥಿಕ ಮುಗ್ಗಟ್ಟು ಉಂಟಾಗಿರುವುದು ಸರ್ಕಾರದ ಗಮನದಲ್ಲಿದ್ದು, ಮುಂದಿನ ವರ್ಷ ಎಲ್ಲವೂ ಸರಿಯಾಗುವ ವಿಶ್ವಾಸವಿದೆ. ರಾಜ್ಯ ಸರ್ಕಾರ ಬಜೆಟ್‌ನಲ್ಲಿ ಅನುದಾನ ಕಲ್ಪಿಸಿದರೆ ಅನುಕೂಲವಾಗಲಿದೆ ಎಂದು ವಿವಿ ಕುಲಪತಿ ಪ್ರೊ.ಎನ್.ಕೆ.ಲೋಕನಾಥ್ ತಿಳಿಸಿದರು.

ವಿವಿ ಘಟಿಕೋತ್ಸವ ಸಂಬಂಧ ನಡೆದ ಸುದ್ದಿಗೋಷ್ಠಿಯಲ್ಲಿ ಮಾಧ್ಯಮದವರ ಪ್ರಶ್ನೆಗಳಿಗೆ ಅವರು ಪ್ರತಿಕ್ರಿಯಿಸಿದ ಅವರು, ವಿವಿಯ ನಿವೃತ್ತ ಉದ್ಯೋಗಿಗಳ ಪಿಂಚಣಿ ಸಂಬಂಧ ಶಾರ್ಟ್‌ಕಟ್ ಆಗುವುದು ಸದ್ಯಕ್ಕೆ ಸಾಧ್ಯವಿಲ್ಲ. ಇದೊಂದು ಜ್ವಲಂತ ಸಮಸ್ಯೆಯಾಗಿ ಮುಂದುವರೆಯುತ್ತಿದೆ. ವಿವಿ ವ್ಯಾಪ್ತಿ ವಿಭಾಗವಾದ ನಂತರದಲ್ಲಿ ಆರ್ಥಿಕತೆ ಕುಸಿಯುತ್ತಿದೆ. ನಮಗೆ ಈಗ ಮೈಸೂರು ಜಿಲ್ಲಾ ವ್ಯಾಪ್ತಿ ಮಾತ್ರ ಇದೆ. ಈ ಮೊದಲು ಮಂಗಳೂರು, ಶಿವಮೊಗ್ಗದವರೆಗೆ ಇತ್ತು. ಈಗ ಹಾಸನ ಹಾಗೂ ಮಂಡ್ಯ ಕೂಡ ಇಲ್ಲ ಎಂದರು.

ನಮ್ಮಲ್ಲಿ ಉದ್ಯೋಗಿಗಳು ಇರುವಷ್ಟೇ ಇದ್ದಾರೆ. ಬಿಲ್ಡಿಂಗ್ ಅಷ್ಟೇ ಇವೆ. ವಿಶಾಲವಾದ ಮಾನಸ ಗಂಗೋತ್ರಿ ಕ್ಯಾಂಪಸ್ ಸಹ ಇದೆ. ಹಾಗಾಗಿ ನಮ್ಮ ವಿವಿಯ ಖರ್ಚು ಕಡಿಮೆಯಾಗಿಲ್ಲ. ಆದರೆ ಆದಾಯ ಕಡಿಮೆಯಾಗಿದೆ. ಅಲ್ಲದೆ, ಸರ್ಕಾರ 2019ರವರೆಗೆ ಪಿಂಚಣಿ ನೀಡಿತ್ತು. ತದನಂತರ ಕೋವಿಡ್ ಬಳಿಕ ಶೇ.50ರಷ್ಟು ಕೊಡುತ್ತಾ ಬಂದಿತು. ಆಗ ನಮ್ಮಲ್ಲಿ ಪಿಂಚಣಿ ನಿಧಿ ಇತ್ತು. ಹೀಗಾಗಿ ಪಿಂಚಣಿ ನೀಡುತ್ತಾ ಬಂದಿದ್ದೆವು. ಆದರೆ ನಿಧಿ ಕಳೆದ ವರ್ಷ ಖಾಲಿಯಾಯಿತು. ಹಾಗಾಗಿ ನಮ್ಮ ವಿವಿಯಲ್ಲಿ ಈಗ ನಿಧಿ ಇಲ್ಲವಾಗಿದ್ದು, ಸರ್ಕಾರ ಶೇ.50ರಷ್ಟು ಕೊಟ್ಟರೂ ನಾವು ನಿರ್ವಹಣೆ ಮಾಡಲಾಗದು. ನಮಗೆ ಈಗ ಬರುತ್ತಿರುವ ಆಂತರಿಕ ಸಂಪನ್ಮೂಲ ಕಡಿಮೆಯಾಗಿದೆ. ಹಾಗಾಗಿ ವಿವಿಯಿಂದ ಪಿಂಚಣಿ ನೀಡುವುದು ಕಷ್ಟ, ಸರ್ಕಾರದ ಸಹಾಯ ಅತ್ಯಗತ್ಯವಾಗಿದೆ ಎಂದು ತಿಳಿಸಿದರು.

ಸರ್ಕಾರವೂ ನಮಗೆ ಸಹಾಯ ಮಾಡುತ್ತಿದೆ. ಆದರೆ ಸ್ವಲ್ಪ ವಿಳಂಬವಾಗಿದೆ. ಅದಾಗ್ಯೂ ಪಿಂಚಣಿ ಸಂಪೂರ್ಣವಾಗಿ ನಿಲ್ಲಿಸಿಲ್ಲ. ಈಗ ಪಿಂಚಣಿಗೆ 20 ಕೋಟಿ ರೂ. ಅನ್ನು ವಿವಿಯಿಂದ ವಿನಿಯೋಗಿಸಲಾಗಿದೆ. ಕಳೆದ ತಿಂಗಳು ಅಧಿವೇಶನ ಇದ್ದ ಹಿನ್ನೆಲೆಯಲ್ಲಿ ಅಧಿಕಾರಿಗಳು ಲಭ್ಯವಿಲ್ಲದೆ, ಪಿಂಚಣಿ ನೀಡಿಕೆಯಲ್ಲಿ ವಿಳಂಬವಾಯಿತು ಎಂದರು.

ಪಿಂಚಣಿ ಸಂಬಂಧ ವಿವಿಗೆ 97 ಕೋಟಿ ರೂ. ಅಗತ್ಯವಿದ್ದಾಗ 50 ಕೋಟಿ ಸರ್ಕಾರ ನೀಡಿತ್ತು. 2019–20ರಿಂದ 50 ಕೋಟಿ ನೀಡುತ್ತಿದೆ. ಆದರೆ ಈ ವರ್ಷ ವಿವಿಗೆ ಅಗತ್ಯವಿರುವುದು 157 ಕೋಟಿ. ಆದರೆ ಸರ್ಕಾರ ಕೊಟ್ಟಿರುವುದು ಕೇವಲ 50 ಕೋಟಿ. ಇದೀಗ ಹೆಚ್ಚುವರಿಯಾಗಿ ಕೊಡುವುದಾಗಿ ಸರ್ಕಾರದ ಮೂಲಗಳು ತಿಳಿಸಿವೆ ಎಂದು ಹೇಳಿದರು.

ಹಾಗಾದರೆ ಪರಿಹಾರ ಏನು ಎಂಬ ಪ್ರಶ್ನೆಗೆ ಉತ್ತರಿಸಿದ ಅವರು, ಈಗ ಹಲವು ಸುತ್ತು ಸಭೆಗಳನ್ನು ನಡೆಸಿದ್ದು, ಸರ್ಕಾರ ಸಹ ಈ ಬಗ್ಗೆ ಗಂಭೀರ ಚಿಂತನೆ ಮಾಡುತ್ತಿದೆ. ವಿವಿ ವಿಭಾಗವಾದ್ದರಿಂದ ಆರ್ಥಿಕ ಮುಗ್ಗಟ್ಟು ವಿವಿಯಲ್ಲಿ ಉಂಟಾಗಿದೆ ಎಂಬುದು ಸರ್ಕಾರಕ್ಕೆ ಮನವರಿಕೆಯಾಗಿದೆ. ಜೊತೆಗೆ ವಿವಿಯ ಮತ್ತೊಂದು ಸಮಸ್ಯೆ ಎಂದರೆ ನೇಮಕಾತಿ ನಡೆದು 17 ವರ್ಷಗಳಾಗಿವೆ. ಈ ಎಲ್ಲವೂ ಸರ್ಕಾರದ ಗಮನಕ್ಕೆ ಬಂದಿದ್ದು, ಈಗ ಮಾರ್ಗಸೂಚಿ ಸಿದ್ಧಪಡಿಸಲಾಗುತ್ತಿದೆ. ಉನ್ನತ ಶಿಕ್ಷಣ ಸಚಿವರು ಇಂತಹ ಸಮಸ್ಯೆಗಳನ್ನು ಗಂಭೀರವಾಗಿ ಪರಿಗಣಿಸಿದ್ದಾರೆ. ಮುಂದಿನ ವರ್ಷದಿಂದ ಎಲ್ಲವೂ ಸರಿಯಾಗುವ ಆಶಾಭಾವನೆ ಹೊಂದಿದ್ದೇವೆ ಎಂದು ತಿಳಿಸಿದರು.

ಡಿ.ಲಿಟ್ ಆಯ್ಕೆ ವಿವಿ ಮಾಡಲ್ಲ: ಗೌರವ ಡಾಕ್ಟರೇಟ್ ಆಯ್ಕೆ ವಿವಿ ಮಾಡುವುದಲ್ಲ. ವಿವಿಯಿಂದ ಕೆಲವರನ್ನು ಶಿಫಾರಸ್ಸು ಮಾಡಲಾಗಿತ್ತು. ಕೆಲವರಿಂದ ಖುದ್ದಾಗಿ ಅರ್ಜಿ ಬಂದಿದ್ದವು. ಹಾಗಾಗಿ ಎಲ್ಲರ ಹೆಸರು ಒಳಗೊಂಡಂತೆ ಕಳುಹಿಸಿದ್ದ ಪಟ್ಟಿಯನ್ನು ರಾಜ್ಯಪಾಲರು ರಚಿಸಿದ್ದ ಸಮಿತಿ ಪರಿಶೀಲಿಸಿ ಅಂತಿಮಗೊಳಿಸಿದೆ. ಅಂತಿಮವಾಗಿ ರಾಜ್ಯಪಾಲರು ಅನುಮೋದಿಸಿದ್ದಾರೆ ಎಂದು ಪ್ರಶ್ನೆಗಳಿಗೆ ಉತ್ತರಿಸಿದರು. ಇದೇ ವೇಳೆ ಗೌರವ ಡಾಕ್ಟರೇಟ್‌ಗೆ ಆಯ್ಕೆಯಾದ ಗಣ್ಯರ ಕೊಡುಗೆಗಳ ಬಗ್ಗೆ ಕುಲಪತಿಗಳು ವಿವರಿಸಿದರು.

ಮೈಸೂರು ಮಿತ್ರ

ಭಾನುವಾರ 4 ಜನವರಿ 2026

ದಲಿತ ಸಮುದಾಯಕ್ಕೆ ಸಿಎಂ ಹುದ್ದೆ ದಕ್ಕಬೇಕು; ಜ.10ಕ್ಕೆ ವಿಚಾರ ಸಂಕಿರಣ

ಮೈಸೂರು, ಜ.3(ಎಂಟಿವೈ)– ರಾಜಕೀಯ ಪ್ರಾತಿನಿಧ್ಯದಿಂದ ವಂಚಿತವಾಗಿರುವ ದಲಿತ ಸಮುದಾಯಕ್ಕೆ ಇದುವರೆಗೂ ಮುಖ್ಯಮಂತ್ರಿ ಹುದ್ದೆ ದೊರೆಯದೇ ಇರುವ ಸಂಬಂಧ ಜ.10ರಂದು ಬೆಳಗ್ಗೆ 10ಕ್ಕೆ ಮೈಸೂರಿನ ಜೆಎಲ್‌ಬಿ ರಸ್ತೆಯಲ್ಲಿರುವ ರೋಟರಿ ಸಭಾಂಗಣದಲ್ಲಿ 'ಗುರಿ ಮುಟ್ಟದ ದಲಿತ ರಾಜಕಾರಣ ಮತ್ತು ಮುಂದಿನ ನಡೆ' ವಿಷಯವಾಗಿ ವಿಚಾರ ಸಂಕಿರಣ ಆಯೋಜಿಸಲಾಗಿದೆ ಎಂದು ಕರ್ನಾಟಕ ರಾಜ್ಯ ದಲಿತ ಸಂಘರ್ಷ ಸಮಿತಿ ರಾಜ್ಯ ಸಂಘಟನಾ ಸಂಚಾಲಕ ದೇವಗಳ್ಳಿ ಸೋಮಶೇಖರ್ ತಿಳಿಸಿದ್ದಾರೆ.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಕರ್ನಾಟಕ ರಾಜ್ಯ ದಲಿತ ಸಂಘರ್ಷ ಸಮಿತಿ ಸಂಸ್ಥಾಪಕ ರಾಜ್ಯ ಸಂಚಾಲಕ ದಿ.ಲಕ್ಷ್ಮೀನಾರಾಯಣ ನಾಗವಾರ ಅವರ ಪ್ರಥಮ ವರ್ಷದ ಪುಣ್ಯಸ್ಮರಣೆ ಅಂಗವಾಗಿ ಈ ವಿಚಾರ ಸಂಕಿರಣ ನಡೆಸಲಾಗುತ್ತಿದೆ. ಕರ್ನಾಟಕದಲ್ಲಿ ಇದುವರೆಗೆ ವಿವಿಧ ಸಮುದಾಯಕ್ಕೆ ಸೇರಿದ ನಾಯಕರು ಸಿಎಂ ಆಗಿ ಅಧಿಕಾರ ನಡೆಸಿದ್ದಾರೆ. ಆದರೆ, ಇದುವರೆಗೂ ದಲಿತ ಸಮುದಾಯಕ್ಕೆ ಸಿಎಂ ಹುದ್ದೆ ದೊರಕಿಲ್ಲ. ಕಳೆದ ವಿಧಾನಸಭಾ ಚುನಾವಣೆಯಲ್ಲಿ ರಾಜ್ಯದಲ್ಲಿರುವ ದಲಿತ ಸಮುದಾಯ ಕಾಂಗ್ರೆಸ್‌ಗೆ ಬೆಂಬಲ ನೀಡಿತ್ತು. ಬಿಜೆಪಿ ಮತ್ತು ಜೆಡಿಎಸ್‌ನಿಂದ ದಲಿತ ಸಿಎಂ ನಿರೀಕ್ಷೆ ಮಾಡುವುದು ಅಸಾಧ್ಯ. ಈ ಹಿನ್ನೆಲೆಯಲ್ಲಿ ಕಾಂಗ್ರೆಸ್ ಪಕ್ಷ ದಲಿತ ನಾಯಕರಲ್ಲಿ ಯಾರನ್ನಾದರೂ ಸಿಎಂ ಮಾಡಬೇಕು ಎಂದು ಒತ್ತಾಯಿಸುವ ನಿಟ್ಟಿನಲ್ಲಿ ವಿಚಾರ ಸಂಕಿರಣ ಆಯೋಜಿಸಲಾಗಿದೆ ಎಂದರು.

ಅಹಿಂದ ರಾಜಕಾರಣದಲ್ಲಿ ದಲಿತ ರಾಜಕಾರಣದ ಅಸ್ತಿತ್ವ ಮತ್ತು ಪರಿಣಾಮಗಳು, ದಲಿತ ರಾಜಕಾರಣಕ್ಕೆ ಐಕ್ಯತೆ ಮತ್ತು ಬಲಿಷ್ಠತೆಯ ಅಗತ್ಯ ಕುರಿತು ವಿಚಾರಗಳು ಚರ್ಚೆಗೆ ಬರಲಿವೆ. ಅಹಿಂದ ಕೇವಲ ಒಂದು ವರ್ಗ ಅಥವಾ ಓರ್ವ ವ್ಯಕ್ತಿಗೆ ಕೇಂದ್ರೀಕೃತವಾಗಿದೆಯೇ, ಹಾಗಿದ್ದರೆ ನಾವೇನು ಮಾಡಬೇಕು, ಪರ್ಯಾಯ ರಾಜಕಾರಣ ಮಾಡಬೇಕೇ ಅಥವಾ ಹಾಲಿ ಇರುವ ಅಹಿಂದಕ್ಕೆ ದಲಿತ ನಾಯಕತ್ವ ರೂಪಿಸಿ ಅವರನ್ನು ಸಿಎಂ ಮಾಡಲು ತೀರ್ಮಾನ ಮಾಡಿ ಎಂದು ಒತ್ತಾಯಿಸಬೇಕೇ ಎಂಬ ಬಗ್ಗೆ ನಿರ್ಧಾರ ಕೈಗೊಳ್ಳಲಾಗುವುದು ಎಂದು ತಿಳಿಸಿದರು.

ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಗೆ ಬಲಿಷ್ಠ ಹಾಗೂ ಸುಭದ್ರ ನಾಯಕತ್ವ ನೀಡಲು ಇಡೀ ದಲಿತ ಸಮುದಾಯ ಹಾಗೂ ದಲಿತ ನಾಯಕರು ಒಕ್ಕೊರಲ ಬೆಂಬಲವೇ ಕಾರಣ. ಹೀಗಿರುವಾಗ ಎರಡೂವರೆ ವರ್ಷದ ಅಧಿಕಾರ ಪೂರೈಸಿ ಸಿದ್ದರಾಮಯ್ಯ ಅವರೇ ಖುದ್ದು ನಿಂತು ದಲಿತ ನಾಯಕರಾದ ಎಂ.ಮಲ್ಲಿಕಾರ್ಜುನ ಖರ್ಗೆ, ಡಾ.ಜಿ.ಪರಮೇಶ್ವರ್, ಡಾ.ಹೆಚ್.ಸಿ.ಮಹದೇವಪ್ಪ ಇವರಲ್ಲೊಬ್ಬರನ್ನು ಸಿಎಂ ಮಾಡಲು ಮುಂದಾಗಬೇಕು ಎಂದು ಮನವಿ ಮಾಡಿದರು. ಗೋಷ್ಠಿಯಲ್ಲಿ ರಾಜ್ಯ ದಲಿತ ಸಂಘರ್ಷ ಸಮಿತಿಯ ಎಸ್.ಡಿ.ಸಣ್ಣಸ್ವಾಮಿ, ಮಣಿಯಯ್ಯ, ರಾಜಶೇಖರ ಕೋಟೆ, ಪ್ರಸನ್ನ, ಮೋಹನ್‌ಕುಮಾರ್ ಹಾಗೂ ಇನ್ನಿತರರು ಇದ್ದರು.

ಹುಣಸೂರು ಪಟ್ಟಣದ ಆಭರಣ ಅಂಗಡಿ ದರೋಡೆ ಪ್ರಕರಣ

ತನಿಖಾ ಪ್ರಗತಿ ಪರಿಶೀಲಿಸಿದ ಮೈಸೂರು ನೂತನ ಎಸ್ಪಿ

ಮೈಸೂರು, ಜ.3 (ಆರ್‌ಕೆ)–2025ರ ಡಿಸೆಂಬರ್ 28ರಂದು ಹುಣಸೂರು ಪಟ್ಟಣದ ಆಭರಣದ ಅಂಗಡಿಯಲ್ಲಿ ನಡೆದ ಸುಮಾರು 10 ಕೋಟಿ ರೂ. ಮೌಲ್ಯದ 8.32 ಕೆ.ಜಿ. ಚಿನ್ನ ಮತ್ತು ವಜ್ರಾಭರಣ ದರೋಡೆ ಪ್ರಕರಣ ಸಂಬಂಧ ಮೈಸೂರು ನೂತನ ಎಸ್ಪಿ ಮಲ್ಲಿಕಾರ್ಜುನ ಬಾಲದಂಡಿ, ಶನಿವಾರ ಖುದ್ದು ಪರಿಶೀಲನೆ ನಡೆಸಿದರು.

ಜನವರಿ 1ರಂದು ಎಸ್ಪಿಯಾಗಿ ಅಧಿಕಾರ ವಹಿಸಿಕೊಂಡ ಮರುದಿನವೇ ಶುಕ್ರವಾರ ಮಧ್ಯಾಹ್ನ ದರೋಡೆ ನಡೆದ ಹುಣಸೂರು ಪಟ್ಟಣದ ಬೈಪಾಸ್ ರಸ್ತೆಯ ಸ್ಕೈ ಗೋಲ್ಡ್ ಅಂಡ್ ಡೈಮಂಡ್ ಅಂಗಡಿಗೆ ಭೇಟಿ ನೀಡಿ, ಪ್ರಕರಣ ಕುರಿತಂತೆ ಅಂಗಡಿ ಪಾಲುದಾರ ಹಾಗೂ ವ್ಯವಸ್ಥಾಪಕರಿಂದ ಮಾಹಿತಿ ಪಡೆದರು. ಕೃತ್ಯ ನಡೆದ ದಿನ ಅಂಗಡಿಯಲ್ಲಿದ್ದ ಆಭರಣಗಳ ಸ್ಟಾಕ್ ರಿಜಿಸ್ಟರ್, ಖರೀದಿ ಬಿಲ್ ಹಾಗೂ ಮಾರಾಟ ಬಿಲ್‌ಗಳನ್ನು ಪರಿಶೀಲಿಸಿದರು.

ನಂತರ ಅಂಗಡಿಯಲ್ಲಿ ಅಳವಡಿಸಿರುವ ಸಿಸಿ ಕ್ಯಾಮರಗಳು, ಘಟನೆ ನಡೆದ ದಿನ ದೃಶ್ಯಾವಳಿಗಳು, ಕಟ್ಟಡದ ಇತರ ಅಂಗಡಿಗಳ ಸ್ಥಿತಿ, ಆಭರಣ ಮಳಿಗೆ ಪ್ರವೇಶ ದ್ವಾರ, ಆ ರಸ್ತೆಗೆ ಸಂಪರ್ಕ ಕಲ್ಪಿಸುವ ಇತರ ರಸ್ತೆಗಳು, ದರೋಡೆಕೋರರು ಚಿನ್ನಾಭರಣದೊಂದಿಗೆ ಪರಾರಿಯಾದ ಮಾರ್ಗದ ಸಿಸಿ ಕ್ಯಾಮರಗಳ ದೃಶ್ಯಾವಳಿಗಳನ್ನೂ ಎಸ್ಪಿ ಬಾಲದಂಡಿಯವರು ಇದೇ ವೇಳೆ ಪರಿಶೀಲಿಸಿದರು.

ಮಾಹಿತಿ ಸಂಗ್ರಹ: ಬಳಿಕ ಡಿವೈಎಸ್ಪಿ ಕಚೇರಿಯಲ್ಲಿ ಅಡಿಷನಲ್ ಎಸ್ಪಿ ನಾಗೇಶ್, ಡಿವೈಎಸ್ಪಿ ರವಿ, ಇನ್ಸ್‌ಪೆಕ್ಟರ್ ಸಂತೋಷ್ ಕಶ್ಯಪ್ ಹಾಗೂ ಇತರ ಪೊಲೀಸ್ ಅಧಿಕಾರಿಗಳೊಂದಿಗೆ ಸಭೆ ನಡೆಸಿ, ದರೋಡೆ ಪ್ರಕರಣದ ತನಿಖೆ ಪ್ರಗತಿ ಕುರಿತು ಮಾಹಿತಿ ಕಲೆ ಹಾಕಿದರು.

ನಾಗೇಶ್ ಮತ್ತು ರವಿ, ಚಿನ್ನಾಭರಣ ದರೋಡೆ ಪ್ರಕರಣ ಭೇದಿಸಲು ತಲಾ ನಾಲ್ವರು ಅಧಿಕಾರಿಗಳನ್ನೊಳಗೊಂಡ 5 ವಿಶೇಷ ತಂಡಗಳನ್ನು ರಚಿಸಲಾಗಿದ್ದು, ತಲೆಮರೆಸಿಕೊಂಡಿರುವ ಆರೋಪಿಗಳ ಪತ್ತೆಗಾಗಿ ಕೇರಳ, ತಮಿಳುನಾಡು, ಆಂಧ್ರಪ್ರದೇಶ, ಹಾಸನ ಹಾಗೂ ಮಡಿಕೇರಿಗಳಲ್ಲಿ ಶೋಧ ನಡೆಸುತ್ತಿದ್ದಾರೆಂದು ಬಾಲದಂಡಿ ಅವರಿಗೆ ಮಾಹಿತಿ ನೀಡಿದರು.

ಕೃತ್ಯ ನಡೆದ ದಿನ ಪಿರಿಯಾಪಟ್ಟಣ ಮತ್ತು ಹರವೆಯಲ್ಲಿ ಹನುಮ ಜಯಂತಿ ಇದ್ದ ಕಾರಣ ಬಂದೋಬಸ್ತ್‌ಗಾಗಿ ಹೆಚ್ಚುವರಿ ಪೊಲೀಸರನ್ನು ಅಲ್ಲಿಗೆ ನಿಯೋಜಿಸಿದ್ದರಿಂದ ಹುಣಸೂರು ಪಟ್ಟಣದಲ್ಲಿ ಪೊಲೀಸರ ಸಂಖ್ಯೆ ವಿರಳವಾಗಿತ್ತು. ಮೂರು ದಿನ ಮುಂಚೆಯೇ ಹುಣಸೂರಿಗೆ ಬಂದಿದ್ದ ದರೋಡೆಕೋರರು ಚಿನ್ನದಂಗಡಿ ಸುತ್ತಮುತ್ತಲಿನ ಪ್ರದೇಶಗಳಲ್ಲಿ ಸುತ್ತಾಡಿ, ದರೋಡೆ ಸಂಚು ರೂಪಿಸಿದ್ದಾರೆ. ಸ್ಕೈಗೋಲ್ಡ್ ಅಂಡ್ ಡೈಮಂಡ್ ಜೊತೆಗೆ ಇತರ ಆಭರಣ ಮಳಿಗೆಗಳ ಬಗ್ಗೆಯೂ ಹೊಂಚು ಹಾಕಿ ಮಾಹಿತಿ ಸಂಗ್ರಹಿಸಿ, ಬಳಿಕ ಸುಲಭವಾಗಿ ಕಾರ್ಯ ಸಾಧ್ಯವಾಗುವಂತಹ ಸದರಿ ಆಭರಣ ಮಳಿಗೆಗಳಲ್ಲಿ ದೋಚಿದ್ದಾರೆ ಎಂಬುದು ಪ್ರಾಥಮಿಕ ತನಿಖೆಯಲ್ಲಿ ತಿಳಿದುಬಂದಿದೆ ಎಂದು ಅವರು ಎಸ್ಪಿಯವರಿಗೆ ವಿವರಿಸಿದ್ದಾರೆ.

ಡಿಸೆಂಬರ್ 28ರಂದು ಮಧ್ಯಾಹ್ನ ಸುಮಾರು 2.05 ಗಂಟೆ ವೇಳೆಗೆ ಹುಣಸೂರು ಪಟ್ಟಣದ ಸ್ಕೈ ಗೋಲ್ಡ್ ಅಂಡ್ ಡೈಮಂಡ್ ಅಂಗಡಿ ಮೇಲೆ ದಾಳಿ ನಡೆಸಿದ ಐವರು ಮುಸುಕುಧಾರಿಗಳು, ಆಭರಣ ಮಳಿಗೆ ಸಿಬ್ಬಂದಿಗೆ ಪಿಸ್ತೂಲ್ ತೋರಿಸಿ, ಚಿನ್ನಾಭರಣಗಳನ್ನು ಬ್ಯಾಗ್‌ಗಳಲ್ಲಿ ತುಂಬಿಕೊಂಡು ಎರಡು ಬೈಕ್‌ಗಳಲ್ಲಿ ಕುಶಾಲನಗರ ಕಡೆ ಪರಾರಿಯಾಗಿದ್ದರು. ಈ ಸಂಬಂಧ ಪ್ರಕರಣ ದಾಖಲಿಸಿಕೊಂಡಿರುವ ಹುಣಸೂರು ಪಟ್ಟಣ ಠಾಣೆ ಪೊಲೀಸರು ತನಿಖೆ ಕೈಗೊಂಡಿದ್ದಾರೆ.



ಹುಣಸೂರು ಪಟ್ಟಣದ ಆಭರಣದ ಅಂಗಡಿಯಲ್ಲಿ ನಡೆದ ದರೋಡೆ ಪ್ರಕರಣ ಸಂಬಂಧ ಮೈಸೂರು ನೂತನ ಎಸ್ಪಿ ಮಲ್ಲಿಕಾರ್ಜುನ ಬಾಲದಂಡಿ, ಅಂಗಡಿ ಸಿಬ್ಬಂದಿಯಿಂದ ಮಾಹಿತಿ ಪಡೆದರು.

> "ಅಂಗಡಿಯಲ್ಲಿ ದೊರೆತ ಸಿಸಿ ಟಿವಿ ದೃಶ್ಯಾವಳಿಗಳ ಸಹಾಯದಿಂದ ದರೋಡೆಕೋರರ ಮುಖಚಹರೆ, ಚಲನವಲನ ಸುಳಿವಿನ ಜಾಡು ಹಿಡಿದು ಆರೋಪಿಗಳ ಪತ್ತೆಗೆ ವಿಶೇಷ ತನಿಖಾ ತಂಡದ ಅಧಿಕಾರಿಗಳು ಶೋಧ ನಡೆಸುತ್ತಿದ್ದಾರೆ. ತಾಂತ್ರಿಕ ಸಿಬ್ಬಂದಿ ನೀಡಿದ ವರದಿಯನ್ನು ಆಧರಿಸಿ ಎಲ್ಲಾ ಆಯಾಮಗಳಲ್ಲಿ ತನಿಖೆ ನಡೆಯುತ್ತಿದೆ.
> –ಮಲ್ಲಿಕಾರ್ಜುನ ಬಾಲದಂಡಿ, ಎಸ್ಪಿ

ಸಾವಿತ್ರಿಬಾಯಿ ಫುಲೆ ಅವರಿಗೆ ಗೌರವ ಸಲ್ಲಿಕೆ...



ಭಾರತದ ಮೊದಲ ಮಹಿಳಾ ಶಿಕ್ಷಕಿ ಸಾವಿತ್ರಿಬಾಯಿ ಫುಲೆ ಜನ್ಮದಿನದ ಅಂಗವಾಗಿ ಅವರಿಗೆ ಗೌರವ ಸಲ್ಲಿಸಲಾಯಿತು. ಈ ವೇಳೆ ನಗರ ಬಿಜೆಪಿ ಎಸ್‌ಟಿ ಮೋರ್ಚಾ ಅಧ್ಯಕ್ಷ ಎಂ.ರಾಮಕೃಷ್ಣ, ಕೆ.ಗಿರೀಶ್, ಕೃಷ್ಣನಾಯಕ, ರಾಜನಾಯಕ, ರಾಕೇಶ್‌ಭಟ್, ತ್ಯಾಗರಾಜ್, ರಾಘವೇಂದ್ರ, ಶಿವು, ನಂದೀಶ್, ಉದ್ಬೂರು ಉಮೇಶ್ ಇತರರಿದ್ದರು.



ಮೈಸೂರು ವಿದ್ಯಾರಣ್ಯಪುರಂನ ಬಾಲಬೋಧಿನಿ ಸರ್ಕಾರಿ ಶಾಲೆಯಲ್ಲಿ ಭಾರತದ ಪ್ರಥಮ ಮಹಿಳಾ ಶಿಕ್ಷಕಿ ಸಾವಿತ್ರಿಬಾಯಿ ಫುಲೆ ಜಯಂತಿ ಆಚರಿಸಲಾಯಿತು. ಈ ಸಂದರ್ಭದಲ್ಲಿ ಮಲ್ಲಿಗೆ ಸೇವಾ ಸಂಘದ ಅಧ್ಯಕ್ಷ ಗೋಪಾಲ್‌ರಾಜೇ ಅರಸ್ (ರಘು ಅರಸ್), ಪದಾಧಿಕಾರಿಗಳಾದ ದಯಾಕರ್, ಪುರುಷೋತ್ತಮ, ಪಂಚಾಕ್ಷರಿ, ಹರೀಶ್, ಅಂಕಿತ್ ಹಾಗೂ ಶಾಲೆಯ ಮುಖ್ಯೋಪಾಧ್ಯಾಯಿನಿ, ಶಿಕ್ಷಕಿಯರೂ ಹಾಗೂ ಅಡುಗೆ ಸಿಬ್ಬಂದಿ, ಪೋಷಕರು ಉಪಸ್ಥಿತರಿದ್ದರು.



ಮೈಸೂರು ತಾಲೂಕು ಜಯಪುರ ಗ್ರಾಪಂನ ಅರಿವು ಕೇಂದ್ರ ಮತ್ತು ಗ್ರಂಥಾಲಯಕ್ಕೆ ಉದ್ಯಮಿ ಹಾಗೂ ಹೆಚ್.ಎಂ.ಐ ಫ್ರೂಟ್ಸ್ ಮಾಲೀಕರಾದ ಜಯಪುರ ಮೋಹಿಯುದ್ದಿನ್ 20 ಸಾವಿರ ಮೌಲ್ಯದ ಶುದ್ಧ ಕುಡಿಯುವ ನೀರಿನ ಘಟಕ, ಸಂವಿಧಾನ ಪೀಠಿಕೆ, ಡಾ.ಅಂಬೇಡ್ಕರ್, ಮಹಾತ್ಮ ಗಾಂಧಿ, ಗ್ರಂಥಾಲಯ ಪಿತಾಮಹ ಎಸ್.ಆರ್.ರಂಗನಾಥ್, ಭುವನೇಶ್ವರಿ ದೇವಿ, ಬಸವಣ್ಣ ಹಾಗೂ ಜ್ಞಾನಪೀಠ ಪ್ರಶಸ್ತಿ ಪುರಸ್ಕೃತರ ಭಾವಚಿತ್ರಗಳನ್ನು ಕೊಡುಗೆಯಾಗಿ ನೀಡಿದರು. ಈ ವೇಳೆ ಮೋಹಿಯುದ್ದಿನ್ ಅವರನ್ನು ಸನ್ಮಾನಿಸಲಾಯಿತು. ಗ್ರಾಪಂ ಅಧ್ಯಕ್ಷ ಎಂ.ಮಾದೇವಯ್ಯ, ಪಿಡಿಓ ಬಸವಣ್ಣ, ಕಾರ್ಯದರ್ಶಿ ವೈ.ಕೆ.ಅನ್ನಪೂರ್ಣ, ಜಯಪುರ ಠಾಣಾ ಮುಖ್ಯಪೇದೆ ಕೃಷ್ಣಶೆಟ್ಟಿ, ಗ್ರಂಥಾಲಯ ಮೇಲ್ವಿಚಾರಕ ಎಸ್.ಸೋಮೇಗೌಡ, ಡಿಇಓ ಭಾರತಿ, ಸಿಬ್ಬಂದಿ ರಾಣಿ ಇನ್ನಿತರರಿದ್ದರು.

ಕಲಾಕೃತಿ ಹಿಂಪಡೆಯಲು ಸೂಚನೆ

ಮೈಸೂರು, ಜ3– ಕರ್ನಾಟಕ ವಸ್ತುಪ್ರದರ್ಶನ ಪ್ರಾಧಿಕಾರ ವತಿಯಿಂದ 2025ರ ದಸರಾ ವಸ್ತು ಪ್ರದರ್ಶನವು ಜ.5 ರಂದು ಮುಕ್ತಾಯವಾಗಲಿರುವುದರಿಂದ ಲಲಿತಕಲಾ ಮತ್ತು ಕರಕುಶಲ ಮತ್ತು ಮಹಿಳಾ ಮತ್ತು ಮಕ್ಕಳ ಉಪಸಮಿತಿಯಲ್ಲಿ ಪ್ರದರ್ಶನಕ್ಕೆ ಇಟ್ಟಿರುವ ಪ್ರದರ್ಶನಕಾರರು ತಮ್ಮ ಕಲಾಕೃತಿಗಳನ್ನು ಜ.2 ರಿಂದ ಜ.12 ರವರೆಗೆ ಕಚೇರಿ ವೇಳೆಯಲ್ಲಿ ಬೆಳಗ್ಗೆ 11:30 ರಿಂದ ಸಂಜೆ 5:30 ಗಂಟೆಯವರೆಗೆ ಹಿಂತಿರುಗಿ ಪಡೆಯಬಹುದಾಗಿರುತ್ತದೆ. ಹೆಚ್ಚಿನ ಮಾಹಿತಿಗಾಗಿ ಮೊಬೈಲ್ ಸಂಖ್ಯೆ 9611600103 ಮತ್ತು 9964410760 ನ್ನು ಸಂಪರ್ಕಿಸಬಹುದು ಎಂದು ಕರ್ನಾಟಕ ವಸ್ತುಪ್ರದರ್ಶನ ಪ್ರಾಧಿಕಾರದ ಮುಖ್ಯ ಕಾರ್ಯನಿರ್ವಾಹಣಾಧಿಕಾರಿ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ನಾಳೆ ಮೈಸೂರಲ್ಲಿ ಕುಂಬಾರರ ರಾಜ್ಯ ಮಹಾ ಸಮ್ಮೇಳನ; ಜಿಲ್ಲಾ ಸಂಘದ ಅಮೃತ ಮಹೋತ್ಸವ



ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಜಿಲ್ಲಾ ಕುಂಬಾರರ ಸಂಘ ಪ್ರಕಟಿಸಿರುವ ಡೈರಿಯನ್ನು ಸಂಘದ ಅಧ್ಯಕ್ಷ ಹೆಚ್.ಎಸ್. ಪ್ರಕಾಶ್ ಬಿಡುಗಡೆ ಮಾಡಿದರು.

ಮೈಸೂರು,ಜ.3(ಎಂಟಿವೈ)– ಮೈಸೂರಿನ ಕಲಾಮಂದಿರದಲ್ಲಿ ಜ.5ರಂದು ಬೆಳಗ್ಗೆ 10.30ಕ್ಕೆ ರಾಜ್ಯ ಕುಂಬಾರರ ಮಹಾ ಸಮ್ಮೇಳನ ಹಾಗೂ ಮೈಸೂರು ಜಿಲ್ಲಾ ಕುಂಬಾರರ ಸಂಘದ ಅಮೃತ ಮಹೋತ್ಸವ ಕಾರ್ಯಕ್ರಮ ಏರ್ಪಡಿಸಲಾಗಿದೆ ಎಂದು ಮೈಸೂರು ಜಿಲ್ಲಾ ಕುಂಬಾರರ ಸಂಘದ ಅಧ್ಯಕ್ಷ ಹೆಚ್.ಎಸ್.ಪ್ರಕಾಶ್ ತಿಳಿಸಿದ್ದಾರೆ.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ರಾಜ್ಯ ಕುಂಬಾರರ ಮಹಾ ಸಮ್ಮೇಳನದಲ್ಲಿ ಕುಂಬಾರ ಸಮುದಾಯದ ಸ್ವಾಮೀಜಿಗಳಾದ ಶ್ರೀ ಕ್ಷೇತ್ರ ಮಾಣೀಲದ ಶ್ರೀ ಮೋಹನದಾಸ್ ಪರಮಹಂಸ ಸ್ವಾಮೀಜಿ, ಬಿಜಾಪುರದ ತೆಲಸಂಗದ ಶ್ರೀ ಬಸವ ಕುಂಬಾರ ಗುಂಡಯ್ಯ ಸ್ವಾಮೀಜಿ, ಚಿತ್ರದುರ್ಗದ ಕುಂಬಾರ ಗುಂಡಯ್ಯ ಮಹಾ ಸಂಸ್ಥಾನದ ಶ್ರೀ ಬಸವಮೂರ್ತಿ ಕುಂಬಾರ ಗುಂಡಯ್ಯ ಸ್ವಾಮೀಜಿ ಸಾನ್ನಿಧ್ಯ ವಹಿಸಲಿದ್ದಾರೆ. ಸಮ್ಮೇಳನದಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ, ಕೇಂದ್ರ ಸಚಿವ ಹೆಚ್.ಡಿ. ಕುಮಾರಸ್ವಾಮಿ, ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಉಪಸ್ಥಿತಿಯಲ್ಲಿ ಜಿಲ್ಲಾ ಉಸ್ತುವಾರಿ ಸಚಿವ ಡಾ.ಹೆಚ್.ಸಿ. ಮಹದೇವಪ್ಪ ಉದ್ಘಾಟಿಸಲಿದ್ದಾರೆ. ಅಲ್ಲದೆ, ಸಚಿವರಾದ ಕೆ.ವೆಂಕಟೇಶ್, ಸತೀಶ್ ಜಾರಕಿಹೊಳಿ, ಡಾ.ರಾಮಲಿಂಗಾರೆಡ್ಡಿ, ಶಿವರಾಜ ತಂಗಡಗಿ, ಉತ್ತರ ಪ್ರದೇಶದ ಹೋಂಗಾರ್ಡ್ ಅಂಡ್ ಸಿವಿಲ್ ಡಿಫೆನ್ಸ್ ಸಚಿವ ಧರ್ಮವೀರ್ ಪ್ರಜಾಪತಿ, ಗೋವಾ ಶಾಸಕ ಪ್ರೇಮೇಂದ್ರ ವಿಷ್ಣುಸೇತ್, ಸಂಸದರಾದ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್, ಸುನಿಲ್ ಬೋಸ್ ಇನ್ನಿತರರು ಪಾಲ್ಗೊಳ್ಳಲಿದ್ದು, ಮೈಸೂರು ಜಿಲ್ಲಾ ಕುಂಬಾರರ ಸಂಘದ ಅಧ್ಯಕ್ಷ ಹೆಚ್.ಎಸ್.ಪ್ರಕಾಶ್ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಲಿದ್ದಾರೆ ಎಂದರು.

ಈ ಸಮ್ಮೇಳನದಲ್ಲಿ ಮೈಸೂರು, ಚಾಮರಾಜನಗರ, ಮಂಡ್ಯ, ಮಡಿಕೇರಿ, ಹಾಸನ, ಕಲ್ಬುರ್ಗಿ ಸೇರಿದಂತೆ ವಿವಿಧ ಜಿಲ್ಲೆಗಳಿಂದ ಐದು ಸಾವಿರ ಮಂದಿ ಪಾಲ್ಗೊಳ್ಳಲಿದ್ದಾರೆ ಎಂದರು.

ಪ್ರಧಾನ ಕಾರ್ಯದರ್ಶಿ ಕೆ.ಆರ್. ಸೋಮಶೇಖರ್ ಮಾತನಾಡಿ, ಸಮುದಾಯವನ್ನು ಒಗ್ಗೂಡಿಸಿ, ಒಂದೇ ವೇದಿಕೆಗೆ ತಂದು ಸರ್ಕಾರದ ಸೌಲಭ್ಯಗಳ ಕಲ್ಪಿಸುವ ಪ್ರಯತ್ನವಾಗಿ ಸಮ್ಮೇಳನ ನಡೆಸಲಾಗುತ್ತಿದೆ ಎಂದು ತಿಳಿಸಿದರು.

ಆಡಳಿತ ಮಂಡಳಿ ಸದಸ್ಯ ಡಾ.ಎಂ.ಪಿ.ವರ್ಷ ಮಾತನಾಡಿ, ಸಮುದಾಯಕ್ಕೆ ಸಂಬಂಧಿಸಿದಂತೆ ಕುಲಶಾಸ್ತ್ರೀಯ ಅಧ್ಯಯನ ನಡೆದಿದೆ. ಆದರೆ ಈಚಿನ ಸಾಮಾಜಿಕ, ಶೈಕ್ಷಣಿಕ ಸಮೀಕ್ಷೆ ವೇಳೆ ಸಮುದಾಯದ ಸಮರ್ಪಕ ಅಂಕಿ ಅಂಶ ಸಂಗ್ರಹವಾಗಿಲ್ಲವೆಂಬ ಅನುಮಾನದ ಕಾರಣ ಕುಲಶಾಸ್ತ್ರೀಯ ಅಧ್ಯಯನದ ಅಂಕಿ ಅಂಶವನ್ನೇ ಅದಕ್ಕೆ ಬಳಸಿಕೊಳ್ಳಬೇಕು. ಸರ್ವಜ್ಞರ ಹೆಸರಿನಲ್ಲಿ ಪ್ರಶಸ್ತಿ ನೀಡಬೇಕು, ನಿಗಮ ಮಂಡಳಿ, ಎಂಎಲ್‌ಸಿ ಸ್ಥಾನ ಸಮುದಾಯದವರಿಗೆ ನೀಡಬೇಕು ಎಂದು ಕೋರಿದರು. ಗೋಷ್ಠಿಯಲ್ಲಿ ಸಮುದಾಯದ ಮುಖಂಡರಾದ ಮಂಜುನಾಥ್, ವೆಂಕಟೇಶ್, ಚಂದ್ರಶೇಖರ್, ಮಾರಶೆಟ್ಟಿ ಇನ್ನಿತರರು ಇದ್ದರು.

ಅಬಕಾರಿ ಕಚೇರಿಯಲ್ಲಿ ಕ್ಯಾಲೆಂಡರ್ ಬಿಡುಗಡೆ...



ಅಬಕಾರಿ ಇಲಾಖೆ ಮೈಸೂರು ಉಪವಿಭಾಗದ ಕಚೇರಿಯಲ್ಲಿ ಕರ್ನಾಟಕ ರಾಜ್ಯ ಸರ್ಕಾರಿ ನೌಕರರ ಸಂಘದ 2026ನೇ ವರ್ಷದ ಕ್ಯಾಲೆಂಡರ್ ಅನ್ನು ಬಿಡುಗಡೆಗೊಳಿಸಲಾಯಿತು. ಈ ವೇಳೆ ಉಪವಿಭಾಗದ ಅಬಕಾರಿ ಉಪ ಅಧೀಕ್ಷಕ ಹೆಚ್.ಕೆ. ರಮೇಶ್, ನೌಕರರ ಸಂಘದ ಅಬಕಾರಿ ಇಲಾಖೆ ಪ್ರತಿನಿಧಿ ಪಿ.ರಾಘವೇಂದ್ರ, ಅಬಕಾರಿ ನಿರೀಕ್ಷಕರು, ಉಪ ನಿರೀಕ್ಷಕರು ಹಾಗೂ ಸಿಬ್ಬಂದಿ ಉಪಸ್ಥಿತರಿದ್ದರು.



ಮೈಸೂರು ನಗರ ಮತ್ತು ಗ್ರಾಮಾಂತರ ಸಾರಿಗೆ ವಿಭಾಗದ ವತಿಯಿಂದ ಡಾ.ಬಿ.ಆರ್. ಅಂಬೇಡ್ಕರ್ ಸಂಘದ ಕ್ಯಾಲೆಂಡರ್ ಬಿಡುಗಡೆಗೊಳಿಸಲಾಯಿತು. ಸಂಘದ ಮುಖಂಡ ಎಂ.ಶಂಕರ್, ಮಾಜಿ ಮೇಯರ್ ಪುರುಷೋತ್ತಮ್, ವಿಭಾಗೀಯ ನಿಯಂತ್ರಣ ಅಧಿಕಾರಿಗಳಾದ ವೀರೇಶ್, ಶ್ರೀನಿವಾಸ್, ಅಧಿಕಾರಿಗಳಾದ ದಿನೇಶ್‌ಕುಮಾರ್, ಹೇಮಂತ್‌ಕುಮಾರ್, ಮಹದೇವಸ್ವಾಮಿ, ರೇವಣ್ಣ ಇನ್ನಿತರರು ಉಪಸ್ಥಿತರಿದ್ದರು.

ನೇಮಕ



ಮೈಸೂರು,ಜ.3(ಎಸ್‌ಪಿಎನ್)–ಶ್ರೀ ರಾಮಾನುಜ ಸಹಕಾರ ಸಂಘದ ನಿರ್ದೇಶಕ, ವಿಪ್ರ ಮುಖಂಡ ಟಿ.ಎಸ್.ಅರುಣ್ ಅವರನ್ನು ಒಂದು ವರ್ಷದ ಅವಧಿಗೆ ಇಲ್ಲವೆ ಮುಂದಿನ ಆದೇಶದವರೆಗೆ ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾದ ಕೇಂದ್ರ ಕಾರ್ಯಕಾರಿ ಸಮಿತಿ ಸದಸ್ಯರನ್ನಾಗಿ ರಾಜ್ಯಾಧ್ಯಕ್ಷ ಎಸ್.ರಘುನಾಥ್ ನೇಮಿಸಿದ್ದಾರೆ.

ವಿಜಯಪುರದಲ್ಲಿ ಹೋರಾಟಗಾರರ ಬಂಧನ ಖಂಡಿಸಿ ಮೈಸೂರಲ್ಲಿ ಅಖಿಲ ಭಾರತ ರೈತ ಕೃಷಿ ಕಾರ್ಮಿಕರ ಸಂಘಟನೆ ಪ್ರತಿಭಟನೆ

ಮೈಸೂರು, ಜ.3(ಜಿಎ)–ವಿಜಯಪುರ ಸರ್ಕಾರಿ ವೈದ್ಯಕೀಯ ಕಾಲೇಜು ಹೋರಾಟಗಾರರ ಬಂಧನ ವಿರೋಧಿಸಿ ಅಖಿಲ ಭಾರತ ರೈತ ಕೃಷಿ ಕಾರ್ಮಿಕರ ಸಂಘಟನೆ ವತಿಯಿಂದ ರಾಮಸ್ವಾಮಿ ವೃತ್ತದಲ್ಲಿ ಪ್ರತಿಭಟನೆ ನಡೆಸಲಾಯಿತು.

ವಿಜಯಪುರ ಸರ್ಕಾರಿ ವೈದ್ಯಕೀಯ ಕಾಲೇಜು ಸ್ಥಾಪನೆಗೆ ಒತ್ತಾಯಿಸಿ ಜ.1ರಂದು ಜಿಲ್ಲಾ ಉಸ್ತುವಾರಿ ಸಚಿವ ಎಂ.ಬಿ. ಪಾಟೀಲ್ ಮನೆ ಮುಂದೆ ಧರಣಿ ಸತ್ಯಾಗ್ರಹ ನಡೆಸಲು ಮುಂದಾದ ಪ್ರತಿಭಟನಾಕಾರರನ್ನು ಪೊಲೀಸರು ದೌರ್ಜನ್ಯ ಹಾಗೂ ಹೀನಾಯ ಬಲಪ್ರಯೋಗ ನಡೆಸಿ ಬಂಧಿಸಿದ್ದಲ್ಲದೆ, ಕೊಲೆ ಯತ್ನ, ಕೊಲೆ ಬೆದರಿಕೆಯಂತಹ ಮೊಕದ್ದಮೆ ಹೂಡಿರುವುದು ಖಂಡನೀಯ ಎಂದು ಪ್ರತಿಭಟನಾಕಾರರು ಆಕ್ರೋಶ ವ್ಯಕ್ತಪಡಿಸಿದರು.

ನ್ಯಾಯಯುತ ಹೋರಾಟ ಹತ್ತಿಕ್ಕುವ ಸರ್ಕಾರದ ಹತಾಶ ಕ್ರಮ. ಸಾರ್ವಜನಿಕ ಹಿತಾಸಕ್ತಿಗೆ ಸಂಪೂರ್ಣ ವಿರುದ್ಧವಾಗಿರುವ ಜನ ವಿರೋಧಿ ಪಿಪಿಪಿ ಮಾದರಿಯಲ್ಲಿ ವೈದ್ಯಕೀಯ ಕಾಲೇಜು ಸ್ಥಾಪನೆ ಮಾಡಲಾಗುತ್ತಿದೆ. ಇದನ್ನು ವಿರೋಧಿಸಿ ಸರ್ಕಾರಿ ಮೆಡಿಕಲ್ ಕಾಲೇಜು ಸ್ಥಾಪನೆಗಾಗಿ ಆಗ್ರಹಿಸಿ ಕಳೆದ 106 ದಿನಗಳಿಂದ ಅಹೋರಾತ್ರಿ ಅನಿರ್ದಿಷ್ಟಾವಧಿ ಧರಣಿ ನಡೆಸಲಾಗುತ್ತಿದೆ. ಸರ್ಕಾರದ ಮೇಲೆ ಒತ್ತಡ ಹೇರಲು ಸಚಿವ ಎಂ.ಬಿ.ಪಾಟೀಲ್ ಮನೆ ಮುಂದೆ ಧರಣಿ ಸತ್ಯಾಗ್ರಹ ನಡೆಸುತ್ತಿದ್ದಾಗ ಪೊಲೀಸರು ಅನಾಗರಿಕರಂತೆ ವರ್ತಿಸಿದ್ದಾರೆ ಎಂದು ಪ್ರತಿಭಟನಾ ಕಾರರು ಕಿಡಿಕಾರಿದರು.

ಜನರಿಗೆ ಲಭ್ಯವಾಗಬೇಕಾದ ಸಾರ್ವಜನಿಕ ಆರೋಗ್ಯ ಸೇವೆಗಾಗಿ ನಡೆಯುತ್ತಿರುವ ಜನಾಂದೋಲನ ಹುಗ್ಗಿಸಲು ಸರ್ಕಾರ ಕೈಗೊಂಡಿರುವ ಕ್ರಮ ಅತ್ಯಂತ ಹೀನ ಮತ್ತು ಅಧಿಕಾರಶಾಹಿಯಾಗಿದೆ. ಜನರನ್ನು ಭಯಭೀತಗೊಳಿಸಿ ಹೋರಾಟ ಇನ್ನಷ್ಟು ವ್ಯಾಪಿಸುವುದನ್ನು ತಡೆಯುವುದೇ ಈ ಬಂಧನದ ಉದ್ದೇಶ. ಕಾಮ್ರೇಡ್ ಭಗವಾನ್ ರೆಡ್ಡಿ ಸೇರಿದಂತೆ ಬಂಧಿತರಾಗಿರುವ ಎಲ್ಲಾ ನಾಯಕರು ಹಾಗೂ ಮಹಿಳಾ ಕಾರ್ಯಕರ್ತರನ್ನು ತಕ್ಷಣ ಬೇಷರತ್ತಾಗಿ ಬಿಡುಗಡೆ ಮಾಡಬೇಕು. ಹೋರಾಟಗಾರರ ಮೇಲಿನ ಎಲ್ಲಾ ಪ್ರಕರಣಗಳನ್ನು ವಾಪಸ್ ತೆಗೆದುಕೊಳ್ಳಬೇಕು. ಕೂಡಲೇ ವಿಜಯಪುರದಲ್ಲಿ ಸರ್ಕಾರಿ ವೈದ್ಯಕೀಯ ಕಾಲೇಜು ಸ್ಥಾಪನೆ ಮಾಡುವುದಾಗಿ ಘೋಷಿಸಬೇಕೆಂದು ಆಗ್ರಹಿಸಿದರು. ಪ್ರತಿಭಟನೆಯಲ್ಲಿ ಎಐಕೆಕೆಎಂಎಸ್‌ನ ರಾಜ್ಯಾಧ್ಯಕ್ಷ ಎಂ.ಶಶಿಧರ್, ಜಿಲ್ಲಾಧ್ಯಕ್ಷ ಹೆಚ್.ಎಂ.ಬಸವರಾಜು, ಜನಾಂದೋಲನಗಳ ಮಹಾ ಮೈತ್ರಿಯ ಉಗ್ರನರಸಿಂಹೇಗೌಡ, ಎಸ್.ಎನ್.ಸ್ವಾಮಿ, ಕೆಲ್ಲಹಳ್ಳಿ ರಾಮಣ್ಣ, ಶಿವಣ್ಣ ನಾಯಕ, ಮಹೇಶ್, ರವಿ, ಜಯಲಕ್ಷ್ಮೀ, ಸುಮತಿ, ನಾಗರತ್ನ, ಮಂಗಳಮ್ಮ ಇತರರು ಪಾಲ್ಗೊಂಡಿದ್ದರು.



ಸರ್ಕಾರಿ ವೈದ್ಯಕೀಯ ಕಾಲೇಜು ಹೋರಾಟಗಾರರ ಬಂಧನ ವಿರೋಧಿಸಿ ಅಖಿಲ ಭಾರತ ರೈತ ಕೃಷಿ ಕಾರ್ಮಿಕರ ಸಂಘಟನೆ ವತಿಯಿಂದ ರಾಮಸ್ವಾಮಿ ವೃತ್ತದಲ್ಲಿ ಪ್ರತಿಭಟನೆ ನಡೆಸಲಾಯಿತು.

ಜಾನಪದ ಭಾವಯಾನ ಸಂಭ್ರಮ; ನಾಳೆ ಗಾಯನ ಕಾರ್ಯಕ್ರಮ

ಮೈಸೂರು,ಜ.3–ಕರ್ನಾಟಕ ಸುಗಮ ಸಂಗೀತ ಪರಿಷತ್ತು, ಮೈಸೂರು ಜಿಲ್ಲಾ ಘಟಕದಿಂದ ಜ.5ರಂದು ನಗರದ ನಾದಬ್ರಹ್ಮ ಸಭಾಂಗಣದಲ್ಲಿ 'ಜಾನಪದ ಭಾವಯಾನ ಸಂಭ್ರಮ' ಎಂಬ ವಿಶೇಷ ಸಂಗೀತ ಕಾರ್ಯಕ್ರಮ ಆಯೋಜಿಸಲಾಗಿದೆ. ಪರಿಷತ್ತಿನ ಜಿಲ್ಲಾ ಅಧ್ಯಕ್ಷ ವಿ.ನಾಗರಾಜ್ ಭೈರಿ ಸಾರಥ್ಯದಲ್ಲಿ ನಡೆಯಲಿರುವ ಕಾರ್ಯಕ್ರಮವು ಸಂಜೆ 5.30ರಿಂದ ರಾತ್ರಿ 9.30 ರವರೆಗೆ ನಡೆಯಲಿದೆ. ಗಾಯಕಿ ಶ್ರೀಮತಿ ಲಕ್ಷ್ಮೀ ದಿನೇಶ್ ಪ್ರಸ್ತುತಪಡಿಸಲಿರುವ ಗಾಯನ ಕಾರ್ಯಕ್ರಮದಲ್ಲಿ ಹೆಸರಾಂತ ಕವಿಗಳು, ಸಾಹಿತಿಗಳ ಅಮರ ಕೃತಿಗಳು ಗಾಯನದ ಮೂಲಕ ಅನಾವರಣಗೊಳ್ಳಲಿವೆ. ಕಾರ್ಯಕ್ರಮಕ್ಕೆ ಗಾಯಕರಾದ ನವೀನ್ ಕುಮಾರ್, ನಾರಾಯಣ್ ಹೆಡತಲೆ ಮತ್ತು ಉದಯ್‌ಕುಮಾರ್ ಧ್ವನಿಯಾಗಲಿದ್ದಾರೆ. ಸಂಗೀತವಾದ್ಯ ಮೇಳದಲ್ಲಿ ಕೀ–ಬೋರ್ಡ್‌ನಲ್ಲಿ ಚಿಕ್ಕಪಾಜಿ, ತಬಲದಲ್ಲಿ ರವಿಕುಮಾರ್ ಹಾಗೂ ರಿದಂ ಪ್ಯಾಡ್‌ನಲ್ಲಿ ಹ್ಯಾಂಡೋ ಸಾಥ್ ನೀಡಲಿದ್ದಾರೆ. ಅತಿಥಿಗಳಾಗಿ ಶಂಕರ್ ದೇವನೂರು, ಮಡ್ಡಿಕೆರೆ ಗೋಪಾಲ್, ಅಂಶಿ ಪ್ರಸನ್ನಕುಮಾರ್, ರಘುರಾಂ ವಾಜಪೇಯಿ ಭಾಗವಹಿಸಲಿದ್ದಾರೆ.

ದೇಶ - ವಿದೇಶ

ತಿರುಪತಿಯಲ್ಲಿ ಭದ್ರತಾ ವೈಫಲ್ಯ: ದೇವಸ್ಥಾನದ ಗೋಪುರ ಏರಿದ ಕುಡುಕ!



ತಿರುಪತಿ: ಭಾರತದ ಪ್ರಸಿದ್ಧ ಪುಣ್ಯಕ್ಷೇತ್ರ ತಿರುಪತಿ ನಗರದಲ್ಲಿರುವ ಟಿಟಿಡಿಯ ವೆಂಕಟೇಶ್ವರ ಸ್ವಾಮಿ ದೇವಸ್ಥಾನದ ಮುಖ್ಯ ದ್ವಾರದ ಗೋಪುರ ಏರಿ ಕುಡುಕ ಯುವಕನೊಬ್ಬ ಆತಂಕ ಸೃಷ್ಟಿಸಿದ್ದ ಘಟನೆ ನಡೆದಿದೆ.

ಭದ್ರತಾ ಸಿಬ್ಬಂದಿಯ ಕಣ್ತಪ್ಪಿಸಿ ದೇವಸ್ಥಾನದ ಪೂರ್ವದಿಕ್ಕಿನ ಮುಖ್ಯದ್ವಾರದ ಗೋಪುರ ಏರಿದ ಯುವಕ ಸುಮಾರು ಮೂರು ತಾಸು ಅಲ್ಲಿಯೇ ಕುಳಿತು ಕಳಶ ಕೀಳಲು ಪ್ರಯತ್ನಿಸಿದ್ದಾನೆ. ಕೆಳಗೆ ಇಳಿದು ಬರುವಂತೆ ಭದ್ರತಾ ಸಿಬ್ಬಂದಿ ಮನವಿ ಮಾಡಿದರೂ ಆತ ನನಗೆ ಕುಡಿಯಲು ಮದ್ಯವನ್ನು ಇಲ್ಲಿಯೇ ಕೊಡಿ ಎಂದು ಮತ್ತಷ್ಟು ಹುಚ್ಚಾಟ ಮಾಡಿದ್ದಾನೆ. ಇದರಿಂದ ರೋಸಿ ಹೋದ ಭದ್ರತಾ ಸಿಬ್ಬಂದಿ ಕಡೆಗೆ ಅಗ್ನಿಶಾಮಕ ಸಿಬ್ಬಂದಿಯ ಸಹಾಯದಿಂದ ಏಣಿ ಹಿಡಿದು ಆತನನ್ನು ಕೆಳಕ್ಕೆ ಇಳಿಸಿ ಬಂಧಿಸಿ ಠಾಣೆಗೆ ಕರೆದೊಯ್ದಿದ್ದಾರೆ. ಘಟನೆಗೆ ಸಂಬಂಧಿಸಿದ ವಿಡಿಯೋಗಳು ಹರಿದಾಡುತ್ತಿವೆ. ಇನ್ನು ಈ ಘಟನೆ ಬಗ್ಗೆ ತಿರುಮಲದ ಟಿಟಿಡಿಯನ್ನು ಟೀಕಿಸುತ್ತಿದ್ದಾರೆ. ಇದೊಂದು ದೊಡ್ಡ ಭದ್ರತಾ ವೈಫಲ್ಯ, ಭದ್ರತಾ ದೃಷ್ಟಿಯಿಂದ ಮತ್ತೆ ಟಿಟಿಡಿ ನಿರ್ಲಕ್ಷ್ಯ ವಹಿಸುತ್ತಿದೆ ಎಂದು ವೈಎಸ್‌ಆರ್‌ಸಿಪಿ ಸೇರಿದಂತೆ ಅನೇಕರು ದೂರಿದ್ದಾರೆ.

600 ಕಿ.ಮೀ ದೂರದ ಗುರಿ ಹೊಡೆಯಬಲ್ಲ ತೈಮೂರ್ ಕ್ಷಿಪಣಿ ಪರೀಕ್ಷೆ ನಡೆಸಿದ ಪಾಕಿಸ್ತಾನ!



ರಾವಲ್ಪಿಂಡಿ: 600 ಕಿ.ಮೀ ದೂರದ ಗುರಿಗಳನ್ನು ಹೊಡೆಯುವ ಸಾಮರ್ಥ್ಯವಿರುವ ತೈಮೂರ್ ಕ್ಷಿಪಣಿ ಪರೀಕ್ಷೆ ಯಶಸ್ವಿಯಾಗಿ ನಡೆಸಿದೆ.

ಪಾಕಿಸ್ತಾನದ ವಾಯುಪಡೆಯು ದೇಶೀಯವಾಗಿ ಇದನ್ನು ಅಭಿವೃದ್ಧಿಪಡಿಸಿರುವುದಾಗಿ ಪ್ರಕಟಣೆಯಲ್ಲಿ ತಿಳಿಸಿದೆ. ಈ ಯಶಸ್ವಿ ಕ್ಷಿಪಣಿ ಪರೀಕ್ಷೆಯು ರಾಷ್ಟ್ರೀಯ ಅಂತರಿಕ್ಷಯಾನ ಮತ್ತು ರಕ್ಷಣಾ ಸಾಮರ್ಥ್ಯಗಳಲ್ಲಿ ಮಹತ್ವದ ಮೈಲಿಗಲ್ಲು ಎಂದು ಪಾಕ್ ಸೇನೆ ತಿಳಿಸಿದೆ.


ತೈಮೂರ್ ಕ್ರೂಸ್ ಕ್ಷಿಪಣಿ 600 ಕಿ. ಮೀ ದೂರದ ವ್ಯಾಪ್ತಿಯಲ್ಲಿ ಹೆಚ್ಚಿನ ನಿಖರತೆಯೊಂದಿಗೆ ಸಾಂಪ್ರದಾಯಿಕ ಸಿಡಿತಲೆ ಹೊತ್ತೊಯ್ಯುವ ಮೂಲಕ ಶತ್ರು ರಾಷ್ಟ್ರದ ಪ್ರದೇಶ ಮತ್ತು ಸಮುದ್ರದ ಗುರಿಗಳನ್ನು ಹೊಡೆಯುವ ಸಾಮರ್ಥ್ಯವನ್ನು ಹೊಂದಿದೆ. ಅತ್ಯಾಧುನಿಕ ನ್ಯಾವಿಗೇಷನ್ ಮತ್ತು ಮಾರ್ಗದರ್ಶನ ವ್ಯವಸ್ಥೆಯನ್ನು ಹೊಂದಿರುವ ತೈಮೂರ್ ಅನ್ನು ಅತ್ಯಂತ ಕಡಿಮೆ ಎತ್ತರದಲ್ಲಿ ಉಡಾಯಿಸುವಂತೆ ಅಭಿವೃದ್ಧಿಗೊಳಿಸಲಾಗಿದೆ. ಇದು ಪ್ರತಿಕೂಲ ಗಾಳಿ ಮತ್ತು ಕ್ಷಿಪಣಿ ರಕ್ಷಣಾ ವ್ಯವಸ್ಥೆಗಳಿಂದ ಪರಿಣಾಮಕಾರಿಯಾಗಿ ತಪ್ಪಿಸಿಕೊಳ್ಳಲು ಅನುವು ಮಾಡಿಕೊಡುತ್ತದೆ ಎಂದು ಪಾಕಿಸ್ತಾನ ಸೇನೆ ಮಾಹಿತಿ ನೀಡಿದೆ.

ಗುಂಡಿನ ಚಕಮಕಿಯಲ್ಲಿ 14 ಮಾವೋವಾದಿಗಳು ಸಾವು



ರಾಯ್‌ಪುರ: ದಕ್ಷಿಣ ಛತ್ತೀಸ್‌ಗಢದ ಸುಕ್ಮಾ ಮತ್ತು ಬಿಜಾಪುರ ಜಿಲ್ಲೆಗಳಲ್ಲಿ ಶನಿವಾರ ಭದ್ರತಾ ಪಡೆಗಳೊಂದಿಗೆ ನಡೆದ 2 ಪ್ರತ್ಯೇಕ ಎನ್‌ಕೌಂಟರ್‌ಗಳಲ್ಲಿ 14 ಸಶಸ್ತ್ರ ಮಾವೋವಾದಿಗಳು ಸಾವನ್ನಪ್ಪಿದ್ದಾರೆ. ಬಿಜಾಪುರದ ಬಸಗುಡ–ಟಾರೆಮ್ ಅರಣ್ಯ ಪ್ರದೇಶ ಮತ್ತು ಸುಕ್ಮಾದ ಕೊಂಟಾ–ಕಿಸ್ತಾರಾಮ್ ಕಾಡುಗಳಲ್ಲಿ ಮಾವೋವಾದಿಗಳ ಓಡಾಟ ಮಾಡುತ್ತಿದ್ದರು ಎಂದು ಹೇಳಲಾಗಿದೆ. ಗುಪ್ತಚರ ಮಾಹಿತಿಯ ನಂತರ ರಾಯ್‌ಪುರದ ದಕ್ಷಿಣಕ್ಕೆ 450 ಕಿ.ಮೀ ದೂರದಲ್ಲಿ ಈ ಎನ್‌ಕೌಂಟರ್‌ಗಳು ನಡೆದಿದೆ. ಜಿಲ್ಲಾ ಮೀಸಲು ಗಾರ್ಡ್ (ಡಿಆರ್‌ಜಿ)ನ ಪ್ರತ್ಯೇಕ ತಂಡಗಳು ಆಯಾ ಪ್ರದೇಶಗಳಲ್ಲಿ ಶೋಧ ಕಾರ್ಯ ಆರಂಭಿಸಿದ್ದು, ಶನಿವಾರ ಬೆಳಿಗ್ಗೆಯಿಂದ ನಿರಂತರ ಗುಂಡಿನ ಚಕಮಕಿ ನಡೆದಿದೆ. ಇದುವರೆಗೆ, ಸುಕ್ಮಾ ಎನ್‌ಕೌಂಟರ್ ಸ್ಥಳದಿಂದ 12 ಮಾವೋವಾದಿಗಳ ಮೃತದೇಹಗಳು, ಬಿಜಾಪುರದಿಂದ ಎರಡು ಮೃತದೇಹಗಳನ್ನು ವಶಕ್ಕೆ ಪಡೆದುಕೊಂಡಿದ್ದಾರೆ ಎಂದು ಬಸ್ತಾರ್ ಇನ್ಸ್‌ಪೆಕ್ಟರ್ ಜನರಲ್ ಸುಂದರರಾಜ್ ಹೇಳಿದ್ದಾರೆ. ಎಕೆ–47, ಐಎನ್‌ಎಸ್‌ಎಎಸ್ ಅಸಾಲ್ಟ್ ರೈಫಲ್, ಸೆಲ್ಫ್–ಲೋಡಿಂಗ್ ರೈಫಲ್, ಇತರ ಶಸ್ತ್ರಾಸ್ತ್ರಗಳನ್ನು ವಶಪಡಿಸಿಕೊಳ್ಳಲಾಗಿದೆ.

ವೆನೆಜುವೆಲಾದ ಮೇಲೆ ಏರ್‌ಸ್ಟ್ರೈಕ್, ಅಧ್ಯಕ್ಷ ಸೆರೆ: ಟ್ರಂಪ್ ಘೋಷಣೆ





ವಾಷಿಂಗ್ಟನ್: ವೆನೆಜುವೆಲಾದ ಅಧ್ಯಕ್ಷ ನಿಕೋಲಸ್ ಮಡುರೊ ಮತ್ತು ಅವರ ಪತ್ನಿಯನ್ನು ಸೆರೆಹಿಡಿಯಲಾಗಿದೆ ಎಂದು ಅಮೆರಿಕದ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅಧಿಕೃತವಾಗಿ ಘೋಷಿಸಿದ್ದಾರೆ. ವೆನೆಜುವೆಲಾದ ಮೇಲೆ ಏರ್‌ಸ್ಟ್ರೈಕ್ ಮಾಡಿದ ಬಳಿ ತಮ್ಮ ಟ್ರೂತ್ ಸಾಮಾಜಿಕ ಜಾಲತಾಣದಲ್ಲಿ ಪೋಸ್ಟ್ ಪ್ರಕಟಿಸಿದ್ದಾರೆ. ಅಮೆರಿಕವು ವೆನೆಜುವೆಲಾ ವಿರುದ್ಧ ದೊಡ್ಡ ಪ್ರಮಾಣದ ದಾಳಿ ನಡೆಸಿ ಅಧ್ಯಕ್ಷ ನಿಕೋಲಸ್ ಮಡುರೊ ಮತ್ತು ಅವರ ಪತ್ನಿಯನ್ನು ಸೆರೆಹಿಡಿದು ದೇಶದಿಂದ ಹೊರಗೆ ಕಳುಹಿಸಿದೆ. ಈ ಕಾರ್ಯಾಚರಣೆಯನ್ನು ಅಮೆರಿಕದ ಕಾನೂನು ಜಾರಿ ಸಂಸ್ಥೆಯೊಂದಿಗೆ ಯಶಸ್ವಿಯಾಗಿ ನಡೆಸಲಾಯಿತು. ವಿವರಗಳನ್ನು ಮುಂದೆ ತನ್ನ ಫ್ಲೋರಿಡಾದಲ್ಲಿರುವ ಮಾರ್–ಎ–ಲಾಗೊದಲ್ಲಿ ನಿವಾಸದಲ್ಲಿ ತಿಳಿಸಲಾಗುವುದು ಎಂದು ಹೇಳಿದ್ದಾರೆ. ಶನಿವಾರ ನಸುಕಿನ ಜಾವ ವೆನೆಜುವೆಲಾ ಕಾಲಮಾನ 2 ಗಂಟೆಯ ವೇಳೆಗೆ ರಾಜಧಾನಿ ಕ್ಯಾರಕಾಸ್ ಮೇಲೆ ಅಮೆರಿಕದ ವಾಯುಸೇನೆ ಏರ್‌ಸ್ಟ್ರೈಕ್ ಮಾಡಿದೆ. ಕನಿಷ್ಠ 7 ದೊಡ್ಡ ಸ್ಫೋಟಗಳು ಸಂಭವಿಸಿದ್ದು ಈಗ ವಿದ್ಯುತ್ ಸಂಪರ್ಕ ಕಡಿತಗೊಂಡಿದೆ. ಹಲವು ಯುದ್ಧ ವಿಮಾನಗಳನ್ನು ಬಳಸಿ ಅಮೆರಿಕ ಈ ದಾಳಿ ನಡೆಸಿದೆ.

ಚೂಪಾದ ಮುಳ್ಳುಗಳ ರಾಶಿ ಮೇಲೆ ನೃತ್ಯ; ತಮಿಳುನಾಡಿನಲ್ಲಿ ವಿಶಿಷ್ಟ ಆಚರಣೆ



ಚೆನ್ನೈ: ತಮಿಳುನಾಡಿನ ಶಿವಗಂಗೈ ಜಿಲ್ಲೆಯ ತಿರುಪ್ಪುವನಂ ಬಳಿಯ ಹಳ್ಳಿಯಲ್ಲಿ ಪೂಂಗವನಂ ಮುತ್ತುಮಾರಿಯಮ್ಮನ್ ದೇವಾಲಯವಿದೆ. 63 ವರ್ಷದ ನಾಗರಾಣಿ ಅಮ್ಮನವರು ಈ ದೇವಾಲಯದ ಆಡಳಿತಾಧಿಕಾರಿ. ಪ್ರತಿ ಮಂಡಲ ಪೂಜೆಯ ಸಮಯದಲ್ಲಿ 48 ದಿನಗಳ ಕಾಲ ಉಪವಾಸ ಆಚರಿಸುವುದು ಮತ್ತು ಜನರಿಗೆ ದೈವಿಕ ಮಾತುಗಳನ್ನು ಹೇಳುವುದು ಇಲ್ಲಿನ ಸಂಪ್ರದಾಯವಾಗಿದೆ. ಈ ವೇಳೆ 7 ಅಡಿ ಎತ್ತರದ ಮುಳ್ಳಿನ ಹಾಸಿಗೆಯನ್ನು ಉಡೈ ಮುಳ್ಳು ಮತ್ತು ಕರುವೇಲ ಮರದ ಮುಳ್ಳಿನಂತಹ ವಸ್ತುಗಳಿಂದ ತಯಾರಿಸಲಾಗುತ್ತದೆ. ನಾಗರಾಣಿ ಅಮ್ಮನವರು ಭಕ್ತರನ್ನು ಆಶೀರ್ವದಿಸಲು ಆ ಮುಳ್ಳಿನ ಹಾಸಿಗೆ ಮೇಲೆ ಕುಳಿತು, ನಿಂತು, ನೃತ್ಯ ಮಾಡುತ್ತಾರೆ! ಈ ವರ್ಷದ 49ನೇ ಮಂಡಲ ಪೂಜಾ ಉತ್ಸವದ ಅಂಗವಾಗಿ, ದೇವಿಗೆ ಶಂಖ ಅಭಿಷೇಕ ಮಾಡಲಾಯಿತು. ನಂತರ, ದೇವಿಗೆ ದೀಪ ಬೆಳಗಿಸಲಾಯಿತು. ಬಳಿಕ ಉಡೈ ಮುಳ್ಳು, ಇಳಂತೈ ಮುಳ್ಳು, ಮತ್ತು ಕತ್ತಲಿ ಮುಳ್ಳು ಮುಂತಾದ ವಿವಿಧ ರೀತಿಯ ಮುಳ್ಳುಗಳನ್ನು ಹೊಂದಿರುವ 7 ಅಡಿ ಎತ್ತರದ ಮುಳ್ಳಿನ ರಾಶಿಯನ್ನು ದೇವಾಲಯದ ಮುಂಭಾಗದ ನೆಲದಲ್ಲಿ ಜೋಡಿಸಿ ನಾಗರಾಣಿ ದೇವಿಯು ಮುಳ್ಳಿನ ಹಾಸಿಗೆಯ ಮೇಲೆ ಕುಳಿತು ಆಶೀರ್ವಾದ ನೀಡಿದರು.

ಪತ್ನಿ ಹತ್ಯೆ ಮಾಡಿದ್ದವ... ಈಗ ದೋಷಮುಕ್ತ

ಪ್ರಕರಣ ನಡೆದ ದಿನದಂದೇ ತೀರ್ಪು ಪ್ರಕಟ

ವಿರಾಜಪೇಟೆ, ಜ.3– ಪತ್ನಿ ಕೊಲೆ ಆರೋಪವನ್ನು ಎದುರಿಸುತ್ತಿದ್ದ ಅಸ್ಸಾಂ ಮೂಲದ ಉಸ್ಮಾನ್ ಅಲಿಯನ್ನು ನ್ಯಾಯಾಲಯ ಸೂಕ್ತ ಸಾಕ್ಷ್ಯಾಧಾರಗಳಿಲ್ಲದ ಕಾರಣ ದೋಷಮುಕ್ತ ಎಂದು ತೀರ್ಪು ನೀಡಿದೆ.

ತಾಲೂಕು ಹೆಗ್ಗಳ ಗ್ರಾಮದ ಎಸ್ ಅಂಡ್ ಎಸ್ ಎಸ್ಟೇಟಿನ ಲೈನ್ ಮನೆಯಲ್ಲಿ ವಾಸವಿದ್ದ ಆರೋಪಿತ ಉಸ್ಮಾನ್ ಅಲಿ, 2019ರ ಜ.3 ರಂದು ತನ್ನ ಎರಡನೇ ಪತ್ನಿ ಮರ್ಜಿನಾ ಕತೂನ್‌ರನ್ನು ಕೊಲೆ ಮಾಡಿ ಕುರುಚಲು ಗಿಡಗಂಟಿಗಳ ಮಧ್ಯೆ ಎಸೆದು ಹೋಗಿದ್ದನೆಂದು ನ್ಯಾಯಾಲಯದಲ್ಲಿ ಪ್ರಕರಣ ದಾಖಲಾಗಿತ್ತು.

ಉಸ್ಮಾನ್ ಅಲಿಯ ಎರಡನೆ ಪತ್ನಿ ಮರ್ಜಿನಾ ಕತೂನ್ ಮೊದಲ ಪತ್ನಿ ಮಮ್ತಾಜ್ ಬೇಗ್‌ನ್ನು ಬಿಟ್ಟುಬಿಡುವಂತೆ ಆಗಿಂದಾಗ್ಗೆ ಪತಿಯನ್ನು ಪೀಡಿಸುತ್ತಿದ್ದಳು. ಇದರಿಂದ ನಿತ್ಯ ಕಿರಿಕಿರಿ ಜಗಳ ಉಂಟಾಗುತ್ತಿತ್ತು. ಇದರಿಂದ ಬೇಸತ್ತ ಪತಿ ಉಸ್ಮಾನ್ ಎರಡನೇ ಪತ್ನಿಯನ್ನು ಕೊಲೆ ಮಾಡುವ ಉದ್ದೇಶದಿಂದ 2019ರ ಜ. 2ರಂದು ಅರಮೇರಿ ಗ್ರಾಮಕ್ಕೆ ತೆರಳಿ ಸ್ಥಳೀಯ ನಿವಾಸಿ ಪಿ.ಬೋಪಣ್ಣ ಅವರ ಹಡಿಲು ಬಿಟ್ಟ ಗದ್ದೆಯ ಬಳಿ ಕರೆದುಕೊಂಡು ಹೋಗಿ ರಾತ್ರಿ ಅಲ್ಲಿಯೇ ಇದ್ದು, ಜ.3ರಂದು ಸಂಜೆ ವೇಳೆ ಮರ್ಜಿನಾ ಧರಿಸಿದ್ದ ವೇಲನ್ನೇ ಆಕೆಯ ಕುತ್ತಿಗೆಗೆ ಬಿಗಿದು ಕೊಲೆಮಾಡಿ, ಶರೀರವನ್ನು ಗಿಡಗಂಟಿಗಳ ಮಧ್ಯೆ ಎಸೆದು ಹೋಗಿದ್ದ. ಈತನ ವಿರುದ್ಧ ಕೊಲೆ ಪ್ರಕರಣ ದಾಖಲಿಸಲಾಗಿತ್ತು. ಕೊಲೆ ಆರೋಪಿ ಹಾಗೂ ಆತನ ಪತ್ನಿಯರು ಅಸ್ಸಾಂ ರಾಜ್ಯಕ್ಕೆ ಸೇರಿದವರಾಗಿದ್ದು ಇಲ್ಲಿಯೇ ಹಲವಾರು ವರ್ಷಗಳಿಂದ ವಾಸಿಸುತ್ತಿದ್ದರು.

ಪ್ರಕರಣದ ವಿಚಾರಣೆ ಜಿಲ್ಲಾ ಹಾಗೂ ಸೆಷನ್ಸ್ ನ್ಯಾಯಾಲಯದಲ್ಲಿ ನಡೆದು ಪೊಲೀಸರು ಸುಮಾರು 30ಕ್ಕೂ ಅಧಿಕ ಸಾಕ್ಷಿಗಳನ್ನು ವಿಚಾರಣೆಗೊಳಪಡಿಸಿದರು. ಅಂತಿಮವಾಗಿ ಪ್ರಕರಣದ ವಿಚಾರಣೆ ನಡೆಸಿದ ಜಿಲ್ಲಾ ನ್ಯಾಯಾಧೀಶ ಎಸ್ ನಟ ರಾಜ್ ಆರೋಪವನ್ನು ಸಾಬೀತುಪಡಿಸುವಲ್ಲಿ ಪ್ರಾಸಿಕ್ಯೂಷನ್ ವಿಫಲವಾಗಿದೆ. ಸೂಕ್ತ ಸಾಕ್ಷ್ಯಾಧಾರವನ್ನು ಸಾಬೀತುಪಡಿಸಿಲ್ಲವೆಂದು ಆರೋಪಿ ಉಸ್ಮಾನ್ ಅಲಿ ಕೊಲೆ ಆರೋಪದಿಂದ ಮುಕ್ತ ಮಾಡಿ ತೀರ್ಪು ನೀಡಿದ್ದಾರೆ. ಆರೋಪಿಯ ಪರ ವಕೀಲ ಡಿ.ಸಿ. ಧ್ರುವ ವಕಾಲತ್ತು ವಹಿಸಿದ್ದರು. ಪ್ರಕರಣ ನಡೆದ ದಿನದಂದೇ ಆರೋಪಿ ಪರ ನ್ಯಾಯಾಲಯ ತೀರ್ಪು ನೀಡಿರುವುದು ಕಾಕತಾಳೀಯ.

ಕಂಪ್ಯೂಟರ್ ಶಿಕ್ಷಣದೊಂದಿಗೆ ಹೆಚ್ಚಿನ ಜ್ಞಾನಾರ್ಜನೆ ಮಾಡಿಕೊಳ್ಳಿ

ಸುಸಜ್ಜಿತ ಕಂಪ್ಯೂಟರ್ ಲ್ಯಾಬ್ ಉದ್ಘಾಟಿಸಿ ಶಾಸಕ ಡಾ.ಮಂತರ್ ಗೌಡ ಅಭಿಮತ

ಕುಶಾಲನಗರ, ಜ.3–ಪಟ್ಟಣದ ಸರ್ಕಾರಿ ಪದವಿ ಪೂರ್ವ ಕಾಲೇಜಿನಲ್ಲಿ ನೂತನವಾಗಿ ನಿರ್ಮಿಸಲಾದ ಸುಸಜ್ಜಿತ ಕಂಪ್ಯೂಟರ್ ಕೊಠಡಿಯನ್ನು ಶನಿವಾರ ಶಾಸಕ ಡಾ.ಮಂತರ್ ಗೌಡ ಉದ್ಘಾಟಿಸಿದರು.

ಕೈಗಾರಿಕೋದ್ಯಮಿಗಳ ಮತ್ತು ವೃತ್ತಿನಿರತರ ವಿವಿದೋದ್ದೇಶ ಸಹಕಾರ ಸಂಘದಿಂದ ಸಮುದಾಯಿಕ ಪ್ರಯೋಜನ ವಿದ್ಯಾ ಯೋಜನೆ ಅಡಿಯಲ್ಲಿ ರೂ.12 ಲಕ್ಷ ವೆಚ್ಚದಲ್ಲಿ ಸ್ಥಾಪಿತಗೊಂಡ ಲ್ಯಾಬ್‌ನ್ನು ಉದ್ಘಾಟಿಸಿ ಮಾತನಾಡಿದ ಅವರು, ವಿದ್ಯಾರ್ಥಿಗಳು ಕಂಪ್ಯೂಟರ್ ಶಿಕ್ಷಣ ಪಡೆದು ತಮ್ಮ ಜ್ಞಾನ ಅಭಿವೃದ್ಧಿ ಪಡಿಸಿಕೊಳ್ಳಬೇಕು ಎಂದರು. ಇಂದಿನ ಸ್ಪರ್ಧಾತ್ಮಕ ಯುಗದಲ್ಲಿ ವಿದ್ಯಾರ್ಥಿಗಳು ಆಂಗ್ಲ ಭಾಷೆಯ ಜ್ಞಾನ, ಕಂಪ್ಯೂಟರ್ ಜ್ಞಾನ ತುಂಬ ಅಗತ್ಯವಾಗಿದೆ. ಕಂಪ್ಯೂಟರ್‌ನಲ್ಲಿ ತಮ್ಮ ಶಿಕ್ಷಣಕ್ಕೆ ಪೂರಕವಾದ ವಿಚಾರ ತಿಳಿಯಲು ಗಮನ ಹರಿಸಬೇಕು ಎಂದರು.

ಸಂಘದ ಅಧ್ಯಕ್ಷ ಟಿ.ಆರ್. ಶರವಣ ಕುಮಾರ್ ಮಾತನಾಡಿ, ಕಂಪ್ಯೂಟರ್ ಶಿಕ್ಷಣದಿಂದ ವಂಚಿತಗೊಂಡಿದ್ದ ಬಡ ಹಾಗೂ ಮಧ್ಯಮ ವರ್ಗದ ವಿದ್ಯಾರ್ಥಿಗಳಿಗೆ ಅನುಕೂಲ ಕಲ್ಪಿಸುವ ಉದ್ದೇಶದಿಂದ ಈ ನೂತನ ಯೋಜನೆ ಹಮ್ಮಿ ಕೊಂಡಿದ್ದು, ಕಂಪ್ಯೂಟರ್‌ಗಳ ತಾಂತ್ರಿಕ ನಿರ್ವಹಣೆಯನ್ನು ಸಂಘ ವಹಿಸಿಕೊಳ್ಳಲಿದೆ. ವಿದ್ಯಾರ್ಥಿಗಳು ಈ ಸೌಲಭ್ಯವನ್ನು ಸದುಪ ಯೋಗ ಪಡಿಸಿಕೊಂಡು ಉನ್ನತ ಶಿಕ್ಷಣ ಪಡೆಯಬೇಕು ಎಂದರು.



ಸುಸಜ್ಜಿತ ಕಂಪ್ಯೂಟರ್ ಕೊಠಡಿ ಉದ್ಘಾಟನೆಯಲ್ಲಿ ಪಾಲ್ಗೊಂಡಿದ್ದ ಸರ್ಕಾರಿ ಪದವಿ ಪೂರ್ವ ಕಾಲೇಜಿನ ವಿದ್ಯಾರ್ಥಿ ವೃಂದ.

ತಾಲೂಕು ಗ್ಯಾರಂಟಿ ಅನುಷ್ಠಾನ ಸಮಿತಿ ಅಧ್ಯಕ್ಷ ವಿ.ಪಿ. ಶಶಿಧರ್ ಮಾತನಾಡಿ, ಕೈಗಾರಿಕೋದ್ಯಮಿಗಳ ಹಾಗೂ ವೃತ್ತಿನಿರತರ ಸಹಕಾರ ಸಂಘದ ವತಿಯಿಂದ ಸಿಎಸ್‌ಆರ್ ಫಂಡ್‌ನಲ್ಲಿ ಅನೇಕ ಜನಪರ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುವ ಮೂಲಕ ಸಂಘದ ಅಧ್ಯಕ್ಷ ಶರವಣ ಕುಮಾರ್ ಜಿಲ್ಲೆಯಲ್ಲಿ ತಮ್ಮ ಛಾಪು ಮೂಡಿಸಿದ್ದಾರೆ ಎಂದರು. ಕೊಡಗು ಜಿಲ್ಲಾ ಶಾಲಾ ಶಿಕ್ಷಣ ಇಲಾಖೆ(ಪದವಿ ಪೂರ್ವ)ಪ್ರಭಾರ ಉಪ ನಿರ್ದೇಶಕ ಪಿ.ಆರ್. ವಿಜಯ್ ಮಾತನಾಡಿದರು.

ಕೆಪಿಸಿಸಿ ಕಾರ್ಯದರ್ಶಿ ಕೆ.ಪಿ.ಚಂದ್ರಕಲಾ, ಕಾಲೇಜಿನ ಅಭಿವೃದ್ಧಿ ಸಮಿತಿ ಉಪಾಧ್ಯಕ್ಷ ಎಸ್.ಎನ್. ರಾಜೇಂದ್ರ, ಪ್ರಭಾರ ಪ್ರಾಂಶುಪಾಲೆ ಬಿ.ಜಿ. ಶಾಂತಿ ಮತ್ತು ಸಂಘದ ಉಪಾಧ್ಯಕ್ಷ ಜೋಸೆಫ್ ವಿಕ್ಟರ್ ಸೋನ್ಸ್, ಸಂಘದ ನಿರ್ದೇಶಕರಾದ ರಾಮ ಕೃಷ್ಣಯ್ಯ, ಶಿವಪ್ರಕಾಶ್, ನಾರಾಯಣ, ಸುರೇಶ್ ಕುಮಾರ್, ಶರತ್, ಕವಿತಾ, ಅಮೃತ್, ಸುರೇಶ್, ಕೃತಿಕಾ ಪೊನ್ನಪ್ಪ ಮತ್ತು ಕೀರ್ತಿ ಲಕ್ಷ್ಮಿ ಸಹ ನಿರ್ದೇಶಕರಾದ ಆರ್.ಕೆ.ನಾಗೇಂದ್ರ ಬಾಬು ಸೇರಿದಂತೆ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಬಿ.ಡಿ. ಶ್ರೀಜೇಶ್, ವ್ಯವಸ್ಥಾಪಕ ಆರ್. ರಾಜು, ನಾಡಪ್ರಭು ಪತ್ತಿನ ಸಹಕಾರ ಸಂಘದ ಅಧ್ಯಕ್ಷ ಎಂ.ಕೆ.ದಿನೇಶ್ ಪಾಲ್ಗೊಂಡಿದ್ದರು.

ನಗರ, ಸಂಚಾರ ಠಾಣೆಗೆ ಎಸ್‌ಪಿ ಭೇಟಿ



ನಗರ, ಸಂಚಾರ ಠಾಣೆಗೆ ಎಸ್‌ಪಿ ಭೇಟಿ ನೀಡಿ ಕಾರ್ಯವೈಖರಿಯನ್ನು ಪರಿಶೀಲಿಸಿದರು

ಮಡಿಕೇರಿ: ನೂತನ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿಯಾಗಿ ಅಧಿಕಾರ ಸ್ವೀಕರಿಸಿರುವ ಆರ್.ಎನ್.ಬಿಂದುಮಣಿ ಇಂದು ನಗರ ಮತ್ತು ಸಂಚಾರ ಠಾಣೆಗೆ ಭೇಟಿ ನೀಡಿ ಕಾರ್ಯವೈಖರಿ ಪರಿಶೀಲಿಸಿದರು.

ಅಧಿಕಾರಿ ಹಾಗೂ ಸಿಬ್ಬಂದಿಗಳೊಂದಿಗೆ ಸಭೆ ನಡೆಸಿ ಕಾನೂನು ಸುವ್ಯವಸ್ಥೆ, ಅಪರಾಧ ತಡೆ ಮತ್ತು ಪತ್ತೆ, ಸಂಚಾರ ಸುವ್ಯವಸ್ಥೆ ಮುಂತಾದ ವಿಚಾರಗಳ ಬಗ್ಗೆ ಚರ್ಚಿಸಿದರು. ಕಾನೂನು ಸುವ್ಯವಸ್ಥೆಗೆ ಅಗತ್ಯವಿರುವ ಸಲಹೆ ಸೂಚನೆಗಳನ್ನು ನೀಡಿದರು. ಡಿವೈಎಸ್‌ಪಿ ಸೂರಜ್, ವೃತ್ತ ನಿರೀಕ್ಷಕ ಪಿ.ಕೆ.ರಾಜು ಮತ್ತು ಪೊಲೀಸ್ ಅಧಿಕಾರಿಗಳು ಹಾಜರಿದ್ದರು.

ಕುಂಬೆ ನಿಧನ



ನಾಪೋಕ್ಲು, ಜ.3– ಇಲ್ಲಿಗೆ ಸಮೀಪದ ಚೆಯ್ಯಂಡಾಣೆ ಪಂಚಾಯಿತಿಯ ಕೋಕೇರಿ ಗ್ರಾಮದ ನಿವಾಸಿ ಅರಮನೆ ಪಾಲೆಯರ ದಿ. ಬೊಗ್ಗರವರ ಧರ್ಮಪತ್ನಿ ಕುಂಬೆ(93) ವಯೋಸಹಜವಾಗಿ ಶನಿವಾರ ನಿಧನರಾದರು.

ಮೃತರು ಇಬ್ಬರು ಪುತ್ರರು, ಮತ್ತು ಇಬ್ಬರು ಪುತ್ರಿಯರು ಸೇರಿದಂತೆ ಬಾಂಧವರನ್ನು ಅಗಲಿದ್ದಾರೆ. ಮೃತರ ಅಂತ್ಯಕ್ರಿಯೆ. ಭಾನುವಾರ ಕೋಕೇರಿ ಗ್ರಾಮದಲ್ಲಿ ಜರುಗಲಿದೆ.

ಇಂದು ತೊರೆನೂರಿನಲ್ಲಿ ವಿಶ್ವ ಮಾನವ ಸಂದೇಶ ಕುರಿತ ಉಪನ್ಯಾಸ

ಕುಶಾಲನಗರ, ಜ.3– ಕಣಿವೆ ಕಟ್ಟೆ ವತಿಯಿಂದ ರಾಷ್ಟ್ರಕವಿ ಕುವೆಂಪು ಅವರ ವಿಶ್ವ ಮಾನವ ಸಂದೇಶ ಕುರಿತ ಉಪನ್ಯಾಸ ಕಾರ್ಯಕ್ರಮವನ್ನು ಜ.4 ರಂದು ತೊರೆನೂರು ಗ್ರಾಮದ ರೇವೇಗೌಡನಕೊಪ್ಪಲಿನ ಶ್ರೀ ಶನೇಶ್ವರ ದೇವಸ್ಥಾನದ ಆವರಣದಲ್ಲಿ ಅಪರಾಹ್ನ 3 ಗಂಟೆಗೆ ಏರ್ಪಡಿಸ ಲಾಗಿದೆ.

ಪದವಿ ಪೂರ್ವ ಕಾಲೇಜಿನ ನಿವೃತ್ತ ಪ್ರಾಂಶುಪಾಲ ಡಾ. ಜೆ.ಸೋಮಣ್ಣ ಕುವೆಂಪು ಅವರ ವಿಶ್ವಮಾನವ ಸಂದೇಶದ ಮಹತ್ವ ಕುರಿತು ಉಪನ್ಯಾಸ ನೀಡಲಿದ್ದಾರೆ. ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘದ ನಿರ್ದೇಶಕ ಕೆ.ಎಸ್. ಕೃಷ್ಣೇಗೌಡ, ಕಾರ್ಯಕ್ರಮದ ಆತಿಥ್ಯ ವಹಿಸಲಿದ್ದಾರೆ ಎಂದು ಕಣಿವೆ ಕಟ್ಟೆಯ ಪ್ರಧಾನ ಸಂಚಾಲಕ ಕೆ.ವಿ.ಉಮೇಶ್ ತಿಳಿಸಿದ್ದಾರೆ.

ಹೆಚ್ಚಿನ ಮಾಹಿತಿಗಾಗಿ ಕೆ.ವಿ.ಉಮೇಶ್ ಮೊ.ನಂ: 9449933145ನ್ನು ಸಂಪರ್ಕಿಸಬೇಕೆಂದು ಪ್ರಕಟಣೆ ತಿಳಿಸಿದೆ.

ಕೊರಗಜ್ಜನ ರೀಲ್ಸ್ ಸ್ಪರ್ಧೆಗೆ ದೈವ ನರ್ತಕರ ಸಂಘ ಖಂಡನೆ

ಮಡಿಕೇರಿ, ಜ.3–ತುಳುನಾಡ ಜನರ ನಂಬುಗೆಯ ದೈವಗಳಲ್ಲಿ ಒಂದಾದ ಕೊರಗಜ್ಜನ ಕುರಿತು ಪ್ರಚಾರಕ್ಕಾಗಿ ಸಿನಿಮಾ ತಂಡ 'ಕೊರಗಜ್ಜ ರೀಲ್ಸ್' ಸ್ಪರ್ಧೆಯನ್ನು ಆಯೋಜಿಸಿರುವುದನ್ನು ಜಿಲ್ಲಾ ದೈವ ಆರಾಧಕರು ಮತ್ತು ದೈವ ನರ್ತಕರ ಸಂಘ ತೀವ್ರವಾಗಿ ಖಂಡಿಸಿದೆ.

ನಿರ್ದೇಶಕ ಸುಧೀರ್ ಅತ್ತಾವರ ನಿರ್ದೇಶನದಲ್ಲಿ ತ್ರಿವಿಕ್ರಮ ಸಿನಿಮಾಸ್ ಮತ್ತು ಸಕ್ಸಸ್ ಲೈಫ್ ಬ್ಯಾನರ್‌ನಡಿ ಕೊರಗಜ್ಜ ಚಿತ್ರ ನಿರ್ಮಾಣಗೊಂಡಿದೆ. ಕೊರಗಜ್ಜ ಚಿತ್ರದಲ್ಲಿರುವ 6 ಹಾಡುಗಳನ್ನು ಪ್ರೇಕ್ಷಕರಿಗೆ ತಲುಪಿಸುವ ನಿಟ್ಟಿನಲ್ಲಿ ಹಾಗೂ ಸಿನಿಮಾದ ಪ್ರಚಾರಕ್ಕಾಗಿ ಕೊರಗಜ್ಜ ರೀಲ್ಸ್ ಎಂಬ ಸ್ಪರ್ಧೆಯನ್ನು ಚಿತ್ರ ತಂಡ ಆಯೋಜಿಸಿದೆ ಎಂದು ಸಂಘದ ಸ್ಥಾಪಕಾಧ್ಯಕ್ಷ ಪಿ.ಎಂ. ರವಿ ಸುದ್ದಿಗೋಷ್ಠಿಯಲ್ಲಿ ತೀವ್ರ ಅಸಮಾಧಾನ ವ್ಯಕ್ತಪಡಿಸಿದರು.

ಕರಾವಳಿ ಕರ್ನಾಟಕ ಭಾಗದಲ್ಲಿ ಕೊರಗಜ್ಜನ ಆರಾಧನೆ ಮಾಡುವವರ ಧಾರ್ಮಿಕ ಭಾವನೆಗಳಿಗೆ ರೀಲ್ಸ್ ಸ್ಪರ್ಧೆ ಧಕ್ಕೆಯನ್ನು ಉಂಟುಮಾಡಬಹುದೆಂಬ ಆತಂಕ ವ್ಯಕ್ತಪಡಿಸಿದ ಅವರು, ಸ್ಪರ್ಧೆ ನಡೆಸುವುದರಿಂದ ಚಿತ್ರತಂಡ ಹಿಂದೆ ಸರಿಯಬೇಕು. ತಪ್ಪಿದಲ್ಲಿ ಕಾನೂನು ಹೋರಾಟಕ್ಕೂ ಸಿದ್ಧವಿರುವುದಾಗಿ ಎಚ್ಚರಿಕೆ ನೀಡಿದರು. ತುಳುನಾಡು ಮತ್ತು ಕೆಲವೇ ಪ್ರದೇಶಕ್ಕೆ ಸೀಮಿತವಾಗಿರುವ ದೈವ ಆರಾಧನೆಯನ್ನು ಇತ್ತೀಚಿನ ದಿನಗಳಲ್ಲಿ ಸಾಮಾಜಿಕ ಜಾಲತಾಣಗಳಲ್ಲಿ ರೀಲ್ಸ್ ಮಾಡುವ ಮೂಲಕ ಅಪಹಾಸ್ಯ ಮಾಡುವುದು ಸರಿಯಲ್ಲ. ದೈವ ಆರಾಧನೆಗೆ ಸಾವಿರಾರು ವರ್ಷಗಳ ಇತಿಹಾಸವಿದ್ದು, ದೈವ ನರ್ತನ ಮಾಡು ವವರು ಹಾಗೂ ದೈವ ಆರಾಧನೆ ಮಾಡುವವರ ಭಾವನೆ ಘಾಸಿಗೊಳಿಸುವ ಪ್ರಯತ್ನ ಯಾರೂ ಮಾಡಬಾರದು ಎಂದರು.

ಸೂಕ್ತ ಕ್ರಮಕ್ಕೆ ಒತ್ತಾಯ: ರಾಜ್ಯ ಸರಕಾರ ಮತ್ತು ಕರ್ನಾಟಕ ಫಿಲಂ ಚೇಂಬರ್ ಆಫ್ ಕಾಮರ್ಸ್ ಈ ಬಗ್ಗೆ ಸೂಕ್ತ ಕ್ರಮ ಕೈಗೊಳ್ಳುವ ಮೂಲಕ ದೈವ ಆರಾಧಕರ ಹಾಗೂ ದೈವ ನರ್ತಕರ ಭಾವನೆಗೆ ಗೌರವ ನೀಡಬೇಕೆಂದು ಮನವಿ ಮಾಡಿದರು. ಶೋಷಿತ ಸಮುದಾಯಕ್ಕೆ ಸೇರಿದ ಪರವ, ಪಂಬದ ಹಾಗೂ ನಲಿಕೆ ಸಮುದಾಯದವರು 16 ಕಟ್ಟಳೆಗಳ ನಿಯಮಾನುಸಾರವಾಗಿ ಪ್ರಕೃತಿದತ್ತ ಸಿರಿ, ಅರದಳ ತೊಟ್ಟು ದೈವದ ನರ್ತನ ಮಾಡುವವರಾಗಿದ್ದು ಇವರ ಸ್ಥಿತಿ ಶೋಚನೀಯವಾಗಿದೆ. ಇವರ ಅಭಿವೃದ್ಧಿಗೆ ಸರಕಾರ ಯಾವುದೇ ಕ್ರಮ ಕೈಗೊಳ್ಳದೆ ಇರುವುದು ನೋವುಂಟು ಮಾಡಿದೆ ಎಂದು ಬೇಸರ ವ್ಯಕ್ತಪಡಿಸಿದರು.

ಸಂಘದ ಅಧ್ಯಕ್ಷ ಸದಾಶಿವ ರೈ, ಪ್ರಧಾನ ಕಾರ್ಯದರ್ಶಿ ಪಿ.ಕೆ.ದಿನೇಶ್, ಸಂಘಟನಾ ಕಾರ್ಯದರ್ಶಿ ಬಿ.ಆರ್.ರಮೇಶ್ ಹಾಗೂ ಸದಸ್ಯ ಮಂಜುನಾಥ ಪೂಜಾರಿ ಸುದ್ದಿಗೋಷ್ಠಿಯಲ್ಲಿ ಉಪಸ್ಥಿತರಿದ್ದರು.

ಗಣರಾಜ್ಯೋತ್ಸವ ಪೆರೇಡ್‌ಗೆ ಕೊಡಗಿನ ಜೆ.ಡಿ.ಸ್ವಾತಿ

ನಾಪೋಕ್ಲು, ಜ.3 (ದುಗ್ಗಳ)– ದೆಹಲಿಯಲ್ಲಿ ಜರುಗಲಿರುವ ಗಣರಾಜ್ಯೋತ್ಸವ ಪಥಸಂಚಲನದಲ್ಲಿ ಭಾಗವಹಿಸಲು ಕೊಡಗಿನ ಜೆ.ಡಿ.ಸ್ವಾತಿ ಆಯ್ಕೆಯಾಗಿದ್ದಾರೆ.



ಮೈಸೂರಿನ ಸೆಂಟ್ ಫಿಲೋಮಿನಾಸ್ ಪದವಿ ಕಾಲೇಜಿನಲ್ಲಿ ವ್ಯಾಸಂಗ ಮಾಡುತ್ತಿರುವ ಸ್ವಾತಿ ಎನ್‌ಸಿಸಿ ಇಂದ ಜೂನಿಯರ್ ಅಂಡರ್ ಆಫೀಸರ್ ಆಗಿ ಗಣರಾಜ್ಯೋತ್ಸವ ಪಥ ಸಂಚಲನದಲ್ಲಿ ಕರ್ನಾಟಕವನ್ನು ಪ್ರತಿನಿಧಿಸುತ್ತಿದ್ದಾರೆ. ಸ್ವಾತಿ ನಾಪೋಕ್ಲು ನೂರಂವಾಡ ಮಠದ ದೇವರಾಜು ಹಾಗೂ ನಯನ ದಂಪತಿಗಳ ಪುತ್ರಿ.



ಶಾಸಕರನ್ನು ಭೇಟಿ ಮಾಡಿದ ಎಸ್‌ಪಿ

ವಿರಾಜಪೇಟೆ: ಜಿಲ್ಲೆಯ ನೂತನ ಪೊಲೀಸ್ ವರಿಷ್ಠಾಧಿಕಾರಿಯಾಗಿ ಅಧಿಕಾರ ವಹಿಸಿಕೊಂಡ ಬಿಂದುಮಣಿ ಅವರು ಇಂದು ವಿರಾಜಪೇಟೆಯ ಶಾಸಕ ಅಜ್ಜಿಕುಟ್ಟಿರ ಎಸ್ ಪೊನ್ನಣ್ಣ ಅವರ ಗೃಹ ಕಚೇರಿಯಲ್ಲಿ ಭೇಟಿಯಾಗಿ ಹೂಗುಚ್ಛ ನೀಡುವುದರ ಮೂಲಕ ಅಭಿನಂದಿಸಿದರು. ಪೊಲೀಸ್ ವರಿಷ್ಠಾಧಿಕಾರಿಯವರನ್ನು ಜಿಲ್ಲೆಗೆ ಸ್ವಾಗತಿಸಿದ ಶಾಸಕರು, ಕರ್ತವ್ಯ ಪಾಲನೆ ಹಾಗೂ ಕಾನೂನು ಕಾಪಾಡುವಲ್ಲಿ ನಿಗಾ ವಹಿಸಿ ಉತ್ತಮವಾಗಿ ಕೆಲಸ ಮಾಡಿ ಎಂದು ಶುಭ ಕೋರಿದರು.

ಬಿಳಿಗಿರಿರಂಗನಬೆಟ್ಟದ ಜಾತ್ರೆ : ಅಗತ್ಯ ಕ್ರಮಕ್ಕೆ ಶಾಸಕರ ಸೂಚನೆ

ಚಾಮರಾಜನಗರ/ ಯಳಂದೂರು, ಜ.3– ಪ್ರಸಿದ್ಧ ಯಾತ್ರಾ ಕ್ಷೇತ್ರ ಬಿಳಿಗಿರಿರಂಗನಬೆಟ್ಟದಲ್ಲಿ ಜ.16ರಂದು ನಡೆಯಲಿರುವ ಸಂಕ್ರಾಂತಿ ರಥೋತ್ಸವ ಚಿಕ್ಕ ಜಾತ್ರೆಗೆ ಬರುವ ಭಕ್ತಾದಿಗಳಿಗೆ ಸಮರ್ಪಕವಾಗಿ ಮೂಲ ಸೌಲಭ್ಯ ಕಲ್ಪಿಸಲು ಅಧಿಕಾರಿಗಳು ಅಗತ್ಯ ಸಿದ್ಧತೆ ಕೈಗೊಳ್ಳುವಂತೆ ಶಾಸಕ ಎ.ಆರ್. ಕೃಷ್ಣ ಮೂರ್ತಿ ಅಧಿಕಾರಿಗಳಿಗೆ ಸೂಚನೆ ನೀಡಿದ್ದಾರೆ.



ಬಿಳಿಗಿರಿರಂಗನಬೆಟ್ಟದಲ್ಲಿ ನಡೆಯಲಿರುವ ಸಂಕ್ರಾಂತಿ ರಥೋತ್ಸವ ಕುರಿತ ಪೂರ್ವಭಾವಿ ಸಭೆಯ ಅಧ್ಯಕ್ಷತೆ ವಹಿಸಿ ಶಾಸಕ ಎ.ಆರ್. ಕೃಷ್ಣಮೂರ್ತಿ ಮಾತನಾಡಿದರು.

ಬಿಳಿಗಿರಿರಂಗನಬೆಟ್ಟದ ಅತಿಗಣ್ಯರ ಪ್ರವಾಸಿ ಮಂದಿರದಲ್ಲಿಂದು ನಡೆದ ಸಂಕ್ರಾಂತಿ ರಥೋತ್ಸವ (ಚಿಕ್ಕ ಜಾತ್ರೆ) ಕುರಿತ ಪೂರ್ವಭಾವಿ ಸಭೆಯ ಅಧ್ಯಕ್ಷತೆ ವಹಿಸಿದ್ದ ಅವರು, ಸಂಕ್ರಾಂತಿ ಹಬ್ಬದ ಮರುದಿನವೇ ಸಂಕ್ರಾಂತಿ ರಥೋತ್ಸವ ನೆರವೇರಲಿದೆ. ಜ.13ರಿಂದ 18ರವರೆಗೆ ಭಕ್ತಾದಿಗಳು ಹೆಚ್ಚಿನ ಸಂಖ್ಯೆಯಲ್ಲಿ ಬರಲಿದ್ದಾರೆ. ಕ್ಷೇತ್ರದಲ್ಲಿ ಮೂಲ ಸೌಕರ್ಯಗಳಿಗೆ ಯಾವುದೇ ಕೊರತೆಯಾಗದಂತೆ ಈಗಿನಿಂದಲೇ ಜಾತ್ರಾ ಮಹೋತ್ಸವಕ್ಕೆ ಅವಶ್ಯವಿರುವ ಎಲ್ಲಾ ಸಿದ್ಧತೆಗಳನ್ನು ಮಾಡಿಕೊಳ್ಳಬೇಕು

ಶುದ್ಧ ಕುಡಿಯುವ ನೀರು ಪೂರೈಸಬೇಕು. ಈಗಾಗಲೇ ಇರುವ ತೊಂಬೆ, ಕೊಳವೆಬಾವಿಯಂತಹ ಇನ್ನಿತರ ನೀರಿನ ಮೂಲಗಳನ್ನು ಪರೀಕ್ಷಿಸಿ ಶುದ್ಧತೆಯ ಬಗ್ಗೆ ಖಾತರಿಪಡಿಸಿಕೊಳ್ಳಬೇಕು. ಚಾಮುಲ್‌ನಿಂದ ಶುದ್ಧ ಕುಡಿಯುವ ನೀರಿನ ಟ್ಯಾಂಕರ್‌ಗಳನ್ನು ತರಿಸಿಕೊಳ್ಳಲು ಸೂಕ್ತ ಕ್ರಮ ವಹಿಸಬೇಕು. ತಾತ್ಕಾಲಿಕವಾಗಿ ಇತರೆ ವಾಟರ್ ಟ್ಯಾಂಕ್‌ಗಳನ್ನು ಇರಿಸಿ, ನೀರಿಗೆ ಎಲ್ಲಿಯೂ ಸಮಸ್ಯೆಯಾಗದಂತೆ ನೋಡಿಕೊಳ್ಳ ಬೇಕು.

ಕ್ಷೇತ್ರದಲ್ಲಿ ಭಕ್ತಾದಿಗಳ ಸಂಖ್ಯೆ ಹೆಚ್ಚಾಗುವುದರಿಂದ ಶುಚಿತ್ವದ ಕಡೆ ಆದ್ಯ ಗಮನಹರಿಸಬೇಕಿದೆ. ಈಗಿರುವ ಶೌಚಾಲಯಗಳ ನಿರ್ವಹಣೆ ಜೊತೆಗೆ ನಗರಸಭೆಗಳಲ್ಲಿ ಲಭ್ಯವಿರುವ ತಾತ್ಕಾಲಿಕ ಮೊಬೈಲ್ ಶೌಚಾಲಯಗಳನ್ನು ಅಳವಡಿಸಬೇಕು. ಹೆಚ್ಚುವರಿಯಾಗಿ ಪೌರಕಾರ್ಮಿಕರನ್ನು ಜಾತ್ರಾ ಸಂದರ್ಭದಲ್ಲಿ ನಿಯೋಜಿಸಬೇಕು. ಕಸ ವಿಲೇವಾರಿಗೆ ಅಗತ್ಯವಿರುವಷ್ಟು ವಾಹನಗಳನ್ನು ನಿಯೋಜನೆ ಮಾಡಬೇಕು. ಕ್ಷೇತ್ರದಲ್ಲಿ ನೈರ್ಮಲ್ಯ ಕಾಪಾಡಿಕೊಳ್ಳಬೇಕು ಎಂದರು.

ಚಿಕ್ಕಜಾತ್ರೆಗೆ ಹೆಚ್ಚುವರಿ ಬಸ್ಸುಗಳು ಕಾರ್ಯಾಚರಣೆಯಾಗಬೇಕು. ಕ್ಷೇತ್ರದಲ್ಲಿ ನಿರಂತರ ವಿದ್ಯುತ್ ಪೂರೈಕೆಯಾಗಬೇಕು. ಅಗತ್ಯ ಸಿಬ್ಬಂದಿಯನ್ನು ನಿಯೋಜಿಸಬೇಕು. ರೇಷ್ಮೆ ಇಲಾಖೆ ಆವರಣ, ಇನ್ನಿತರ ಕಡೆ ವಾಹನಗಳ ನಿಲುಗಡೆಗೆ ವ್ಯವಸ್ಥೆಯನ್ನು ಅಚ್ಚುಕಟ್ಟಾಗಿ ಮಾಡಬೇಕು. ಜಾತ್ರೆ ಹಿನ್ನೆಲೆಯಲ್ಲಿ ಆರೋಗ್ಯ ಇಲಾಖೆ ವತಿಯಿಂದ ತಾತ್ಕಾಲಿಕ ಆರೋಗ್ಯ ಶಿಬಿರ ತೆರೆದು ಅಗತ್ಯ ಸಿಬ್ಬಂದಿ, ಔಷಧೋಪಚಾರಗಳಿಗೂ ಕ್ರಮ ವಹಿಸಬೇಕು ಎಂದು ಸೂಚನೆ ನೀಡಿದರು.

ಗ್ಯಾರಂಟಿ ಅನುಷ್ಠಾನ ಪ್ರಾಧಿಕಾರದ ಜಿಲ್ಲಾಧ್ಯಕ್ಷ ಎಚ್.ವಿ.ಚಂದ್ರು, ತಾಲೂಕು ಅಧ್ಯಕ್ಷ ಗುರುಪ್ರಸಾದ್, ಹೆಚ್ಚುವರಿ ಜಿಲ್ಲಾಧಿಕಾರಿ ಟಿ. ಜವರೇಗೌಡ, ಹೆಚ್ಚುವರಿ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಎಂ.ಎನ್. ಶಶಿಧರ್, ಉಪ ವಿಭಾಗಾಧಿಕಾರಿ ದಿನೇಶ್ ಕುಮಾರ್ ಮೀನಾ, ಡಿವೈಎಸ್‌ಪಿ ಎಂ. ಧರ್ಮೇಂದ್ರ, ತಹಸೀಲ್ದಾರ್ ನಯನ, ವ್ಯವಸ್ಥಾಪನಾ ಸಮಿತಿ ಅಧ್ಯಕ್ಷ ಜೆ. ಶ್ರೀನಿ ವಾಸ್, ಸದಸ್ಯರಾದ ಕೇತಮ್ಮ, ಸ್ಫೂರ್ತಿ ನಾಗೇಶ್, ಎಂ.ಸುರೇಶ್, ರಾಜಣ್ಣ, ವೆಂಕಟರಾಮು, ಸಿದ್ದರಾಜು, ವಿ. ನಾರಾಯಣ ಸ್ವಾಮಿ, ಇನ್ನಿತರ ಮುಖಂಡರು, ಬಿಳಿಗಿರಿರಂಗನಾಥಸ್ವಾಮಿ ದೇವಾಲಯದ ಕಾರ್ಯನಿರ್ವಣಾಧಿಕಾರಿ ಸುರೇಶ್, ತಾ.ಪಂ. ಕಾರ್ಯನಿರ್ವಣಾಧಿಕಾರಿ ಉಮೇಶ್, ಡಿಹೆಚ್‌ಓ ಡಾ. ಎಸ್.ಚಿದಂಬರ, ಪ್ರಾದೇಶಿಕ ಸಾರಿಗೆ ಅಧಿಕಾರಿ ಗಾಯತ್ರಿ, ಕೆ.ಎಸ್. ಆರ್.ಟಿ.ಸಿ ವಿಭಾ ಗೀಯ ನಿಯಂ ತ್ರಣಾಧಿಕಾರಿ ಅಶೋಕ್ ಕುಮಾರ್, ಲೋಕೋಪಯೋಗಿ ಇಲಾಖೆಯ ಸಹಾಯಕ ಕಾರ್ಯಪಾಲಕ ಎಂಜಿನಿಯರ್ ಪುರುಷೋತ್ತಮ್, ಇನ್ನಿತರ ಇಲಾಖೆಗಳ ಅಧಿಕಾರಿಗಳು ಸಭೆಯಲ್ಲಿ ಉಪಸ್ಥಿತರಿದ್ದರು.

ಸುವರ್ಣಾವತಿ ಜಲಾಶಯ ಕಾಲುವೆ ಅಭಿವೃದ್ಧಿಗೆ 30 ಕೋಟಿ ರೂ. ಅನುದಾನ

ಚಾಮರಾಜನಗರ, ಜ.3–ಸುವರ್ಣಾವತಿ ಜಲಾಶಯ ವ್ಯಾಪ್ತಿಯ ಕಾಲುವೆಗಳ ಅಭಿವೃದ್ಧಿಗೆ 30 ಕೋಟಿ ರೂ.ಗಳ ಅನುದಾನ ಬಿಡುಗಡೆಯಾಗಿದ್ದು, ಈ ಸಂಬಂಧ ಟೆಂಡರ್ ಕರೆಯಲಾಗಿದೆ ಎಂದು ಶಾಸಕ ಸಿ. ಪುಟ್ಟರಂಗಶೆಟ್ಟಿ ತಿಳಿಸಿದರು.

ತಾಲೂಕಿನ ಸುವರ್ಣಾವತಿ ಜಲಾಶಯದ ಆವರಣದಲ್ಲಿ ನಡೆದ ನೀರಾವರಿ ಸಲಹಾ ಸಮಿತಿ ಸಭೆಯಲ್ಲಿ ಮಾತನಾಡಿದ ಅವರು, 250 ಕೋಟಿ ವೆಚ್ಚದಲ್ಲಿ ಕೆರೆಗಳಿಗೆ ನೀರು ತುಂಬಿಸುವ ಯೋಜನೆಯಡಿ ಕೋಡಿಮೋಳೆ ಕೆರೆಯಿಂದ ವಡ್ಡಗಾಲಪುರ ಕೆರೆಗೆ ನೀರು ತುಂಬಿಸಲಾಗುವುದು. ಇದರಿಂದ ಜಲಾಶಯದ ನೀರನ್ನು ಸಂಪೂರ್ಣ ಬೇಸಿಗೆ ಬೆಳೆಗೆ ಬಳಸಬಹುದು. ಈ ಹಿಂದೆ ಚಿಕ್ಕಹೊಳೆ ಮತ್ತು ಸುವರ್ಣಾವತಿ ಎರಡು ಜಲಾಶಯದಿಂದ ಜನ ಜಾನುವಾರುಗಳಿಗೆ ಕುಡಿಯುವ ನೀರಿನ ಸಲುವಾಗಿ ಕೆರೆಗಳಿಗೆ ನೀರು ತುಂಬಿಸಬೇಕಾಗಿತ್ತು. ಪ್ರಸ್ತುತ ಈ ಸಮಸ್ಯೆ ಉದ್ಭವಿಸುವುದಿಲ್ಲ ಎಂದು ತಿಳಿಸಿದರು.

ಕಾರ್ಯನಿರ್ವಾಹಕ ಇಂಜಿನಿಯರ್ ಗುರುಪ್ರಸಾದ್ ಮಾತನಾಡಿ, ಇಂದಿನಿಂದ ಬೇಸಿಗೆ ಬೆಳೆಗಳಿಗೆ ನೀರು ಹರಿಸಲಾಗುವುದು. ಬಲದಂಡೆ ಮತ್ತು ಎಡದಂಡೆ ನಾಲೆಗಳಿಗೆ ಸುಮಾರು 4,500 ಎಕರೆ ಪ್ರದೇಶಕ್ಕೆ ನೀರು ಹರಿಸಲಾಗುವುದು. ಚಿಕ್ಕಹೊಳೆ ಜಲಾಶಯವು ಈ ಬಾರಿ ನಿರೀಕ್ಷೆಯಂತೆ ಭರ್ತಿಯಾಗದ ಕಾರಣ ಸಣ್ಣಪುಟ್ಟ ಕೆರೆಗಳಿಗೆ ನೀರು ಹರಿಸಲಾಗುವುದು ಎಂದರು. ಜಿಪಂ ಮಾಜಿ ಸದಸ್ಯ ಅಯ್ಯನಪುರ ಶಿವಕುಮಾರ್ ಮಾತನಾಡಿ, ಜಲಾಶಯದ ವ್ಯಾಪ್ತಿಗೆ ಒಳಪಡದ ಕಡೆ ಕಾಡ ಅನುದಾನ ಬಳಕೆಯಾಗುತ್ತಿದೆ.



ಶಾಸಕ ಪುಟ್ಟರಂಗ ಶೆಟ್ಟಿ ನೀರಾವರಿ ಸಲಹಾ ಸಮಿತಿ ಸಭೆಯಲ್ಲಿ ಮಾತನಾಡಿದರು.

ಜಲಾಶಯದ ವ್ಯಾಪ್ತಿಯಲ್ಲಿ ಬೆರಳೆಣಿಕೆಯಷ್ಟು ಮಾತ್ರ ಕೆಲಸವಾಗಿದೆ ಎಂದು ಆರೋಪಿಸಿದರು.

ಕಾಡಾಧ್ಯಕ್ಷ ಮರಿಸ್ವಾಮಿ, ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್ ಮಹೇಶ್, ಸಹಾಯಕ ಇಂಜಿನಿಯರ್ ವಿಕಾಸ್, ಮಹದೇವ್, ಮಹೇಶ್ ಪ್ರಭು, ರಮೇಶ್, ಗೋವಿಂದರಾಜು, ನಾಗರಾಜು, ನಿಂಗಯ್ಯ, ಶಂಕರ್, ಸೇರಿದಂತೆ ನೂರಾರು ರೈತರು ಪಾಲ್ಗೊಂಡಿದ್ದರು.

ಶೋಷಣೆಯ ವಿರುದ್ಧ ಹೋರಾಡಿದ ಧೀರ ಮಹಿಳೆ ಸಾವಿತ್ರಿಬಾಯಿ ಫುಲೆ



ಪ್ರಥಮ ಮಹಿಳಾ ಶಿಕ್ಷಕಿ ಅಕ್ಷರದವ್ವ ಮಾತೆ ಸಾವಿತ್ರಿ ಬಾಯಿ ಫುಲೆಯವರ ಜನ್ಮದಿನ ಕಾರ್ಯಕ್ರಮದಲ್ಲಿ ಮಂಜುಳಾ ಎ.ಆರ್. ಕೃಷ್ಣಮೂರ್ತಿ ಮಾತನಾಡಿದರು.

ಯಳಂದೂರು, ಜ.3(ವಿ.ನಾಗರಾಜು)–ಮಾತೆ ಸಾವಿತ್ರಿಬಾಯಿ ಫುಲೆರವರ ಆದರ್ಶ ಗುಣಗಳನ್ನು ಪ್ರತಿಯೊಬ್ಬ ಮಹಿಳೆಯರು ಅಳವಡಿಸಿ ಕೊಳ್ಳಬೇಕು. ಭಾರತದಲ್ಲಿ ಪುರಾತನ ಕಾಲದಿಂದಲೂ ಮಹಿಳೆ ಮೇಲೆ ನಿರಂತರ ಶೋಷಣೆಗಳು ನಡೆಯುತ್ತಿದ್ದವು ಈ ಶೋಷಣೆಯ ವಿರುದ್ಧ ಹೋರಾಡಲು ಮಹಿಳೆಯರಿಗೆ ಶಿಕ್ಷಣ ಬೇಕು ಎಂದು ಪಣತೊಟ್ಟ ಧೀರ ಮಹಿಳೆ ಎಂದರೆ ಸಾವಿತ್ರಿ ಬಾಯಿ ಫುಲೆಯವರು ಎಂದು ಶ್ರೀಮತಿ ಮಂಜುಳ ಎ.ಆರ್. ಕೃಷ್ಣಮೂರ್ತಿ ತಿಳಿಸಿದರು

ಪಟ್ಟಣದ ಅಂಬೇಡ್ಕರ್ ಭವನದಲ್ಲಿ ಹಮ್ಮಿಕೊಂಡಿದ್ದ ಪ್ರಥಮ ಮಹಿಳಾ ಶಿಕ್ಷಕಿ ಅಕ್ಷರದವ್ವ ಮಾತೆ ಸಾವಿತ್ರಿ ಬಾಯಿ ಫುಲೆಯವರ ಹುಟ್ಟುಹಬ್ಬವನ್ನು ಉದ್ಘಾಟಿಸಿ ಮಾತನಾಡಿದ ಅವರು, ಪತಿ ಜ್ಯೋತಿಬಾ ಫುಲೆ, ಪತ್ನಿ ಸಾವಿತ್ರಿ ಬಾಯಿ ಫುಲೆಗೆ ಶಿಕ್ಷಣವನ್ನು ನೀಡಿದರು ಇದರ ಫಲ ಸಮಾಜದಲ್ಲಿ ಮಹಿಳೆಯರು ಕೂಡ ಪುರುಷರಷ್ಟೇ ಸಮಾನರೆಂಬ ಜ್ಞಾನವನ್ನು ನೀಡಿ ಅವರನ್ನು ಸಬಲೀಕರಣಗೊಳಿಸಿದರು. ಇವರನ್ನು ವಿಶ್ವದ ಆದರ್ಶ ದಂಪತಿಗಳೆಂದು ಕರೆಯುತ್ತಾರೆ. ಇವರ ಸಾಧನೆ ಮಹಿಳೆಯರಿಗೆ ಸ್ಫೂರ್ತಿಯಾಗಿದೆ ಎಂದರು.

ಶಾಸಕರು ಮಾತನಾಡಿ, ಜ್ಯೋತಿ ಬಾ ಫುಲೆ ಮತ್ತು ಮಾತೆ ಸಾವಿತ್ರಿಬಾಯಿ ಫುಲೆಯವರ ಕೊಡುಗೆ ಈ ದೇಶಕ್ಕೆ ಅಮೂಲ್ಯವಾಗಿದೆ. ಇವರ ಆದರ್ಶಗುಣಗಳನ್ನು ಪ್ರತಿಯೊಬ್ಬರೂ ಮೈಗೂಡಿಸಿಕೊಳ್ಳಬೇಕು ಎಂದರು. ತಾಲೂಕು ಗ್ಯಾರಂಟಿ ಅಧ್ಯಕ್ಷ ಪ್ರಭುಪ್ರಸಾದ್, ಬಿಇಒ ಮಾರಯ್ಯ, ಟಿಪಿಒ ಶಾಂತರಾಜು, ಕರ್ನಾಟಕ ಪಬ್ಲಿಕ್ ಶಾಲೆಯ ಪ್ರಾಂಶುಪಾಲ ನಂಜುಂಡಯ್ಯ, ನಿವೃತ್ತ ಪ್ರಾಂಶುಪಾಲ ಇಂದ್ರಮ್ಮ, ಬಿ.ರಂಗನಬೆಟ್ಟದ ಧರ್ಮದರ್ಶಿ ಅಧ್ಯಕ್ಷ ಜೆ.ಶ್ರೀನಿವಾಸ, ಕುಮಾರಿ, ಡಾ.ಶ್ರೀಧರ್, ಅಂಬೇಡ್ಕರ್ ಸೇವಾ ಸಮಿತಿ ಅಧ್ಯಕ್ಷ ಕೆಸ್ತೂರು ಸಿದ್ದರಾಜು, ಶಿಕ್ಷಕರಾದ ಬಸವಣ್ಣ ಹೊಂಗನೂರು, ಅಂಬಳೆ ಮಹೇಶ್ ಯೋಗೇಶ್, ಪಪಂ ಸದಸ್ಯ ಲಿಂಗರಾಜಮೂರ್ತಿ, ಸರಸ್ವತಿ, ಸಾವಿತ್ರಿಬಾಯಿ ಫುಲೆ ಸಂಘದ ಅಧ್ಯಕ್ಷೆ ಗಣಿಗನೂರು ಮಹದೇವಮ್ಮ, ನೌಕರರ ಸಂಘದ ಅಧ್ಯಕ್ಷ ಅಮ್ಮನಪುರ ಮಹೇಶ್, ಶಿಕ್ಷಕರ ಸಂಘದ ಅಧ್ಯಕ್ಷ ಸೋಮಣ್ಣ, ಶಂಕರ್, ತಾಕಾ ಸಂಘದ ಅಧ್ಯಕ್ಷ ವಿ.ನಾಗರಾಜು, ತಾ.ಕಸಾಪ ಅಧ್ಯಕ್ಷ ಯರಿಯೂರು ನಾಗೇಂದ್ರ ಸಿಐ ಸುಬ್ರಮಣ್ಯಂ, ಪಿಎಸ್‌ಐ ಆಕಾಶ್, ಉಪ್ಪಾರ ಶಿಕ್ಷಕಿಯರು, ಅಂಗನವಾಡಿ ಮತ್ತು ಆಶಾ ಕಾರ್ಯಕರ್ತೆಯರು ಹಾಜರಿದ್ದರು.

ಹಾಲಹಳ್ಳಿ ಗ್ರಾಮದಲ್ಲಿ ಮಹದೇವಪ್ರಸಾದ್ ಪುಣ್ಯಾರಾಧನೆ



ಹಾಲಹಳ್ಳಿ ಗ್ರಾಮದಲ್ಲಿ ದಿ.ಸಚಿವ ಹೆಚ್.ಎಸ್.ಮಹದೇವಪ್ರಸಾದ್ ಪುಣ್ಯಾರಾಧನೆ ಅಂಗವಾಗಿ ಕುಟುಂಬದವರು ಸಮಾಧಿಗೆ ಪೂಜೆ ಸಲ್ಲಿಸಿದರು.

ಗುಂಡ್ಲುಪೇಟೆ, ಜ–3(ಸೋಮ್.ಜಿ)–ತಾಲೂಕಿನ ಹಾಲಹಳ್ಳಿ ಗ್ರಾಮದಲ್ಲಿ ಶನಿವಾರ ಮಾಜಿ ಸಚಿವ ದಿ.ಹೆಚ್.ಎಸ್.ಮಹದೇವಪ್ರಸಾದ್ ಅವರ 9ನೇ ವರ್ಷದ ಪುಣ್ಯಾರಾಧನೆ ಕಾರ್ಯಕ್ರಮ ಸಹಸ್ರಾರು ಅಭಿಮಾನಿಗಳ ಸಮ್ಮುಖದಲ್ಲಿ ನಡೆಯಿತು.

ಮಾಜಿ ಸಚಿವೆ ಡಾ.ಗೀತಾ ಮಹದೇವಪ್ರಸಾದ್, ಪುತ್ರ ಶಾಸಕ ಹೆಚ್.ಎಂ.ಗಣೇಶ್ ಪ್ರಸಾದ್, ಪತ್ನಿ ವಿದ್ಯಾಗಣೇಶ್, ಸಹೋದರ ಹೆಚ್.ಎಂ.ನಂಜುಂಡ ಪ್ರಸಾದ್, ಪತ್ನಿ ರೂಪಾ, ಸಹೋದರಿ ಪ್ರೇಮಾ ಡಾ.ಚಂದ್ರಚೂಡ ಹಾಗೂ ಕುಟುಂಬದ ಸದಸ್ಯರು ಗ್ರಾಮದ ಹೊರವಲಯದಲ್ಲಿರುವ ಬೊಗ್ಗನಪುರ ಫಾರಂನಲ್ಲಿರುವ ಮಹದೇವಪ್ರಸಾದ್ ಅವರ ಸಮಾಧಿಗೆ ಪುಷ್ಪ ನಮನ ಸಲ್ಲಿಸಿದರು. ನಂತರ ಸುದ್ದಿಗಾರರೊಂದಿಗೆ ಮಾತನಾಡಿದ ಶಾಸಕ ಹೆಚ್.ಎಂ.ಗಣೇಶ್‌ಪ್ರಸಾದ್, ಗುಂಡ್ಲುಪೇಟೆ ಕ್ಷೇತ್ರದಲ್ಲಿ ನನ್ನ ತಂದೆಯವರು 25ವರ್ಷಕ್ಕೂ ಹೆಚ್ಚು ಕಾಲ ಶಾಸಕರಾಗಿ, ಸಚಿವರಾಗಿ ದುಡಿದು ಅಭಿವೃದ್ಧಿಯನ್ನು ಪಡಿಸಿದ್ದಾರೆ. ಇಂದಿಗೂ ಸಹ ಕ್ಷೇತ್ರದಲ್ಲಿ ಮಹದೇವಪ್ರಸಾದ್ ಅವರು ಶಿಕ್ಷಣ ಕ್ಷೇತ್ರಕ್ಕೆ, ಆರೋಗ್ಯ ಕ್ಷೇತ್ರಕ್ಕೆ ಹಾಗೂ ಮೂಲಭೂತ ಸೌಕರ್ಯಗಳನ್ನು ಕಲ್ಪಿಸಲು ಶ್ರಮಿಸಿರುವುದನ್ನು ತಾಲೂಕಿನ ಜನತೆ ಮರೆಯುವುದಿಲ್ಲ. ಆ ಕಾರಣಕ್ಕಾಗಿಯೇ ಸಹಸ್ರಾರು ಸಂಖ್ಯೆಯಲ್ಲಿ ಅಭಿಮಾನಿಗಳು ಅವರ ಪುಣ್ಯಾರಾಧನೆಯಲ್ಲಿ ಪಾಲ್ಗೊಳ್ಳುತ್ತಿದ್ದಾರೆ ಎಂದರು. ನಾಡಿನ ವಿವಿಧ ಭಾಗದ ಜನಪ್ರತಿನಿಧಿಗಳು ಸೇರಿದಂತೆ ವಿವಿಧ ಮಠಾಧೀಶರು, ಕಾಂಗ್ರೆಸ್ ಮುಖಂಡರು, ಕಾರ್ಯಕರ್ತರು ಹಾಗೂ ಅಭಿಮಾನಿಗಳು ಸಮಾಧಿಗೆ ಭೇಟಿ ನೀಡಿ ನಮನ ಸಲ್ಲಿಸಿದರು. ಗ್ರಾಮದ ಹೆಚ್.ಎನ್.ಎಸ್. ಸಮುದಾಯ ಭವನದಲ್ಲಿ ಸಾವಿರಾರು ಅಭಿಮಾನಿಗಳು ಹಾಗೂ ಕಾರ್ಯಕರ್ತರಿಗೆ ಪ್ರಸಾದ ವ್ಯವಸ್ಥೆ ಮಾಡಲಾಗಿತ್ತು.

ಬಂಜೆತನ ಸಮಾಲೋಚನೆ ಶಿಬಿರ

ಬೇಗೂರು: ಸ್ಫೂರ್ತಿ ಪಾಲಿಕ್ಲಿನಿಕ್ ಮತ್ತು ಲ್ಯಾಬೋರೇಟರಿ ಸಹಯೋಗದೊಂದಿಗೆ ಬೆಂಗಳೂರಿನ ಐವಿಎಫ್ ಆಕ್ಸಿಸ್ ಫರ್ಟಿಲಿಟಿ ಆಸ್ಪತ್ರೆ ವತಿಯಿಂದ ಉಚಿತ ಬಂಜೆತನ ಸಮಾಲೋಚನೆ ಶಿಬಿರ ನಡೆಯಿತು. ನೂರಕ್ಕೂ ಹೆಚ್ಚು ಮಂದಿ ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು. ಡಾ.ಅಶ್ವಿತಾ ಶೆಟ್ಟಿ, ಮ್ಯಾನೇಜರ್ ಹರೀಶ್, ವ್ಯವಸ್ಥಾಪಕರಾದ ನಾಗೇಶ್, ಪರಮೇಶ್ ಹಾಗೂ ಕ್ಲಿನಿಕ್ ಸಿಬ್ಬಂದಿ ಹಾಜರಿದ್ದರು.

ಪ್ರೇಮಲತಾ ಕೃಷ್ಣಸ್ವಾಮಿಗೆ ಸಾವಿತ್ರಿ ಬಾಯಿಫುಲೆ ರಾಜ್ಯ ಪ್ರಶಸ್ತಿ

ಕೊಳ್ಳೇಗಾಲ, ಜ.3–ಈ ಬಾರಿಯ ಅಕ್ಷರದವ್ವ ಸಾವಿತ್ರಿಬಾಯಿ ಫುಲೆ ರಾಜ್ಯ ಪ್ರಶಸ್ತಿ ಸಮಾಜ ಸೇವಕಿ ಪ್ರೇಮಲತಾ ಕೃಷ್ಣಸ್ವಾಮಿ ಅವರಿಗೆ ಸಂದಿದೆ.



ಸಾವಿತ್ರಿಬಾಯಿ ಫುಲೆ ಜಯಂತಿ ಅಂಗವಾಗಿ ಪ್ರತಿ ವರ್ಷದಂತೆ ಈ ವರ್ಷವೂ ರಾಜ್ಯ ಮಟ್ಟದ ಅಕ್ಷರದವ್ವ ಮಾತೆ ಸಾವಿತ್ರಿಬಾಯಿ ಫುಲೆ ಪ್ರಶಸ್ತಿ ಪ್ರದಾನ ಮಾಡುತ್ತಿರುವುದಾಗಿ ದಲಿತ ವಿದ್ಯಾರ್ಥಿ ಪರಿಷತ್‌ನ ಜಿಲ್ಲಾ ಸಂಚಾಲಕ ರಾಜೇಂದ್ರ ಸಾಮ್ರಾಟ್ ತಿಳಿಸಿದ್ದಾರೆ. ವಿಜಯಪುರ ಜಿಲ್ಲೆಯ ಕಂದಗಲ್ಲ ಹನುಮಂತರಾಯ ರಂಗಮಂದಿರದಲ್ಲಿ ಸಮಾರಂಭ ಜರುಗಲಿದ್ದು ಎಚ್‌ಕೆ ಟ್ರಸ್ಟ್‌ನ ಸಂಸ್ಥಾಪಕ ಕಾರ್ಯ ದರ್ಶಿ ರಾಜ್ಯೋತ್ಸವ ಪ್ರಶಸ್ತಿ ಪುರಸ್ಕೃತರಾದ ಪ್ರೇಮಲತಾ ಕೃಷ್ಣಸ್ವಾಮಿಯವರಿಗೆ ನೀಡಲಾಗುವುದೆಂದು ಪತ್ರಿಕಾ ಹೇಳಿಕೆಯಲ್ಲಿ ಹೇಳಿದರು.

ವಾರದ ಮಿತ್ರ
ಸಾಪ್ತಾಹಿಕ ಪುರವಣಿ

ಮೈಸೂರು ಮಿತ್ರ
ಭಾನುವಾರ 04–01–2026

ವಿನಯ್ ಕಾರೇಕುರ
ಮೊ: 9686893234

ಕಬ್ಬು ಸುಧಾರಕಿ ಡಾ. ಜಾನಕಿ ಅಮ್ಮಾಳ್



ಲಂಡನ್‌ನಲ್ಲಿ ಜಾನ್ ಇನ್ನೆಸ್ ಆರ್ಟಿಕಲ್ಚರಲ್ ಇನ್‌ಸ್ಟಿಟ್ಯೂಷನ್‌ನಲ್ಲಿ ಕೆಲಸ ಮಾಡಿದ ಜಾನಕಿ ಅಮ್ಮಾಳ್, ವಿಜ್ಞಾನಿ ಸಿ.ಡಿ.ಡಾರ್ಲಿಂಗ್‌ಟನ್ ಅವರೊಂದಿಗೆ ಸೇರಿ ಪ್ರಸಿದ್ಧ 'ಕ್ರೋಮೋಸೋಮ್ ಅಟ್ಲಾಸ್ ಆಫ್ ಕಲ್ಟಿವೇಟೆಡ್ ಪ್ಲಾಂಟ್ಸ್' ಗ್ರಂಥವನ್ನು 1945ರಲ್ಲಿ ರಚಿಸಿದರು. ದೇಶದ ಮೊದಲ ಪ್ರಧಾನಿ ಜವಾಹರಲಾಲ್ ನೆಹರೂ ಅವರ ಆಹ್ವಾನದ ಮೇರೆಗೆ ಭಾರತಕ್ಕೆ ಮರಳಿದ ಅವರು, ಭಾರತೀಯ ಸಸ್ಯ ಸಮೀಕ್ಷೆ(BSI)ಯನ್ನು ಪುನರ್ ಸಂಘಟಿಸಿ, ಅದರ ನಿರ್ದೇಶಕರಲ್ಲಿ ಒಬ್ಬರಾಗಿ ಸೇವೆ ಸಲ್ಲಿಸಿದರು.

ಡಾ.ಎಡವಲತ್ ಕಾಕತ್ ಜಾನಕಿ ಅಮ್ಮಾಳ್(ಇ.ಕೆ.ಜಾನಕಿ ಅಮ್ಮಾಳ್), ಅವರು ಸಸ್ಯಶಾಸ್ತ್ರಜ್ಞೆ ಹಾಗೂ ಜೀವಕೋಶ ವಿಜ್ಞಾನಿ. ಮಾತ್ರವಲ್ಲ, ಇವರು ಭಾರತದ ಕೃಷಿ ಇತಿಹಾಸದಲ್ಲಿ ಅಭೂತಪೂರ್ವ ಸುಧಾರಣೆಗೆ ಶ್ರಮಿಸಿದ ಸಾಧಕಿ. ದೇಶಕ್ಕೆ ಸಕ್ಕರೆ ಸ್ವಾವಲಂಬನೆ ತಂದುಕೊಟ್ಟ ಮಹಾನ್ ಸಂಶೋಧಕಿ. ಭಾರತೀಯ ಕಬ್ಬು ಕೃಷಿಯ ತಳಹದಿಯನ್ನೇ ಬದಲಾಯಿಸಿದ ಸ್ತ್ರೀಶಕ್ತಿ. ಇವರ ಜೀವನವು, ಅಸಾಧಾರಣ ವೈಯಕ್ತಿಕ ಆಯ್ಕೆಗಳು ಹಾಗೂ ಕೃಷಿ ಕ್ಷೇತ್ರದಲ್ಲಿ ಅಭೂತಪೂರ್ವ ತಿರುವು ಸೃಷ್ಟಿಸಿದ ವೈಜ್ಞಾನಿಕ ಸಾಧನೆಗಳ ಸಮ್ಮಿಳಿತವಾಗಿರುವುದು ವಿಶೇಷ.

ಭಾರತವು 1930ರ ದಶಕದಲ್ಲಿ ಕಬ್ಬು ಕೃಷಿಗೆ ಸಂಬಂಧಿಸಿದ ಒಂದು ದೊಡ್ಡ ಸವಾಲು ಎದುರಿಸುತ್ತಿತ್ತು ಸ್ಥಳೀಯ ಕಬ್ಬಿನ ತಳಿಗಳಾದ ಸ್ಯಾಕರಮ್ ಸ್ಪಾಂಟೇನಿಯಮ್(Saccharum spontaneum) ಗಟ್ಟಿಮುಟ್ಟಾಗಿದ್ದರೂ, ಅದರಲ್ಲಿ ಸಕ್ಕರೆ ಅಂಶ (ಸುಕ್ರೋಸ್) ಅತ್ಯಂತ ಕಡಿಮೆಯಿತ್ತು. ಪರಿಣಾಮ ಹೆಚ್ಚು ಸಿಹಿಯಾಗಿದ್ದ ವಿದೇಶಿ ತಳಿ 'ನೋಬಲ್ ಕೇನ್' (ಸ್ಯಾಕರಮ್ ಅಫೀಸಿನಾರಮ್– Saccharum officinarum) ಹೆಚ್ಚು ಪ್ರಸಿದ್ಧಿಯಾಗಿತ್ತು. ಆದರೆ ಆ ತಳಿ ಭಾರತದ ವಾತಾವರಣಕ್ಕೆ ಹೊಂದಿಕೆಯಾಗದ ಕಾರಣ, ಆಮದು ಮೇಲೆ ಹೆಚ್ಚು ಅವಲಂಭಿಸಬೇಕಾದ ಪರಿಸ್ಥಿತಿ ನಿರ್ಮಾಣವಾಗಿತ್ತು.

ಈ ಗಂಭೀರ ಸಮಸ್ಯೆ ನಿವಾರಣೆಗಾಗಿ ಡಾ.ಜಾನಕಿ ಅಮ್ಮಾಳ್ ಅವರು ಕೊಯಮತ್ತೂರಿನ ಕಬ್ಬು ತಳಿ ಅಭಿವೃದ್ಧಿ ಸಂಸ್ಥೆ (Sugarcane Breeding Institute)ಯಲ್ಲಿ ಜೆನೆಟಿಸಿಸ್ಟ್(ತಳಿಶಾಸ್ತ್ರಜ್ಞೆ) ಆಗಿ ಕಾರ್ಯಾರಂಭಿಸಿದರು. ಕೋಶವಿಜ್ಞಾನ (Cytogenetics)ಕ್ಕೆ ಹೆಚ್ಚು ಆದ್ಯತೆ ನೀಡಿ, ಕಬ್ಬು ತಳಿಗಳ ವಿಕಸನ ಮತ್ತು ಅವುಗಳ ಕ್ರೋಮೋಸೋಮ್‌ಗಳ(ವರ್ಣತಂತುಗಳ) ಸಂಖ್ಯೆ ಅಧ್ಯಯನಕ್ಕೆ ಆದ್ಯತೆ ನೀಡಿ, ಯಶಸ್ವಿಯೂ ಆದರು.

ಕಠಿಣ ದೇಶೀಯ ತಳಿಯಾದ ಸ್ಯಾಕರಮ್ ಸ್ಪಾಂಟೇನಿಯಮ್ ಅನ್ನು ಸಿಹಿಯಾದ ವಿದೇಶಿ ತಳಿಯೊಂದಿಗೆ ವೈಜ್ಞಾನಿಕವಾಗಿ ಸಂಕರಿಸಿ, ಅವುಗಳಲ್ಲಿನ ಕ್ರೋಮೋಸೋಮ್‌ಗಳ ಜೋಡಣೆಯನ್ನು ನಿಯಂತ್ರಿಸುವ ಮೂಲಕ ಅತ್ಯುತ್ತಮ ಹೊಸ ಹೈಬ್ರಿಡ್ ತಳಿಗಳನ್ನು ಅಭಿವೃದ್ಧಿಪಡಿಸಿದರು. ಈ ತಳಿಗಳು ಹೆಚ್ಚಿನ ಸುಕ್ರೋಸ್ ಅಂಶ ಹೊಂದುವ ಜೊತೆಗೆ ಭಾರತದ ಹವಾಮಾನ ಮತ್ತು ಕಠಿಣ ಮಣ್ಣಿನ ಪರಿಸ್ಥಿತಿಗಳಲ್ಲೂ ಉತ್ತಮವಾಗಿ ಬೆಳೆಯುವ ಸಾಮರ್ಥ್ಯ ಪಡೆದವು.

ರೈತರಿಗೆ ವರದಾನ

ಸಸ್ಯ ಸಂಕರಣ ಹಾಗೂ ತಳಿ ಅಭಿವೃದ್ಧಿ ಸಂಬಂಧಿತ ಸಂಶೋಧನೆಯಲ್ಲಿ ಜಾನಕಿ ಅಮ್ಮಾಳ್ ಅವರ ಸಂಶೋಧನೆ ಮಹಾಸಾಧನೆ ರೈತರಿಗೆ ವರದಾನವಾಯಿತು. ಸಂಶೋಧನೆಯ ಫಲಿತಾಂಶವಾದ 'ಕೋ–ಕಬ್ಬು'(Co-cane) ಸರಣಿಯ ತಳಿಗಳು, ಹಳೆಯ ತಳಿಗಳಿಗಿಂತ ಎರಡ್ಮೂರು ಪಟ್ಟು ಹೆಚ್ಚು ಇಳುವರಿ ನೀಡಿದವು. ಪರಿಣಾಮ ರೈತರು ಹೊಸ ತಳಿ ಕಬ್ಬು ಬೆಳೆಯಲಾರಂಭಿಸಿದರು. ಹೆಚ್ಚು ಸಿಹಿಯಾಗಿದ್ದ ಈ ಕಬ್ಬಿಗೆ ಸಕ್ಕರೆ ಕಾರ್ಖಾನೆಗಳಿಂದ ಬೇಡಿಕೆ ಜೊತೆಗೆ ಉತ್ತಮ ಬೆಲೆಯೂ ದಕ್ಕಿತು. ಇದೆಲ್ಲದರಿಂದ ರೈತರ ಆರ್ಥಿಕ ಪರಿಸ್ಥಿತಿಯೂ ಗಣನೀಯವಾಗಿ ಸುಧಾರಿಸಿತು.

ರೋಗ ನಿರೋಧಕ ಶಕ್ತಿ

ಸ್ಥಳೀಯ ತಳಿಗಳ ಗುಣಾಂಶಗಳನ್ನೂ ಒಳಗೊಂಡಿದ್ದ ಈ ಹೈಬ್ರಿಡ್‌ಗಳು, ಭಾರತದ ಕೃಷಿ ಭೂಮಿಯಲ್ಲಿ ಸಾಮಾನ್ಯವಾಗಿ ಕಾಣಿಸಿಕೊಳ್ಳುವ ರೋಗಗಳು ಮತ್ತು ಕೀಟಭಾದೆಯನ್ನು ಪರಿಣಾಮಕಾರಿಯಾಗಿ ಎದುರಿಸಿದವು. ಇದರಿಂದಾಗಿ ರೈತರ ಬೆಳೆ ನಷ್ಟ ಕಡಿಮೆ ಯಾಗುವುದರ ಜೊತೆಗೆ ರಾಸಾಯನಿಕಗಳ ಬಳಕೆ ಪ್ರಮಾಣವೂ ಕಡಿಮೆ ಆಯಿತು.

ಬಿದಿರು ಸಂಕರ ಪ್ರಯೋಗ

ಕಬ್ಬನ್ನು ಬಿದಿರಿನಂತಹ(Bamboo) ಸಂಬಂಧವಿಲ್ಲದ ಸಸ್ಯದೊಂದಿಗೆ ಸಂಕರಿಸಿ, ಅಂತರ–ಸಾಮಾನ್ಯ ಮಿಶ್ರತಳಿಗಳನ್ನು (inter-generic hybrid) ಸೃಷ್ಟಿಸಿದ ಸಾಹಸಿ ಸಂಶೋಧಕಿ ಡಾ.ಜಾನಕಿ ಅಮ್ಮಳ್. ಈ ತಾಂತ್ರಿಕ ಪ್ರಗತಿಯಿಂದಾಗಿ ಭಾರತದ ಕಬ್ಬಿನ ಇಳುವರಿ ಮತ್ತಷ್ಟು ಗಣನೀಯವಾಗಿ ಹೆಚ್ಚಾಯಿತು. ಈ ಪ್ರಯೋಗ, ಭಾರತವನ್ನು ಸಕ್ಕರೆ ರಫ್ತು ಮಾಡುವ ಹಂತಕ್ಕೆ ಕೊಂಡೊಯ್ಯಲು ಸಹಾಯ ಮಾಡಿತು. ಅಮ್ಮಳ್ ಅವರ ಈ ಪ್ರಯತ್ನಗಳು ಕೇವಲ ಇಳುವರಿಯನ್ನು ಹೆಚ್ಚಿಸುವುದಲ್ಲದೆ, ವಿದೇಶಿ ಆಮದಿನ ಮೇಲೆ ಅವಲಂಭಿತವಾಗುವ ಅನಿವಾರ್ಯತೆಯನ್ನು ದೂರ ಮಾಡಿದರು. ದೇಶವು ಸಕ್ಕರೆಯಲ್ಲಿ ಸ್ವಾವಲಂಬನೆ ಸಾಧಿಸಲು ದಾರಿ ಮಾಡಿಕೊಟ್ಟವು.

ಶಿಕ್ಷಣ ಮತ್ತು ನಿರ್ಭೀತ ಹೆಜ್ಜೆಗಳು

1897ರ ನವೆಂಬರ್ 4ರಂದು ಕೇರಳದ ತಲಸ್ಸೆರಿಯಲ್ಲಿ ಜನಿಸಿದ ಜಾನಕಿ ಅಮ್ಮಳ್ ಅವರ ಜೀವನವು ಅಂದಿನ ಸಮಾಜದ ಕಟ್ಟುಪಾಡುಗಳಿಗೆ ವಿರುದ್ಧವಾಗಿತ್ತು. ವೈವಾಹಿಕ ಜೀವನದ ಬಗ್ಗೆ ಚಿಂತನೆಯನ್ನೂ ಮಾಡದೆ ಅಧ್ಯಯನ ಮತ್ತು ಸಂಶೋಧನೆಯಲ್ಲೆ ಜೀವನದ ಬಹು ಭಾಗವನ್ನು ತೊಡಗಿಸಿಕೊಂಡರು. ಅಮೆರಿಕಾದ ಮಿಚಿಗನ್ ವಿಶ್ವವಿದ್ಯಾಲಯದಿಂದ ಡಾಕ್ಟರ್ ಆಫ್ ಸೈನ್ಸ್ (D.Sc.) ಪದವಿ ಪಡೆದ ಭಾರತದ ಮೊದಲ ಮಹಿಳಾ ವಿಜ್ಞಾನಿ ಎಂಬ ಹೆಗ್ಗಳಿಕೆಗೆ ಪಾತ್ರರಾದರು.


ಲಂಡನ್‌ನಲ್ಲಿ ಜಾನ್ ಇನ್ನೆಸ್ ಆರ್ಟಿಕಲ್ಚರಲ್ ಇನ್‌ಸ್ಟಿಟ್ಯೂಷನ್‌ನಲ್ಲಿ ಕೆಲಸ ಮಾಡಿದ ಜಾನಕಿ ಅಮ್ಮಾಳ್, ವಿಜ್ಞಾನಿ ಸಿ.ಡಿ.ಡಾರ್ಲಿಂಗ್‌ಟನ್ ಅವರೊಂದಿಗೆ ಸೇರಿ ಪ್ರಸಿದ್ಧ 'ಕ್ರೋಮೋಸೋಮ್ ಅಟ್ಲಾಸ್ ಆಫ್ ಕಲ್ಟಿವೇಟೆಡ್ ಪ್ಲಾಂಟ್ಸ್' ಗ್ರಂಥವನ್ನು 1945ರಲ್ಲಿ ರಚಿಸಿದರು. ದೇಶದ ಮೊದಲ ಪ್ರಧಾನಿ ಜವಾಹರಲಾಲ್ ನೆಹರೂ ಅವರ ಆಹ್ವಾನದ ಮೇರೆಗೆ ಭಾರತಕ್ಕೆ ಮರಳಿದ ಅವರು, ಭಾರತೀಯ ಸಸ್ಯ ಸಮೀಕ್ಷೆ(BSI)ಯನ್ನು ಪುನರ್ ಸಂಘಟಿಸಿ, ಅದರ ನಿರ್ದೇಶಕರಲ್ಲಿ ಒಬ್ಬರಾಗಿ ಸೇವೆ ಸಲ್ಲಿಸಿದರು.

ಜಾನಕಿ ಅಮ್ಮಾಳ್ ಅವರು ಸಸ್ಯಶಾಸ್ತ್ರಜ್ಞರಾಗಿ ಮಾತ್ರವಲ್ಲದೆ, ಪರಿಸರ ಸಂರಕ್ಷಣೆ ಕಾರ್ಯಕರ್ತೆಯಾಗಿಯೂ ಗುರುತಿಸಿಕೊಂಡರು. ಕೇರಳದ ಸೈಲೆಂಟ್ ವ್ಯಾಲಿಯ ಅಳಿವಿನಂಚಿನಲ್ಲಿರುವ ಮಳೆಕಾಡುಗಳನ್ನು ಉಳಿಸಲು, ಜಲವಿದ್ಯುತ್ ಯೋಜನೆ ವಿರುದ್ಧದ ಹೋರಾಟದಲ್ಲಿ ಅವರು ಸಕ್ರಿಯವಾಗಿ ಭಾಗವಹಿಸಿದ್ದರು. 1977ರಲ್ಲಿ ಭಾರತ ಸರ್ಕಾರವು ಜಾನಕಿ ಅಮ್ಮಾಳ್ ಅವರಿಗೆ 'ಪದ್ಮಶ್ರೀ ಪ್ರಶಸ್ತಿ' ನೀಡಿ, ಗೌರವಿಸಿತು. ಡಾ.ಜಾನಕಿ ಅಮ್ಮಾಳ್, ವಿಜ್ಞಾನ ಕ್ಷೇತ್ರದಲ್ಲಿ ಮಹಿಳೆಯರಿಗೆ ಸ್ಫೂರ್ತಿಯ ಸೆಲೆಯಾಗಿದ್ದಾರೆ. ಅವರ ಕಬ್ಬು ಸಂಶೋಧನೆಯ ಫಲವನ್ನು ಭಾರತದ ಪ್ರತಿಯೊಬ್ಬರೂ ಇಂದಿಗೂ ಸವಿಯುತ್ತಿದ್ದಾರೆ. ಅವರ ಸಾಧನೆ ಪ್ರತಿ ರೈತರ ಭೂಮಿ ಮೂಲಕ ದೇಶದ ಆರ್ಥಿಕತೆಗೆ ಸಿಹಿಯ ಸವಿ ನೀಡಿದೆ.




ಮಕ್ಕಳ ಚಿತ್ರಕಥೆ: 'ಒಂಟೆ ಮತ್ತು ನರಿ'


■ ಹೆಚ್.ಜಿ.ಎನ್.ಪ್ರಸಾದ್
ಮೊ. 98453 76199




'ಲಂಬೂ' ಎನ್ನುವ ಒಂಟೆ ಮತ್ತು 'ಚೋಟು' ಎನ್ನುವ ನರಿ ಆಪ್ತ ಸ್ನೇಹಿತರು.




ಇಬ್ಬರೂ ಒಂದು ಸುಂದರವಾದ ನದಿ ತೀರದಲ್ಲಿ ವಾಸವಾಗಿದ್ದರು.




ನದಿಯ ಇನ್ನೊಂದು ಬದಿಯಲ್ಲಿ ಒಂದು ಹಳ್ಳಿ ಮತ್ತು ಕಬ್ಬಿನಗದ್ದೆ ಇತ್ತು.



ಒಮ್ಮೆ ಚೋಟುವಿಗೆ ಕಬ್ಬನ್ನು ತಿನ್ನಲು ಅತೀವ ಆಸೆಯಾಗಿ ಒಂಟೆಯನ್ನು ಕುರಿತು 'ಕಬ್ಬು ಬಹಳ ರುಚಿಕರವಾಗಿರುತ್ತಂತೆ. ಈ ರಾತ್ರಿ ನಾವು ನದಿ ದಾಟಿ ಆ ಗದ್ದೆಗೆ ಹೋಗೋಣ' ಎಂದು ಕೇಳಿಕೊಂಡಿತು.



ಆದರೆ ಹಳ್ಳಿ ಜನರ ಕೈಗೆ ಸಿಕ್ಕಿಬಿದ್ದರೆ, ನಮ್ಮನ್ನು ಹೊಡೆಯುವುದಿಲ್ಲವೇ...? ಎಂದು ಲಂಬೂ ಭಯದಿಂದಲೇ ಕೇಳಿತು.



'ನೀನು ಹೆದರಬೇಡ ನಾನಿದ್ದೇನೆ.... ನೀನು ನದಿ ದಾಟಲು ಸಹಾಯ ಮಾಡು ಸಾಕು..!' ಎಂದು ನರಿ ಭರವಸೆ ನೀಡಿತು. ಆಗ ಲಂಬೂ ಅರೆ ಮನಸ್ಸಿನಿಂದಲೇ ಒಪ್ಪಿಕೊಂಡಿತು. (ಮುಂದುವರೆಯುವುದು)

ವಾರಭವಿಷ್ಯ

4.01.2026 ರಿಂದ 10.01.2026

ಈ ವಾರದಲ್ಲಿ ಗ್ರಹಗಳ ರಾಶಿ ಸಂಚಾರ:– ರವಿ–ಧನುಸ್ಸು, ಚಂದ್ರ–ಮಿಥುನ, ಕಟಕ, ಸಿಂಹ, ಕನ್ಯಾ, ಕುಜ–ಧನುಸ್ಸು ಬುಧ–ಧನುಸ್ಸು, ಗುರು–ಮಿಥುನ, ಶುಕ್ರ–ಧನುಸ್ಸು, ಶನಿ–ಮೀನ, ರಾಹು–ಕುಂಭ ಮತ್ತು ಕೇತು–ಸಿಂಹ.

ವಿ.ಕೇಶವಮೂರ್ತಿ
ಜ್ಯೋತಿಷ್ಯ ವಿದ್ವಾಂಸರು, 'ಭಾವಸಾರ್ ರತ್ನ'
'ಚೈತನ್ಯಶ್ರೀ ಪ್ರಶಸ್ತಿ ಪುರಸ್ಕೃತರು'
'ಕಲ್ಪದ್ರುಮ ಜ್ಯೋತಿಷ್ಯ ಅಧ್ಯಯನ ಕೇಂದ್ರ'
ವಿಳಾಸ: 533, 6ನೇ ಕ್ರಾಸ್, ಬೋಗಾದಿ ಉತ್ತರ,
ಮೈಸೂರು ನಿರ್ಮಿತಿ ಕೇಂದ್ರ ಹತ್ತಿರ, ಮೈಸೂರು.
ಮೊ: 9740973224, 9739548720



ಮೇಷ (ಚು,ಚೆ,ಲ,ಲಿ,ಲು,ಲೆ,ಲೂ,ಅ)

ಸಪ್ತಾಹದ ಆದಿಗೆ ದ್ರವ್ಯಲಾಭ, ಸಜ್ಜನರ ಸಹವಾಸದಿಂದ ನಿಮಗೂ ಒಂದು ಹಿರಿಮೆ. ವ್ಯಾಪಾರ ವ್ಯವಹಾರಗಳಲ್ಲಿ ಹೊಸ ಚೇತರಿಕೆ ಕಂಡು ಬರುವುದು. ಸಾಫ್ಟ್‌ವೇರ್ ಮಂದಿಗೆ ವೃತ್ತಿ ಬದಲಾವಣೆಯಿಂದ ಆದಾಯದಲ್ಲಿ ಹೆಚ್ಚಳ. ಸ್ತ್ರೀಯರು ಅಲಂಕಾರ ಭೂಷಣಗಳಿಗೆ ಹೆಚ್ಚಿನ ಹಣ ವ್ಯಯಿಸುವರು. ಶನಿದೇವ ಅಶುಭನಿದ್ದಾನೆ, ದೂರ ಪ್ರಯಾಣಗಳನ್ನು ಅವಾಯ್ಡ್ ಮಾಡಿ.

ಶ್ರೀ ಗಣಪತಿ ಸ್ತುತಿ. ಶುಭ ಸಂಖ್ಯೆ–1

ವೃಷಭ (ಇ,ಉ,ಎ,ಒ,ವ,ವಿ,ವು,ವೆ,ವೊ)

ವಾರದ ಆರಂಭಕ್ಕೆ ಸುವರ್ಣ, ರಜತ ಪದಾರ್ಥಗಳ ಖರೀದಿಯಿಂದ ಶ್ರೀಮತಿಗೆ ಸಂತೋಷ. ನಂಬಿಕಸ್ಥ ಹಿರಿಯ ವ್ಯಕ್ತಿಯೊಬ್ಬರಿಂದ ಮಹತ್ವದ ಯೋಜನೆ ಕಾರ್ಯರೂಪಕ್ಕೆ ಬರುವುದು. ಗ್ರಹ ಸಂಚಾರಗಳು ಶುಭವಿದೆ, 'ಕಬ್ಬಿಣ ಕಾದಾಗ ತಟ್ಟಿಕೋ' ಎಂಬ ಗಾದೆ ಮಾತಿನಂತೆ ನಿಮ್ಮ ಕೆಲಸಗಳನ್ನು ಕಾಲ ಕಾಲಕ್ಕೆ ಮುಗಿಸಿಕೊಳ್ಳಿ, ಲೇವಾದೇವಿ ಸಂಸ್ಥೆಗಳಿಗೆ ಆದಾಯದಲ್ಲಿ ಹೆಚ್ಚಳ. ಕೃಷಿಕರಿಗೆ ಉತ್ತಮ ಬೆಳೆ ಹಾಗೂ ಬೆಲೆ ದೊರಕುವುದು.

ಶ್ರೀ ದೇವೀ ಅಷ್ಟೋತ್ತರ ಪಠಿಸಿ. ಶುಭ ಸಂಖ್ಯೆ–5

ಮಿಥುನ (ಕ,ಕಿ,ಕು,ಘ,ಙ,ಛ,ಕೆ,ಕೊ,ಹ)

ನಿಮ್ಮ ರಾಶಿಗೆ ಚಂದ್ರನ ಪ್ರವೇಶದಿಂದ ಮಾನಸಿಕ, ದೈಹಿಕ ಸುಖ–ಸಂತೋಷಗಳೊಂದಿಗೆ ವಾರಕ್ಕೆ ಸ್ವಾಗತ. ಸ್ತ್ರೀಯರು ಉತ್ತಮ ಸೌಂದರ್ಯ ಸಾಧನಗಳನ್ನು ಕೊಳ್ಳುವರು. ಸಿದ್ಧ ಉಡುಪು ಮಾರಾಟಗಾರರಿಗೆ ಅಧಿಕ ವ್ಯಾಪಾರ ಹಾಗೂ ಧನಲಾಭವಾಗುವುದು. ನೀವು ಡ್ಯೂಟಿ ಮಾಡುವ ಸ್ಥಳದಲ್ಲಿ ಸಹವರ್ತಿಗಳನ್ನು ವಿಶ್ವಾಸಕ್ಕೆ ತೆಗೆದುಕೊಳ್ಳಿ. ವಾರಾಂತ್ಯಕ್ಕೆ ಮನಸ್ಸಿಗೆ ಕಸಿವಿಸಿಯಾಗುವ ಸುದ್ದಿ ಬರಬಹುದು.

ಶ್ರೀ ಹರಿನಾಮ ಸ್ಮರಣೆ. ಶುಭ ಸಂಖ್ಯೆ–3

ಕಟಕ (ಹೊ,ಹು,ಹೆ,ಡ,ಡಿ,ಡು)

ವಾರದಾರಂಭಕ್ಕೆ ವಿಹಾರಾರ್ಥ ಯಾತ್ರೆಗಳು ಸಂಭವಿಸಿ ಅಧಿಕ ಖರ್ಚುಗಳು ಎದುರಾಗುವುದು. ಗುರುಜನರ ಹಾಗೂ ಸ್ನೇಹಿತರ ಸಹಕಾರಗಳು ದೊರಕುತ್ತದೆ. ಪರೋಪಕಾರಿಗಳೆನಿಸಿ ಸಮಾಜದಲ್ಲಿ ಗೌರವಕ್ಕೆ ಪಾತ್ರರಾಗುವಿರಿ. ಮಕ್ಕಳ ಭವಿಷ್ಯದ ಬಗ್ಗೆ ಚಿಂತಿತರಾಗುವಿರಿ. ಅನ್ಯ ಸ್ತ್ರೀಯರೊಂದಿಗೆ ಗೌರವಯುತವಾಗಿ ನಡೆದುಕೊಳ್ಳಿ, ಅನ್ಯಥಾ ಮುಜುಗರ ಅನುಭವಿಸಬೇಕಾಗುತ್ತದೆ. ಸಮಯಕ್ಕೆ ಸರಿಯಾಗಿ ಬುದ್ಧಿ ಕೆಲಸ ಮಾಡದು.

ಶ್ರೀ ದುರ್ಗಾ ಸ್ತೋತ್ರ ಪಠಿಸಿ. ಶುಭ ಸಂಖ್ಯೆ–8

ಸಿಂಹ (ಮ,ಮಿ,ಮು,ಮೊ,ಮೆ,ಟ,ಟಿ,ಟು,ಟೆ)

ವಾರದಾರಂಭಕ್ಕೆ ಮಿತ್ರರ ಸಮಾಗಮ, 'ಪಾರ್ಟಿ' ಗಳು ಇತಿಮಿತಿಯಲ್ಲಿರಲಿ. ಬರಬೇಕಾದ ಹಣ ಕೈ ಸೇರುವುದು. ಮಹಿಳಾ ಮಣಿಯರು ಪ್ರಸಾದನಗಳಿಗೆ ಹೇರಳ ಹಣ ವ್ಯಯ ಮಾಡುವರು. ಅಷ್ಟಮ ಶನಿ ಇಲ್ಲದ ಕಷ್ಟ ಪರಿಸ್ಥಿತಿಗಳನ್ನು ತಂದೊಡ್ಡುವನು. ವೇಗದ ವಾಹನ ಚಾಲನೆ ಸೂಕ್ತವಲ್ಲ. ಜನ್ಮ ಕೇತುವಿನಿಂದ ನರ ಸಂಬಂಧಿ ಕಾಯಿಲೆ ಹಾಗೂ ಅಕಾಲ ಭೋಜನಗಳಿಂದ ಆರೋಗ್ಯ ಹದಗೆಡುವ ಸಾಧ್ಯತೆ ಇರುತ್ತದೆ.

ಶ್ರೀ ದಕ್ಷಿಣಾಮೂರ್ತಿ ಸ್ತೋತ್ರ ಪಠಿಸಿ. ಶುಭ ಸಂಖ್ಯೆ–6

ಕನ್ಯಾ (ಟೊ,ಪ,ಪಿ,ಪು,ಷ,ಣ,ಠ,ಪೆ,ಪೊ)

ಈ ವಾರದಲ್ಲಿ ಹೊಸ ಹೂಡಿಕೆಗಳನ್ನು ಮಾಡಬಹುದು. ಪ್ರತ್ಯಕ್ಷವನ್ನು ಪ್ರಮಾಣಿಸಿ ನೋಡು ಎಂಬ ನಾಣ್ನುಡಿಯಂತೆ ಮುಂದಿನ ಹೆಜ್ಜೆ ಇಡಿ. ಎಳ್ಳು, ಎಳ್ಳೆಣ್ಣೆ ವ್ಯಾಪಾರಿಗಳಿಗೆ ಹೆಚ್ಚಿನ ವ್ಯಾಪಾರ ಹಾಗೂ ಧನಲಾಭವಾಗುವುದು. ಸತಿ–ಪತಿಯರು ಪರಸ್ಪರ ಸೋತು ಗೆದ್ದರೆ ಒಳಿತು, 'ಏತಿ ಅಂದ್ರೆ ಪ್ರೇತಿ' ಆಗುವುದು ಬೇಡಿ. ಸಾರ್ವಜನಿಕರೊಡನೆಯೂ ಜಗಳ ಬೇಡ. ವಾರಾಂತ್ಯಕ್ಕೆ ಹಿತಕರವಾದ ಸುದ್ದಿಯೊಂದು ಬರುವ ಸಂಭವ.

ಶ್ರೀ ಅಷ್ಟಾಕ್ಷರಿ ಮಂತ್ರ ಜಪಿಸಿ. ಶುಭ ಸಂಖ್ಯೆ–2

ತುಲಾ (ರ,ರಿ,ರು,ರೆ,ರೊ,ತ,ತಿ,ತು,ತೆ)

ಗುರು–ಶನಿಗ್ರಹಗಳು ಶುಭರಿದ್ದಾರೆ, ಸಾರ್ಥಕ ಕಾರ್ಯಗಳಿಂದ ಬದುಕು ನೆಮ್ಮದಿಯಾಗಿ ಸಾಗುವುದು. ವಿದ್ಯಾರ್ಥಿಗಳು ಕ್ಯಾಂಪಸ್ ಸೆಲೆಕ್ಷನ್ ಶುಭ ಸುದ್ದಿ ನಿರೀಕ್ಷಿಸಬಹುದು. ನಿಮ್ಮ ಮಕ್ಕಳ ಭವಿಷ್ಯದ ನಿಮಿತ್ತ ಚಿಂತೆಗೆ ಒಳಗಾಗುವಿರಿ. ಸಾಲಗಾರರ ಒತ್ತಡ ಇರುತ್ತದೆ. ರಾಹು ಗ್ರಹ ಕಾರಣ ಸ್ವಜನರ ತಿರಸ್ಕಾರಕ್ಕೆ ಗುರಿಯಾಗುವಿರಿ. ಅನ್ನ–ಪಾನೀಯಗಳಲ್ಲಿ ಸಂಯಮವಿರಲಿ, ನರ ಸಂಬಂಧಿ ಕಾಯಿಲೆ ಕಾಡಬಹುದು.

ಶ್ರೀ ಮನೆ ದೇವರ ದರ್ಶನ. ಶುಭ ಸಂಖ್ಯೆ–7

ವೃಶ್ಚಿಕ (ತೊ,ನ,ನಿ,ನು,ನೆ,ನೊ,ಯ,ಯಿ,ಯು)

ವ್ಯಾಪಾರ, ವ್ಯವಹಾರಗಳು ಸಾಧಾರಣವಾಗಿ ನಡೆಯುವುದು. ಯಾವುದಾದರೂ ಅಧಿಕಾರ ಗ್ರಹಣ ಯೋಗವಿದೆ. ಆರೋಗ್ಯ ಸುಧಾರಿಸುವುದು. ಎಲೆಕ್ಟ್ರಾನಿಕ್ ವಸ್ತು ವ್ಯಾಪಾರಿಗಳಿಗೆ ಉತ್ತಮ ವ್ಯಾಪಾರ ಹಾಗೂ ಧನಲಾಭವಾಗುವುದು. ಪ್ರಯಾಣ ಸಮಯದಲ್ಲಿ ಜಾಗ್ರತರಾಗಿರಿ. ಕಳ್ಳಕಾಕರಿಂದ ತೊಂದರೆ ಆದೀತು. ಬೇಡದ ವಿಷಯಗಳಿಗೆ ತಲೆ ಹಾಕದಿರಿ.

ಶ್ರೀ ಸುಬ್ರಮಣ್ಯ ದರ್ಶನ. ಶುಭ ಸಂಖ್ಯೆ–3

ಧನುಸ್ಸು (ಯೆ,ಯೊ,ಬ,ಬಿ,ಬು,ಧ,ಭ,ಢ,ಬೆ)

'ಮನೆಯೇ ಮಂತ್ರಾಲಯ', ನಿಮ್ಮ ರಾಶ್ಯಾಧಿಪತಿ ಗುರುವಿನ ದೃಷ್ಟಿ ನಿಮ್ಮ ರಾಶಿಯ ಮೇಲೆಯೇ ಇದೆ. ಧೃತಿ ಸ್ಮೃತಿಗಳು ಒಗ್ಗೂಡಿ ಉತ್ತಮ ಸಾಧನೆ ಮಾಡುವ ಅವಕಾಶ ಬಂದಿದೆ. ಕೈಗೆತ್ತಿಕೊಂಡಿದ್ದ ಕೆಲಸಗಳಲ್ಲಿ ಉಂಟಾಗಿದ್ದ ಅಡೆತಡೆಗಳು ನಿವಾರಣೆ ಆಗುತ್ತದೆ. ಮನೆಯಲ್ಲಿ ಧಾರ್ಮಿಕ ಚಟುವಟಿಕೆಗಳು ನಡೆಯುವುದು. ಗೃಹ ವಸ್ತುಗಳ ಖರೀದಿಯಿಂದ ಶ್ರೀಮತಿಗೆ ಸಂತೋಷ. ವಾರದ ಕಡೆಗೆ ಖರ್ಚು–ವೆಚ್ಚಗಳು ಹೆಚ್ಚಾಗಲಿದೆ.

ಶ್ರೀ ಶಿರಡಿ ಸಾಯಿಬಾಬಾ ದರ್ಶನ. ಶುಭ ಸಂಖ್ಯೆ–5

ಮಕರ (ಬೊ,ಜ,ಜೆ,ಶಿ,ಶು,ಶೆ,ಶೊ,ಗ,ಗಿ)

ವಾರದ ಆದಿಭಾಗಕ್ಕೆ ಹಣದ ಹರಿವು ಉತ್ತಮವಾಗಿದ್ದರೂ ಅನಗತ್ಯ ಖರ್ಚುಗಳಿಂದ ಪರ್ಸ್ ಖಾಲಿ. ಕುಟುಂಬದ ಹಿರಿಯರೊಂದಿಗೆ ಮನಸ್ತಾಪವಾದೀತು, ವಿಕೋಪಕ್ಕೆ ಅವಕಾಶ ನೀಡದೆ ತಾಳ್ಮೆ ವಹಿಸಿ. ಸರ್ಕಾರಿ ನೌಕರರಿಗೆ ಮೇಲಧಿಕಾರಿಗಳ ಅವಕೃಪೆ. ತೃತೀಯ ಶನಿದೇವ ನಿಮ್ಮ ಕಷ್ಟಗಳನ್ನು ಪರಿಹರಿಸುವನು. ಕೃಷಿಕರಿಗೆ ಉತ್ತಮ ಫಸಲು ಹಾಗೂ ಬೆಲೆ ದೊರಕುವುದು. ಸಂಧಿವಾತ ಕಾಡಿಸುವುದು.

ಶ್ರೀ ಶನೇಶ್ವರ ಮೂಲ ಮಂತ್ರ ಜಪಿಸಿ. ಶುಭ ಸಂಖ್ಯೆ–4

ಕುಂಭ (ಗು,ಗೆ,ಗೊ,ಸ,ಸಿ,ಸು,ಸೆ,ಸೊ,ದ)

ಈ ಸಪ್ತಾಹದಲ್ಲಿ ನೋವು–ನಲಿವುಗಳು ಸಮತೋಲನದಲ್ಲಿವೆ. ಗುರುಕೃಪೆಯಿಂದ ಧನ–ಧಾನ್ಯ ಲಾಭ, ಉತ್ತಮ ಭೋಜನ, ಶಯನ ಸುಖಗಳು ಉಂಟು. ದ್ವಿತೀಯ ಶನಿದೇವ ಹಾಗೂ ವ್ಯಯಭಾವದ ರಾಹುಗಳು ನಿಮ್ಮನ್ನು ಹಲವು ರೀತಿಯಲ್ಲಿ ಕಾಡುವರು. ದೇಹಾಪಾಯ ಉಂಟಾಗಬಹುದು. ಕಾರ್ ಡ್ರೈವಿಂಗ್ ಮೋಜಿಗಲ್ಲ ಎಂಬ ಅರಿವು ಇರಲಿ. ವಾರಾಂತ್ಯಕ್ಕೆ ಸಂಸಾರ ಸಮೇತ ಕುಲದೇವತಾ ದರ್ಶನ.

ಶ್ರೀ ಮೃತ್ಯುಂಜಯ ಮಂತ್ರ ಜಪಿಸಿ. ಶುಭ ಸಂಖ್ಯೆ–9

ಮೀನ (ದಿ,ದು,ಖ,ಝ,ಥ,ತೆ,ದೊ,ಚ,ಚಿ)

ಈ ವಾರದಲ್ಲಿ ಬಂಧು–ಮಿತ್ರರ ಸಹಾಯದಿಂದ ಕೌಟುಂಬಿಕ ಸಮಸ್ಯೆಗಳಿಗೆ ಪರಿಹಾರ ದೊರೆಯುವುದು. ಹೊಸ ವ್ಯಾಪಾರ ಸ್ಥಾಪನೆಗೆ ಪ್ರಯತ್ನಗಳು ಮುಂದುವರೆಯಲಿ. ನೆರೆಹೊರೆಯವರ ವಿಚಾರದಲ್ಲಿ ಸಮಾಧಾನಚಿತ್ತದಿಂದ ವರ್ತಿಸಿ. ಬರಬೇಕಾದ ಹಣ ಕೈಸೇರುವಲ್ಲಿ ವಿಳಂಬವಾಗುವುದು. ಮಹತ್ವದ ಕೆಲಸಗಳು ಮುಂದೂಡಲ್ಪಡುತ್ತವೆ. ಆರೋಗ್ಯದ ಬಗ್ಗೆ ಹೆಚ್ಚು ಗಮನ ನೀಡಿ. ಜಂಕ್ ಫುಡ್ ವಿಷವಾಗಬಹುದು.

ಶ್ರೀ ರಾಘವೇಂದ್ರ ಉಪಾಸನೆ. ಶುಭ ಸಂಖ್ಯೆ–7

ಮೂಗೂರು ಜಾತ್ರೆಯಲ್ಲಿ ವೈಭವದ ಬಂಡಿ ಉತ್ಸವ

ಮೂಗೂರು: ಮೂಗೂರಿನ ಶ್ರೀ ತ್ರಿಪುರ ಸುಂದರಿ ಅಮ್ಮನವರ ಜಾತ್ರಾ ಮಹೋತ್ಸವದ ಬಂಡಿ ಉತ್ಸವ ಸಾಂಪ್ರದಾಯಿಕವಾಗಿ ಸಾವಿರಾರು ಭಕ್ತರ ಸಮ್ಮುಖದಲ್ಲಿ ಶನಿವಾರ ವಿಜ್ರಂಭಣೆಯಿಂದ ನಡೆಯಿತು.

ಬಂಡಿ ಉತ್ಸವದ ಅಂಗವಾಗಿ ದೇವಾಲಯದಲ್ಲಿ ಧಾರ್ಮಿಕ ಪೂಜಾ ಕೈಂಕರ್ಯಗಳು ನಡೆದವು. ಮಧ್ಯಾಹ್ನ 12ಕ್ಕೆ ಅಮ್ಮನವರ ಉತ್ಸವ ಮೂರ್ತಿಯನ್ನು ದೇಗುಲದಲ್ಲಿ ಪ್ರದಕ್ಷಿಣೆ ಹಾಕಿ ನಂತರ ರುದ್ರಾಕ್ಷಿ ಮಂಟಪದಲ್ಲಿ ಪ್ರತಿಷ್ಠಾಪಿಸಲಾಯಿತು. ನೆರೆದಿದ್ದ ಭಕ್ತರು ಮೊದಲ ಬಂಡಿಗೆ ಈಡುಗಾಯಿ ಸುರಿಮಳೆಗೈದರು ಅಮ್ಮನವರಿಗೆ ಜೈಕಾರ ಹಾಕುತ್ತಿದ್ದಂತೆ ರುದ್ರಾಕ್ಷಿ ಮಂಟಪದೊಂದಿಗೆ ಬಂಡಿ ಮಂಟಪಕ್ಕೆ ಹೊರಟ ಪೂಜಾ ಬಂಡಿಗೆ ದಾರಿಯುದ್ದಕ್ಕೂ ಹರಕೆ ಹೊತ್ತ ಭಕ್ತರು ಈಡುಗಾಯಿ ಹೊಡೆದರು. ಅಮ್ಮನವರನ್ನು ಬಂಡಿ ಮಂಟಪದ ಬಳಿ ಪೂಜೆ ಸಲ್ಲಿಸಿ ಮೊದಲ ಬಂಡಿ ಓಟಕ್ಕೆ ಗ್ರಾಮಸ್ಥರ ಸಮ್ಮುಖದಲ್ಲಿ ಚಾಲನೆ ನೀಡಲಾಯಿತು.

ಒಂದು ತಿಂಗಳ ಮುನ್ನವೇ ರೈತರು ರಾಜ್ಯದ ವಿವಿಧ ಕಡೆಗಳಿಂದ ಎತ್ತುಗಳನ್ನು ತಂದು ಬಂಡಿ ಓಟಕ್ಕಾಗಿಯೇ ತಯಾರು ಮಾಡಿದ್ದರು. ಬಂಡಿ ದಿನ ಎತ್ತುಗಳಿಗೆ ಗೆಜ್ಜೆ ಕಟ್ಟಿ ಬಣ್ಣದಿಂದ ಸಿಂಗರಿಸಿ ಬಂಡಿ ಓಟದ ಸರದಿಗಾಗಿ ಎತ್ತುಗಳ ಜೊತೆ ಬೀದಿಯ 2 ಕಡೆಯೂ ಕಾದಿದ್ದರು. ಹಲವು ಗ್ರಾಮಗಳ ಬಂಡಿಗಳು ಬಂದು ಓಡುವುದು ಹಿಂದಿನಿಂದಲೂ ವಾಡಿಕೆಯಾಗಿದೆ. ಬಂಡಿ ಓಟದ ವೀಕ್ಷಣೆಗಾಗಿ ಜನಸ್ತೋಮವೇ ನೆರೆದಿತ್ತು. ಓಟದ ರೋಚಕ ಕ್ಷಣಗಳನ್ನು ಕಣ್ತುಂಬಿಕೊಳ್ಳಲು ಸಂಜೆ 6 ಗಂಟೆಯ ಕೊನೆ ಬಂಡಿ ತನಕ ಕಾದು ಕುಳಿತಿದ್ದರು.

ಅನ್ನಸಂತರ್ಪಣೆ: ಜಾತ್ರೆಗೆ ಬರುವ ಭಕ್ತರಿಗೆ 4 ದಿನಗಳ ಕಾಲ ಅನ್ನಸಂತರ್ಪಣೆ ನಡೆಯಲಿದೆ. ಪ್ರತಿ ವರ್ಷದಂತೆ ಈ ಬಾರಿಯೂ 5 ದಿನಗಳ ಸಾಂಸ್ಕೃತಿಕ ಕಾರ್ಯಕ್ರಮ ಮಾಜಿ ಸಚಿವ ಸಿ.ಎಸ್.ಪುಟ್ಟರಾಜು ಆಯೋಜಿಸಿದ್ದಾರೆ.



ಮೂಗೂರಿನ ಶ್ರೀ ತ್ರಿಪುರ ಸುಂದರಿ ಅಮ್ಮನವರ ಜಾತ್ರಾ ಮಹೋತ್ಸವದ ಅಂಗವಾಗಿ ನಡೆದ ಬಂಡಿ ಉತ್ಸವ ಮತ್ತು ಪಾಲ್ಗೊಂಡ ಭಕ್ತ ಸಮೂಹ.

ಕುಂದೂರು ಜಾತ್ರೆಗೆ ವಿಜ್ರಂಭಣೆಯ ಚಾಲನೆ

ಸರಗೂರು: ತಾಲೂಕಿನ ಕುಂದೂರು ಗ್ರಾಮದಲ್ಲಿ ಶನಿವಾರ ಶ್ರೀ ಚಿಕ್ಕದೇವಮ್ಮನ ಜಾತ್ರಾ ಮಹೋತ್ಸವ ವಿಜ್ರಂಭಣೆಯಿಂದ ಆರಂಭವಾಯಿತು. ಸಾವಿರಾರು ಭಕ್ತರು ಪಾಲ್ಗೊಂಡು ಜಾತ್ರೆಯ ವೈಭವ ಹೆಚ್ಚಿಸಿದರು.

ಜಾತ್ರಾ ಮಹೋತ್ಸವ ಈ ಬಾರಿ ವಿಶೇಷವಾಗಿತ್ತು. ದೇವಸ್ಥಾನದ ಆವರಣವನ್ನು ಸ್ವಚ್ಛಗೊಳಿಸಲಾಗಿತ್ತು. ವಿವಿಧ ಬಗೆಯ ಬಣ್ಣ ಬಣ್ಣದ ಹೂವುಗಳಿಂದ ಸಿಂಗರಿಸಲಾಗಿತ್ತು. ಇದಕ್ಕೂ ಮುನ್ನ ಚಿಕ್ಕದೇವಮ್ಮನ ಬೆಟ್ಟದಿಂದ ದೇವರನ್ನು ಕುಂದೂರು ಗ್ರಾಮಕ್ಕೆ ತರಲಾಯಿತು. ಮುಂಜಾನೆ ದೇವಸ್ಥಾನದ ಜಾತ್ರಾ ಮಾಳ ಸಮೀಪದಲ್ಲಿಯೇ ಬಣಜಾರು ಸಹಾರ ಮಾಡಲಾಯಿತು. ನಂತರ ವಿಜಯೋತ್ಸವ ಆಚರಿಸಲಾಯಿತು. ಬಳಿಕ ವಿವಿಧ ಧಾರ್ಮಿಕ ಕಾರ್ಯಕ್ರಮಗಳು ಜರುಗಿದವು.

ಚಿಕ್ಕದೇವಮ್ಮ ಅಮ್ಮನವರನ್ನು ವಿವಿಧ ಬಗೆಯ ಹೂವುಗಳಿಂದ ಅಲಂಕಾರಗೊಳಿಸಲಾಗಿತ್ತು. ಸರತಿ ಸಾಲಿನಲ್ಲಿ ಭಕ್ತರು ನಿಂತು ದೇವರ ದರ್ಶನ ಪಡೆದು ಹರಕೆ ತೀರಿಸಿದರು. ನಂತರ ವಿಶೇಷ ಪೂಜೆ ಸಲ್ಲಿಸಿದರು.

ಶಾಸಕ ಅನಿಲ್ ಚಿಕ್ಕಮಾದು ಅವರು ದೇವಸ್ಥಾನಕ್ಕೆ ಭೇಟಿ ನೀಡಿ ದೇವರ ದರ್ಶನ ಪಡೆದು ವಿಶೇಷ ಪೂಜೆ ಸಲ್ಲಿಸಿದರು. ದೇವಸ್ಥಾನದ ಅಭಿವೃದ್ಧಿಗೆ ಹೆಚ್ಚಿನ ಅನುದಾನ ನೀಡಲಾಗುವುದು. ಈ ಬಾರಿ ಸುಸೂತ್ರವಾಗಿ ಜಾತ್ರಾ ಮಹೋತ್ಸವ ಆಚರಣೆ ಮಾಡಲಾಗಿದೆ ಎಂದು ಹೇಳಿದರು. ಈ ವೇಳೆ ದೇವಸ್ಥಾನದ ಧರ್ಮ ಪಾರುಪತ್ತೇದಾರ ಶಾಂತರಾಜ ಮಹದೇವಸ್ವಾಮಿ, ಉದ್ಯಮಿ ಸೋಮಶೇಖರ್, ಗ್ರಾಮಸ್ಥರಾದ ಕುಂದೂರು ಮೂರ್ತಿ, ಮಹದೇವ್, ಚನ್ನಸ್ವಾಮಿ, ಶಿವರಾಜು, ಪರದಕಟ್ಟೆ ಬಸವರಾಜು, ಸಿದ್ದರಾಜು ಸೇರಿದಂತೆ ಇನ್ನಿತರರು ದೇವರ ದರ್ಶನ ಪಡೆದರು.

ಜಾತ್ರಾ ಹಿನ್ನೆಲೆಯಲ್ಲಿ ಅಂಗಡಿ ಮುಗ್ಗಟ್ಟು ತೆರೆದಿದ್ದವು. ಜಾತ್ರಾ ವೇಳೆ ಯಾವುದೇ ಅಹಿತಕರ ಘಟನೆ ನಡೆಯದಂತೆ ಮುನ್ನೆಚ್ಚರಿಕೆ ಕ್ರಮವಾಗಿ ಸರಗೂರು ಪೊಲೀಸರು ಬಿಗಿ ಬಂದೋಬಸ್ತ್ ವ್ಯವಸ್ಥೆ ಮಾಡಿದ್ದರು. ಆರೋಗ್ಯ ಇಲಾಖೆಯಿಂದ ಆರೋಗ್ಯ ಕೇಂದ್ರ ತೆರೆಯಲಾಗಿತ್ತು. ಕಳೆದ ಬಾರಿಗಿಂತ ಈ ಬಾರಿ ಜಾತ್ರಾಮಾಳವನ್ನು ವಿಸ್ತರಿಸಿ ಅಚ್ಚುಕಟ್ಟಾಗಿ ವ್ಯವಸ್ಥೆ ಮಾಡಲಾಗಿತ್ತು. ಕಲ್ಲಂಬಾಳು ಗ್ರಾಮ ಪಂಚಾಯಿತಿ ಜನಪ್ರತಿನಿಧಿಗಳು, ಚಿಕ್ಕದೇವಮ್ಮನ ಬೆಟ್ಟದ ಅರ್ಚಕರು, ಕುಂದೂರು, ದಡದಹಳ್ಳಿ, ಹೂವಿನಕೊಳ ಸೇರಿದಂತೆ ಅಕ್ಕಪಕ್ಕದ ಗ್ರಾಮಸ್ಥರು, ಮುಖಂಡರು ಜಾತ್ರೆಯಲ್ಲಿ ಭಾಗಿಯಾಗಿದ್ದರು.



ಕುಂದೂರಿನಲ್ಲಿ ನಡೆದ ಶ್ರೀ ಚಿಕ್ಕದೇವಮ್ಮನ ಜಾತ್ರಾ ಮಹೋತ್ಸವದಲ್ಲಿ ಶಾಸಕ ಅನಿಲ್ ಚಿಕ್ಕಮಾದು ಸೇರಿದಂತೆ ಇನ್ನಿತರರು ಭಾಗವಹಿಸಿದ್ದರು.

ದೇವರ ಪಲ್ಲಕ್ಕಿ ಹೊತ್ತಿದ್ದ ಸಹಾಯಕ ಅರ್ಚಕ ಹೃದಯಾಘಾತದಿಂದ ಸಾವು

ನಂಜನಗೂಡು: ನಗರದಲ್ಲಿ ಶುಕ್ರವಾರ ರಾತ್ರಿ ಶ್ರೀಕಂಠೇಶ್ವರ ಸ್ವಾಮಿ ದೇವಾಲಯದಲ್ಲಿ ಜರುಗುವ ಅಂಧಕಾಸುರ ವಧೆ ಕಾರ್ಯಕ್ರಮದಲ್ಲಿ ಉತ್ಸವ ಮೂರ್ತಿಯ ಪಲ್ಲಕಿ ಹೊತ್ತಿದ್ದ ಸಹಾಯಕ ಅರ್ಚಕರೊಬ್ಬರು ಹೃದಯಾಘಾತದಿಂದ ಸಾವನ್ನಪ್ಪಿರುವ ಘಟನೆ ಜರುಗಿದೆ.



ಶಂಕರ ಉಪಾಧ್ಯಾಯ(55) ಎಂಬುವರೇ ಸಾವನ್ನಪ್ಪಿದವರು.

ನಗರದ ರಾಕ್ಷಸ ಮಂಟಪ ವೃತ್ತದಲ್ಲಿ ಪ್ರತಿ ವರ್ಷ ನಡೆಯುವ ಸಂಪ್ರದಾಯದಂತೆ ಅಂಧಕಾಸುರ ವಧೆ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿತ್ತು ಅರ್ಚಕ ಉಪಾಧ್ಯಾಯ ಉತ್ಸವಮೂರ್ತಿಯಿದ್ದ ಪಲ್ಲಕ್ಕಿಗೆ ಭುಜ ಕೊಟ್ಟು ನಡೆಯುತ್ತಿದ್ದ ಕೆಲವೇ ಸೆಕೆಂಡ್‌ಗಳಲ್ಲಿ ಕುಸಿದು ಬಿದ್ದರು. ಪಕ್ಕದಲ್ಲೇ ನಿಂತಿದ್ದ ಇತರ ಅರ್ಚಕರು ಉಪಾಧ್ಯಾಯ ಅವರ ನೆರವಿಗೆ ಧಾವಿಸಿದರು. ಕೂಡಲೇ ಚಿಕಿತ್ಸೆಗಾಗಿ ಆಸ್ಪತ್ರೆಗೆ ಸಾಗಿಸಿದರಾದರೂ ಮಾರ್ಗ ಮಧ್ಯೆ ಮೃತಪಟ್ಟಿದ್ದಾರೆ.

ನಾಳೆ ಮೈಸೂರು, ಚಾ.ನಗರ ಸಂಸದರ ಕಚೇರಿ ಮುಂದೆ ತಂಬಾಕು ಬೆಳೆಗಾರರ ಪ್ರತಿಭಟನೆ

ಹೆಚ್.ಡಿ.ಕೋಟೆ: ಮೈಸೂರು ಮತ್ತು ಚಾಮರಾಜನಗರ ಸಂಸದರ ಕಚೇರಿ ಮುಂದೆ ತಂಬಾಕು ಬೆಳೆಗಾರರ ಸಮಸ್ಯೆ ಬಗೆ ಹರಿಸುವಂತೆ ಒತ್ತಾಯಿಸಿ ಜ.5 ರಂದು ತಾಲೂಕು ರೈತ ಸಂಘ ಪ್ರತಿಭಟನೆ ನಡೆಸಲಿದೆ ಎಂದು ತಂಬಾಕು ಬೆಳೆಗಾರರಾದ ಮೊತ್ತ ಬಸವರಾಜಪ್ಪ ತಿಳಿಸಿದರು.

ಪಟ್ಟಣದಲ್ಲಿ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು ಆಂಧ್ರದ ತಂಬಾಕು ಬೆಳೆಗಾರರಿಗೆ ಸಿಗುವಷ್ಟು ಬೆಲೆ ಕರ್ನಾಟಕದ ರೈತರಿಗೆ ಸಿಗುತ್ತಿಲ್ಲ ಎಂದು ಅಸಮಾಧಾನ ವ್ಯಕ್ತಪಡಿಸಿದರಲ್ಲದೆ, ಕರ್ನಾಟಕದಲ್ಲಿ 55 ಸಾವಿರ ಬೆಳೆಗಾರರಿದ್ದು, ಮಂಡಳಿಯಿಂದ 100 ಮಿಲಿಯನ್ ತಂಬಾಕು ಬೆಳೆಯನ್ನು ಬೆಳೆಯಲು ಅನುಮತಿ ಇದೆ. ಆದರೆ ನಮ್ಮಲ್ಲಿ ಪ್ರತಿವರ್ಷ ಬೆಳೆಯುವ ತಂಬಾಕು 80 ಮಿಲಿಯನ್ ಅಷ್ಟೇ. ಆದರೆ ಆಂಧ್ರಪ್ರದೇಶದಲ್ಲಿ 170 ಮಿಲಿಯನ್‌ಗೆ ಅನುಮತಿ ಇದ್ದರೆ ಅವರು 240 ಮಿಲಿಯನ್ ತಂಬಾಕು ಬೆಳೆಯುತ್ತಾರೆ. ಹಾಗೇ ನಮ್ಮಲ್ಲಿ ಈ ವರ್ಷ ಉತ್ತಮ ಗುಣಮಟ್ಟದ ತಂಬಾಕು 320 ರೂಗೆ ಖರೀದಿಸಿದ್ದಾರೆ. ಅದೇ ಆಂಧ್ರದಲ್ಲಿ 416 ರೂಗೆ ಮಾರಾಟವಾಗಿದೆ ಎಂದರು.

ನಮ್ಮ ರಾಜ್ಯದಲ್ಲಿ ಉತ್ತಮ ಗುಣಮಟ್ಟದ ತಂಬಾಕು ಬೆಳೆದರೂ ಅದಕ್ಕೆ ತಕ್ಕಂತೆ ಬೆಲೆ ಸಿಗುತ್ತಿಲ್ಲ. ನಿಗದಿತ ಗುರಿಗಿಂತ ಕಡಿಮೆ ಬೆಳೆದರು ನಮಗೆ ನ್ಯಾಯ ಸಿಗುತ್ತಿಲ್ಲ ಎಂದರು. ಆಂಧ್ರಪ್ರದೇಶದಲ್ಲಿನ ಶಾಸಕರು, ಸಂಸದರು ಹಾಗೂ ಅಲ್ಲಿನ ಸರ್ಕಾರ ಸದಾ ರೈತರ ನೆರವಿಗೆ ಬರುತ್ತಿದ್ದು, ಕರ್ನಾಟಕದಲ್ಲಿ ರೈತರ ಸಮಸ್ಯೆಗಳನ್ನು ಕೇಳುತ್ತಿಲ್ಲ ಎಂದು ಬೇಸರ ವ್ಯಕ್ತಪಡಿಸಿದರು. ನಮ್ಮ ಸಮಸ್ಯೆ ಬಗೆಹರಿಸುವಂತೆ ಒತ್ತಾಯಿಸಿ ಜ.5 ರಂದು ಸಂಸದರ ಕಚೇರಿ ಮುಂಭಾಗ ಧರಣಿ ನಡೆಸಲಾಗುತ್ತಿದೆ. ತಂಬಾಕು ಬೆಳೆಗಾರರು ಮತ್ತು ರೈತರು ಹೆಚ್ಚಿನ ಸಂಖ್ಯೆಯಲ್ಲಿ ಆಗಮಿಸುವಂತೆ ಮನವಿ ಮಾಡಿದರು.

ತಾಲೂಕು ರೈತ ಸಂಘದ ಪ್ರಧಾನ ಕಾರ್ಯದರ್ಶಿ ವಡ್ಡರ ಗುಡಿ ಬಸವರಾಜು, ಜಿಲ್ಲಾ ಉಪಾಧ್ಯಕ್ಷ ಪಳನಿ ಸ್ವಾಮಿ, ಮಾಜಿ ಅಧ್ಯಕ್ಷ ರವಿಕುಮಾರ್, ಸ್ವಾಮಿ, ಪಳನಿಸ್ವಾಮಿ ಇದ್ದರು.



ಸುದ್ದಿಗೋಷ್ಠಿಯಲ್ಲಿ ತಂಬಾಕು ಬೆಳೆಗಾರರಾದ ಮೊತ್ತ ಬಸವರಾಜಪ್ಪ ಮಾತನಾಡಿದರು.

ಕಟ್ಟೆ ಮಳಲವಾಡಿಯಲ್ಲಿ ಕುವೆಂಪು ಜನ್ಮದಿನ ಆಚರಣೆ

ಹುಣಸೂರು, ಜ.3– ತಾಲೂಕು ಕನ್ನಡ ಸಾಹಿತ್ಯ ಪರಿಷತ್ತು, ಕರ್ನಾಟಕ ರಾಜ್ಯ ಮಕ್ಕಳ ಸಾಹಿತ್ಯ ಪರಿಷತ್ತು ಹಾಗೂ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ (ಕಟ್ಟೆ ಮಳಲವಾಡಿ)ಯ ಸಹಯೋಗದಲ್ಲಿ ರಾಷ್ಟ್ರಕವಿ ಕುವೆಂಪು ಅವರ ಜನ್ಮ ದಿನ ಆಚರಿಸಿ, ಮಕ್ಕಳಿಗೆ ಪ್ರಶಸ್ತಿ ವಿತರಿಸಲಾಯಿತು.

ಕಟ್ಟೆಮಳಲವಾಡಿ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ ಆವರಣದಲ್ಲಿ ಕನ್ನಡ ರಾಜ್ಯೋತ್ಸವ ಪ್ರಶಸ್ತಿ ಪುರಸ್ಕೃತರಾದ ಮಹದೇವಮ್ಮನವರ ನೇತೃತ್ವದಲ್ಲಿ ಕಾರ್ಯಕ್ರಮ ನಡೆಯಿತು.

ಮಕ್ಕಳ ಪ್ರಾರ್ಥನಾ ಗೀತೆಯಲ್ಲಿ ಸಂವಿಧಾನ ಪೀಠಿಕೆಯನ್ನು ಬೋಧಿಸಲಾಯಿತು. ನೆರೆದಿದ್ದ ಕನ್ಯೆರಿಂದ ಕುವೆಂಪುರವರ ಭಾವ ಚಿತ್ರಕ್ಕೆ ಪುಷ್ಪಾರ್ಚನೆ ಸಲ್ಲಿಸಲಾಯಿತು.

ಈ ಸಂದರ್ಭದಲ್ಲಿ ಮಹಾದೇವಮ್ಮ ಅವರು ಮಾತನಾಡಿ ಮಕ್ಕಳು ಕೇವಲ ಪಾಠದಲ್ಲಿ ತೊಡಗದೆ ಕ್ರೀಡೆಯನ್ನು ಸಹ ತಮ್ಮ ಜೀವನದಲ್ಲಿ ಅಳವಡಿಸಿಕೊಳ್ಳಬೇಕೆಂದು ಕರೆ ನೀಡಿದರು. ಮಕ್ಕಳಿಗೆ ಪ್ರೋತ್ಸಾಹ ನೀಡುವ ನಿಟ್ಟಿನಲ್ಲಿ ಈ ಕಾರ್ಯಕ್ರಮವನ್ನು ರಾಷ್ಟ್ರಕವಿ ಕುವೆಂಪುರವರ ಜನ್ಮ ದಿನಾಚರಣೆ ಅಂಗವಾಗಿ ಹಮ್ಮಿಕೊಂಡಿದ್ದು ಮಕ್ಕಳು ಪಠ್ಯದೊಂದಿಗೆ ಕ್ರೀಡೆಯಲ್ಲಿಯೂ ತಮ್ಮ ಪ್ರತಿಭೆಯನ್ನು ಹೊರ ತಂದಿದ್ದಾರೆ ಎಂದರು.

ಕ್ಷೇತ್ರ ಶಿಕ್ಷಣಾಧಿಕಾರಿ ಮಹದೇವ, ಹರವೇ ಮಹದೇವ, ಐಒಬಿ ಬ್ಯಾಂಕ್ ಮ್ಯಾನೇಜರ್ ಗಣೇಶ್ ಕೆ.ಎಂ ಮಾತನಾಡಿದರು.

ಈ ಸಂದರ್ಭದಲ್ಲಿ ಕಟ್ಟೆಮಳಲವಾಡಿ ಗ್ರಾಮದ ನಿವಾಸಿಯಾದ ವೆಂಕಟೇಶ್ ಅವರ ಪುತ್ರ ಅಂತರಾಷ್ಟ್ರೀಯ ಮಟ್ಟದಲ್ಲಿ ಸ್ಕೇಟಿಂಗ್‌ನಲ್ಲಿ ಪ್ರಥಮ ಪಡೆದ ಹಿನ್ನೆಲೆಯಲ್ಲಿ ಹಾಗೂ 100 ಮೀಟರ್ ದ್ವಿತೀಯ ಖ್ಯಾತಿಗಳಿಸಿದ ನಂದನ್ ಅವರನ್ನು ಪುರಸ್ಕರಿಸಲಾಯಿತು. ಕಟ್ಟೆಮಲವಾಡಿ ಗ್ರಾಮದ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯ ಮಕ್ಕಳು ಥ್ರೋಬಾಲ್‌ನಲ್ಲಿ ರಾಜ್ಯಮಟ್ಟದಲ್ಲಿ ಹುಣಸೂರಿಗೆ ಖ್ಯಾತಿ ತಂದ ಮಕ್ಕಳನ್ನು ಸಹ ಸನ್ಮಾನಿಸಿ ಸಿಹಿ ಹಂಚಲಾಯಿತು. ಕಾರ್ಯಕ್ರಮವನ್ನು ಶಿಕ್ಷಕರಾದ ಪದ್ಮ ಅವರು ನಿರೂಪಣೆ ಮಾಡಿದರು.



ಕಟ್ಟೆಮಳಲವಾಡಿ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ ಆವರಣದಲ್ಲಿ ನಡೆದ ಸಮಾರಂಭದಲ್ಲಿ ವಿದ್ಯಾರ್ಥಿಗಳನ್ನು ಸನ್ಮಾನಿಸಲಾಯಿತು.

ನಿರಂತರ ಕಮ್ಮಟಗಳ ಮೂಲಕ ಬಸವ ತತ್ವ ಅರಿಯಲು ಸಾಧ್ಯ

ತಿ.ನರಸೀಪುರ, ಜ.3– ಬಸವ ತತ್ವಗಳನ್ನು ಅರಿಯಲು ನಿರಂತರ ಕಮ್ಮಟಗಳನ್ನು ಆಯೋಜಿಸುವ ಅನಿವಾರ್ಯತೆಯಿದೆ. ಯುವ ಸಮೂಹ ಮದ್ಯ ಮತ್ತು ಮಾದಕ ವ್ಯಸನಿಗಳಾಗಿ ತಮ್ಮ ಜೀವನವನ್ನು ಹಾಳು ಮಾಡಿಕೊಳ್ಳುತ್ತಿದ್ದು, ಅವರನ್ನು ಬಸವ ಮಾರ್ಗದತ್ತ ತರುವ ಕಾರ್ಯ ತುರ್ತಾಗಿ ನಡೆಯಬೇಕಿದೆ ಎಂದು ವಾಣಿಜ್ಯ ತೆರಿಗೆ ಇಲಾಖೆಯ ನಿವೃತ್ತ ಅಧಿಕಾರಿ ಜಿಲ್ಲಾ ಶರಣ ಸಾಹಿತ್ಯ ಪರಿಷತ್ ಜಿಲ್ಲಾಧ್ಯಕ್ಷ ಹೆಳವರಹುಂಡಿ ಸಿದ್ದಪ್ಪ ತಿಳಿಸಿದರು.

ಪಟ್ಟಣದ ಹೆಳವರಹುಂಡಿಯಲ್ಲಿರುವ ಬಸವ ಭವನದಲ್ಲಿ ಜಿಲ್ಲಾ ಮತ್ತು ತಾಲೂಕು ಶರಣ ಸಾಹಿತ್ಯ ಪರಿಷತ್ ಸಹಯೋಗದಲ್ಲಿ ಹಮ್ಮಿಕೊಂಡಿದ್ದ 77ನೇ ವರ್ಧಂತಿ ಆಚರಣೆ ಗುರುವಂದನೆ ಸ್ವೀಕರಿಸಿ ಪರಿಷತ್‌ನ ದಿನದರ್ಶಿಕೆಯನ್ನು ಬಿಡುಗಡೆಗೊಳಿಸಿ ಮಾತನಾಡಿದ ಅವರು ಭ್ರಷ್ಟಾಚಾರ, ಸ್ವಾರ್ಥತೆ, ಸ್ವಜನ ಪಕ್ಷಪಾತ ಮತ್ತು ಸುಲಿಗೆಯಂತಹ ದುಷ್ಕೃತ್ಯಗಳು ಹೆಚ್ಚಾಗಿರುವ ಪ್ರಸ್ತುತ ಕಾಲಮಾನದಲ್ಲಿ ನಿಸ್ವಾರ್ಥ, ಜಾತ್ಯತೀತ, ಸರ್ವರಿಗೂ ಸಮಪಾಲು ಮತ್ತು ಮಾನವ ಕುಲ ಒಂದೇ ಎಂಬ ಧ್ಯೇಯವನ್ನು ಪ್ರತಿಪಾದಿಸುವ ಬಸವ ತತ್ವವನ್ನು ಸಮಾಜದ ಎಲ್ಲ ಸ್ತರಗಳಲ್ಲೂ ಪಸರಿಸುವ ಮೂಲಕ ಸಮ ಸಮಾಜದ ನಿರ್ಮಾಣಕ್ಕೆ ನಾಂದಿಯಾಗಬೇಕು ಎಂದು ಸಲಹೆ ನೀಡಿದರು.

ವಾಟಾಳು ಶ್ರೀ ಸೂರ್ಯ ಸಿಂಹಾಸನ ಮಠದ ಸಿದ್ದಲಿಂಗ ಶಿವಾಚಾರ್ಯ ಸ್ವಾಮೀಜಿ ಮಾತನಾಡಿ ವಚನ ಸಾಹಿತ್ಯದ ಮೂಲಕ ಜಾತ್ಯಾತೀತ ನಿಲುವು ಮತ್ತು ಸಮ ಸಮಾಜದ ಧ್ಯೇಯವನ್ನು ಹೊಂದಿರುವ ಬಸವ ತತ್ವಗಳನ್ನು ಸಮಾಜದ ಎಲ್ಲಾ ಸ್ತರಗಳಲ್ಲೂ ಹಂಚಬೇಕೆಂದು ಕರೆ ನೀಡಿದರು.

ಕಾರ್ಯಕ್ರಮದಲ್ಲಿ ತಾಲೂಕು ಶರಣ ಸಾಹಿತ್ಯ ಪರಿಷತ್ ಅಧ್ಯಕ್ಷ ಕೆಬ್ಬೆಹುಂಡಿ ಸೋಮಶೇಖರಪ್ಪ, ಅಖಿಲ ಭಾರತ ವೀರಶೈವ ಮಹಾಸಭಾ ತಾಲೂಕು ಘಟಕದ ಅಧ್ಯಕ್ಷ ಸಿ.ಎಂ.ಪ್ರಕಾಶ್, ಉಪನ್ಯಾಸಕ ಮುನಾ.ರಮೇಶ್ ಪುರಸಭೆ ಸದಸ್ಯೆ ರೂಪಶ್ರೀ ಪರಮೇಶ್, ಬಿಜೆಪಿ ಮಂಡಲ ಅಧ್ಯಕ್ಷ ಶಿವಕುಮಾರ್(ಸತ್ಯರಾಜ್), ಕೆಇಬಿ ಸಿದ್ದಲಿಂಗಸ್ವಾಮಿ, ಶಿವಕುಮಾರಸ್ವಾಮಿ ಸೇವಾ ಟ್ರಸ್ಟ್ ಅಧ್ಯಕ್ಷ ಬಜ್ಜಿ ನಿಂಗಪ್ಪ ಸಂಚಾಲಕ ಮಾಯಪ್ಪ, ಜಾಗತಿಕ ಲಿಂಗಾಯತ ಮಹಾಸಭಾ ತಾಲೂಕು ಅಧ್ಯಕ್ಷ ತೊಟ್ಟವಾಡಿ ರವಿ, ಪರಿಷತ್ ಉಪಾಧ್ಯಕ್ಷರಾದ ಬಿ.ಮಹದೇವ ಸ್ವಾಮಿ, ಗೌ. ಬಸವರಾಜಪ್ಪ, ಪ್ರಧಾನ ಕಾರ್ಯದರ್ಶಿ ಎಂಬಸಪ್ಪಣ್ಣ ಖಜಾಂಚಿ ಬಿ.ಜಿ.ರಾಜಶೇಖರ್, ಹೆಳವರಹುಡಿ ಮೂರ್ತಿ, ಸಹ ಕಾರ್ಯದರ್ಶಿ ನಂಜುಂಡಸ್ವಾಮಿ, ಸಂಘಟನಾ ಕಾರ್ಯದರ್ಶಿ ಮೋಹನ್, ಸಂಚಾಲಕ ಶಿವಮೂರ್ತಿ, ಹೋಬಳಿ ಅಧ್ಯಕ್ಷರಾದ ಮಹೇಂದ್ರ ಕುಮಾರ್, ಪಿ.ಬಿ.ಎಸ್.ಪ್ರಭುಸ್ವಾಮಿ, ಚಿನ್ನಬುದ್ಧಿ, ಬಿ.ಸುರೇಶ್, ಮುಖಂಡರಾದ ದಯಾನಂದ್ ಪಟೇಲ್, ದೊಡ್ಡಪುರ ಮರಿಸ್ವಾಮಿ, ಅಕ್ಕಿನಾಗಪ್ಪ, ಹೆಳವರಹುಂಡಿ ಬಸಪ್ಪ, ಬಿ.ಪಿ.ಪರಶಿವಮೂರ್ತಿ, ಪುಟ್ಟಪ್ಪ, ಮಹದೇವಪ್ಪ ಹಾಗೂ ಇತರರು ಇದ್ದರು.



ವಾಟಾಳು ಮಠದ ಸಿದ್ದಲಿಂಗ ಶಿವಾಚಾರ್ಯ ಸ್ವಾಮೀಜಿ ವರ್ಧಂತಿ ಅಂಗವಾಗಿ ಶರಣ ಸಾಹಿತ್ಯ ಪರಿಷತ್ತಿನ ವತಿಯಿಂದ ಸನ್ಮಾನಿಸಲಾಯಿತು.

ಕರಾಟೆ, ಸ್ಕೇಟಿಂಗ್, ಯೋಗದಲ್ಲಿ ಸಾಧನೆಗೈದ ಅವಳಿ ಮಕ್ಕಳಿಗೆ ಅಭಿನಂದನೆಗಳ ಸುರಿಮಳೆ

ಕೆ.ಆರ್.ನಗರ: ಕರಾಟೆ, ಸ್ಕೇಟಿಂಗ್ ಮತ್ತು ಯೋಗ, ಈ ಮೂರೂ ಕ್ಷೇತ್ರಗಳಲ್ಲಿ ಪಟ್ಟಣದ ಅವಳಿ ಮಕ್ಕಳು ಚಿಕ್ಕ ವಯಸ್ಸಿನಲ್ಲೆ ಜಿಲ್ಲಾ ಮಟ್ಟದಲ್ಲಿ ಹಾಗೂ ರಾಜ್ಯಮಟ್ಟದಲ್ಲಿ ಅನೇಕ ಪ್ರಶಸ್ತಿ ಪಡೆದು ರಾಷ್ಟ್ರೀಯ ಮಟ್ಟಕ್ಕೆ ಆಯ್ಕೆಯಾಗಿರುವುದು ಕೆ.ಆರ್. ನಗರ ಮತ್ತು ಸಾಲಿಗ್ರಾಮ ಅವಳಿ ತಾಲೂಕಿನಲ್ಲೆಡೆ ಅಭಿನಂದನೆಗಳು ಹಾಗೂ ಪ್ರಶಂಸೆಗಳ ಸುರಿಮಳೆ ಜೋರಾಗಿದೆ.

ಪಟ್ಟಣದ ಹೆಸರಾಂತ ನವನಗರ ಅರ್ಬನ್ ಕೋ ಆಪರೇಟಿವ್ ಬ್ಯಾಂಕ್ ಶಾಖೆಯಲ್ಲಿ ವ್ಯವಸ್ಥಾಪಕರಾಗಿ ಸೇವೆ ಸಲ್ಲಿಸುತ್ತಿರುವ ಎಂ.ಪಿ. ಸುಹಾಸ್ ಗೌಡ ಮತ್ತು ಪಿ.ಆಶಾ ದಂಪತಿಗಳ ಅವಳಿ ಮಕ್ಕಳಾದ ಎಂ.ಎಸ್.ಹಿತಿತಾ, ಎಂ.ಎಸ್.ಹಿಶಾನ್ ಸಾಧನೆ ಮಾಡಿದ್ದಾರೆ.

ಕರಾಟೆ, ಸ್ಕೇಟಿಂಗ್ ಮತ್ತು ಯೋಗ, ಈ ಮೂರೂ ಕ್ಷೇತ್ರಗಳಲ್ಲಿ ಮಿಂಚಿ ಪ್ರಶಸ್ತಿಗಳನ್ನು ಪಡೆದಿದ್ದಾರೆ. ಈ ಅವಳಿ ಮಕ್ಕಳು ಮಿರ್ಲೆ ಗ್ರಾಮದ ನಿವೃತ್ತ ಪ್ರಾಂಶುಪಾಲ ದಿ. ಪಾಂಡುರಂಗೇಗೌಡ ಅವರ ಮೊಮ್ಮಕ್ಕಳಾಗಿದ್ದಾರೆ.

ಎಂ.ಎಸ್.ಹಿತಿತಾ, ಎಂ.ಎಸ್.ಹಿಶಾನ್ ಈ ಅವಳಿ ಮಕ್ಕಳು ಪಟ್ಟಣದ ಹೆಸರಾಂತ ಎಸ್.ಎನ್.ಪಬ್ಲಿಕ್ ಶಾಲೆಯಲ್ಲಿ 4ನೇ ತರಗತಿ ವ್ಯಾಸಂಗ ಮಾಡುತ್ತಿದ್ದು ಕರಾಟೆ, ಸ್ಕೇಟಿಂಗ್ ಮತ್ತು ಯೋಗಾದಲ್ಲಿ ತರಬೇತಿ ಪಡೆದು ಅನೇಕ ಪ್ರಶಸ್ತಿಯನ್ನು ಮುಡಿಗೇರಿಸಿಕೊಂಡಿದ್ದಾರೆ.



ತಮ್ಮ ಚಿಕ್ಕ ವಯಸ್ಸಿನಿಂದ ಕ್ರೀಡೆಯಲ್ಲಿ ವಿಶೇಷ ಆಸಕ್ತಿ ಹೊಂದಿದ್ದಾರೆ. ದಸರಾ ಮಹೋತ್ಸವ ಯೋಗಾ ಪ್ರಶಸ್ತಿ ಕನ್ನಡ ರಾಜ್ಯೋತ್ಸವ ಪ್ರಶಸ್ತಿ ಪಡೆದಿರುವ ಈ ಅವಳಿ ಸಹೋದರಿಯರು ರಾಷ್ಟ್ರ ಹಾಗೂ ಅಂತರರಾಷ್ಟ್ರೀಯ ಕರಾಟೆ, ಸ್ಕೇಟಿಂಗ್ ಮತ್ತು ಯೋಗ, ಈ ಮೂರೂ ಕ್ಷೇತ್ರಗಳಲ್ಲಿ ಭಾಗವಹಿಸುವ ನಿರೀಕ್ಷೆಯಲ್ಲಿದ್ದಾರೆ. ಇತ್ತೀಚೆಗೆ ತಾಲೂಕು ಒಕ್ಕಲಿಗರ ಸಂಘದಿಂದ ನಡೆದ ಪ್ರತಿಭಾ ಪುರಸ್ಕಾರ ಕಾರ್ಯ ಕ್ರಮದಲ್ಲಿ ಹಿತಿತಾ, ಹಿಶಾನ್ ಈ ಅವಳಿ ಮಕ್ಕಳಿಗೆ ಅಭಿನಂದನಾ ಪ್ರಶಂಸೆ ಪತ್ರ ನೀಡಿ ಗೌರವಿಸಿದೆ.

ಸುಳ್ಳು ಜಾತಿ ಪ್ರಮಾಣ ಪತ್ರದ ಬಗ್ಗೆ ಪರಿಶೀಲಿಸಿ

ಹುಣಸೂರು, ಜ.3–ನಗರದ ಹೊರ ವಲಯದ ಬಾಚಳ್ಳಿ ರಸ್ತೆಯಲ್ಲಿರುವ 13 ಕುಟುಂಬಗಳು ಸೋಲಿಗ ಜನಾಂಗಕ್ಕೆ ಸೇರಿದವರು ಎಂದು ಈ ಹಿಂದಿನ ಎಸ್ಸಿ ಎಸ್ಟಿ ಸಮಿತಿ ಸದಸ್ಯರು ಸುಳ್ಳು ಜಾತಿ ಪ್ರಮಾಣ ಪತ್ರಗಳನ್ನು ನೀಡಿ ಅರ್ಹ ಸಮುದಾಯಕ್ಕೆ ಅನ್ಯಾಯ ಮಾಡಿದ್ದು, ಈ ಬಗ್ಗೆ ಅದಿಕಾರಿಗಳು ಸ್ಥಳ ಪರಿಶೀಲನೆ ನಡೆಸಿ ಕ್ರಮ ವಹಿಸಬೇಕು ಎಂದು ಸಮಿತಿ ಸದಸ್ಯ ಆಶೋಕ್ ಉಪ ವಿಭಾಗಾಧಿಕಾರಿಗಳ ಕಚೇರಿಯಲ್ಲಿ ನಡೆದ ಉಪ ವಿಭಾಗ ಮಟ್ಟದ ಎಸ್ಸಿ, ಎಸ್ಟಿ ಸಭೆಯಲ್ಲಿ ಆಗ್ರಹಿಸಿದ್ದಾರೆ.

ಸಭೆಯಲ್ಲಿ ಮಾತನಾಡಿದ ಅವರು ಈ ಕುಟುಂಬಗಳು ಸೋಲಿಗ ಅಥವಾ ಜೇನುಕುರುಬ ಸಮುದಾಯಕ್ಕೆ ಸೇರಿದವರು ಎನ್ನುವುದಕ್ಕೆ ಅವರಲ್ಲಿ ಯಾವುದೆ ದಾಖಲೆಗಳಿಲ್ಲ. ಹಿಂದಿನ ಸಮಿತಿ ಸದಸ್ಯರ ಒತ್ತಯಕ್ಕೆ ಮಣಿದು ಈ ರೀತಿಯ ಸುಳ್ಳು ದಾಖಲೆಗಳು ಸೃಷ್ಟಿಯಾಗಿರಬಹುದು ಎಂದು ಸಭೆಯ ಗಮನಕ್ಕೆ ತಂದರು. ಬಗ್ಗೆ ಪ್ರತಿಕ್ರಿಯಿಸಿದ ಉಪವಿಬಾಗಾಧಿಕಾರಿ ಮಂಜುನಾಥ್ ಸುಳ್ಳು ದಾಖಲೆ ನೀಡಿ ಪ್ರಮಾಣ ಪತ್ರ ಪಡೆದಿದ್ದರೆ ಅಗತ್ಯ ಕ್ರಮ ಕೈಗೊಳ್ಳಿ ಎಂದು ಅಧಿಕಾರಿಗಳಿಗೆ ತಾಕಿತು ಮಾಡಿದರು.

ಈ ಬಗ್ಗೆ ಸ್ಥಳಕ್ಕೆ ಹಲವು ಬಾರಿ ಭೇಟಿ ನೀಡಿ ಪರಿಶೀಲಿಸಿದಾಗ ಅಲ್ಲಿ 9 ಕುಟುಂಬಗಳು ಮಾತ್ರ ವಾಸಿಸುತ್ತಿದ್ದು ಈ ಕುಟುಂಬದವರ ಬಳಿ ಸೋಲಿಗ ಅಥವಾ ಜೇನುಕುರುಬ ಸಮುದಾಯಕ್ಕೆ ಸೇರಿದವರು ಎನ್ನುವುದಕ್ಕೆ ಅವರಲ್ಲಿ ಯಾವುದೆ ದಾಖಲೆಗಳಿಲ್ಲ. ಇದಲ್ಲದೆ ಈ ಸಮುದಾಯದವರನ್ನು ಕೆಲವು ಸಂಘ ಸಂಸ್ಥೆಗಳು ಬಲವಂತವಾಗಿ ಜೇನು ಕುರುಬ ಸಮುದಾಯಕ್ಕೆ ಸೇರಿಸುವ ಪ್ರಯತ್ನ ನಡೆಸಿವೆ ಎಂಬ ತಕರಾರು ಸಹ ಇಲಾಖೆಗೆ ಬಂದಿದೆ ಎಂದು ತಿಳಿಸಿದರು.


ಇದಕ್ಕೆ ಉಪವಿಭಾಗಧಿಕಾರಿ ಅರ್.ಮಂಜುನಾಥ್ ಉತ್ತರಿಸಿ ಸುಳ್ಳು ಜಾತಿ ಪತ್ರ ನೀಡಿದರೆ ಅಥಾವ ಪಡೆದಿದ್ದಾರೆಯೆ ಎಂದು ಸೂಕ್ಷ್ಮವಾಗಿ ಗಮನಿಸಿ ವರದಿ ನೀಡಿ ಎಂದು ಅಧಿಕಾ ರಿಗಳಿಗೆ ತಾಕಿತು ಮಾಡಿದರು.

ಈ ಸಂಬಂದ ಪೊಲೀಸ್ ಅಧಿಕಾರಿಗಳೊಂದಿಗೆ ಚರ್ಚಿಸಿ ಕ್ರಮವಹಿಸಲು ಸೂಚಿಸಲಾಗುವುದು ಎಂದು ಉಪವಿಬಾಗಧಿಕಾರಿ ತಿಳಿಸಿದರು. ಸಭೆಯಲ್ಲಿ ಎಸ್ಸಿ, ಎಸ್ಟಿ ಸಮಿತಿ ಸದಸ್ಯ ಅಣ್ಣಯ್ಯನಾಯಕ, ಉಪವಿಭಾಗದ 6 ತಾಲೂಕುಗಳ ತಹಸೀಲ್ದಾರ್ ಮತ್ತು ಅಧಿಕಾರಿಗಳು ಉಪಸ್ಥಿತರಿದ್ದರು.



ಇಂದು ಕೆ.ಆರ್.ನಗರದಲ್ಲಿ ಕುವೆಂಪು ಜಯಂತಿ

ಕೆ.ಆರ್.ನಗರ: ಒಕ್ಕಲಿಗ ನೌಕರರ ಸ್ನೇಹ ಬಳಗದವತಿಯಿಂದ ರಾಷ್ಟ್ರಕವಿ ಕುವೆಂಪು ಜಯಂತಿ ಹಾಗೂ ಪ್ರತಿಭಾ ಪುರಸ್ಕಾರ ಮತ್ತು ನಿವೃತ್ತ ನೌಕರರಿಗೆ ಸನ್ಮಾನ ಕಾರ್ಯವನ್ನು ಜ.4ರಂದು ಬೆಳಿಗ್ಗೆ 11 ಗಂಟೆಗೆ ಪಟ್ಟಣದ ಪಿ.ಎಲ್.ಡಿ. ಬ್ಯಾಂಕ್ ಸಮುದಾಯ ಭವನದಲ್ಲಿ ಆಯೋಜಿಸಲಾಗಿದೆ ಎಂದು ಬಳಗದ ಕಾರ್ಯದರ್ಶಿ ಈಶ್ವರ್ ಹೆಚ್.ಎಸ್ ಪತ್ರಿಕಾ ಹೇಳಿಕೆಯಲ್ಲಿ ತಿಳಿಸಿದ್ದಾರೆ.



ಕೆ.ಆರ್.ನಗರ ಮತ್ತು ಸಾಲಿಗ್ರಾಮ ಒಕ್ಕಲಿಗ ಸಮುದಾಯದ ಎಸ್‌ಎಸ್‌ಎಲ್‌ಸಿ ಮತ್ತು ಪಿಯುಸಿ 2024–25ನೇ ಸಾಲಿನ ಉನ್ನತ ಶ್ರೇಣಿಯಲ್ಲಿ ಉತ್ತೀರ್ಣರಾದ 80 ವಿದ್ಯಾರ್ಥಿಗಳಿಗೆ ಹಾಗೂ 40 ಮಂದಿ ನಿವೃತ್ತ ನೌಕರರಿಗೆ ಅಭಿನಂದನಾ ಕಾರ್ಯಕ್ರಮ ನಡೆಯಲಿದೆ.

ಸಮಾರಂಭದ ಅಧ್ಯಕ್ಷತೆ ಮಾಜಿ ಸಚಿವ ಸಾ.ರಾ.ಮಹೇಶ್ ವಹಿಸಲಿದ್ದಾರೆ. ಕಾರ್ಯಕ್ರಮದ ಉದ್ಘಾಟನೆಯನ್ನು ವಿಶ್ರಾಂತ ಕುಲಪತಿಗಳು ಹಾಗೂ ಅಂತರರಾಷ್ಟ್ರೀಯ ವಿಜ್ಞಾನಿಗಳಾದ ಪ್ರೊ.ಕೆ.ಎಸ್.ರಂಗಪ್ಪ ನೆರವೇರಿಸಲಿದ್ದಾರೆ.

ಅಂಡರ್–14 ಕ್ರಿಕೆಟ್ ಪಂದ್ಯಾವಳಿಗೆ ತಿ.ನರಸೀಪುರ ತಾಲೂಕಿನ ಮೂವರು ಆಯ್ಕೆ






ತಿ.ನರಸೀಪುರದ, ಜ.3– ಶಿವಶಂಕರ್ ಸ್ಪೋರ್ಟ್ಸ್ ಅಕಾಡೆಮಿಯ ನಾಲ್ವರು ಕ್ರಿಕೆಟ್ ಆಟಗಾರರು ಅಂಡರ್–14 ಕ್ರಿಕೆಟ್ ಪಂದ್ಯಾವಳಿಯಲ್ಲಿ ರಾಷ್ಟ್ರಮಟ್ಟಕ್ಕೆ ಮೂವರು ಮತ್ತು ಓರ್ವ ಕೆಎಸ್‌ಸಿಎ ಅಂತರವಲಯ ಮಟ್ಟಕ್ಕೆ ಆಯ್ಕೆಯಾಗುವ ಮೂಲಕ ತಾಲೂಕಿಗೆ ಹಾಗೂ ಅಕಾಡೆಮಿಗೆ ಕೀರ್ತಿ ತಂದಿದ್ದಾರೆ ಎಂದು ಅಕಾಡೆಮಿಯ ಮುಖ್ಯಸ್ಥರಾದ ನವೀನ್‌ರವರು ತಿಳಿಸಿದ್ದಾರೆ.

ಅಕಾಡೆಮಿಯಲ್ಲಿ ತರಬೇತಿ ಪಡೆಯುತ್ತಿರುವ ಧನೇಶ್ ಅರಸ್ ಆರ್, ಶಿವನ್ ಪಟೇಲ್.ಎನ್ ಮತ್ತು ಲೋಕಾರ್ಜುನ್ ಎಸ್.ಮಧು ಎಂಬ ಮೂರು ಕ್ರೀಡಾಪಟುಗಳು ಇದೇ ತಿಂಗಳು 18 ರಿಂದ 24ರವರೆಗೆ ರಾಜಸ್ಥಾನ್‌ನಲ್ಲಿ ನಡೆಯುವ ರಾಷ್ಟ್ರಮಟ್ಟದ ಅಂಡರ್–14 ಕ್ರಿಕೆಟ್ ಪಂದ್ಯಾಟಕ್ಕೆ ಆಯ್ಕೆಯಾಗಿದ್ದಾರೆ. ಹಾಗೆಯೇ ಇದೇ ಅಕಾಡೆಮಿಯಲ್ಲಿ ತರಬೇತಿ ಪಡೆಯುತ್ತಿರುವ ಪ್ರಥಮ್.ಆರ್ ಎಂಬ ಮತ್ತೋರ್ವ ಕ್ರೀಡಾಪಟು ಬೆಂಗಳೂರಿನಲ್ಲಿ ನಡೆಯುತ್ತಿರುವ ಕೆಎಸ್‌ಸಿಎ ಅಂತರ ವಲಯ ಕ್ರಿಕೆಟ್ ಪಂದ್ಯಾವಳಿಗೆ ಆಯ್ಕೆಯಾಗಿರುತ್ತಾನೆ. ಈ ಮೂಲಕ ತಾಲೂಕಿನ ಇತಿಹಾಸದಲ್ಲಿ ರಾಷ್ಟ್ರಮಟ್ಟಕ್ಕೆ ಹಾಗೂ ಕೆಎಸ್‌ಸಿಎ ವಲಯಮಟ್ಟಕ್ಕೆ ಆಯ್ಕೆಯಾದ ಮೊದಲ ಕ್ರೀಡಾಪಟುಗಳು ಎಂಬ ಹೆಗ್ಗಳಿಕೆಗೆ ಪಾತ್ರರಾಗಿದ್ದಾರೆ.

ಪ್ರಸ್ತುತ ಈ ಕ್ರೀಡಾಪಟುಗಳಿಗೆ ವಿಷ್ಣು ಪ್ರಸಾದ್, ಮಹಾಂತೇಶ್ ಹಾಗೂ ಮಧುರವರು ದಿನ ನಿತ್ಯ ತರಬೇತಿ ನೀಡುವುದರ ಮೂಲಕ ಅತ್ಯುತ್ತಮ ಕ್ರೀಡಾಪಟುಗಳಾಗಿ ರೂಪಿಸಿದ್ದಾರೆ ಎಂದು ಶಿವಶಂಕರ್ ಸ್ಪೋರ್ಟ್ಸ್ ಅಕಾಡೆಮಿಯ ಮುಖ್ಯಸ್ಥರಾದ ನವೀನ್ ತಿಳಿಸಿದರು.

ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಗೆ ಸ್ಕೂಲ್ ಬ್ಯಾಗ್ ವಿತರಣೆ



ಬನ್ನೂರಿನ ಸರ್ಕಾರಿ ಹಿರಿಯ ಪ್ರಾಥಮಿಕ ಬಿ ಶಾಲೆಯಲ್ಲಿ ಶನಿವಾರ ಶೀಲಾ ಸಿದ್ದೇಶ್ವರ ಪುತ್ರಿ ಅಭಿಜ್ಞಾನ ಮೈತ್ರಿ ಜನ್ಮದಿನದ ಅಂಗವಾಗಿ ಶಾಲಾ ಮಕ್ಕಳಿಗೆ ಸ್ಕೂಲ್ ಬ್ಯಾಗ್ ವಿತರಿಸಲಾಯಿತು.

ನಾಳೆ ಮೈಸೂರಲ್ಲಿ ಕುಂಬಾರರ ಸಂಘದ ಅಮೃತ ಮಹೋತ್ಸವ

ತಿ.ನರಸೀಪುರ ತಾಲೂಕಿನಿಂದ ಜನರನ್ನು ಕರೆತರಲು ಬಸ್ ವ್ಯವಸ್ಥೆ

ತಿ.ನರಸೀಪುರ, ಜ.3– ಮೈಸೂರಿನ ಕಲಾಮಂದಿರದಲ್ಲಿ ಸೋಮವಾರ (ಜ.5) ಮೈಸೂರು ಜಿಲ್ಲಾ ಕುಲಾಲಗುಂಡ ಬ್ರಹ್ಮಾರ್ಯ ಕುಂಬಾರರ ಸಂಘದ 75ನೇ ವರ್ಷದ ಅಮೃತ ಮಹೋತ್ಸವ ಹಾಗೂ ರಾಜ್ಯ ಕುಂಬಾರರ ಮಹಾ ಸಮ್ಮೇಳನ ನಡೆಯಲಿದ್ದು, ತಾಲೂಕಿನಿಂದ ಹೆಚ್ಚಿನ ಸಂಖ್ಯೆಯಲ್ಲಿ ಸಮಾಜದ ಬಂಧುಗಳು ಭಾಗವಹಿಸುವಂತೆ ಸಂಘದ ತಾಲೂಕು ಘಟಕದ ಸಂಸ್ಥಾಪಕ ಅಧ್ಯಕ್ಷ ಕೇತಹಳ್ಳಿ ರಾಜಣ್ಣ ಮನವಿ ಮಾಡಿದರು.



ಪಟ್ಟಣದಲ್ಲಿ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು ಜಿಲ್ಲಾ ಕುಲಾಲಗುಂಡ ಬ್ರಹ್ಮಾರ್ಯ ಸಂಘವು 75 ವಸಂತಗಳನ್ನು ಪೂರೈಸಿರುವ ಹಿನ್ನೆಲೆಯಲ್ಲಿ ಕಲಾ ಮಂದಿರದ ಆವರಣದಲ್ಲಿ ಅಮೃತ ಮಹೋತ್ಸವ ಕಾರ್ಯಕ್ರಮ ಹಾಗು ರಾಜ್ಯ ಕುಂಬಾರರ ಮಹಾ ಸಮ್ಮೇಳನ ನಡೆಯಲಿದ್ದು, ತಾಲೂಕಿನ ಪ್ರತಿಯೊಂದು ಗ್ರಾಮಕ್ಕೂ ಸಮಾರಂಭಕ್ಕೆ ಕರೆದೊಯ್ಯಲು ಬಸ್ ವ್ಯವಸ್ಥೆ ಕಲ್ಪಿಸಲಾಗಿದೆ ಎಂದರು. ಮಹಾ ಸಮ್ಮೇಳನಕ್ಕೆ ವಿವಿಧ ಜಿಲ್ಲೆಯಿಂದ ಜನಾಂಗದ ಬಾಂಧವರು ಆಗಮಿಸುತ್ತಿದ್ದು, ಮಂಡ್ಯದಿಂದ ಯುವ ಸಮೂಹ 300ಕ್ಕೂ ಹೆಚ್ಚಿನ ಸಂಖ್ಯೆಯಲ್ಲಿ ಬೈಕ್ ರ್‍ಯಾಲಿ ಮೂಲಕ ಆಗಮಿಸುತ್ತಿದ್ದಾರೆ. ಹಾಗಾಗಿ ತಾಲೂಕಿನಿಂದ ಸಾವಿರಾರು ಸಂಖ್ಯೆಯಲ್ಲಿ ಕಾರ್ಯಕ್ರಮಕ್ಕೆ ಜನಾಂಗದವರು ಆಗಮಿಸುವ ಮೂಲಕ ನಮ್ಮ ಸಂಘಟನೆಯ ಶಕ್ತಿ ಪ್ರದರ್ಶನ ಮಾಡಬೇಕಿದೆ ಎಂದರು.

ಸಮ್ಮೇಳನದ ದಿವ್ಯ ಸಾನಿಧ್ಯವನ್ನು ಶ್ರೀ ಕ್ಷೇತ್ರ ಮಾಣೀಲದ ಮೋಹನದಾಸ ಪರಮಹಂಸ ಸ್ವಾಮಿಗಳು ಹಾಗು ಬಿಜಾಪುರ ತೆಲಂಗಾಸದ ಶ್ರೀ ಬಸವ ಕುಂಬಾರ ಗುಂಡಯ್ಯ ಸ್ವಾಮೀಜಿಯವರು ವಹಿಸಲಿದ್ದು, ಮುಖ್ಯಮಂತ್ರಿ ಸಿದ್ದರಾಮಯ್ಯ ಹಾಗು ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಘನ ಉಪಸ್ಥಿತಿಯಲ್ಲಿ ಕಾರ್ಯಕ್ರಮ ನಡೆಯಲಿದೆ. ಸಮಾಜ ಕಲ್ಯಾಣ ಸಚಿವ ಡಾ. ಎಚ್.ಸಿ.ಮಹದೇವಪ್ಪ ಕಾರ್ಯಕ್ರಮ ಉದ್ಘಾಟಿಸಲಿದ್ದು, ಪಶುಸಂಗೋಪನಾ ಸಚಿವ ಕೆ.ವೆಂಕಟೇಶ್, ಲೋಕೋಪಯೋಗಿ ಸಚಿವ ಸತೀಶ್ ಜಾರಕಿಹೊಳಿ, ಸಂಸದರಾದ ಯದುವೀರ ಕೃಷ್ಣದತ್ತ ಚಾಮರಾಜ ಒಡೆಯರ್ ಹಾಗು ಸುನೀಲ್ ಬೋಸ್ ಕಾರ್ಯಕ್ರಮದಲ್ಲಿ ಭಾಗವಹಿಸಲಿದ್ದಾರೆ ಎಂದರು.

ಕುಂಬಾರರಿಗೆ ರಾಜಕೀಯ ಸ್ಥಾನ ಮಾನಗಳಿಲ್ಲ

ರಾಜ್ಯದಲ್ಲಿ ಕುಂಬಾರ ಸಮುದಾಯ ಸುಮಾರು 28 ಲಕ್ಷಕ್ಕೂ ಅಧಿಕ ಜನಸಂಖ್ಯೆ ಹೊಂದಿದ್ದು ಸಾಮಾಜಿಕವಾಗಿ, ಆರ್ಥಿಕವಾಗಿ, ಶೈಕ್ಷಣಿಕವಾಗಿ, ರಾಜಕೀಯವಾಗಿ ಹಿಂದುಳಿದ ಹಾಗೂ ಶೋಷಿತ ಸಮುದಾಯವಾಗಿದೆ. ಕುಂಬಾರ ವೃತ್ತಿಯನ್ನೇ ನಂಬಿಕೊಂಡಿರುವ ಈ ಸಮುದಾಯವು ಹೊಟ್ಟೆಪಾಡಿಗಾಗಿ ಊರು ಬಿಡುವ ಪರಿಸ್ಥಿತಿ ನಿರ್ಮಾಣವಾಗಿದೆ. ಕಡಿಮೆ ಜನಸಂಖ್ಯೆಯಿರುವ ಎಷ್ಟೋ ಸಮುದಾಯಗಳು ಸಮಾಜದ ಮುಖ್ಯವಾಹಿನಿಯಲ್ಲಿವೆ. ಇದೇ ರೀತಿ ನಮ್ಮ ಸಮಾಜ ಕೂಡ ಮುಖ್ಯ ವಾಹಿನಿಗೆ ಬರಬೇಕು ಎಂದು ಕೇತಹಳ್ಳಿ ರಾಜಣ್ಣ ತಿಳಿಸಿದ್ದಾರೆ.

ಕುಂಬಾರರು ಆರ್ಥಿಕವಾಗಿ ಶ್ರೀಮಂತರಲ್ಲದಿದ್ದರೂ ಸಂಸ್ಕೃತಿ, ಗುರು ಹಿರಿಯರನ್ನು ಗೌರವಿಸುವ ಹೃದಯ ಶ್ರೀಮಂತಿಕೆ ಹೊಂದಿದ್ದಾರೆ. ನಮ್ಮ ಸಮುದಾಯಕ್ಕೆ ರಾಜಕೀಯವಾಗಿ, ಶೈಕ್ಷಣಿಕವಾಗಿ, ಆರ್ಥಿಕವಾಗಿ ಶಕ್ತಿ ಇಲ್ಲದಂತಾಗಿದೆ.ಯಾವುದೇ ಸ್ಥಳೀಯ ಸಂಸ್ಥೆ ಚುನಾವಣೆಯಲ್ಲಾಗಲೀ ಚುನಾವಣೆಗೆ ನಿಂತು ಗೆಲ್ಲುವ ಸಾಮರ್ಥ್ಯ ನಮ್ಮಲ್ಲಿಲ್ಲ. ಹಾಗಾಗಿ ಸರ್ಕಾರ ಸ್ಥಳೀಯ ಸಂಸ್ಥೆ ಚುನಾವಣೆಗಳಲ್ಲಿ ಸರ್ಕಾರದ ನಾಮ ನಿರ್ದೇಶನ ಸದಸ್ಯರನ್ನಾಗಿ ನೇಮಕ ಮಾಡುವಾಗ ನಮ್ಮ ಸಮುದಾಯಕ್ಕೆ ಮೊದಲ ಆದ್ಯತೆ ನೀಡಬೇಕಿದೆ ಎಂದು ಅಗ್ರಹಿಸಿದರು.

ಸಣ್ಣಮೊಗಯ್ಯ ನಿಧನ

ಭೇರ್ಯ: ಸಮೀಪದ ಗೇರದಡ ಗ್ರಾಮದ ನಿವೃತ್ತ ಮುಖ್ಯ ಶಿಕ್ಷಕ ಸಣ್ಣ ಮೊಗಯ್ಯ (ದೇವರಾಜು) ನಿಧನರಾದರು. ಅವರಿಗೆ 62 ವರ್ಷ ವಯಸ್ಸಾಗಿತ್ತು ದಿವಂಗತರು ಪತ್ನಿ, ನಾಲ್ವರು ಪುತ್ರಿಯರು ಸೇರಿದಂತೆ ಅಪಾರ ಬಂಧು–ಬಳಗ ಅಗಲಿದ್ದಾರೆ. ಅಂತ್ಯಕ್ರಿಯೆ ಸ್ವ–ಗ್ರಾಮದ ಅವರ ಜಮೀನಿನಲ್ಲಿ ಶನಿವಾರ ಮಧ್ಯಾಹ್ನ ನೆರವೇರಿತು. ವಿವಿಧ ಶಾಲೆಯಲ್ಲಿ ಶಿಕ್ಷಕರರಾಗಿ, ಮುಖ್ಯಶಿಕ್ಷಕರಾಗಿ ಸೇವೆ ಸಲ್ಲಿಸಿದ್ದರು. ಹಾರ್ಮೋನಿಯಂ ಮಾಸ್ತರ್ ಕೂಡ ಆಗಿದ್ದ ಇವರು ನೂರಾರು ಪೌರಾಣಿಕ ಕಥೆಗಳ ನಾಟಕವನ್ನು ನಿರ್ದೇಶನ ಮಾಡಿದ್ದರು.



ಇವರ ನಿಧನಕ್ಕೆ ಎಂಸಿಡಿಸಿಸಿ ಬ್ಯಾಂಕಿನ ಅಧ್ಯಕ್ಷ ದೊಡ್ಡಸ್ವಾಮೇಗೌಡ, ಜಿ.ಪಂ. ಮಾಜಿ ಸದಸ್ಯ ಎಂ.ಟಿ.ಕುಮಾರ್ ಸಂತಾಪ ಸೂಚಿಸಿದ್ದಾರೆ.

ಇಂಧನ ಸೋರಿಕೆ ತಡೆಗೆ ತಾಂತ್ರಿಕ ಪರಿಣಿತಿ ಮುಖ್ಯ

ತರಬೇತಿ ಕಾರ್ಯಕ್ರಮದಲ್ಲಿ ಸೆಸ್ಕ್ ವ್ಯವಸ್ಥಾಪಕ ನಿರ್ದೇಶಕ ಕೆ.ಎಂ.ಮುನಿಗೋಪಾಲ್ ರಾಜು ಸಲಹೆ



ಸೆಸ್ಕ್ ಅಧಿಕಾರಿಗಳಿಗೆ ಕೆಇಬಿಇಎ ಮೈಸೂರು ವಲಯ ಕೇಂದ್ರದ ವತಿಯಿಂದ ಕಡಕೊಳದಲ್ಲಿರುವ ಕರ್ನಾಟಕ ವಿದ್ಯುಚ್ಛಕ್ತಿ ಮಂಡಳಿ ಇಂಜಿನಿಯರುಗಳ ಸಂಘ(ಕೆಇಬಿಇಎ)ದ ಸಭಾಂಗಣದಲ್ಲಿ ಆಯೋಜಿಸಿದ್ದ 'ಇಂಧನ (ವಿದ್ಯುತ್) ಲೆಕ್ಕ ಪರಿಶೀಲನೆ ಮತ್ತು ಐಪಿ ಫೀಡರ್‌ನಲ್ಲಿ ನಷ್ಟದ ಕಡಿತ' ವಿಷಯ ಕುರಿತ ಒಂದು ದಿನದ ತರಬೇತಿ ಕಾರ್ಯಕ್ರಮವನ್ನು ಸೆಸ್ಕ್‌ನ ವ್ಯವಸ್ಥಾಪಕ ನಿರ್ದೇಶಕ ಕೆ.ಎಂ.ಮುನಿಗೋಪಾಲ್ ರಾಜು ಉದ್ಘಾಟಿಸಿದರು.

ಮೈಸೂರು, ಜ.3(ಜಿಎ)– ಇಂಧನ ಸೋರಿಕೆ ತಡೆಯುವಲ್ಲಿ ತಾಂತ್ರಿಕ ಪರಿಣಿತಿ ಮುಖ್ಯ ಎಂದು ಸೆಸ್ಕ್‌ನ ವ್ಯವಸ್ಥಾಪಕ ನಿರ್ದೇಶಕ ಕೆ.ಎಂ. ಮುನಿಗೋಪಾಲ್ ರಾಜು ತಿಳಿಸಿದ್ದಾರೆ.

ಚಾಮುಂಡೇಶ್ವರಿ ವಿದ್ಯುತ್ ಸರಬರಾಜು ನಿಗಮ ನಿಯಮಿತ(ಸೆಸ್ಕ್) ಅಧಿಕಾರಿಗಳಿಗೆ ಕೆಇಬಿಇಎ ಮೈಸೂರು ವಲಯ ಕೇಂದ್ರದ ವತಿಯಿಂದ ಕಡಕೊಳದಲ್ಲಿರುವ ಕರ್ನಾಟಕ ವಿದ್ಯುಚ್ಛಕ್ತಿ ಮಂಡಳಿ ಇಂಜಿನಿಯರುಗಳ ಸಂಘ(ಕೆಇಬಿಇಎ)ದ ಸಭಾಂಗಣದಲ್ಲಿ ಶುಕ್ರವಾರ ಆಯೋಜಿಸಿದ್ದ 'ಇಂಧನ(ವಿದ್ಯುತ್) ಲೆಕ್ಕ ಪರಿಶೀಲನೆ ಮತ್ತು ಐಪಿ ಫೀಡರ್‌ನಲ್ಲಿ ನಷ್ಟದ ಕಡಿತ' ವಿಷಯದ ಕುರಿತು ಒಂದು ದಿನದ ತರಬೇತಿ ಕಾರ್ಯಕ್ರಮ ಉದ್ಘಾಟಿಸಿ ಅವರು ಮಾತನಾಡಿದರು.

ಇಂಧನ ಸೋರಿಕೆ, ವಿದ್ಯುತ್ ಅಡಚಣೆ ಹಾಗೂ ಆರ್ಥಿಕ ಹೊರೆಯನ್ನು ಕಡಿಮೆ ಮಾಡುವ ನಿಟ್ಟಿನಲ್ಲಿ ತಾಂತ್ರಿಕ ನಿರ್ವಹಣೆ ಅವಶ್ಯಕವಾಗಿದ್ದು, ಅಧಿಕಾರಿಗಳು ಸಮರ್ಪಕವಾಗಿ ತಾಂತ್ರಿಕ ನಿರ್ವಹಣೆಗೆ ಮುಂದಾಗಬೇಕು ಎಂದು ಸಲಹೆ ನೀಡಿದರು.

ಈ ಹಿಂದೆ ಸಕಲೇಶಪುರದ ಬಾಳುಪೇಟೆ ಫೀಡರ್‌ನಲ್ಲಿ ಎನರ್ಜಿ ಆಡಿಟಿಂಗ್ ನಡೆಸಿದ ಸಂದರ್ಭ ಶೇ.40 ರಿಂದ ಶೇ.43 ಇಂಧನ ಸೋರಿಕೆ ಕಂಡುಬಂದಿತ್ತು. ಆನಂತರದಲ್ಲಿ ಸಮರ್ಪಕ ತಾಂತ್ರಿಕ ನಿರ್ವಹಣೆ ಮಾಡಿದ್ದರ ಪರಿಣಾಮವಾಗಿ ಇಂಧನ ಸೋರಿಕೆಯು ಶೇ.12ಕ್ಕೆ ಇಳಿಕೆ ಮಾಡುವಲ್ಲಿ ಯಶಸ್ವಿಯಾದೆವು. ಇದರಿಂದ ನಿಗಮಕ್ಕೆ ಆದಾಯ ಹೆಚ್ಚಿತ್ತು, ವಿದ್ಯುತ್ ಅಡಚಣೆ ಕಡಿಮೆಯಾಗಿ ಫೀಡರ್‌ಗಳು, ಟ್ರಾನ್ಸ್‌ಫಾರ್ಮರ್‌ಗಳು ಮತ್ತು ಮೀಟರ್‌ಗಳ ನಿರ್ವಹಣೆ ಸುಲಭಗೊಂಡಿತು ಎಂದರು.

ಪ್ರಸ್ತುತ ಇಂಧನ ಇಲಾಖೆ ಹೊಸತನಕ್ಕೆ ಆದ್ಯತೆ ನೀಡಿ, 5000 ಮೆಗಾ ವ್ಯಾಟ್ ವಿದ್ಯುತ್ ಉತ್ಪಾದಿಸಲು ಕಾರ್ಯಯೋಜನೆ ರೂಪಿಸಿದ್ದು, ಮುಂದಿನ ಒಂದು ವರ್ಷದಲ್ಲಿ ಇದನ್ನು ಸಾಧಿಸುವ ಗುರಿ ಹೊಂದಲಾಗಿದೆ. ಇದರ ನಡುವೆ ಸೆಸ್ಕ್ ವ್ಯಾಪ್ತಿಯಲ್ಲಿ 90 ಸ್ಟೇಷನ್‌ಗಳನ್ನು ಪ್ರಸಕ್ತ ವರ್ಷದಲ್ಲಿ ಹಾಕಲು ಮುಂದಾಗಿದೆ. ಪ್ರಮುಖವಾಗಿ ನಿಗಮ ವ್ಯಾಪ್ತಿಯಲ್ಲಿ ವಿದ್ಯುತ್ ವಿತರಣೆಯನ್ನು ಬಲಪಡಿಸಿ, ಪ್ರಸಕ್ತ ವರ್ಷದ ಮಾರ್ಚ್ ವೇಳೆಗೆ ಹೊಸದಾಗಿ 100 ಫೀಡರ್‌ಗಳನ್ನು ಹೊಸದಾಗಿ ಗ್ರಿಡ್‌ಗಳಿಗೆ ಸೇರ್ಪಡೆ ಮಾಡಬೇಕಿದೆ ಎಂದು ತಿಳಿಸಿದರು.

ಈ ಹಿನ್ನೆಲೆಯಲ್ಲಿ ತರಬೇತಿಯಲ್ಲಿ ನೀಡುವ ಸಲಹೆಗಳನ್ನು ಪಡೆದು, ಅವುಗಳನ್ನು ಪ್ರಾಯೋಗಿಕವಾಗಿ ಕಾರ್ಯರೂಪಕ್ಕೆ ತರುವುದರೊಂದಿಗೆ ಯಾವ ಫೀಡರ್‌ಗಳಲ್ಲಿ ಇಂಧನ ಸೋರಿಕೆ ಇದೆ ಅಂತಹ ಫೀಡರ್‌ಗಳಲ್ಲಿ ತಾಂತ್ರಿಕ ಪರಿಣತಿಯನ್ನು ಅಳವಡಿಸಿ, ಇಂಧನ ಸೋರಿಕೆ ಪ್ರಮಾಣವನ್ನು ತಗ್ಗಿಸಬೇಕಾಗಿದೆ. ಇದರೊಂದಿಗೆ ನಮ್ಮಲ್ಲಿರುವ ಸವಲತ್ತುಗಳನ್ನು ಸಮರ್ಪಕವಾಗಿ ಬಳಸಿಕೊಂಡು, ನಿರ್ದಿಷ್ಟ ಗುರಿ ಸಾಧಿಸಲು ಕಾರ್ಯಯೋಜನೆ ರೂಪಿಸಬೇಕಿದೆ ಎಂದರು.

ನಂತರ ನಡೆದ ತಾಂತ್ರಿಕ ಕಾರ್ಯಾಗಾರದಲ್ಲಿ ನಿವೃತ್ತ ತಾಂತ್ರಿಕ ನಿರ್ದೇಶಕರಾದ ಎಸ್. ಮಹೇಶ್ ಅವರು, ಇಂಧನ(ವಿದ್ಯುತ್) ಲೆಕ್ಕಪರಿಶೀಲನೆಯ ತಂತ್ರಗಳು, ಇಂಧನ ಸೋರಿಕೆ ಹಾಗೂ ಆರ್ಥಿಕ ನಷ್ಟವನ್ನು ಕಡಿತಗೊಳಿಸುವ ಪ್ರಾಯೋಗಿಕ ಅಂಶಗಳ ಬಗ್ಗೆ ಪ್ರಾತ್ಯಕ್ಷಿಕೆ ಮೂಲಕ ಸಮರ್ಪಕ ಮಾಹಿತಿ ನೀಡಿದರು.

ಕಾರ್ಯಕ್ರಮದಲ್ಲಿ ಸೆಸ್ಕ್ ತಾಂತ್ರಿಕ ನಿರ್ದೇಶಕ ಡಿ.ಜೆ. ದಿವಾಕರ್, ಅಧೀಕ್ಷಕ ಇಂಜಿನಿಯರ್ ಸುನೀಲ್, ಮುಖ್ಯ ಇಂಜಿನಿಯರ್‌ಗಳಾದ ಮೃತ್ಯುಂಜಯ, ಸೋಮಶೇಖರ್, ಮುಖ್ಯ ಪ್ರಧಾನ ವ್ಯವಸ್ಥಾಪಕರು(ತಾಂತ್ರಿಕ) ಶರಣಮ್ಮ ಎಸ್. ಜಂಗಿನ, ಕೆಇಬಿಇಎ ಉಪಾಧ್ಯಕ್ಷ ಪೂರ್ಣಚಂದ್ರ ತೇಜಸ್ವಿ, ರಾಜ್ಯ ಕಾರ್ಯದರ್ಶಿ ಆರ್. ಸುಧೀರ್ ಸೇರಿದಂತೆ ಇತರ ಅಧಿಕಾರಿಗಳು ಉಪಸ್ಥಿತರಿದ್ದರು.

ಮೈಸೂರು ಚಿತ್ರಮಂದಿರಗಳಲ್ಲಿ

ಪದ್ಮ	(ದೂ: 2521923)
ಮಾರ್ಕ್ (ಕ)	4 ಪ್ರದರ್ಶನಗಳು
ವುಡ್‌ಲ್ಯಾಂಡ್ಸ್	(ದೂ: 2422871)
45 ಫೇಸ್ ದಿ ಇಯರ್ (ಕ)	3 ಪ್ರದರ್ಶನಗಳು
ಬಾಲಾಜಿ	(ದೂ: 2497199)
ಧುರಂಧರ್ (ಹಿ)	3 ಪ್ರದರ್ಶನಗಳು
ಮಹದೇಶ್ವರ	(ಮೊ:9900820093)
ಅಖಂಡ–2 (ಕ)	4 ಪ್ರದರ್ಶನಗಳು
ಗಾಯಿತ್ರಿ	
ಡೆವಿಲ್ (ಕ)	4 ಪ್ರದರ್ಶನಗಳು
ರಾಜಕಮಲ್	
ಧುರಂದರ್ (ಹಿ)	3 ಪ್ರದರ್ಶನಗಳು
ಸಂಗಂ	
ಮಾರ್ಕ್ (ಕ)	5 ಪ್ರದರ್ಶನಗಳು
ಲಿಡೋ	
ಅಖಂಡ (ಕ)	4 ಪ್ರದರ್ಶನಗಳು
ತಿಬ್ಬಾದೇವಿ	
–	–
ಪ್ರಭಾ	
ಮಾದೇವ (ಕ)	4 ಪ್ರದರ್ಶನಗಳು

ಕುವೆಂಪು ಸಾಹಿತ್ಯದಿಂದ ಜೀವನ ದರ್ಶನ



ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಲೇಖಕ ಪ್ರೊ.ಬಿ.ಜಿ.ಕನಕೇಶಮೂರ್ತಿ ಅವರ 'ಬೊಗಸೆಯಲ್ಲಿ ಕುವೆಂಪು' ಕೃತಿಯನ್ನು ಸಿಐಐಎಲ್‌ನ ಶಾಸ್ತ್ರೀಯ ಕನ್ನಡ ಅತ್ಯುನ್ನತ ಅಧ್ಯಯನ ಕೇಂದ್ರದ ಯೋಜನಾ ನಿರ್ದೇಶಕ ಪ್ರೊ.ಎನ್.ಎಂ.ತಳವಾರ ಬಿಡುಗಡೆ ಮಾಡಿದರು.

ಮೈಸೂರು, ಜ.3(ಎಂಟಿವೈ)– ರಾಷ್ಟ್ರಕವಿ ಕುವೆಂಪು ಅವರ ಕೃತಿಗಳು ಜೀವನ ದರ್ಶನವನ್ನು ಪ್ರಸ್ತುತ ಪಡಿಸುವುದರೊಂದಿಗೆ ಸಾರ್ವಕಾಲಿಕವೂ ಆಗಿದೆ ಎಂದು ಸಿಐಐಎಲ್‌ನ ಶಾಸ್ತ್ರೀಯ ಕನ್ನಡ ಅತ್ಯುನ್ನತ ಅಧ್ಯಯನ ಕೇಂದ್ರದ ಯೋಜನಾ ನಿರ್ದೇಶಕ ಪ್ರೊ.ಎನ್.ಎಂ.ತಳವಾರ ಅಭಿಪ್ರಾಯಪಟ್ಟಿದ್ದಾರೆ.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಹಾಸನದ ಸಕಲೇಶಪುರ ತಾಲೂಕಿನ ಅತ್ತಿಹಳ್ಳಿ ಗ್ರಾಮದ ನುಡಿ ಪ್ರತಿಷ್ಠಾನ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ಲೇಖಕ ಪ್ರೊ.ಬಿ.ಜಿ.ಕನಕೇಶಮೂರ್ತಿ ಅವರ 'ಬೊಗಸೆಯಲ್ಲಿ ಕುವೆಂಪು' ಕೃತಿ ಬಿಡುಗಡೆಗೊಳಿಸಿ ಮಾತನಾಡಿದ ಅವರು, ಕುವೆಂಪು ಸಾಹಿತ್ಯ ಓದು ಬದುಕಿನಲ್ಲಿ ಅಮೃತ ಘಳಿಗೆ. ಕುವೆಂಪು ಕೃತಿಗಳು ಓದುಗರಿಗೆ ಜೀವನ ದರ್ಶನವನ್ನು ಪ್ರಸ್ತುತಪಡಿಸುತ್ತದೆ. ಎಲ್ಲ ಕಾಲದಲ್ಲೂ ಸೂಕ್ತ ಮಾರ್ಗವನ್ನು ತೋರಿಸುವುದರ ಜೊತೆಗೆ ಸನ್ಮಾರ್ಗದಲ್ಲಿ ಮುನ್ನಡೆಸುತ್ತದೆ ಎಂದರು.

ಸಿಐಐಎಲ್‌ನ ಶಾಸ್ತ್ರೀಯ ಕನ್ನಡ ಅತ್ಯುನ್ನತ ಅಧ್ಯಯನ ಕೇಂದ್ರದ ಸಂಶೋಧಕರಾದ ಮಾಲಿನಿ ಎನ್.ಅಭ್ಯಂಕರ್ ಕೃತಿ ಕುರಿತು ಮಾತನಾಡಿ, 'ಬೊಗಸೆಯಲ್ಲಿ ಕುವೆಂಪು' ಜೇಬಿನಲ್ಲಿಟ್ಟುಕೊಳ್ಳುವಷ್ಟು ಚಿಕ್ಕ ಗಾತ್ರವಿದ್ದು, ಶಾಲಾ–ಕಾಲೇಜು ವಿದ್ಯಾರ್ಥಿಗಳಿಗೆ ಕುವೆಂಪು ಅವರ ಬಗ್ಗೆ ಇನ್ನಷ್ಟು ಮಾಹಿತಿ ನೀಡುವಲ್ಲಿ ಈ ಕೃತಿ ಸಹಕಾರಿಯಾಗಲಿದೆ ಎಂದು ಅಭಿಪ್ರಾಯಪಟ್ಟರು. ಕಾರ್ಯಕ್ರಮದಲ್ಲಿ ನುಡಿ ಪ್ರತಿಷ್ಠಾನ ಕಾರ್ಯಾಧ್ಯಕ್ಷ ಅ.ಪ.ರಕ್ಷಿತ್, ಖಜಾಂಚಿ ಯಲ್ಲವ್ವ ಹೆಬ್ಬಳ್ಳಿ ಇದ್ದರು.

ಚುನಾವಣಾ ರಾಜಕೀಯದಿಂದ ನಿವೃತ್ತಿ ಘೋಷಿಸಲು ಕಾರಣವೇನು?

ಸತ್ಯ ಸಂಗತಿ ಬಹಿರಂಗಪಡಿಸಲು ರಾಮದಾಸ್‌ಗೆ ಕೆಪಿಸಿಸಿ ವಕ್ತಾರ ವೆಂಕಟೇಶ್ ಆಗ್ರಹ



ವೆಂಕಟೇಶ್

ಮೈಸೂರು, ಜ.3(ಬಿಎಲ್‌ಯು)– ಮಾಜಿ ಸಚಿವ ಎಸ್.ಎ.ರಾಮದಾಸ್ ಅವರು ಚುನಾವಣಾ ರಾಜಕೀಯದಿಂದ ನಿವೃತ್ತಿ ಘೋಷಿಸಿರುವುದಕ್ಕೆ ಕಾರಣ ತಿಳಿಸಬೇಕು ಎಂದು ಕೆಪಿಸಿಸಿ ವಕ್ತಾರ ಹೆಚ್.ಎ.ವೆಂಕಟೇಶ್ ಆಗ್ರಹಿಸಿದ್ದಾರೆ.

ಕಳೆದ 35 ವರ್ಷಗಳಿಂದ ರಾಜಕಾರಣದಲ್ಲಿದ್ದು, ಈಗ ದಿಢೀರ್ ಚುನಾವಣಾ ರಾಜಕೀಯದಿಂದ ನಿವೃತ್ತಿ ಘೋಷಣೆ ಮಾಡಿರುವುದು ಆಶ್ಚರ್ಯ ಮೂಡಿಸಿದೆ.

ಸುದೀರ್ಘ ರಾಜಕಾರಣ ಮಾಡಿ, ಈಗ ನಿವೃತ್ತಿ ಘೋಷಣೆಗೆ ಕಾರಣವೇನು, ಬಿಜೆಪಿಯಲ್ಲಿ ಅವರಿಗೆ ಬೇಸರ ಮೂಡಿಸಿದ ವ್ಯಕ್ತಿಗಳು ಯಾರು, ಬಿಜೆಪಿಯವರು ದುಡಿಸಿಕೊಂಡು ಈಗ ಮೂಲೆಗುಂಪು ಮಾಡಲು ಕಾರಣವೇನು ಎಂಬ ಕಟು ಸತ್ಯವನ್ನು ರಾಮದಾಸ್ ಬಹಿರಂಗ ಮಾಡಬೇಕು ಎಂದು ವೆಂಕಟೇಶ್ ಒತ್ತಾಯಿಸಿದ್ದಾರೆ.

ಕರ್ನಾಟಕದ ರಾಜಕಾರಣದಲ್ಲಿ ಪ್ರಧಾನಿ ನರೇಂದ್ರ ಮೋದಿ ಅವರು ಹೆಸರಿಡಿದು ಕರೆಯುವ ವ್ಯಕ್ತಿಗಳಲ್ಲಿ ರಾಮದಾಸ್ ಕೂಡ ಒಬ್ಬರು. ಮೈಸೂರಿಗೆ ಬಂದ ಸಂದರ್ಭ ದಲ್ಲಿ ರಾಮದಾಸ್ ಅವರನ್ನು ಹತ್ತಿರ ಕರೆದು ಮಾತನಾಡಿಸಿ, ಮೋದಿಯವರು ಬೆನ್ನು ತಟ್ಟಿದ್ದರು. ಇಷ್ಟು ಪ್ರಭಾವಯುತ ರಾಮದಾಸ್ ಅವರು ರಾಜಕೀಯ ಹಿನ್ನಡೆಯಿಂದ ಮನನೊಂದಿರುವುದು ಸ್ಪಷ್ಟವಾಗಿದೆ.

ನರೇಂದ್ರ ಮೋದಿ ಅವರು ತಮ್ಮ ಅನುಯಾಯಿಗಳನ್ನು ರಾಜಕೀಯವಾಗಿ ಕೈ ಹಿಡಿಯಲು ಸಾಧ್ಯವಾಗದೆ ಇರುವುದು, ಮೋದಿಗಾಗಿ ಮೋದಿ ಮಾತ್ರ ಎಂಬುದು ಇದರಿಂದ ಸ್ಪಷ್ಟವಾಗಿದೆ ಎಂದು ವೆಂಕಟೇಶ್ ಟೀಕಿಸಿದ್ದಾರೆ.

ಸುಧರ್ಮ ಸಂಸ್ಕೃತ ಪತ್ರಿಕೆಯ ಕ್ಯಾಲೆಂಡರ್ ಬಿಡುಗಡೆ



ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ನಡೆದ ಕಾರ್ಯಕ್ರಮದಲ್ಲಿ ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆಯ ಸಹಾಯಕ ನಿರ್ದೇಶಕರಾದ ಎಸ್.ಹೆಚ್.ನಿರ್ಮಲಾ ಸುಧರ್ಮ ಸಂಸ್ಕೃತ ಪತ್ರಿಕೆ ಕ್ಯಾಲೆಂಡರ್ ಬಿಡುಗಡೆ ಮಾಡಿದರು.

ಮೈಸೂರು, ಜ.3(ಎಂಟಿವೈ)– ಸುಧರ್ಮ ಸಂಸ್ಕೃತ ಪತ್ರಿಕೆ ವತಿಯಿಂದ ಪ್ರಕಟಿಸಿರುವ ನೂತನ ವರ್ಷದ ಕ್ಯಾಲೆಂಡರ್ ಅನ್ನು ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆಯ ಸಹಾಯಕ ನಿರ್ದೇಶಕರಾದ ಎಸ್.ಹೆಚ್.ನಿರ್ಮಲಾ ಬಿಡುಗಡೆ ಮಾಡಿದರು.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ನಡೆದ ಕಾರ್ಯಕ್ರಮದಲ್ಲಿ ಕ್ಯಾಲೆಂಡರ್ ಬಿಡುಗಡೆ ಮಾಡಿ ಮಾತನಾಡಿದ ಅವರು, 1970ರಲ್ಲಿ ಆರಂಭವಾದ ಸುಧರ್ಮ ಸಂಸ್ಕೃತ ಪತ್ರಿಕೆ ಸತತ 50 ವರ್ಷಗಳಿಂದ ಸಂಸ್ಕೃತದಲ್ಲೆ ಮುದ್ರಣಗೊಂಡು ದೇಶ–ವಿದೇಶದಲ್ಲಿ ಸಂಸ್ಕೃತಿಯನ್ನು ಪಸರಿಸುವ ಕೆಲಸವನ್ನು ಯಶಸ್ವಿಯಾಗಿ ಮಾಡುತ್ತಿರುವುದು ಶ್ಲಾಘನೀಯ. ಸುದೀರ್ಘ ಅವಧಿಯಲ್ಲಿ ಮುದ್ರಣಗೊಂಡು ಮುನ್ನಡೆಯುತ್ತಿರುವ ಏಕೈಕ ಸಂಸ್ಕೃತ ಪತ್ರಿಕೆಯಾದ ಕಾರಣ ಪತ್ರಿಕೆಗೆ ಪದ್ಮಶ್ರೀ ಪ್ರಶಸ್ತಿ ಲಭಿಸಿದೆ. ವಾರ್ತಾ ಇಲಾಖೆಯಲ್ಲಿ ವಿಶೇಷ ಮಾನ್ಯತಾ ಪಟ್ಟಿಯಲ್ಲಿ ಸುಧರ್ಮ ಪತ್ರಿಕೆ ಸೇರಿದೆ. ಪತ್ರಿಕೆ ವತಿಯಿಂದ ಕ್ಯಾಲೆಂಡರ್ ಪ್ರಕಟಿಸಿರುವುದು ಶ್ಲಾಘನೀಯ ಎಂದರು.

ಪತ್ರಿಕೆಯ ಗೌರವ ಸಂಪಾದಕರಾದ ಡಾ. ಟಿ.ಬಿ.ಸತ್ಯನಾರಾಯಣ ಮಾತನಾಡಿ, ಸುಧರ್ಮ ಪತ್ರಿಕೆ ದೇಶ ಮಾತ್ರವಲ್ಲದೆ ವಿದೇಶದಲ್ಲೂ ನಾಡಿನ ಕಲೆ, ಸಂಸ್ಕೃತಿ, ಚರಿತ್ರೆ, ಹಿನ್ನೆಲೆ, ಭೌಗೋಳಿಕ ವಿಶೇಷತೆ, ಸಿದ್ಧಿ–ಸಾಧಕರ ಕುರಿತು ಸಂಸ್ಕೃತದಲ್ಲಿ ಮಾಹಿತಿ ನೀಡುತ್ತಾ ಬಂದಿದೆ. ಆನ್‌ಲೈನ್ ಮೂಲಕವೂ ಹೊರ ದೇಶಗಳಲ್ಲಿರುವ ಸಂಸ್ಕೃತ ಪ್ರಿಯರಿಗೆ ಮಾಹಿತಿ ಒದಗಿಸುತ್ತಿದೆ ಎಂದು ತಿಳಿಸಿದರು.

ಕಾರ್ಯಕ್ರಮದಲ್ಲಿ ಪತ್ರಿಕೆಯ ಸಂಪಾದಕರಾದ ಜಯಲಕ್ಷ್ಮಿ ಸಂಪತ್‌ಕುಮಾರ್, ಹಿರಿಯ ಪತ್ರಕರ್ತ ಕೂಡ್ಲಿ ಗುರುರಾಜ, ನಿವೃತ್ತ ಅಧಿಕಾರಿ ರಂಗನಾಥ್ ಉಪಸ್ಥಿತರಿದ್ದರು.

ದೇಶದ ಮೊದಲ ಶಿಕ್ಷಕಿ ಸಾವಿತ್ರಿ ಬಾಯಿ ಫುಲೆ



ಮೈಸೂರು ಕೆ.ಜಿ.ಕೊಪ್ಪಲಲ್ಲಿ ಕನ್ನಡ ಗೆಳೆಯರ ಬಳಗದಿಂದ ಸಾವಿತ್ರಿ ಜ್ಯೋತಿ ಬಾಫುಲೆ ಜನ್ಮದಿನ ಆಚರಿಸಲಾಯಿತು.

ಮೈಸೂರು, ಜ. 3– ಮೈಸೂರಿನ ಕೆ.ಜಿ.ಕೊಪ್ಪಲಿನ ಕನ್ನಡ ಗೆಳೆಯರ ಬಳಗದ ವತಿಯಿಂದ ದೇಶದ ಮೊದಲ ಶಿಕ್ಷಕಿಗೆ ಹೆಸರುವಾಸಿಯಾದ ಸಾವಿತ್ರಿ ಜ್ಯೋತಿ ಬಾಫುಲೆ ಜನ್ಮದಿನವನ್ನು ಸಂಘದ ಕಚೇರಿಯಲ್ಲಿ ಆಚರಿಸಲಾಯಿತು.

ಮುಖ್ಯ ಅತಿಥಿಗಳಾಗಿ ಆಗಮಿಸಿದ್ದ ಮೈಸೂರಿನ ವಕೀಲ ಶರತ್ ಮಾತೆ ಸಾವಿತ್ರಿ ಬಾಫುಲೆಯವರ ಭಾವಚಿತ್ರಕ್ಕೆ ಪುಷ್ಪನಮನ ಸಲ್ಲಿಸಿ ಮಾತನಾಡಿ, ಮಹಿಳೆಯರ ಸಬಲೀಕರಣಕ್ಕೆ ಹಾಗೂ ಜಾತಿ ವ್ಯವಸ್ಥೆಯ ಬಗ್ಗೆ ಹೋರಾಡಿದ ಮಹಿಳಾ ಸಾಧಕಿ ಹಾಗೂ ಮಹಿಳಾ ಹಕ್ಕುಗಳ ಹೋರಾಟಗಾರ್ತಿ ಸಾವಿತ್ರಿ ಜ್ಯೋತಿ ಬಾಫುಲೆ ಎಂದು ತಿಳಿಸಿದರು.

ಅಸ್ಪೃಶ್ಯರು ಮತ್ತು ದೀನದಲಿತರಿಗಾಗಿ ಧ್ವನಿ ಎತ್ತಿ ಜಾತಿತಾರತಮ್ಯದ ವಿರುದ್ಧ ಹೋರಾಡಿ ಸಮಾನತೆಯನ್ನು ತರುವಲ್ಲಿ ಶ್ರಮಿಸಿದವರು. ಶಿಕ್ಷಣದ ಮೂಲಕ ಸಮಾಜದ ಬದಲಾವಣೆ ಸಾಧ್ಯ ಎಂಬುದನ್ನು ಸಾಬೀತುಪಡಿಸಿದ ಮೊದಲ ಶಿಕ್ಷಕಿ ಸಾವಿತ್ರಿ ಬಾಫುಲೆ ಎಂದು ತಿಳಿಸಿದರು.


ಶಾರದಾವಿಲಾಸ ಕಾಲೇಜಿನ ರಸಾಯನ ಶಾಸ್ತ್ರ ವಿಭಾಗದ ಮುಖ್ಯಸ್ಥ ಡಾ.ಡಿ.ಸಿ.ಉಮೇಶ್ ಮಾತನಾಡಿ, ಸಾವಿತ್ರಿ ಬಾಫುಲೆ ಅವರು 1848 ರಲ್ಲಿಯೇ ಪುಣೆಯಲ್ಲಿ ಭಾರತದ ಮೊದಲ ಬಾಲಕಿಯರ ಶಾಲೆ ತೆರೆದು, ಶೂದ್ರರು ಮತ್ತು ಮಹಿಳೆಯರು ಶಿಕ್ಷಣದಲ್ಲಿ ತರಬೇತಿಯನ್ನು ಹೊಂದಬೇಕೆಂದು ಗುರಿಯನ್ನು ಇಟ್ಟುಕೊಂಡು ಹೆಣ್ಣು ಮಕ್ಕಳಿಗೆ ಶಿಕ್ಷಣ ಕೊಡಿಸಿದ ಮೊದಲಿಗರು, ಸಂವಿಧಾನ ಶಿಲ್ಪಿ ಡಾ.ಬಿ.ಆರ್. ಅಂಬೇಡ್ಕರ್ ಅವರು, ಭಾರತೀಯ ಸಮಾಜದ ಪರಿವರ್ತನೆಯ ಪಿತಾಮಹನೆಂದು ಗೌರವಪೂರ್ವಕವಾಗಿ ಶಿಕ್ಷಕಿ ಸಾವಿತ್ರಿ ಬಾಫುಲೆ ಅವರನ್ನು ಕರೆದಿದ್ದಾರೆಂದು ತಿಳಿಸಿದರು.

ಕಾರ್ಯಕ್ರಮದ ಅಧ್ಯಕ್ಷತೆಯನ್ನು ಸಂಘದ ಗೌರವ ಕಾರ್ಯದರ್ಶಿ ಇಂಜಿನಿಯರ್ ಕಾರ್ತಿಕ್ ನಾಯಕ್ ವಹಿಸಿದ್ದರು. ಮಕ್ಕಳಕೂಟ ಆಸ್ಪತ್ರೆಯ ಪ್ರಥಮ ದರ್ಜೆ ಸಹಾಯಕರಾದ ಬಿ.ತನುಜಾ ದೇವರಾಜ್, ಉಪನ್ಯಾಸಕ ರಾಜೇಂದ್ರ ಪ್ರಸಾದ್ ಹೊನ್ನಲಗೆರೆ, ಸಮಾಜ ಸೇವಕರಾದ ನಂಜುಂಡ, ಮಾದೇವ ಉಪಸ್ಥಿತರಿದ್ದರು.

ಮಾಜಿ ಸೈನಿಕರ ಕುಂದು ಕೊರತೆ ಸಲ್ಲಿಕೆ

ಮೈಸೂರು,ಜ.3– ಸೈನಿಕ ಕಲ್ಯಾಣ ಮತ್ತು ಪುನರ್ವಸತಿ ಇಲಾಖೆಯ ವತಿಯಿಂದ MRC RECORD ರವರಿಂದ MRC ಮಾಜಿ ಸೈನಿಕರು ಹಾಗೂ ಅವರ ಅವಲಂಭಿತರಿಗೆ ಪಿಂಚಣಿ ಸಂಬಂಧ ಕುಂದು ಕೊರತೆ ನಿವಾರಣೆಗಾಗಿ ಬೈಕ್ ರ‍್ಯಾಲಿ ಮೂಲಕ ಜ.5 ರಂದು ಸೈನಿಕ ಕಲ್ಯಾಣ ಮತ್ತು ಪುನರ್ವಸತಿ ಇಲಾಖೆ, ಮೈಸೂರು ಇಲ್ಲಿಗೆ ಆಗಮಿಸಲಿದ್ದು, ಮೈಸೂರು, ಮಂಡ್ಯ ಮತ್ತು ಚಾಮರಾಜನಗರ ಜಿಲ್ಲೆಗೆ ಒಳಪಡುವ MRC (MADRAS REGIMENTAL CENTRE)ನ ಮಾಜಿ ಸೈನಿಕರು ಹಾಗೂ ಅವರ ಅವಲಂಬಿತರು ಹೆಚ್ಚಿನ ಸಂಖ್ಯೆಯಲ್ಲಿ ಆಗಮಿಸಿ ಪಿಂಚಣಿ ಸಂಬಂಧಿತ ಕುಂದು ಕೊರತೆಗಳನ್ನು ನಿವಾರಿಸಿಕೊಳ್ಳಬಹುದಾಗಿದೆ. ಹೆಚ್ಚಿನ ಮಾಹಿತಿಗಾಗಿ MRC RECORD ನ ಅಧಿಕಾರಿಯವರ ಮೊಬೈಲ್ ಸಂಖ್ಯೆ 8903405782, 9596766470 ನ್ನು ಸಂಪರ್ಕಿಸಬಹುದಾಗಿದೆ ಎಂದು ಸೈನಿಕ ಕಲ್ಯಾಣ ಮತ್ತು ಪುನರ್ವಸತಿ ಇಲಾಖೆಯ ಉಪ ನಿರ್ದೇಶಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ರಾಜ್ಯ ಮಟ್ಟದ ಪುಸ್ತಕ ಆಯ್ಕೆಗೆ ರಾಜ್ಯದ ಕೇಂದ್ರ ಗ್ರಂಥಾಲಯದಲ್ಲಿ ನೋಂದಣಿ ಕಡ್ಡಾಯ



ಮೈಸೂರು,ಜ.3– ರಾಜ್ಯ ಮಟ್ಟದ ಪುಸ್ತಕ ಆಯ್ಕೆ ಸಮಿತಿಯಿಂದ ಆಯ್ಕೆ ಬಯಸುವ ಲೇಖಕರು, ಪ್ರಕಾಶಕರು 2025ರಲ್ಲಿ ಕರ್ನಾಟಕದಲ್ಲಿ ಪ್ರಥಮ ಮುದ್ರಣಗೊಂಡು ಪ್ರಕಟಗೊಳ್ಳುವ ಯಾವುದೇ ಭಾಷೆಯ ಪುಸ್ತಕಗಳನ್ನು ರಾಜ್ಯ ಕೇಂದ್ರ ಗ್ರಂಥಾಲಯದಲ್ಲಿ ಜ.31 ರ ಸಂಜೆ 5.30 ರ ಒಳಗಾಗಿ ನೋಂದಣಿ ಮಾಡಿಸತಕ್ಕದ್ದು. ಸದರಿ ಪುಸ್ತಕಗಳನ್ನು ಮಾತ್ರ ರಾಜ್ಯ ಮಟ್ಟದ ಪುಸ್ತಕ ಆಯ್ಕೆ ಸಮಿತಿಯಿಂದ ಆಯ್ಕೆಗಾಗಿ ಪರಿಗಣಿಸಲಾಗುವುದು. ಅಂತಿಮ ದಿನಾಂಕದ ನಂತರ ನೋಂದಣಿಯಾಗುವ ಪುಸ್ತಕಗಳನ್ನು ಆಯ್ಕೆಗೆ ಪರಿಗಣಿಸಲಾಗುವುದಿಲ್ಲ.

ಪುಸ್ತಕಗಳ ನೋಂದಣಿ ಕಾಯ್ದೆ ಅನ್ವಯ, ಪ್ರಕಾಶಕರು 2025 ರಲ್ಲಿ ಮುದ್ರಿಸಿ ಪ್ರಕಟಿಸಿದ ಮೊದಲ ಆವೃತ್ತಿಯ ಪುಸ್ತಕಗಳ 3 ಪ್ರತಿಗಳನ್ನು ರಾಜ್ಯ ಕೇಂದ್ರ ಗ್ರಂಥಾಲಯ ಕಬ್ಬನ್ ಪಾರ್ಕ್, ಬೆಂಗಳೂರು ಇಲ್ಲಿಗೆ ಸಲ್ಲಿಸಬೇಕು. ರಾಜ್ಯ ಮಟ್ಟದ ಪುಸ್ತಕ ಆಯ್ಕೆ ಸಮಿತಿಯು ಆಯ್ಕೆಗಾಗಿ ಸಲ್ಲಿಸಲಾದ 3 ಪ್ರತಿಗಳಲ್ಲಿ ಒಂದನ್ನು ಪರಿಗಣಿಸಲಾಗುತ್ತದೆ. ಸಾಹಿತ್ಯ, ಮಕ್ಕಳ ಸಾಹಿತ್ಯ, ಕಲೆ ಮತ್ತು ವಿಜ್ಞಾನ ಪ್ರಕಾರಗಳ ಯಾವುದೇ ಭಾಷೆಯ ಪುಸ್ತಕಗಳನ್ನು ರಾಜ್ಯ ಮಟ್ಟದ ಪುಸ್ತಕ ಆಯ್ಕೆ ಸಮಿತಿಗೆ ಸಲ್ಲಿಸಬಹುದು.

ಹೆಚ್ಚಿನ ಮಾಹಿತಿಗಾಗಿ ಇಲಾಖಾ ಅಂತರ್ಜಾಲ www.dpl.karnataka.gov.inಗೆ ಭೇಟಿ ನೀಡಬಹುದು ಹಾಗೂ ಕಚೇರಿಯಲ್ಲಿ ಪಡೆಯಬಹುದು. ಆಯುಕ್ತರ ಕಚೇರಿ ದೂರವಾಣಿ ಸಂಖ್ಯೆ: 080–22864994), 22867358 ಅಥವಾ ಕಚೇರಿ ದೂರವಾಣಿ ಸಂಖ್ಯೆ: 0821–2425875 2425975 ನ್ನು ಸಂಪರ್ಕಿಸಬಹುದು ಎಂದು ಮೈಸೂರು ಜಿಲ್ಲಾ ಕೇಂದ್ರಗ್ರಂಥಾಲಯ, ಉಪ ನಿರ್ದೇಶಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಒಳ ಮೀಸಲಾತಿ ಗೊಂದಲ ನಿವಾರಣೆಗೆ ಸಾಮಾಜಿಕ ನ್ಯಾಯಪರ ವಕೀಲರ ವೇದಿಕೆ ಆಗ್ರಹ

ಸುಪ್ರೀಂಕೋರ್ಟ್ ತೀರ್ಪು ನೀಡಿದರೂ ರಾಜ್ಯ ಸರ್ಕಾರ ಒಳ ಮೀಸಲಾತಿ ಕಲ್ಪಿಸಲು ಮೀನಾಮೇಷ: ವೇದಿಕೆ ಅಧ್ಯಕ್ಷರೂ ಆದ ಹಿರಿಯ ವಕೀಲ ಅರುಣ್ ಕುಮಾರ್ ಅಸಮಾಧಾನ



ಹಿರಿಯ ವಕೀಲ ಅರುಣ್ ಕುಮಾರ್ ಸುದ್ದಿಗೋಷ್ಠಿಯಲ್ಲಿ ಮಾತನಾಡಿದರು.

ಮೈಸೂರು, ಜ.3(ಎಂಟಿವೈ)– ಸುಪ್ರೀಂ ಕೋರ್ಟ್ ತೀರ್ಪು ನೀಡಿ 16 ತಿಂಗಳು ಕಳೆದಿದ್ದರೂ ರಾಜ್ಯ ಸರ್ಕಾರ ಒಳ ಮೀಸಲಾತಿ ಕಲ್ಪಿಸದೆ ನಿರ್ಲಕ್ಷಿಸುತ್ತಿದೆ ಎಂದು ಕರ್ನಾಟಕ ರಾಜ್ಯ ಸಾಮಾಜಿಕ ನ್ಯಾಯಪರ ವಕೀಲರ ವೇದಿಕೆ ಅಧ್ಯಕ್ಷ ಹಾಗೂ ಹಿರಿಯ ವಕೀಲ ಅರುಣ್ ಕುಮಾರ್ ಅಸಮಾಧಾನ ವ್ಯಕ್ತಪಡಿಸಿದ್ದಾರೆ.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಒಳಮೀಸಲಾತಿ ಜಾರಿಗೊಳಿಸುವ ಸಂಬಂಧ ಸುಪ್ರೀಂಕೋರ್ಟ್‌ನ ಏಳು ಸದಸ್ಯರ ಪೀಠ 2024ರ ಆ.1ರಂದು ಐತಿಹಾಸಿಕ ತೀರ್ಪು ನೀಡಿದೆ. ಈ ತೀರ್ಪಿನ ಅನುಸಾರ ವಿವಿಧ ರಾಜ್ಯಗಳು ಈಗಾಗಲೇ ಒಳಮೀಸಲಾತಿಯನ್ನು ಯಾವುದೇ ಗೊಂದಲವಿಲ್ಲದಂತೆ ಜಾರಿಗೊಳಿಸಿವೆ. ಆದರೆ, ಕರ್ನಾಟಕದಲ್ಲಿ ಇದುವರೆಗೂ ಒಳಮೀಸಲಾತಿ ಕಲ್ಪಿಸುವಲ್ಲಿ ಯಾವುದೇ ದಿಟ್ಟ ನಿಲುವು ಪ್ರದರ್ಶಿಸುತ್ತಿಲ್ಲ. ಇದನ್ನು ಗಮನಿಸಿದರೆ ಕರ್ನಾಟಕ ಸರ್ಕಾರ ದಪ್ಪ ಚರ್ಮದ ಸರ್ಕಾರ ಎಂದೆನಿಸುತ್ತಿದೆ ಎಂದು ಕಿಡಿಕಾರಿದರು.

ನ್ಯಾ. ನಾಗಮೋಹನ ದಾಸ್ ಆಯೋಗ ರಚಿಸಿ, ದಲಿತರ ಮೀಸಲು ನಿಧಿಯಿಂದ 120 ಕೋಟಿ ರೂ. ವೆಚ್ಚ ಮಾಡಿ ಪರಿಶಿಷ್ಟ ಜಾತಿಗಳ ಗಣತಿ ನಡೆಸಿ ವರದಿ ಸಿದ್ಧಪಡಿಸುವಂತೆ ಮಾಡಿದ್ದು ಕಾಂಗ್ರೆಸ್ ಸರ್ಕಾರ. ಆದರೆ ಅದೇ ವರದಿಯಲ್ಲಿನ 1:6:5:4:1 ಹಂಚಿಕೆಯ ಶಿಫಾರಸನ್ನು ಮೂಲೆಗೆ ಹಾಕಿ ತಾನೇ 6:6:5 ರ ಅವೈಜ್ಞಾನಿಕ ಸೂತ್ರ ರೂಪಿಸಿದೆ. ಎಕೆ, ಎಡಿ, ಎಎ ಗೊಂದಲ ಮುಂದುವರಿದಿದೆ. ಎಎ ಜಾತಿಗಳಲ್ಲಿ ಗುರುತಿಸಿಕೊಂಡವರು ಪ್ರವರ್ಗ 1 ಅಥವಾ ಪ್ರವರ್ಗ 2 ರಲ್ಲಿ ಎಲ್ಲಿ ಬೇಕಾದರೂ ಜಾತಿ ಪ್ರಮಾಣ ಪತ್ರ ಪಡೆಯಬಹುದು ಎಂದು ಸರ್ಕಾರ ಮಾಡಿರುವ ಆದೇಶ ದುರುಪಯೋಗವಾಗುತ್ತಿದೆ. ಮಾದಿಗರಲ್ಲದವರೂ ಪ್ರವರ್ಗ 1 ರಲ್ಲಿ ಜಾತಿ ಪ್ರಮಾಣಪತ್ರ ಪಡೆಯಲು ಅವಕಾಶ ಕೊಟ್ಟಿದ್ದಾರೆ. ಇದು ಒಳ ಮೀಸಲಾತಿಯ ಉದ್ದೇಶವನ್ನೇ ವಿಫಲಗೊಳಿಸಿದೆ ಎಂದು ದೂರಿದರು.

ರಾಜ್ಯ ಸರ್ಕಾರ ಒಳ ಮೀಸಲಾತಿಯ ಬಗ್ಗೆ ಮಸೂದೆ ರೂಪಿಸಿ, ಸಮರ್ಪಕ ಚರ್ಚೆಗೂ ಅವಕಾಶ ಕೊಡದೇ ಕೇವಲ ಸಂಖ್ಯಾ ಬಲದಿಂದ ಅಂಗೀಕಾರ ಪಡೆದಿದೆ. ಆದರೆ ಈ ಮಸೂದೆಯಲ್ಲೂ ಒಳ ಮೀಸಲಾತಿ ಜಾರಿ ಅಪೂರ್ಣವಾಗಿಯೇ ಉಳಿದಿದೆ. ರಾಜಕೀಯ ಒತ್ತಡಗಳಿಗೆ ಮಣಿದು ಬಡ್ತಿ ಅವಕಾಶಗಳನ್ನು ಒಳ ಮೀಸಲಾತಿಯಿಂದ ಹೊರಗಿಡಲಾಗಿದೆ. ಸರ್ಕಾರದ ನಿಯಮಾನುಸಾರ ಖಾಲಿ ಇರುವ ಹುದ್ದೆಗಳಲ್ಲಿ ಶೇ.50ರಷ್ಟು ನೇರ ನೇಮಕಾತಿ ಮೂಲಕ, ಉಳಿದ ಶೇ.50 ರಷ್ಟು ಬಡ್ತಿ ಮೂಲಕ ಭರ್ತಿ ಮಾಡಲಾಗುತ್ತಿದೆ. ಆದರೆ ಮಸೂದೆಯಲ್ಲಿ ಉದ್ದೇಶಪೂರ್ವಕವಾಗಿ ಬಡ್ತಿ ಅವಕಾಶಗಳನ್ನು ಸೇರ್ಪಡೆಗೊಳಿಸಿಲ್ಲ ಎಂದು ಆರೋಪಿಸಿದರು.

ನ್ಯಾ. ನಾಗಮೋಹನ್ ದಾಸ್ ಅವರು ಸುಪ್ರೀಂಕೋರ್ಟ್ ನಿರ್ದೇಶನದಂತೆ 5 ಗುಂಪುಗಳಾಗಿ ವರ್ಗೀಕರಣ ಮಾಡಿದ್ದರು. ನ್ಯಾ. ಸದಾಶಿವ ಆಯೋಗ, ಮಾಧುಸ್ವಾಮಿ ವರದಿ ಕೂಡ 4 ಗುಂಪುಗಳನ್ನಾಗಿ ವರ್ಗೀಕರಣ ಮಾಡಿದ್ದವು. ಆದರೆ ರಾಜ್ಯ ಸರ್ಕಾರ ರಾಜಕಾರಣ ಬೆರೆಸಿ ಸಾಮಾಜಿಕ ನ್ಯಾಯ ಬಲಿ ಕೊಟ್ಟಿದೆ. 6;6;5 ರ ಸೂತ್ರದಲ್ಲಿ 3 ಗುಂಪುಗಳನ್ನಾಗಿ ವರ್ಗೀಕರಣ ಮಾಡಿ ದೊಡ್ಡ ಗೊಂದಲ ಮಾಡಿದೆ. ಈ ಗೊಂದಲಕ್ಕೆ ಮಸೂದೆಯಲ್ಲಿ ಸಮರ್ಪಕ ಪರಿಹಾರ ಒದಗಿಸಿಲ್ಲ. ಅಲ್ಲದೆ, ಅತ್ಯಂತ ಹಿಂದುಳಿದ, ಅತಿ ಸಣ್ಣ 59 ಜಾತಿಗಳಿರುವ ಅಲೆಮಾರಿಗಳ ಗುಂಪನ್ನು ಬಲಿಷ್ಠ ಗುಂಪಿಗೆ ಸೇರಿಸಿ ಅನ್ಯಾಯ ವೆಸಗಲಾಗಿದೆ. ಜೊತೆಗೆ ಸರ್ಕಾರ ಒಳ ಮೀಸಲಾತಿಯ ಈ ಗೊಂದಲಗಳನ್ನು ಸರಿಪಡಿಸಬೇಕೆಂದು ಆಗ್ರಹಿಸಿದರು.

ಸುದ್ದಿಗೋಷ್ಠಿಯಲ್ಲಿ ಮಾದಿಗ, ಸಮಗಾರ, ದೋಹರ, ದಕ್ಕಲಿಗ ಉಪ ಜಾತಿಗಳ ಸಂಘಟನೆಗಳ ಒಕ್ಕೂಟದ ಪದಾಧಿಕಾರಿಗಳಾದ ಜೆ.ಶ್ರೀನಿವಾಸ್, ಎನ್. ಸ್ವಾಮಿ, ಶಿವಣ್ಣ ಹುಳಿಮಾವು, ವಿ.ಎಸ್. ಸುಬ್ರಮಣಿ, ಧರ್ಮರಾಜ್, ಸುಬ್ರಮಣಿ ಹಾಗೂ ಇನ್ನಿತರರು ಇದ್ದರು.

ಸರ್ಕಾರಿ ಉನ್ನತ ಶಿಕ್ಷಣ ಸಂಸ್ಥೆಗಳು ಅವನತಿಯತ್ತ

ಉನ್ನತ ಶಿಕ್ಷಣ ಸಚಿವರ ಕಾರ್ಯವೈಖರಿಗೆ ಜನಾಂದೋಲನ ಮಹಾ ಮೈತ್ರಿ ಆಕ್ರೋಶ



ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಜನಾಂದೋಲನ ಮಹಾ ಮೈತ್ರಿ ರಾಜ್ಯ ಸಂಚಾಲಕ ಉಗ್ರ ನರಸಿಂಹೇಗೌಡ ಸುದ್ದಿಗೋಷ್ಠಿಯಲ್ಲಿ ಮಾತನಾಡಿದರು.

ಮೈಸೂರು, ಜ.3(ಎಂಟಿವೈ)– ರಾಜ್ಯದಲ್ಲಿ ಉನ್ನತ ಶಿಕ್ಷಣ ಇಲಾಖೆಯನ್ನು ನಿರ್ವಹಣೆ ಮಾಡುತ್ತಿರುವವರು ಯಾರೆಂಬ ಗೊಂದಲ ಉಂಟಾಗಿದ್ದು, ಇದರಿಂದ ಮೈಸೂರು ವಿಶ್ವವಿದ್ಯಾನಿಲಯ ಸೇರಿದಂತೆ ಸರ್ಕಾರಿ ಸ್ವಾಮ್ಯದ ವಿಶ್ವವಿದ್ಯಾನಿಲಯಗಳು ಅವನತಿಯತ್ತ ಸಾಗುತ್ತಿವೆ ಎಂದು ಜನಾಂದೋಲನ ಮಹಾ ಮೈತ್ರಿ ರಾಜ್ಯ ಸಂಚಾಲಕ ಉಗ್ರ ನರಸಿಂಹೇಗೌಡ ಕಿಡಿಕಾರಿದ್ದಾರೆ.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ರಾಜ್ಯದ ಉನ್ನತ ಶಿಕ್ಷಣ ಇಲಾಖೆಯನ್ನು ಸಚಿವ ಡಾ.ಎಂ.ಸಿ.ಸುಧಾಕರ್ ನಿರ್ವಹಿಸುತ್ತಿದ್ದಾರೋ ಅಥವಾ ಇಲಾಖೆಯ ಪ್ರಧಾನ ಕಾರ್ಯದರ್ಶಿ ನಿರ್ವಹಿಸುತ್ತಿದ್ದಾರೋ ತಿಳಿಯದಾಗಿದೆ. ಇದರಿಂದ ಸರ್ಕಾರಿ ವಿಶ್ವವಿದ್ಯಾನಿಲಯಗಳು ಸೊರಗುತ್ತಿವೆ. ಮೂಲಸೌಲಭ್ಯವಿಲ್ಲದೆ, ಉಪನ್ಯಾಸಕರ ಕೊರತೆ ಸೇರಿದಂತೆ ವಿವಿಧ ಕಾರಣದಿಂದ ಉನ್ನತ ಶಿಕ್ಷಣ ಪಡೆಯಲು ಮುಂದಾಗುವ ವಿದ್ಯಾರ್ಥಿಗಳ ಸಂಖ್ಯೆಯಲ್ಲಿ ಗಣನೀಯ ಕುಸಿತ ಕಂಡಿದೆ ಎಂದು ಆರೋಪಿಸಿದರು.

ಉನ್ನತ ಶಿಕ್ಷಣ ಸಚಿವ ಡಾ. ಎಂ.ಸಿ.ಸುಧಾಕರ್ ವೈದ್ಯರಾಗಿದ್ದಾರೆ. ಆದರೆ ಅವರು ನಮ್ಮ ಅತ್ಯಂತ ಹಳೆಯ ಶಿಕ್ಷಣ ಸಂಸ್ಥೆಗಳಾಗಿರುವ ಸಾರ್ವಜನಿಕ ವಿವಿಗಳನ್ನು ಬಲಪಡಿಸುವ ಬದಲು ಅವುಗಳನ್ನು ಮೌನವಾಗಿ ಕೊಲ್ಲುವ ಕೆಲಸ ಮಾಡುತ್ತಿದ್ದಾರೆ. ಇಂತಹ ವಿವಿಗಳನ್ನು ನಿರ್ಲಕ್ಷಿಸಿ ಕೇವಲ ವಿದೇಶ ಪ್ರವಾಸಗಳು ಹಾಗೂ ಖಾಸಗೀ ವಿವಿಗಳ ಉತ್ತೇಜನದಲ್ಲಿ ತೊಡಗಿದ್ದಾರೆ. ಕಳೆದ ಎರಡೂವರೆ ವರ್ಷಗಳಲ್ಲಿ ನಾಲ್ವರು ಪ್ರಧಾನ ಕಾರ್ಯದರ್ಶಿಗಳನ್ನು ಬದಲಾಯಿಸಿದ್ದಾರೆ. ವಿವಿಗಳ ಬೋಧಕ ಸಿಬ್ಬಂದಿಗೆ ನೀಡಲು ಹಣವಿಲ್ಲ ಎಂದು ದೂರಿದರು.

ಕಮಿಷನ್‌ಗಾಗಿ ಕಟ್ಟಡ ನಿರ್ಮಾಣ: ಮೈಸೂರು ವಿವಿ ಕುಲಪತಿಗಳು ಶಿಕ್ಷಣದ ಗುಣಮಟ್ಟ ಸುಧಾರಿಸುವ ಬದಲು ಶೈಕ್ಷಣಿಕ ಚಟುವಟಿಕೆ ಹತ್ತಿಕ್ಕುವ ಕೆಲಸ ಮಾಡುತ್ತಿದ್ದಾರೆ. ಅತಿಥಿ ಉಪನ್ಯಾಸಕರ ಮೇಲೆ ಹಣ ವ್ಯಯಿಸಲಾಗುತ್ತಿದೆ. ಬಹುತೇಕ ವಿಭಾಗಗಳು ಕಾಯಂ ಪ್ರಾಧ್ಯಾಪಕರಿಲ್ಲದೇ ಶೈಕ್ಷಣಿಕ ಚಟುವಟಿಕೆಗಳು ಸೊರಗುತ್ತಿವೆ. ಮಹಾರಾಜ, ಯುವರಾಜ ಕಾಲೇಜುಗಳಲ್ಲಿಯೂ ಇದೇ ಪರಿಸ್ಥಿತಿ ಇದೆ. ವಿವಿಯಲ್ಲಿನ ನಡೆದ ಅಕ್ರಮ ಹಣಕಾಸು ಚಟುವಟಿಕೆ ಕಾರಣ ಪಿಂಚಣಿ ನೀಡಲೂ ಹಣವಿಲ್ಲದಂತಾಗಿದೆ. ಪ್ರತಿಭಟನೆ ನಿಷೇಧಿಸುವ ಸರ್ವಾಧಿಕಾರಿ ಧೋರಣೆ ಅನುಸರಿಸಲಾಗುತ್ತಿದೆ. ಕಳೆದ 10 ವರ್ಷದಿಂದ ಮೈಸೂರು ವಿಶ್ವವಿದ್ಯಾನಿಲಯದಲ್ಲಿ ನಡೆದಿರುವ ಅವ್ಯವಹಾರದ ಬಗ್ಗೆ ತನಿಖೆ ನಡೆಸಬೇಕು. ಕುಲಪತಿಗಳು ಅಕಾಡೆಮಿಕ್ ವಿಷಯಕ್ಕೆ ಮಾನ್ಯತೆ ನೀಡದೆ, ಕಮಿಷನ್‌ಗಾಗಿ ಕಟ್ಟಡಗಳ ನಿರ್ಮಾಣ ಮಾಡುವುದಕ್ಕೆ ಹೆಚ್ಚಿನ ಆದ್ಯತೆ ನೀಡುತ್ತಿದ್ದಾರೆ. ವಿಶ್ವವಿದ್ಯಾನಿಲಯದ ನಿವೃತ್ತ ನೌಕರರಿಗೆ ಪಿಂಚಣಿ ನೀಡಲು ಇಟ್ಟಿದ್ದ 100 ಕೋಟಿ ರೂ. ಹಣವನ್ನು ಖರ್ಚು ಮಾಡಿದ್ದಾರೆ. ಈ ಹಿನ್ನೆಲೆಯಲ್ಲಿ ತನಿಖೆ ಮಾಡಬೇಕು. ತಪ್ಪಿತಸ್ಥರ ವಿರುದ್ಧ ಕ್ರಮ ಕೈಗೊಳ್ಳಬೇಕು ಎಂದು ಒತ್ತಾಯಿಸಿದರು.

ಉನ್ನತ ಶಿಕ್ಷಣ ಉಳಿವಿಗೆ ಆಗ್ರಹ: ಎಐಯುಟಿಯುಸಿ ಜಿಲ್ಲಾ ಕಾರ್ಯದರ್ಶಿ ಚಂದ್ರಶೇಖರ ಮೇಟಿ ಮಾತನಾಡಿ, ಮಂಡ್ಯ ವಿವಿ ಅವನತಿ ಹೊಂದುತ್ತಿದ್ದು, ಕೆಲವೇ ಲಕ್ಷ ರೂ.ಗಳಲ್ಲಿ ನಿರ್ಮಿಸಬಹುದಾದ ಕಮಾನಿಗೆ 3 ಕೋಟಿ ವೆಚ್ಚ ಮಾಡಲಾಗಿದೆ. ಆದರೆ ಪೌರ ಕಾರ್ಮಿಕರಿಗೆ ಕಳೆದ ಹಲವಾರು ತಿಂಗಳಿನಿಂದ ವೇತನ ನೀಡಲು ಹಣವಿಲ್ಲ ಎನ್ನುತ್ತಾರೆ. ಈ ಬಗ್ಗೆ ಕುಲಪತಿ, ರಾಜ್ಯಪಾಲರು ಅಥವಾ ಉನ್ನತ ಶಿಕ್ಷಣ ಸಚಿವರು ತಲೆ ಕೆಡಿಸಿಕೊಂಡಿಲ್ಲ. ಇದೇ ಪರಿಸ್ಥಿತಿ ಇತರೆ ಸರ್ಕಾರಿ ವಿವಿಗಳದ್ದಾಗಿದೆ. ಹೀಗಾಗಿ ಈ ಉನ್ನತ ಶಿಕ್ಷಣ ಸಂಸ್ಥೆಗಳ ಉಳಿವಿಗೆ ಎಲ್ಲರೂ ಗಮನ ಹರಿಸಬೇಕೆಂದು ಒತ್ತಾಯಿಸಿದರು. ಸುದ್ದಿಗೋಷ್ಠಿಯಲ್ಲಿ ಅಭಿರುಚಿ ಗಣೇಶ್, ಟಿ.ಆರ್.ಸುನಿಲ್ ಇದ್ದರು.



ಅಂತರಾಷ್ಟ್ರೀಯ ಚಲನಚಿತ್ರ ಪ್ರಶಸ್ತಿ ವಿಜೇತರು ರಾಜ್ಯ ಚಲನಚಿತ್ರ ಪ್ರಶಸ್ತಿ ವಿಜೇತರು, ನಟ, ನಿರ್ಮಾಪಕ ಪ್ರೀತಿ ಡೆವಲಪರ್ ಬಿಲ್ಡರ್

ಶಿವಾಜಿ

ರವರಿಗೆ ಕುಚುಕು ಚಿತ್ರತಂಡದಿಂದ 50ನೇ ವರ್ಷದ ಹುಟ್ಟುಹಬ್ಬದ ಶುಭಾಶಯಗಳು

HOUSE FOR SALE

40X60 Site, East Facing (32 Sq. Build Area), 3 Bedroom Duplex House with Good Car Parking. MUDA Approved, Near J.P.Nagar Ring Road, Mysore.

Price. Rs.2.40 Cr. (Negotiable)

Mob.9108545566

4ನೇ ವರ್ಷದ ಸವಿನೆನಪು



ಶ್ರೀಮತಿ ಕವಿತ ಎಸ್.ಎನ್

ಸದಾ ನಿಮ್ಮ ನೆನಪಿನಲ್ಲಿರುವ ನಿನ್ನ ಮಗ ಯದು, ಅಮ್ಮ ಮಂಜುಳ ತಮ್ಮ ನಂದೀಶ, ಹರ್ಷಲ್, ಮನ್ವಿತ ಅಕ್ಕ, ಭಾವ ಮತ್ತು ಶ್ಯಾದನಹಳ್ಳಿ ಹಾಗೂ ನಿನ್ನ ಕುಟುಂಬದವರು.

ಎರಡನೇ ವರ್ಷದ ಪುಣ್ಯಸ್ಮರಣೆ



ಆಶಾರಾಣಿ ವಾಸು

ಅಗ್ರಹಾರಬಾಚಹಳ್ಳಿ ನಿಧನ : 04.01.2024

ದುಃಖತಪ್ತರು – ಪತಿ: ಎ.ಎಸ್. ವಾಸು, ಮಗಳು : ವರ್ಷ, ಅಳಿಯ: ಕಿರಣ್ ಹಾಗೂ ಬಂಧುಮಿತ್ರರು.

FOR RENT

1250 Sq Ft on First Floor suitable for Pharmaceutical Distributor/ Auditor/ Tuition centers in K.N. Agrahar, Near Gayathri talkies. Contact

9845129141

17ನೇ ವರ್ಷದ ನಿಮ್ಮ ನೆನಪು



ಶ್ರೀಮತಿ **ಮುಟ್ಟಲಿಂಗಮ್ಮ**

(ಗಡಗ್ಗಲೆ ಬೋರೇಗೌಡರ ಧರ್ಮಪತ್ನಿ)

ಗಡಗ್ಗಲೆ ಬೋರೇಗೌಡರ ಕುಟುಂಬವರ್ಗದವರು, ಕೆ.ಜಿ.ಕೊಪ್ಪಲು, ಮೈಸೂರು

WANTED

1.DELIVERY BOYS

With or Without Experience but Having Own Vehicle

2.COUNTER BOYS

With Experience in Working in Retail Medical Stores and Having Own Vehicle.

SEND RESUME TO:

The Manager, Raghulal and Company, Sayyaji Rao Road, Mysore 570001

ಇಂಪೀರಿಯಲ್ ಸಿಟಿ

ಮೆಗಾ ರೆಸಿಡೆನ್ಸಿಯಲ್ ವಿಲ್ಲಾ ಟೌನ್‌ಶಿಪ್

ಮೈಸೂರು - ಹುಣಸೂರು ಮುಖ್ಯರಸ್ತೆ, ಮೈಸೂರು

MUDA LIMITS

ಇಲವಾಲ ಸ್ಯಾಟ್‌ಲೈಟ್ ಬಸ್ ನಿಲ್ದಾಣದಿಂದ ಕೇವಲ 4 ಕಿ.ಮೀ

ಕೇವಲ ₹749/ ಪ್ರತಿ ಚದರ ಅಡಿ

ಬುಕಿಂಗ್ ಪ್ರಾರಂಭವಾಗಿದೆ

ಸುಲಭ 4 ಕಂತುಗಳ ಸೌಲಭ್ಯವಿದೆ

30x40 | 30x50 | 40x60 | 50x80

ಅಳತೆಯ ಎಲ್ಲಾ ಸೌಲಭ್ಯಗಳನ್ನು ಒಳಗೊಳ್ಳುವ ನಿವೇಶನಗಳು

ಹೈಲ್ಯಾಂಡ್ ಪ್ರಾಪರ್ಟೀಸ್ 90713 86615 / 95133 01854

ಕಾಳಿದಾಸ ರಸ್ತೆ, ವಿಜಯನಗರ 1ನೇ ಹಂತ, ಮೈಸೂರು

FOR SALE

30x40|30x50 Sites, Near RT Ngr, Brahmins Lyt, HD Kote Rd.

20x30, 30x40 MUDA Approved Sites Near Rainbow School Bogadi

40x60 Site@ Shardha Lyt,JP Ngr

30x45 Corner Site@ Srirampura

2-3 BHK Apartments @RK Ngr

Commercial Properties Also Available

PRAKRUTHI PROPERTIES

95386 90359, 90359 90359

SITES FOR SALE

30 x 40 - 4 Sites

Site NOs. 136, 137, 138 & 139

ALL ARE WEST - FACING

Suitable for Residential / Commercial

LOCATION:

Mysore-Bangalore Express Highway

Chandagaala Village 7 km from Manipal Hospital Signal, Srirangapatna Purasabhe Form 3 Khatha

80 X 100

EAST - FACING, Manganalli

Suitable for Villas, Homestays & Investment Purpose

Loan available from Nationalised Bank

78928 22219

(Broker Excuse)

HOUSE FOR SALE

20x30 Ground & First Floor, (Each Floor 2 BHK)

House at Vijayanagar 4th Stage, near Marimallappa Compound, Mysore.

Call : 88845 51387

ಭಾವಪೂರ್ಣ ಶ್ರದ್ಧಾಂಜಲಿ



ರಾಜೇಶ್ವರಿ .ಆರ್

ದಿವಂಗತ ಬಿ.ಸಿ. ರಮೇಶ್ ಅವರ ಧರ್ಮಪತ್ನಿ

21.03.1954 - 03.01.2026

ಇವರು ದಿನಾಂಕ 3.1.2026 ರಂದು ದೈವಾಧೀನರಾದರೆಂದು ತಿಳಿಸಲು ವಿಷಾಧಿಸುತ್ತೇವೆ ಇವರ ಅಂತ್ಯಕ್ರಿಯೆಯು ಇಂದು (4.1.2026) ಸಂಜೆ 5 ಗಂಟೆಗೆ ವಿದ್ಯಾರಣ್ಯಪುರಂನ ವೀರಶೈವ ರುದ್ರಭೂಮಿಯಲ್ಲಿ ನಡೆಯಲಿದೆ.

ಪ್ರೀತಿಯ ಪರಂಪರೆಯನ್ನು ಬಿಟ್ಟು ಹೋಗಿದ್ದಾರೆ

ತೀವ್ರ ದುಃಖದಿಂದ: ಕುಟುಂಬ ಮತ್ತು ಮಕ್ಕಳು, ಮಾಲಾ ರಾಜೇಶ್, ವಿನಯ್ ರಮೇಶ್, ಮೋದಿನಿ ಅಖಿಲೇಶ್

ಯೋಗಕ್ಷೇಮ ಹೌಸಿಂಗ್ ಕೋ-ಆಪರೇಟಿವ್ ಸೊಸೈಟಿ ಲಿ.

ನಂ. 105, 'ಕ್ಷೇಮಧಾಮ', ಎಲ್ ಐ ಸಿ ಕಾಲೋನಿ, ಶ್ರೀರಾಂಪುರ 2ನೇ ಹಂತ, ಮೈಸೂರು –570034. ಫೋ: 0821–2362369

ಸಾರ್ವಜನಿಕ ಪ್ರಕಟಣೆ

ಯೋಗಕ್ಷೇಮ ಹೌಸಿಂಗ್ ಕೋ–ಆಪರೇಟಿವ್ ಸೊಸೈಟ್(ಲಿ) ಮೈಸೂರು ಇವರು ಜೀವವಿಮಾ ನೌಕರರು ಮತ್ತು ಜೀವ ವಿಮಾ ಪ್ರತಿನಿಧಿ ಹಾಗೂ ಇತರರಿಗಾಗಿ ಮುಡಾ ನಿಯಮಾವಳಿಗಳ (MUDA NORMS) ಪ್ರಕಾರ "ಜೀವವಿಮಾ ನಗರ 5ನೇ ಹಂತದ ಬಡಾವಣೆ" ನಿರ್ಮಿಸಿ ನಿವೇಶನಗಳನ್ನು ಅಭಿವೃದ್ಧಿಪಡಿಸಿ ವಿತರಿಸಲು ತೀರ್ಮಾನಿಸಲಾಗಿದೆ. ಆಸಕ್ತ DEVELOPERSಗಳು ಮುಡಾ ಅಥವಾ DTCP ಪರಿಮಿತಿಯೊಳಗೆ ಅನ್ಯಕ್ರಾಂತವಾದ (ALINATED) ಸ್ವತ್ತು ಅಥವಾ ಅನ್ಯಕ್ರಾಂತಕ್ಕೆ ಅರ್ಜಿ ಸಲ್ಲಿಸಿರುವ ಸ್ವತ್ತುಗಳು ಸುಮಾರು 25 ಎಕರೆ ಪ್ರದೇಶವಿದ್ದಲ್ಲಿ TURN KEY BASIS ಪ್ರಕಾರ ಬಡಾವಣೆ ನಿರ್ಮಿಸಿ ಅಭಿವೃದ್ಧಿ ಪಡಿಸಿ (DEVELOPMENT) ಒಂದು ಚದರ ಅಡಿಗೆ ನಿಗದಿತ ಮೊತ್ತವನ್ನು ನಮೂದಿಸಿ ಮೊಹರು ಮಾಡಿದ ಲಕೋಟೆಯೊಂದಿಗೆ ಮೇಲ್ಕಂಡ ವಿಳಾಸಕ್ಕೆ ಏಳು ದಿವಸಗಳೊಳಗಾಗಿ ಸಲ್ಲಿಸುವುದು

ಸಹಿ/– ಎನ್ ಎಲ್ ಶೇಖರ್
ಅಧ್ಯಕ್ಷರು
94480 56075

ಸ್ಥಳ: ಮೈಸೂರು
ದಿನಾಂಕ: 03–01–2026

JANA | The Heritage

Hebbal, Mysuru.

SALES STAFF REQUIRED FOR SAREE & SALWAR SUIT SHOWROOM

Requirements:

1. Basic computer knowledge
2. Years of experience 3-5 / Freshers
3. Good communication skill
4. Handle walkin customers and understand their needs

Salary: ₹9000 – ₹18000 per month + Incentives, Working Hours - 10.30Am - 8.30Pm, Weekly 1 Day off

Location: Hebbal, Near Surya Bakery, Contact

9739941590/ 8095043048

ಬೇಕಾಗಿದ್ದಾರೆ

ಪೆಟ್ರೋಲ್ ಬಂಕ್‌ನಲ್ಲಿ ಕೆಲಸ ನಿರ್ವಹಿಸಲು ಅಧಿಕೃತ ಲೈಸನ್ಸ್ ಹೊಂದಿರುವ ಆಟೋಮೆಟಿಕ್ ಕಾರು ಓಡಿಸಲು 30 ರಿಂದ 40 ವಯಸ್ಸಿನ ಚಾಲಕ ಬೇಕಾಗಿದ್ದಾರೆ. ಸಂಪರ್ಕಿಸಿ

9611022435

PROPERTIES FOR SALE

Ready for Registration Prime Locations

43x93

East Facing Ashokapuram Railway Station 100 Mtr Near Bedarakanappa Temple.

40x60

Commercial Site East Facing Ramakrishna Nagar, 'H' Block

42.5x100

Commercial Property, 80 Feet Road Near NIE College Road ,

(Brokers Excuse)

9844924966

NOT GETTING YOUR STAR OF MYSORE & ಮೈಸೂರು ಮಿತ್ರ

Call: 98452-96447 / 99003-82840

MUDA APPROVED SITES FOR SALE

" SJ Pinnacle City Layout "

Launching Offer Price 20 x 30 | 20 x 40 | 30 x 40

Rs. 2350/- Per Sqft.,

- 500 Mtr from Infosys, Mysore.

Attached to Info city and KBL Silicon City Layout

Mob : 9148434989 / 9686573798

2 BHK HOME INTERIORS @ ₹ 2.9 Lakh*

Home Space Mart

ISO 9001:2015 Certified Company Depot

Kushalnagar • Mysuru • Bengaluru

For Site Vist :

✆91089 23123

SITE FOR SALE

ಪೋಲೀಸ್ ಬಡಾವಣೆ - 30X40

ಸಾತಗಳ್ಳಿ ಬಡಾವಣೆ - 30X40

ಸಾತಗಳ್ಳಿ 2ನೇ ಹಂತ - 20X30

9448447035

COMMERCIAL BUILDING FOR SALE

28' ¾ x 53' (East Facing) CITB Allotment (Now MDA) RMC, New Santhepet, Behind Sayyaji Rao Road, Mysore. Contact:

8762205037

Brokers Excuse

SITE FOR SALE

26x40 E/F SITE

Rs.19 Lakhs

5 kms from Ring Road, 13 kms from Mysore City Near Janthagalli Next to Marashettihalli, Behind Chamundi hill

Call : 99649 23399

TAXI

Hi! TAXI

ONLY ONE WAY TAXI CHARGE

MYSORE to BANGALORE City drop or Pick up

BANGALORE to MYSORE Airport drop or Pick up

MYSURU

9611177599

HOUSE FOR SALE

As Per Your Requirement Architect Designed.

AT MYSURU	*AT HUNSUR*
Near Vajamangala, Bannur Road.	Near KSRTC Bus Depot.
20x30 27.5 Lakhs	20x30 21 Lakhs
20x40 31 Lakhs	20x40 22.6 Lakhs
30x40 51 Lakhs	30x40 27 Lakhs,
Near St. Josheph School.	Contact
20x40 - 39.6 Lakhs	
30x50 - 75.5 Lakhs	

8123387555 / 7259348777

ಸೈಟ್ – ಬೇಕಾಗಿದೆ

1) ಲಲಿತಾದ್ರಿ ನಗರ, 2) ಲಾಲ್ ಬಹದ್ದೂರ್‌ಶಾಸ್ತ್ರಿ ನಗರ
3) ಶಾಂತವೇರಿ ಗೋಪಾಲಗೌಡ ನಗರ
4) ಸಪ್ತಮಾತೃಕಾ ಲೇಔಟ್

ಮಾಲೀಕರು ಸಂಪರ್ಕಿಸಿ

9741624588 / 9686714571

IMMEDIATE FOR SALE

30 X 50,

South Facing, Opposite to Park.

RATE: 4250/Sq Feet

"SAHA PEARL"

Vijayanagar 4th Stage, Behind Rashtrotthana Vidya Kendra School, Mysore

9380289265

"Genuine Buyers Only"

ಕೃಷಿ ಭೂಮಿಗಳು ಮಾರಾಟಕ್ಕಿವೆ

ಹೆಚ್.ಡಿ.ಕೋಟೆ, ನಂಜನಗೂಡು, ಹುಣಸೂರು, ನಂಜನಗೂಡು, ಗುಂಡ್ಲುಪೇಟೆ, ತಿ. ನರಸೀಪುರ ಹಾಗೂ ಮೈಸೂರು ಸುತ್ತಮುತ್ತ

ಸಂಪರ್ಕಿಸಿ

8123438349

ಸಂಕ್ರಾಂತಿ ಹಬ್ಬದ ಪ್ರಯುಕ್ತ ಬ್ರಾಂಡೆಡ್ ರೆಡಿಮೇಡ್ ಗಾರ್ಮೆಂಟ್ಸ್‌ಗಳ ಮಾರಾಟ

ಪುರುಷರ ಬ್ರಾಂಡೆಡ್ ಉಡುಪುಗಳು

Being human

ಜೀನ್ಸ್, ಕಾರ್ಗೋ ಟಿಶರ್ಟ್ಸ್, ಶರ್ಟ್ಸ್ ಒಡಿ ಜಾಕೆಟ್ಸ್ ಪ್ಯಾಂಟ್ಸ್ ಇತ್ಯಾದಿ

UPTO 70% OFF

ಮಹಿಳೆಯರ ಉಡುಪುಗಳು

ಜರಾ ಕಂಪನಿಯ ಮಹಿಳೆಯರ ಕ್ರಾಪ್ ಟಾಪ್, ಶಾರ್ಟ್ ಟಾಪ್, ಶಾರ್ಟ್ ಡ್ರೆಸ್, ಲಾಂಗ್ ಡ್ರೆಸ್, ಶಾರ್ಟ್ ಸ್ಕರ್ಟ್ಸ್, ಲಾಂಗ್ ಸ್ಕರ್ಟ್ಸ್, ಡೆನಿಮ್, ಫಾರ್ಮಲ್ ಟ್ರೌಸರ್ಸ್, ಜಾಕೆಟ್ಸ್, ಚಳಿಗಾಲದ ಉಡುಪುಗಳು

ZARA FLAT 70% OFF

ಮಹಿಳೆಯರ ಬ್ರಾಂಡೆಡ್ ಉಡುಪುಗಳು

ಮಹಿಳೆಯರ ಟಾಪ್ಸ್, ಬಾಟಮ್ಸ್, ಶರ್ಗ್ಸ್, ಡೆನಿಮ್ಸ್, ಎಕ್ಸಿಕ್ಲೂಸಿವ್ ಪ್ಲಸ್ ಸೈಜ್ ಟಾಪ್ಸ್ ಬೆಡ್ ಕವರ್ಸ್, ಬ್ಲಾಂಕೆಟ್, ಬಾಗ್ಸ್, ಪುರುಷರ ಕುರ್ತಾ ಇತ್ಯಾದಿ

OUTRYT DENIM TREND FORECAST - SS21 UPTO 70% OFF

ಬ್ರಾ ಮಾರಾಟ

ಮಹಿಳೆಯರ ಬ್ರಾಗಳು, ಒಳ ಉಡುಪುಗಳು, ಜಾಕೆಟ್, ಪುಲ್‌ಓವರ್, ಶೇಪ್‌ವೇರ್ ಮತ್ತು ನೈಟ್‌ವೇರ್

enamor UPTO 70% OFF

ಸ್ಪೆಷಲ್ ಕೌಂಟರ್ : ನೌ ಬ್ರಾಂಡ್‌ನ ಮಕ್ಕಳ ಉಡುಪುಗಳು ದೊರೆಯುತ್ತದೆ

ಮಾರಾಟ 4 ದಿನಗಳು ಮಾತ್ರ : ಜನವರಿ 4, 5, 6 ಮತ್ತು 7 – 2025

ಬಂದಂತಮ್ಮ ಕಾಳಮ್ಮ ಸಮುದಾಯ ಭವನ

ನ್ಯೂಕಾಂತರಾಜೇ ಅರಸ್ ರಸ್ತೆ, ಅಪೊಲೋ ಆಸ್ಪತ್ರೆ ಸಿಗ್ನಲ್ ಹತ್ತಿರ, ಕುವೆಂಪುನಗರ, ಮೈಸೂರು

Car Parking Available | Time : 10 am to 10 pm

G9 projects

Designing your Dreams

Vee2 Developers

POORVA SHELTERS PHASE - I , II & III

Go easy on your pockets INVESTMENT FRIENDLY PLOTS

20×30 | 30×40 & 20×40 | 30×50

Near to Marvel PU College Lalithadripura Ring road Mysuru

✆ 8055-004-400

ಎರಡನೇ ವರ್ಷದ ಸವಿನೆನಪು



ಶ್ರೀ ಜಯರಾಮ್

ಮಾಜಿ ಗ್ರಾಮ ಪಂಚಾಯಿತಿ ಸದಸ್ಯರು, ಜಿಲ್ಲಾ ಒಕ್ಕಲಿಗರ ಸಂಘದ ನಿರ್ದೇಶಕರು ಹಾಗೂ ತಾಲೂಕು ಒಕ್ಕಲಿಗರ ಸಂಘದ ಸಹ ಕಾರ್ಯದರ್ಶಿ, ದಾಸನಕೊಪ್ಪಲು

ನೀವು ನಮ್ಮನ್ನಗಲಿ ಇಂದಿಗೆ ಎರಡು ವರ್ಷ ಕಳೆದಿದೆ ಆದರೂ ನಿಮ್ಮ ನೆನಪು ಸದಾ ನಮ್ಮ ಸ್ಮರಣೆಯಲ್ಲಿದೆ. ನೀವು ಹಾಕಿಕೊಟ್ಟ ಸನ್ಮಾರ್ಗದಲ್ಲಿ ಸದಾ ನಡೆಯುತ್ತಿರುವ.

ತಾಯಿ: ಶ್ರೀಮತಿ ಮಹದೇವಮ್ಮ, ಪತ್ನಿ: ಶ್ರೀಮತಿ ಜಯಲಕ್ಷ್ಮಿ, ಮಕ್ಕಳು, ಸಹೋದರರು, ಸಹೋದರಿಯರು, ಗ್ರಾಮಸ್ಥರು ಹಾಗೂ ಬಂಧು–ಮಿತ್ರರು.